ಸೌಜನ್ಯ ಮತ್ತು ಸಂಸ್ಕೃತಿ

ಪ್ರಬಂಧ ಸಂಕಲನ



ಸಿಂಚನ : ಕನ್ನಡ ವೇದಿಕೆ

ಆರ್.ವಿ. ಇನ್ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್
ಬೆಂಗಳೂರು – ೫೬೦ ೦೪೧

ಸೌಜನ್ಯ ಮತ್ತು ಸಂಸ್ಕೃತಿ

(ಪ್ರಬಂಧ ಸಂಕಲನ)

ಗೌರವ ಸಂಪಾದಕರು

ಡಾ. ಟಿ.ವಿ. ರಾಜು

ಸಂಪಾದಕರು

ಪ್ರೊ. ಜಿ. ಅಶ್ವತ್ಥನಾರಾಯಣ

ಎಸ್. ಬಿಳಿಗಿರಿವಾಸನ್

ಶಾಂತರಾಜು

ಸಿಂಚನ : ಕನ್ನಡ ವೇದಿಕೆ

ಆರ್.ವಿ. ಇನ್ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್

ಬೆಂಗಳೂರು – 560 041

SOWJANYA MATTU SAMSKRUTI : (Collection of Essays)

Published by : **Sinchana : Kannada Vedike,** R.V. Institute of Management
36th Cross, 26th Main, 4th 'T' Block, Jayanagar, Bangalore - 560 041.

Year : 2009 Pages : viii + 110 Price : **Rs. 100/-**

ವರ್ಷ : ೨೦೦೯ ಪುಟಗಳು : viii + ೧೧೦ ಬೆಲೆ : ರೂ. ೧೦೦/–


ಸಂಪಾದಕ ಮಂಡಲಿ

ಗೌರವ ಸಂಪಾದಕರು	:	**ಡಾ. ಟಿ.ವಿ. ರಾಜು**
ಸಂಪಾದಕರು	:	**ಪ್ರೊ॥ ಜಿ. ಅಶ್ವತ್ಥನಾರಾಯಣ**
		ಎಸ್. ಬಿಳಿಗಿರಿವಾಸನ್
		ಶಾಂತರಾಜು
ಸಲಹೆ – ಸಹಾಯ – ಸಹಕಾರ	:	ಶ್ರೀ ಎಂ.ಕೆ. ಪಾಂಡುರಂಗಶೆಟ್ಟಿ
		ಶ್ರೀ ವೈ.ಎನ್. ಗಂಗಾಧರ ಶೆಟ್ಟಿ
		ಶ್ರೀ ಜಿ.ಕೆ. ಶ್ರೀನಿವಾಸಯ್ಯ
		ಶ್ರೀ ಎ.ವಿ.ಎಸ್. ಮೂರ್ತಿ
		ಶ್ರೀ ಕೆ.ಜಿ. ಸುಬ್ಬರಾಮಶೆಟ್ಟಿ
		ಶ್ರೀ ಡಿ.ಪಿ. ನಾಗರಾಜ್
		ಶ್ರೀ ಎಂ.ಕೆ. ದತ್ತರಾಜ್
		ಡಾ॥ ಟಿ.ವಿ. ರಾಜು

ಮುಖಪುಟ : ಎಂ. ಶ್ರೀಧರ್

ಲಕ್ಷ್ಮೀ ಮುದ್ರಣಾಲಯ
LAKSHMI MUDRANALAYA
ISO 9001-2000
ಚಾಮರಾಜಪೇಟೆ, ಬೆಂಗಳೂರು-೧೮
ದೂರವಾಣಿ : ೨೬೬೧ ೩೧೨೩, ೨೬೬೧ ೮೭೫೨

ಅರ್ಪಣೆ



ಪ್ರೊ|| ಜಿ. ಶ್ರೀನಿವಾಸರಾಜು

ಅವರಿಗೆ

ಪ್ರಕಾಶಕರ ನುಡಿ

ಭಾರತೀಯ ಸಂಸ್ಕೃತಿಯಲ್ಲಿ 'ಸೌಜನ್ಯ'ವು ತನ್ನದೇ ಆದ ಸ್ಥಾನಮಾನಗಳನ್ನು ಪಡೆದುಕೊಂಡಿದ್ದರೂ ಸಹ ಇಂದಿನ ಒತ್ತಡದ ಜೀವನದಲ್ಲಿ ಸ್ಥಾನಪಲ್ಲಟಗೊಂಡು ಜನರ ಸ್ಮರಣೆಯಿಂದ ಸಂಪೂರ್ಣವಾಗಿ ಸರಿದುಹೋಗುತ್ತಿರುವುದರಿಂದ, ಅದನ್ನು ಪುನಃಸ್ಮರಣೆ ಮಾಡಿಕೊಳ್ಳುವ ಸದುದ್ದೇಶದಿಂದ "ಸೌಜನ್ಯ ಮತ್ತು ಸಂಸ್ಕೃತಿ" ಎಂಬ ಕೃತಿಯನ್ನು ಕನ್ನಡ ಕುಲಕೋಟಿಗೆ ಸಮರ್ಪಿಸಲು ನಮಗೆ ಅತ್ಯಂತ ಸಂತೋಷವಾಗುತ್ತಿದೆ.

ದಿ॥ ಶ್ರೀ ಎಂ. ಶಿವಾನಂದಶರ್ಮರು ೧೯೪೦ರಲ್ಲಿ ಸ್ಥಾಪಿಸಿದ 'ರಾಷ್ಟ್ರೀಯ ಶಿಕ್ಷಣ ಸಂಸ್ಥೆ'ಯು ಬೃಹದಾಕಾರದಲ್ಲಿ ಬೆಳೆದು ವಿವಿಧ ಅಂಗೋಪಾಂಗಗಳನ್ನು ಪಡೆದು, ಶಿಕ್ಷಣ ಕ್ಷೇತ್ರದಲ್ಲಿ ತನ್ನದೇ ಆದ ಛಾಪನ್ನು ಮೂಡಿಸಿ, ಸಹಸ್ರಾರು ವಿದ್ಯಾರ್ಥಿಗಳಿಗೆ ಸುವಿದ್ಯಾಪೀಠವಾಗಿ ಸೇವೆಯನ್ನು ಸಲ್ಲಿಸುತ್ತಿದೆ. ಇಂತಹ ವಿದ್ಯಾಸಂಸ್ಥೆಯ ಸಾರಥ್ಯವನ್ನು ಸ್ವೀಕರಿಸಿ ತಮ್ಮ ಸುವ್ಯವಸ್ಥಿವಾದ ಆಡಳಿತ, ದಕ್ಷತೆ, ಪ್ರಾಮಾಣಿಕತೆಗಳಿಂದ ಸರ್ವಾಂಗೀಣ ಪ್ರಗತಿಯಲ್ಲಿ ಅಭಿವೃದ್ಧಿಪಡಿಸಿದ ಕೀರ್ತಿ ದಿ॥ ಶ್ರೀ ಡಿ. ಎ. ಪಾಂಡು ಅವರದ್ದಾಗಿದೆ.

ರಾಷ್ಟ್ರೀಯ ಶಿಕ್ಷಣ ಸಂಸ್ಥೆಯ ಸ್ಥಾಪನೆ ಪ್ರಗತಿಗೆ ಕಾರಣಕರ್ತರಾದ ದಿ॥ ಶ್ರೀ ಎಂ. ಸಿ. ಶಿವಾನಂದಶರ್ಮರ ಹಾಗೂ ಸಂಸ್ಥೆಯನ್ನು ಅಭಿವೃದ್ಧಿ ಪಥದಲ್ಲಿ ನಡೆಸಿ ಸರ್ವಾಂಗೀಣ ಪ್ರಗತಿಗೆ ಕಾರಣಕರ್ತರಾದ ದಿ॥ ಶ್ರೀ ಡಿ. ಎ. ಪಾಂಡು ಅವರ ನೆನಪಿನಲ್ಲಿ ಶ್ರೀ ಶಿವಾನಂದಶರ್ಮ, ಶ್ರೀ ಪಾಂಡು ಗ್ರಂಥಮಾಲೆ ಹೆಸರಿನಲ್ಲಿ ವರ್ಷಕ್ಕೆ ಎರಡು ಕೃತಿಗಳನ್ನು ಪ್ರಕಟಿಸುವ ಯೋಜನೆಯನ್ನು ಸಂಸ್ಥೆಯ ಸಾಹಿತ್ಯ ವೇದಿಕೆಯಾದ 'ಸಿಂಚನ' ಕನ್ನಡ ವೇದಿಕೆ ಕೈಗೊಂಡಿದೆ. ಇದರಂಗವಾಗಿ ಆರನೆಯ ಕೃತಿಯಾಗಿ "ಸೌಜನ್ಯ ಮತ್ತು ಸಂಸ್ಕೃತಿ" ಪ್ರಬಂಧ ಸಂಕಲನ ನಿಮ್ಮ ಕೈಯಲ್ಲಿದೆ. ಈ ಮೊದಲು ಸಿಂಚನ ಕನ್ನಡ ವೇದಿಕೆಯು ಪ್ರಕಟಿಸಿದ ಐದೂ ಕೃತಿಗಳನ್ನು ಆದರದಿಂದ ಬರಮಾಡಿಕೊಂಡ ಸಹೃದಯರು ಈ ಕೃತಿಯನ್ನೂ ಕೊಂಡು ಓದಿ ಆನಂದಿಸಿ ಪ್ರೋತ್ಸಾಹಿಸುತ್ತಾರೆಂದು ನಂಬಿರುತ್ತೇವೆ.

ಈ ಕೃತಿಯ ಪ್ರಕಟಣೆಗೆ ನಾಡಿನ ಖ್ಯಾತ ವಿದ್ವಾಂಸರು, ಸಾಹಿತಿಗಳು, ಶಿಕ್ಷಣ ತಜ್ಞರು ಲೇಖನಗಳನ್ನಿತ್ತು ಸಹಕರಿಸಿದ್ದಾರೆ. ಅವರಿಗೆ ನಾವು ಕೃತಜ್ಞರಾಗಿದ್ದೇವೆ. ಈ ಕೃತಿಯನ್ನು ಸಂಪಾದಿಸಿ ಪ್ರಕಟನೆಗೆ ಸಿದ್ಧಪಡಿಸುವಲ್ಲಿ ವಿದ್ವಾಂಸರಾದ ಪ್ರೊ॥ ಜಿ. ಅಶ್ವತ್ಥನಾರಾಯಣ ಅವರ ಮಾರ್ಗದರ್ಶನದಲ್ಲಿ ಸಂಪಾದಕ ಮಂಡಲಿಯ ಶ್ರೀ ಎಸ್. ಬಿಳಿಗಿರಿವಾಸನ್ ಮತ್ತು ಶ್ರೀ ಶಾಂತರಾಜು ಅವರು ಶ್ರಮಿಸಿದ್ದಾರೆ. ಈ ಯೋಜನೆಯ ಪ್ರಕಟಣೆ ಪ್ರಸಾರಕಾರ್ಯದಲ್ಲಿ ರಾಷ್ಟ್ರೀಯ ಶಿಕ್ಷಣ ಸಮಿತಿ ಟ್ರಸ್ಟ್‌ನ ಪದಾಧಿಕಾರಿಗಳು ಸಮಾನ ಮನಸ್ಕರಾಗಿ ಸಹಕರಿಸಿದ್ದಾರೆ. ಅಂತೆಯೇ ನಾನಾ ವಿಭಾಗಗಳ ಸಹೋದ್ಯೋಗಿಗಳು ಸಹಕಾರವಿತ್ತಿದ್ದಾರೆ. ಲಕ್ಷ್ಮೀ ಮುದ್ರಣಾಲಯದವರು ಈ ಹೊತ್ತಿಗೆಯನ್ನು ಅಂದವಾಗಿ ತಪ್ಪಿಲ್ಲದೆ ಮುದ್ರಿಸಿಕೊಟ್ಟಿದ್ದಾರೆ ಅವರಿಗೆ ನಮ್ಮ ವಂದನೆಗಳು. ಎಲ್ಲರಿಗೂ ನಾವು ಆಭಾರಿಗಳಾಗಿದ್ದೇವೆ.

೫–೯–೨೦೦೮

ಪ್ರಕಾಶಕರು

ಸಿಂಚನ : ಕನ್ನಡ ವೇದಿಕೆ

ಆರ್.ವಿ. ಇನ್ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್

ಜಯನಗರ 'ಟಿ' ಬ್ಲಾಕ್

ಬೆಂಗಳೂರು – ೫೬೦ ೦೪೧

ಪರಿವಿಡಿ

ಸೌಜನ್ಯದ ಸಲ್ಲಕ್ಷಣಗಳು

–ಡಾ. ಎಂ. ಚಿದಾನಂದಮೂರ್ತಿ

ಸಂಸ್ಕೃತ ಭಾಷೆಯ 'ಜನ' ಮಾತಿಗೆ ಮನುಷ್ಯ, ವ್ಯಕ್ತಿ ಎಂಬ ಅರ್ಥವಲ್ಲದೆ ಜನಸಮೂಹ ಎಂಬರ್ಥವೂ ಇದೆ (ಕನ್ನಡದಲ್ಲಿ ಎರಡನೆಯ ಅರ್ಥ ಮಾತ್ರ ಬಳಕೆಯಲ್ಲಿದೆ. 'ಸುಜನ' ಎಂದರೆ ಒಳ್ಳೆಯ ವ್ಯಕ್ತಿ, ಸಭ್ಯ, ಸುಸಂಸ್ಕೃತ ಎಂದು ಅರ್ಥ. 'ವಸ್ತು ಕೋಶ' ಎಂಬ ಪ್ರಾಚೀನ ಕೃತಿಯಲ್ಲಿ 'ಕುಳಜಾತ', 'ತಕ್ಕ' (=ಯೋಗ್ಯ), 'ಆರ್ಯ', 'ಅಭಿಜನ', 'ಸಾಧು', 'ಸದ್ವೃತ್ತ' ಇವು ಸುಜನ ಪದಕ್ಕೆ ಪರ್ಯಾಯಗಳು ಎಂದಿದೆ. ಮನುಷ್ಯನಾದವನು ನಿಜವಾದ ಮನುಷ್ಯ ಎನ್ನಿಸಿಕೊಳ್ಳಬೇಕಾದರೆ ಸ್ವಾರ್ಥ, ಹಿಂಸೆ, ಕಳ್ಳತನ, ವಿಷಯಲಂಪಟತ್ವ, ಕ್ರೌರ್ಯ ಇತ್ಯಾದಿ ದುರ್ಗುಣಗಳನ್ನು ದೂರ ಮಾಡಿ ಅಹಿಂಸೆ, ತ್ಯಾಗ, ಪರೋಪಕಾರ ಬುದ್ಧಿ, ಇಂದ್ರಿಯ ನಿಗ್ರಹ, ದಯೆ, ಸತ್ಯಪ್ರಿಯತೆ, ಮಿತಭಾಷಿತ್ವ ಮೃದುಮಾತು ಇತ್ಯಾದಿ ಪರೋಪಕಾರಕ ಗುಣಗಳನ್ನು ಅಳವಡಿಸಿಕೊಂಡವನಾಗಬೇಕು. ಮೊದಲ ವರ್ಗದ 'ದುರ್ಗುಣ'ಗಳು ಮನುಷ್ಯನಿಗೆ ಸಹಜವಾಗಿ ಬರುವಂಥವು. ಪ್ರಾಣಿಗಳಂತೆ. ಪ್ರಾಣಿಗಳು ತಮಗೆ ಸಿಕ್ಕಿದ್ದನ್ನು ತಿನ್ನುತ್ತವೆ; ತಾನು ಹಸಿದಿರದಿದ್ದರೂ ಇನ್ನೊಂದು ಪ್ರಾಣಿಗೆ ಅದನ್ನು ನೀಡುವುದಿಲ್ಲ. ಇಂತಹ ಗುಣಗಳು ಪ್ರಾಣಿಗಳಿಗೆ ಹೇಗೋ ಮನುಷ್ಯನೂ ಒಬ್ಬ ಪ್ರಾಣಿಯೇ ಆಗಿರುವುದರಿಂದ ಅವು ಅವನಿಗೆ ಹುಟ್ಟಿನಿಂದ ಲಭ್ಯವಾದ ಸಹಜ ಲಕ್ಷಣಗಳೇ ಆಗಿರುತ್ತವೆ. ಪ್ರಾಣಿಗೆ ತಾನು ಬದುಕುವುದು ಮುಖ್ಯವಾಗಿರುತ್ತದೆ. ಗಂಡು ಹೆಣ್ಣು ಕೂಡಿ ಒಂದು ಕರುವಿಗೆ ಜನ್ಮವಿತ್ತರೆ ಅಲ್ಲಿಗೆ ಗಂಡಿನ ಕೆಲಸ ಮುಗಿಯಿತು. ಹೆಣ್ಣು ಪ್ರಾಣಿ ತನ್ನ ಶಿಶುವಿಗೆ ಹಾಲು ಕುಡಿಸಿ ಅದು ಬೆಳೆದು ದೊಡ್ಡದಾಗುತ್ತಿದ್ದಂತೆ ತನ್ನ ಬದುಕಿನತ್ತ ಮುಖ ತಿರುಗಿಸುತ್ತದೆ. ಆ ಎಳೆಯ ಪ್ರಾಣಿ ತನ್ನಷ್ಟಕ್ಕೆ ತಾನು ಮುಂದೆ ಬದುಕಬೇಕಾಗುತ್ತದೆ. ಎಲ್ಲಾದರೂ ಆಹಾರ ಬಿದ್ದಿದ್ದರೆ ಅದನ್ನು ಪ್ರಾಣಿಗಳು ಹಸಿದ ಪ್ರಾಣಿಗಳಿಗೆ ಬಿಟ್ಟುಕೊಡಬೇಕು ಎಂಬ ಪರಿವೆಯಿಲ್ಲದೆ ಗಪಗಪನೆ ತಿನ್ನುತ್ತವೆ, ನಿಜ. ಆದರೆ ಅಲ್ಲಿಯೂ ಪ್ರಾಣಿಗಳಲ್ಲಿ ಒಂದು ಸದ್ಗುಣ ಇದೆ–ಆ ಉಳಿದ ಆಹಾರವನ್ನು ಕೊಂಡು ಹೋಗಿ ಬಚ್ಚಿಡುವುದಿಲ್ಲ. ಪ್ರಾಣಿಗಳಲ್ಲಿ ಇರುವ ಆ ಗುಣ ಸ್ವಾರ್ಥ ಅಲ್ಲ : ಸಹಜ. ವಿಷಯಲಂಪಟತ್ವ ಪ್ರಾಣಿಗಳಲ್ಲಿಲ್ಲ. ಆದರೆ ಮನುಷ್ಯನನ್ನು ಗಮನಿಸಿ, ಅವನು ಇತರರಿಗೆ ಸಿಗದಂತೆ ಸಂಪತ್ತನ್ನು ತನ್ನದನ್ನಾಗಿ ಮಾಡಿಕೊಳ್ಳುವ

ಸ್ವಾರ್ಥಿ. ಪ್ರಾಣಿಗಳು ಒಂದು ನಿರ್ದಿಷ್ಟ ಅವಧಿಯಲ್ಲಿ ಮಾತ್ರ ಕಾಮಕೇಳಿಯಲ್ಲಿ ತೊಡಗಿದರೆ ಮನುಷ್ಯನಿಗೆ ಕಾಲದ ಮಿತಿ ಎಂಬುದಿಲ್ಲ.

'ಜನ' ಅಥವಾ ಮನುಷ್ಯ ಪ್ರಾಣಿಯ ಸಹಜ ಗುಣಗಳಾದ ಕೆಲವು ಅಂಶಗಳ ವಿರುದ್ಧವಾದ ಕೆಲವು ಮೌಲ್ಯಗಳಿವೆ–ಅವೇ ಸಜ್ಜನಿಕೆ; ಆ ಮೌಲ್ಯವುಳ್ಳವನೇ ಸಜ್ಜನ (ಸತ್+ಜನ, ಸತ್=ಶ್ರೇಷ್ಠ). 'ಸಜ್ಜನಿಕೆ'ಯು ಇಂಗ್ಲಿಷಿನ Culture ಎಂಬ ಪದಕ್ಕೆ ಒಂದು ದೃಷ್ಟಿಯಿಂದ ಸುವಾದಿ ಯಾದುದು. 'Culture' ಎಂದರೆ ಮಾನವಶಾಸ್ತ್ರದ ದೃಷ್ಟಿಯಿಂದ ಒಂದು ನಾಡಿನ ಅಥವಾ ಜನಾಂಗದ ಜೀವನವಿಧಾನ : ಅದು ಅದರ ಆಹಾರವಿಧಾನ, ಭಾಷೆ, ಸಾಹಿತ್ಯ, ಆಡಳಿತಕ್ರಮ, ಶಿಲ್ಪ, ದೃಷ್ಟಿಕೋನ ಇತ್ಯಾದಿ ಎಲ್ಲವನ್ನೂ ಒಳಗೊಳ್ಳುತ್ತದೆ. ಜನಪ್ರಿಯ ದೃಷ್ಟಿಯಿಂದ Culture ಎಂದರೆ ಒಳ್ಳೆಯ ನಡೆ ಹಾಗೂ ನುಡಿ, ಆ ದೃಷ್ಟಿಯಿಂದ 'ಸಜ್ಜನಿಕೆ' ಎಂದರೆ ಸಂಸ್ಕೃತಿ ಅಥವಾ ಸುಸಂಸ್ಕೃತಿ. ಹಿಂದೆ ಅಂತಹ ಗುಣವುಳ್ಳ ವ್ಯಕ್ತಿಗಳಿಗೆ 'ಸೌಜನ್ಯ ರತ್ನಾಕರ', 'ಸೌಜನ್ಯ ಕಂದಾಂಕುರ' (ಸೌಜನ್ಯ ಎಂಬ ಕಮಲದ ಗೆಡ್ಡೆಯ ಮೊಳಕೆ) ಇಂತಹ ಬಿರುದುಗಳಿದ್ದುವು. ದೌಷ್ಟ್ಯದಿಂದ ದೂರವಾದ ಸುಜನರ ಮೆಚ್ಚುಗೆಗೆ ಪಾತ್ರನಾದವನೇ 'ಸುಜನ ಕೈವಾರ' ; ಸುಜನದ ಸಹವಾಸದಲ್ಲಿರುವವನೇ 'ಸುಜನ ಪ್ರಸಂಗ' ; ಸಜ್ಜನರನ್ನು ತೃಪ್ತಿಪಡಿಸುವವನೇ 'ಸುಜನ ಪ್ರಸನ್ನ', 'ಸೌಜನ್ಯ'ಕ್ಕೆ ವಿರುದ್ಧವಾದ ಪದ 'ದೌರ್ಜನ್ಯ' (=ಹಿಂಸೆ, ಕ್ರೌರ್ಯ, ದಬ್ಬಾಳಿಕೆ). ಸೌಜನ್ಯವೇ ಮನುಷ್ಯನ ನಿಜವಾದ ಸಂಪತ್ತು ; ಮನುಷ್ಯತ್ವದ, ಮಾನವತೆಯ ಒರೆಗಲ್ಲು.

ಬಸವಣ್ಣನವರ ಒಂದು ವಚನ ಹೀಗಿದೆ – "ಏನಿ ಬಂದಿರಿ ಹದುಳವಿದ್ದಿರಿ ಎಂದರೆ ನಿಮ್ಮ ಮೈಸಿರಿ ಹಾರಿ ಹೋಹುದೇ ? ಕುಳ್ಳಿರೆಂದರೆ ನೆಲ ಕುಳಿ ಹೋಹುದೇ ? ಒಡನೆ ನುಡಿದರೆ ಸಿರ ಹೊಟ್ಟೆ ಒಡೆವುದೇ ? ಕೊಡದಿದ್ದರೊಂದು ಗುಣವಿಲ್ಲದಿದ್ದರೆ ಮೂಗ ಕೊಯ್ವದೆ ಮಾಣ್ಬನೇ ಕೂಡಲ ಸಂಗಮದೇವ" (ಮನೆಗೆ ಬಂದವರನ್ನು ಏನು ಬಂದಿರಿ, ಆರೋಗ್ಯವೇ ಎಂದು ವಿಚಾರಿಸಿದರೆ ಸಂಪತ್ತು ಹಾರಿ ಹೋಗುವುದಿಲ್ಲ ; ಕುಳಿತುಕೊಳ್ಳಿ ಎಂದರೆ ನೆಲದಲ್ಲಿ ಗುಂಡಿ ಬೀಳುತ್ತದೆಯೇ ? ತಕ್ಷಣ ಮಾತನಾಡಿಸಿದರೆ ನಿಮ್ಮ ತಲೆ ಹೊಟ್ಟೆ ಒಡೆಯುವುದಿಲ್ಲ. ಕೊಡಲು ಸಾಧ್ಯವಾಗದಿದ್ದರೂ ಒಂದು ಸದ್ಗುಣವನ್ನು ವ್ಯಕ್ತಪಡಿಸದೇ ಇರುವವರ ಮೂಗನ್ನು ಭಗವಂತ ಕತ್ತರಿಸಿ ಹಾಕುತ್ತಾನೆ) ಮನೆಗೆ ಬಂದವರನ್ನು ಹೇಗೆ ನಡೆಯಿಸಿಕೊಳ್ಳಬಾರದು, ಹೇಗೆ ನಡೆಯಿಸಿಕೊಳ್ಳಬೇಕು ಎಂಬ ಚಿತ್ರವನ್ನು ಕೊಡುವ ಮೂಲಕ ಬಸವಣ್ಣನವರು ಸೌಜನ್ಯದ ಲಕ್ಷಣವನ್ನೇ ಸ್ಪಷ್ಟಪಡಿಸಿದ್ದಾರೆ. ಸೌಜನ್ಯವೇ ಮನುಷ್ಯನ ನಿಜವಾದ ಆಸ್ತಿ, ಸಂಪತ್ತು. ಅದು ಇಲ್ಲದವನು ದುಷ್ಟ ಪ್ರಾಣಿಗಳಿಗಿಂತ ಕೀಳು.

ಹಿಂದೆ ಅನಕ್ಷರಸ್ಥ ಹಳ್ಳಿಗರು ನಿಜವಾದ 'ಸುಜನ'ರಾಗಿದ್ದರು; ಅತ್ಯಾಧುನಿಕ ಕಾಲದ ವಿದ್ಯಾವಂತರಲ್ಲಿ ಆ 'ಸೌಜನ್ಯ' ನಿಜವಾಗಿ ಉಳಿದಿದೆಯೇ ? ❍

ಸೌಜನ್ಯದ ನೆಲೆ

–ಡಾ. ಪಿ.ವಿ. ನಾರಾಯಣ

'ಸೌಜನ್ಯ' ಎಂಬ ಶಬ್ದವು ಸುಜನ ಎಂಬುದರ ಭಾವನಾಮರೂಪ. ಸುಜನ ಎಂದರೆ 'ಒಳ್ಳೆಯ ಜನ' ಅಥವಾ 'ಒಳ್ಳೆಯವನು/ಳು' ಎಂದಾಗುತ್ತದೆ. ಎಂದರೆ ಒಳ್ಳೆಯತನವನ್ನು ಮೈಗೂಡಿಸಿಕೊಂಡ ವ್ಯಕ್ತಿಯನ್ನು ಸುಜನ ಎನ್ನುತ್ತೇವೆ. ಅವನ/ಳ ನಡವಳಿಕೆಯ ಪರಿಯೇ ಸೌಜನ್ಯ. ಬಹು ಹಿಂದಿನಿಂದಲೂ ಸುಜನರಿಗೆ ಬಹು ಗೌರವ. ಒಳ್ಳೆಯ ನಡವಳಿಕೆಯ ವ್ಯಕ್ತಿಗಳನ್ನು ಆ ಪದದಿಂದಲೇ ವಿಶೇಷಿಸುವ ಪರಿಪಾಟ ಹಿಂದಿನಿಂದಲೂ ಬಂದಿದೆ. ನಮ್ಮ ಕಾವ್ಯಗಳಲ್ಲಿ ಇಂತಹವರನ್ನು ವರ್ಣಿಸಬೇಕಾದರೆ 'ಸುಜನ' ಎಂಬ ಶಬ್ದದಿಂದ ರೂಪಿತವಾದ ಅನೇಕ ವಿಶೇಷಣಗಳನ್ನು ಬಳಸಿರುವುದನ್ನು ಕಾಣಬಹುದು. ಸುಜನರಿಗೆ ಬೇಕಾದವನು ಅಥವಾ ಸುಜನರನ್ನು ಸಂತೃಪ್ತಿಗೊಳಿಸುವವನು ಎಂಬ ಅರ್ಥದಲ್ಲಿ 'ಸುಜನವನಜದಿನಕರ' (ಸುಜನರೆಂಬ ತಾವರೆಗೆ ಸೂರ್ಯನಂತಿರುವವನು) ಎಂದೋ, 'ಸುಜನಜನಪ್ರಮೋದ' (ಸುಜನರಿಗೆ ಸಂತಸವುಂಟುಮಾಡುವವನು) ಎಂದೋ ವರ್ಣಿಸಿರುವುದನ್ನು ನೋಡಬಹುದು. ಹಾಗೆಯೇ 'ಸುಜನ' ಎಂಬ ಶಬ್ದವನ್ನು ಬಳಸಿ ವ್ಯಕ್ತಿಯ ಬಿರುದಿನಂತೆ ಬಳಸಿರುವ ಪ್ರಸಂಗಗಳೂ ಅನೇಕ ಶಾಸನಗಳಲ್ಲಿ ದೊರಕುತ್ತವೆ. 'ಸುಜನವತ್ಸಲ', 'ಸುಜನಕೈವಾರ', 'ಸುಜನಪ್ರಸನ್ನ', 'ಸುಜನೋತ್ತಂಸ' ಮುಂತಾದವು ಇಂತಹವು. ಅಂದರೆ ಸುಜನರು ಇತರರಿಗೆ ಮಾದರಿ, ಅವರನ್ನು ಒಲಿಸುವುದು, ಅವರಿಗೆ ತೃಪ್ತಿ ತರುವುದು ಎಂದರೆ ಶ್ರೇಷ್ಠ ಕಾರ್ಯ ಎಂಬ ಭಾವನೆ ಹೀಗೆ ಮೊದಲಿನಿಂದಲೂ ಇದೆ. ಸುಜನರ ಗುಣವೇ 'ಸೌಜನ್ಯ'; ಸುಜನ ಎಂಬುವುದಕ್ಕೆ ಒಳ್ಳೆಯವನು ಎಂದು ಅರ್ಥವಾದಂತೆ 'ಸೌಜನ್ಯ' ಎಂದರೆ ಒಳ್ಳೆಯತನ ಎಂಬ ಅರ್ಥ ಸಹಜವಾಗಿ ಹೊಮ್ಮುತ್ತದೆ. ಒಳ್ಳೆಯತನವನ್ನು ಮೈಗೂಡಿಸಿಕೊಂಡ ವ್ಯಕ್ತಿಯನ್ನು ಮೆಚ್ಚಿಕೊಂಡು ವರ್ಣಿಸಿರುವ ಅನೇಕ ಉಲ್ಲೇಖಗಳೂ ಕಾವ್ಯ–ಶಾಸನಗಳಲ್ಲಿ ದೊರೆಯುತ್ತವೆ. 'ಸೌಜನ್ಯಕಂದಾಂಕುರ', 'ಸೌಜನ್ಯತೀರ್ಥ', 'ಸೌಜನ್ಯರತ್ನಾಕರ' ಎಂಬ ಬಿರುದುಗಳನ್ನು ನೋಡಬಹುದು.

ಸುಜನರ ಸಹವಾಸ ಮಾಡಬೇಕಾದರೆ ಅಥವಾ ಅವರನ್ನು ಮೆಚ್ಚಿಕೊಳ್ಳಬೇಕಾದರೆ ಅಂತಹವನಿಗೂ ಈ ಗುಣಗಳು ಇಷ್ಟ ಎಂಬುದು ವಿದಿತವೇ ಆಗುತ್ತದೆ. 'ನಿನ್ನ

ಸ್ನೇಹಿತನಾರೆಂದು ಹೇಳು, ನಿನ್ನ ಸ್ವಭಾವವನ್ನು ಹೇಳುತ್ತೇನೆ' ಎಂಬರ್ಥದ ಇಂಗ್ಲಿಷ್ ಮಾತೊಂದಿದೆ. ಅಂದರೆ ಗಾಢ ಸ್ನೇಹ ಬೆಳೆಯಬೇಕಾದರೆ ಇಬ್ಬರು ವ್ಯಕ್ತಿಗಳಲ್ಲಿ ಸಮಾನ ಗುಣ–ಸ್ವಭಾವಗಳು, ಅಭಿರುಚಿಗಳು ಇರಬೇಕಾದುದು ಅಗತ್ಯ. ಆ ಗುಣಗಳೇ ಅವರನ್ನು ಬೆಸೆಯುವ ದ್ರವ್ಯ. ನಮ್ಮಲ್ಲಿ 'ಸಹವಾಸ ದೋಷ' ಎಂಬ ಮಾತಿದೆ. ಪರಸ್ಪರ ಸಹವಾಸ ಹೊಂದಿದ ಇಬ್ಬರಲ್ಲಿ ಯಾರು ಹೆಚ್ಚು ಪ್ರಭಾವಶಾಲಿಯೋ ಅವನ ಗುಣಗಳು ಮತ್ತೊಬ್ಬನಿಗೆ ಬರುತ್ತವೆ; ಹೀಗಾಗಿ ಸಹವಾಸ ಮಾಡಿದರೆ ಕೆಟ್ಟವನ ಗುಣ ಮತ್ತೊಬ್ಬನು ಒಳ್ಳೆಯವನಾಗಿದ್ದೂ ಅವನ ಮೇಲಾಗಿ ಅವನನ್ನು ಕೆಡಿಸಬಹುದು; ಆದ್ದರಿಂದ ನಮ್ಮ ಸಹವಾಸ ಒಳ್ಳೆಯವರೊಂದಿಗಿರಬೇಕೆಂಬ ಆದರ್ಶ ಜನರದ್ದು. "ಒಳ್ಳಿದನು ಕಳ್ಳನೊಡನಾಡೆ ಅವ ಶುದ್ಧ ಕಳ್ಳನೇ ಅಕ್ಕು" ಎಂಬುದು ಸರ್ವಜ್ಞನ ಮಾತೇ ಇದೆಯಲ್ಲವೇ ? ಆಗಲೇ ಹೇಳಿದಂತೆ ಹೀಗಾಗುವುದು ಕಳ್ಳ ಮೇಲುಗೈಯಾದಾಗ; ಈ ಹೇಳಿಕೆಯಲ್ಲಿ ಈ ಅರ್ಥ ಅಧ್ಯಾಹಾರ. ಹಾಗೆಯೇ ಸುಜನರು ಹೆಚ್ಚು ಪ್ರಭಾವಶಾಲಿಯಾಗಿದ್ದರೆ ದುರ್ಜನನ ಸ್ವಭಾವವೂ ಬದಲಾಗಬಹುದು. ಸುಜನ ಎಂಬುದಕ್ಕೆ ಸಜ್ಜನ ಎಂಬುದೂ ಪರ್ಯಾಯ ಪದ. ಸರ್ವಜ್ಞನೇ ಮತ್ತೊಂದೆಡೆ "ಸಜ್ಜನರ ಸಂಗವದು ಹೆಜ್ಜೇನು ಸವಿದಂತೆ" ಎಂದು ಹೇಳಿರುವ ಮಾತೂ ಜನಜನಿತವೇ. ಅಂದರೆ ಸಜ್ಜನರ ಪ್ರಭಾವದಿಂದ ಜೊತೆಗಾರರು ಒಳ್ಳೆಯತನವನ್ನು ರೂಢಿಸಿಕೊಳ್ಳಲವಕಾಶವಾಗುವುದರ ಜೊತೆಗೆ, ಅವರ ಸಹವಾಸ ಹಿತಕಾರಿಯಾದದ್ದೂ ಹೌದು. ಹೀಗಾಗಿ ಒಳ್ಳೆಯತನವೂ ಹಿತಕಾರಿ ಎಂದಂತಾಯಿತು. ಅದು ಎಲ್ಲರಿಗೂ ಹಿತಕಾರಿ: ಒಳ್ಳೆಯ ವ್ಯಕ್ತಿಗೆ ಹೇಗೋ ಅವನ ಜೊತೆಗಿರುವವನಿಗೆ ಕೂಡ. ತನ್ನ ಸುತ್ತಲೂ ಹಿತವನ್ನು ಪಸರಿಸಬಲ್ಲವನೇ ನಿಜವಾದ ಸುಜನ ಅಥವಾ ಸಜ್ಜನ.

'ಸುಜನ' ಮತ್ತು 'ಸೌಜನ್ಯ' ಎಂಬ ಶಬ್ದಗಳಿಗೆ ವಿರುದ್ಧವಾದುದು 'ದುರ್ಜನ' ಮತ್ತು 'ದೌರ್ಜನ್ಯ' ಎಂಬವು. ಹಿಂದೆ ಮಾಡಿದ ಸಹವಾಸದ ಉಲ್ಲೇಖವನ್ನು ನೆನೆಪಿಸಿಕೊಳ್ಳಿ; ಸುಜನರ ಜೊತೆಗಿನ ಸಹವಾಸ ಹಿತಕಾರಿ, ಆದರೆ 'ದುರ್ಜನರ ಸಂಗ ಬೇಡವಯ್ಯಾ' ಎಂಬುದು ಬಸವಣ್ಣನ ಮಾತು. 'ಸೂಕ್ತಿ ಸುಧಾರ್ಣವ'ದಲ್ಲಿ ಒಂದು ಮಾತಿದೆ : "ಗುಣಮಂ ಕಂಡೊಡೆ ದುರ್ಜನಂ ಬಗೆವನಲ್ಲಂ, ಆ ದೋಷಮುಮಂ ಕಂಡ ಸದ್ಗುಣಿವೊಲ್" ಎಂಬುದು ಅದು. ಸದ್ಗುಣಿ (ಸುಜನ ಅಥವಾ ಸಜ್ಜನ)ಯು ಹೇಗೆ ದೋಷಗಳಿಗೆ ಬೆಲೆ ನೀಡುವುದಿಲ್ಲವೋ ಹಾಗೆಯೇ ದುರ್ಜನನು ಗುಣವನ್ನು (ಎಂದರೆ ಒಳ್ಳೆಯ 'ಗುಣ' ಎಂದೇ ಅರ್ಥ) ಲೆಕ್ಕಿಸುವುದಿಲ್ಲ ಎಂಬ ಅಭಿಪ್ರಾಯ ಇಲ್ಲಿದೆ. ಹೀಗಾಗಿ ವ್ಯಕ್ತಿ ಯಾವುದಕ್ಕೆ ಬೆಲೆ ನೀಡುತ್ತಾನೆಂಬುದರ ಮೇಲೆ ಅವನ ಸ್ವಭಾವವನ್ನು ನಿಷ್ಕರ್ಷಿಸಬಹುದು. ನಯಸೇನನ 'ಧರ್ಮಾಮೃತ' ಎಂಬ ಕಾವ್ಯದಲ್ಲಿ ಒಂದು ಪದ್ಯವಿದೆ :

ಮುನಿದಪರೆಂಬುದೊಂದು ಭಯಮೆಳ್ಳನಿತಪ್ಪೊಡಮೊಂದುಮಿಲ್ಲ ಸ
ಜ್ಜನರೊಳದೇಕವರ್ಪ್ಪುರುಡಿಪರ್ಮುನಿವರ್ಕಡು ದುಷ್ಟರಪ್ಪವರ್
ಮುನಿದೊಡೆ ರಾಗದಿಂದೊಸೆದೊಡಂ ಕಡುಪೊಲ್ಲದದಱಿಂದಮಂಜಿ ದು
ರ್ಜನಪರಮೇಶ್ವರರ್ಗಱಿದು ಕೈಮುಗಿವೆಂ ಬಲಗೊಂಡು ಭಕ್ತಿಯಿಂ

ಈ ಪದ್ಯ ವ್ಯಂಗ್ಯದ ಧಾಟಿಯಲ್ಲಿ ದುರ್ಜನರ ಸ್ವಭಾವವನು ಪರಿಚಯ ಮಾಡಿಕೊಡುತ್ತದೆ. ಈ ಪದ್ಯದ ಅರ್ಥ ಇದು : ''ತಮ್ಮ ಮೇಲೆ ಜನರು ಕೋಪಗೊಳ್ಳಬಹುದೆಂಬ ಭಯವನ್ನು ಇನಿತಾದರೂ ಹೊಂದದೆ ದುರ್ಜನರಾದವರು ಸಜ್ಜನರ ಮೇಲೆ ಏತಕ್ಕೆ ಪೈಪೋಟಿ ನಡೆಸುತ್ತಾರೋ, ಕೋಪಗೊಳ್ಳುತ್ತಾರೋ ! ಅವರು (ಅಂದರೆ ದುರ್ಜನರು) ಕೋಪಗೊಂಡರೂ ಪ್ರೀತಿಯಿಂದ ಒಲಿದರೂ ಬಹಳ ಕೆಟ್ಟುದೇ ! ಆ ಕಾರಣ ನಾನು ಅಂಜಿ ಆ 'ದುರ್ಜನಪರಮೇಶ್ವರ' ರಿಗೆ ಭಕ್ತಿಯಿಂದ ಪ್ರದಕ್ಷಿಣ ನಮಸ್ಕಾರವನ್ನು ಮಾಡುತ್ತೇನೆ !'' 'ದುರ್ಜನ ಪರಮೇಶ್ವರ' ಎಂಬ ಮಾತು ಎಷ್ಟು ಪರಿಣಾಮಕಾರಿಯಾಗಿ ಅವರಿಂದ ದೂರವಿರಬೇಕಾದುದನ್ನು ವರ್ಣಿಸುತ್ತದೆ, ನೋಡಿ. ಅವರ ಸಹವಾಸ ಬೇಡವೇ ಬೇಡ, ಅವರು ದ್ವೇಷಿಸಿದರೂ ಅಷ್ಟೇ, ಪ್ರೀತಿಸಿದರೂ ಅಷ್ಟೇ, ಪರಿಣಾಮ ಒಂದೇ, ಸಗಣಿಯವನೊಡನೆ ಸರಸವಾಡಿದರೂ ಅಷ್ಟೇ, ಜಗಳವಾಡಿದರೂ ಅಷ್ಟೇ, ಪರಿಣಾಮ ಒಂದೇ, ನಮ್ಮ ಮೈಯೆಲ್ಲ ಸಗಣಿಯೇ !

ಇದೆಲ್ಲ ಸರಿ, ಆದರೆ ಒಳ್ಳೆಯದು, ಒಳ್ಳೆಯವರು ಎಂದರೇನು ? ಸುಜನರು ಮತ್ತು ದುರ್ಜನರುಗಳನ್ನು ಹೇಗೆ ಪತ್ತೆ ಹಚ್ಚುವುದು ? ಸೌಜನ್ಯದ ಸ್ವರೂಪವಾವುದು ಎಂಬೆಲ್ಲ ಪ್ರಶ್ನೆಗಳೇಳುತ್ತವೆ. ಏಕೆಂದರೆ ಯಾವುದೇ ಗುಣ ಸಾಪೇಕ್ಷವಾದುದೇ ಹೊರತು ಕೇವಲ (absolute)ವಲ್ಲ, ಆತ್ಯಂತಿಕವಲ್ಲ. ಯಾಕೆಂದರೆ ಕಾಲಕಾಲಕ್ಕೆ ಮತ್ತು ದೇಶದೇಶಕ್ಕೆ ಒಳ್ಳೆಯದು ಕೆಟ್ಟುದರ ನಿರ್ವಚನ ಬದಲಾಗುತ್ತದೆ. ಒಂದು ಕಾಲದಲಿ ಒಳ್ಳೆಯದೆನಿಸಿಕೊಳ್ಳುವುದು, ಹಾಗೆಯೇ ಯಾವುದೋ ಒಂದೆಡೆ ಒಳ್ಳೆಯದಾದುದು, ಅಂತೆಯೇ ಒಂದು ಕಾಲದಲ್ಲಿ ಶ್ರೇಷ್ಠವಾದುದು, ಉಪಾದೇಯವಾದುದು ಎಲ್ಲ ಕಾಲಗಳಲ್ಲಿಯೂ ಒಳ್ಳೆಯದು ಎನ್ನಿಸಿಕೊಳ್ಳುತ್ತದೆ ಎನ್ನುವುದು ನಿಶ್ಚಿತವಿಲ್ಲ. ಒಳ್ಳೆಯದು ಎಂಬ ಭಾವನೆ ಯಾವುದೋ ಹಿನ್ನೆಲೆಯಿಂದ ಉಂಟಾಗುವಂಥದು. ಹಿನ್ನೆಲೆ ಬದಲಾದರೆ ಅದರ ಬಗೆಗಿನ ಭಾವನೆಯೂ ಬದಲಾಗುತ್ತದೆ ಎಂಬುದನ್ನು ಇತಿಹಾಸ ತೋರಿಸಿದೆ. ಹೀಗಾಗಿ ಒಳ್ಳೆಯದು ಕೆಟ್ಟುದು ಎಂದು ನಿರ್ಣಯಿಸಲು ಅದರ ಹಿನ್ನೆಲೆಯ ಪರಿಶೀಲನೆ ಮತ್ತು ಪರಿಗಣನೆ ಅತ್ಯಂತ ಮುಖ್ಯವಾಗುತ್ತದೆ. ಒಂದು ಕಾಲದಲ್ಲಿ ಉಪಯುಕ್ತವಾದುದು ಕಾಲ ಸರಿದಂತೆ ತನ್ನ ಉಪಯುಕ್ತತೆಯನ್ನು ಕಳೆದುಕೊಳ್ಳಬಹುದು. ಈ ಮಾತನ್ನಾಡುವಾಗ ನನಗೆ ಸರ್ ಜೆ. ಎಂ. ಬ್ಯಾರಿ ಎಂಬ

ಇಂಗ್ಲಿಷ್ ನಾಟಕಕಾರನ ದ ಅಡ್ಮಿರಬಲ್ ಕ್ರೈಟನ್' ಎಂಬ ಕೃತಿ ನೆನಪಿಗೆ ಬರುತ್ತದೆ. ಆ ನಾಟಕದ ಕತೆ ನಡೆಯುವುದು ಇಪ್ಪತ್ತನೇ ಶತಮಾನದ ಆರಂಭ ಕಾಲದಲ್ಲಿ. ಅಲ್ಲಿ ಒಬ್ಬ ಇಂಗ್ಲಿಷ್ ಲಾರ್ಡ್ ಇದ್ದಾನೆ, ಅವನು ವಿಧುರ, ಅವನದು ಉದಾರ ಮನೋಭಾವ, ಒಂದು ಬಗೆಯಲ್ಲಿ ಸೋಷಲಿಸ್ಟ್ ಮನೋಭಾವದವನು. ಹೀಗಾಗಿ ಪ್ರತಿ ವರ್ಷ ಅವನು ಒಂದು ದಿನ ತನ್ನ ಮನೆಯ ಆಳುಕಾಳುಗಳಿಗೆಲ್ಲ ಭೋಜನ ಕೂಟ ಏರ್ಪಡಿಸುತ್ತಾನೆ, ಅವರೊಡನೆ ಸಹಪಂಕ್ತಿ ಭೋಜನ ಮಾಡುತ್ತಾನೆ; ತಾನಷ್ಟೇ ಅಲ್ಲ, ತನ್ನ ಮೂವರು ಹೆಣ್ಣುಮಕ್ಕಳೂ ಅದರಲ್ಲಿ ಪಾಲುಗೊಳ್ಳಬೇಕೆಂಬ ನಿಯಮ ಅವನದು. ಹೀಗೇ ಅನೇಕ ವರ್ಷಗಳು ನಡೆಯುತ್ತದೆ. ಒಂದು ಬಾರಿ ತಾನು ಹೆಣ್ಣು ಮಕ್ಕಳೊಡನೆ, ಕ್ರೈಟನ್ ಎಂಬ ತನ್ನ ಮನೆಯ ಅಡುಗೆಯವನನ್ನು ಕರೆದುಕೊಂಡು ಖಾಸಗಿ ದೋಣಿಯಲ್ಲಿ ವಿದೇಶಯಾತ್ರೆ ಕೈಗೊಳ್ಳುತ್ತಾನೆ. ದುರದೃಷ್ಟವಶಾತ್, ಮಧ್ಯೆ ಬಿರುಗಾಳಿಗೆ ಸಿಕ್ಕಿ ದೋಣಿ ಅಪಘಾತಕ್ಕೊಳಗಾಗಿ ನುಚ್ಚುನೂರಾಗುತ್ತದೆ. ಕ್ರೈಟನ್ ತನ್ನ ಸಾಹಸದಿಂದ ಯಜಮಾನ ಹಾಗೂ ಅವನ ಮೂವರು ಮಕ್ಕಳನ್ನು ಕಾಪಾಡಿ ಸಮೀಪದ ತೀರಕ್ಕೆ ಕರೆತರುತ್ತಾನೆ. ಅದೊಂದು ದ್ವೀಪ. ಹೇಗಾದರೂ ಬದುಕಬೇಕಲ್ಲ. ಆದರೆ ಲಾರ್ಡ್ ಆಗಲೀ ಅವನ ಮಕ್ಕಳಿಗಾಗಲೀ ದೇಹಶ್ರಮಕ್ಕೆ ಹೊಂದಿಕೊಂಡವರಲ್ಲ; ಹೀಗಾಗಿ ಕ್ರೈಟನ್ ಒಂದು ಗುಡಿಸಲು ಕಟ್ಟಿ ಅವರನ್ನೆಲ್ಲ ಇರಿಸಿ, ದ್ವೀಪದೆಲ್ಲೆಡೆ ಓಡಾಡಿ ಹಣ್ಣು ಹಂಪಲು ತಂದು, ಗೆಡ್ಡೆಗೆಣಸುಗಳನ್ನಾಯ್ದು ಅದರಿಂದ ಅಡುಗೆ ಮಾಡಿ ಅವರಿಗೆ ಒಂದಷ್ಟು ಆಹಾರ ಕಾಣಿಸುತ್ತಾನೆ, ಲಾರ್ಡ್ ಮತ್ತವನ ಮಕ್ಕಳನ್ನು ಹಸಿವಿನಿಂದ ಪಾರುಮಾಡಿ ಅವರ ಜೀವವುಳಿಸುತ್ತಾನೆ. ಅವನಿಲ್ಲದಿದ್ದರೆ ಉಳಿದ ನಾಲ್ವರು ಬದುಕುವುದೇ ಅಸಾಧ್ಯ ಎಂಬ ಪರಿಸ್ಥಿತಿಯುಂಟಾಗುತ್ತದೆ. ಕ್ರೈಟನ್ ಇಲ್ಲಿ ನಾಯಕ, ಅವನು ಹೇಳಿದ ಮಾತನ್ನು ಉಳಿದವರು ಕೇಳುವಂತಹ ಪರಿಸ್ಥಿತಿ ಉಂಟಾಗುತ್ತದೆ. ಅವನಿಂದಲೇ ಉಳಿದವರ ಬದುಕು. ಇದು ಎಷ್ಟರಮಟ್ಟಿಗೆ ಮುಂದುವರಿಯುತ್ತದೆ ಎಂದರೆ, ಲಾರ್ಡ್‌ನ ಮೂವರು ಹೆಣ್ಣುಮಕ್ಕಳಲ್ಲಿ ಕ್ರೈಟನ್‌ನ ಒಲವು ಸಂಪಾದಿಸಲು ಪ್ರಚ್ಛನ್ನ ಪೈಪೋಟಿಯೇರ್ಪಡುತ್ತದೆ. ಸಂದರ್ಭ ಈ ಹದ ಮುಟ್ಟಿರುವಾಗ, ದೋಣಿ ಪ್ರಯಾಣದಲ್ಲಿದ್ದ ದೇಶದ ನಾಯಕನೊಬ್ಬ ಕಣ್ಮರೆಯಾದುದರಿಂದ ಸರ್ಕಾರ ಒಂದು ಸಹಾಯ ದೋಣಿಯನ್ನು ಕಳಿಸಿ ಅವನ ತಲಾಷೆಗೆ ಏರ್ಪಾಡು ಮಾಡುತ್ತದೆ. ಅದು ಅನೇಕ ಸ್ಥಳಗಳನ್ನು ಜಾಲಾಡಿ ಲಾರ್ಡ್ ಇದ್ದ ದ್ವೀಪದೆಡೆಗೆ ಬಂದು ಇವರನ್ನೆಲ್ಲ ಕಾಪಾಡಿ ಮತ್ತೆ ಸ್ವದೇಶಕ್ಕೆ ಕರೆತರುತ್ತದೆ. ಅನಂತರ ಯಥಾಪ್ರಕಾರ ಲಾರ್ಡ್ ಯಜಮಾನ, ಮಕ್ಕಳು ಶ್ರೀಮಂತ ಕನ್ಯೆಯರು ಮತ್ತು ಕ್ರೈಟನ್ ಅಡುಗೆಯವನು; ಪರಿಸ್ಥಿತಿಯ ಕಾರಣ ಬದಲಾಗಿದ್ದ ಸನ್ನಿವೇಶ ಪುನಃ ಮರುಕಳಿಸುತ್ತದೆ.

ಈ ನಾಟಕದ ಆಶಯ ಪರಿಸ್ಥಿತಿ ಮತ್ತು ಮನುಷ್ಯರ ನಡುವಣ ಅನನ್ಯ ಸಂಬಂಧದ ಕಡೆ ಗಮನ ಸೆಳೆಯುವುದು; ವ್ಯತ್ಯಸ್ಥ ಪರಿಸ್ಥಿತಿಯಲ್ಲಿ ಕೆಲಸಗಾರ ಯಜಮಾನನಾಗುತ್ತಾನೆ, ನಾಯಕ ಹಿಂಬಾಲಕನಾಗುತ್ತಾನೆ ಎನ್ನುವುದು. ಇದು ಗುಣಮೌಲ್ಯಕ್ಕೂ ಅನ್ವಯಿಸುತ್ತದೆ. ಅಂದರೆ ಸನ್ನಿವೇಶದ ಬಲದಿಂದಲೇ ಒಂದು ಗುಣ ಶ್ರೇಷ್ಠವಾಗುತ್ತದೆ, ಸನ್ನಿವೇಶ ಬದಲಾದಾಗ ಅದರ ಸ್ಥಾನವೂ ಬದಲಾಗುತ್ತದೆ. ಉದಾಹರಣೆಗೆ ಶ್ರೀರಾಮನನ್ನೇ ತೆಗೆದುಕೊಳ್ಳೋಣ: ಶ್ರೀರಾಮನಿಗೆ ಯೌವರಾಜ್ಯಾಭಿಷೇಕವಾಗುತ್ತದೆಂದು ಸಂತಸಪಟ್ಟಿದ್ದ ಅಯೋಧ್ಯೆಯ ಪ್ರಜೆಗಳಿಗೆ ಅದು ತಪ್ಪಿಹೋದಾಗ ದುಃಖವಾಗುವುದು ಮಾತ್ರವಲ್ಲ, ಹೊರಟು ನಿಂತ ಅವನನ್ನು ಅವರು ಹೋಗಬೇಡವೆಂದು ಪರಿಪರಿಯಾಗಿ ಬೇಡಿಕೊಳ್ಳುತ್ತಾರೆ. ಆದರೆ ರಾಮನಿಗೆ ಇಕ್ಷ್ವಾಕು ವಂಶದ ತಂದೆ ದಶರಥನ ಮಾತನ್ನುಳಿಸುವುದು ಅವನ ಮಗನಾದ ತನ್ನ ಕರ್ತವ್ಯ ಎಂಬ ಭಾವನೆ, ಪ್ರಜೆಗಳಿಗೆ ರಾಮನಂತಹವನ ಆಡಳಿತದಲ್ಲಿ ತಾವು ನೆಮ್ಮದಿಯಿಂದಿರುವೆವೆಂಬ ಭರವಸೆ. ಹೀಗಾಗಿ ಜನಾಭಿಪ್ರಾಯಕ್ಕೆ ವಿರುದ್ಧವಾಗಿ ರಾಮ ಕಾಡಿಗೆ ಹೋದ. ವಂಶಪ್ರಜ್ಞೆ ಮತ್ತು ತಂದೆ ಏನೇ ಹೇಳಿದರೂ ಅದನ್ನು ಪಾಲಿಸಬೇಕಾದದ್ದು ಮಗನ ಕರ್ತವ್ಯವೆಂಬ ನಂಬಿಕೆಯಿದ್ದ ಆ ಕಾಲದಲ್ಲಿ ರಾಮನದು ಸಮರ್ಪಕವಾದ ನಡವಳಿಕೆಯಾಗಿದ್ದಿರಬಹುದು. ಆದರೆ ಈಗ ಪ್ರಜಾಪ್ರಭುತ್ವಯುಗ; ಬಹುಸಂಖ್ಯಾತರ ಸುಖವೇ ಆಡಳಿತದ ಧ್ಯೇಯ. ಹೀಗಾಗಿ ವೈಯಕ್ತಿಕ ನೆಲೆಯಲ್ಲಿ ಮಾತುಕೊಟ್ಟಿದ್ದ ದಶರಥನ ಪ್ರತಿಜ್ಞಾಪಾಲನೆ ಅವನ ಕರ್ತವ್ಯವಾಗಿರಬಹುದೇ ವಿನಾ ಮಗನದು ಹೇಗಾದೀತು ? ಅಲ್ಲದೆ "ಬಹುಜನ ಹಿತಾಯ ಬಹುಜನ ಸುಖಾಯ" ಎಂಬ ಮೌಲ್ಯದ ಗತಿ ಏನು ? ಎಂಬ ಪ್ರಶ್ನೆಗಳೇಳುತ್ತವೆ. ಹಾಗೆಯೇ, ಸಾಕಷ್ಟು ಚರ್ಚಿತವಾಗಿರುವ ಗರ್ಭಿಣಿ ಸೀತೆಯನ್ನು ಕಾಡಿಗೆ ಕಳಿಸಿದ ಪ್ರಸಂಗ. ಶ್ರೀರಾಮನು ಈಗ ಇದ್ದಿದ್ದರೆ ಅವನ ನಡವಳಿಕೆ ರಾಮಾಯಣದಲ್ಲಿರುವುದಕ್ಕಿಂತ ಭಿನ್ನವಾಗಿರುತ್ತಿತ್ತು ಎಂದೇ ನನ್ನ ತಿಳಿವಳಿಕೆ. ಆದರೆ ರಾಮನ ಮನೋಭಾವ ಒಪ್ಪಿತ ಮೌಲ್ಯಕ್ಕೆ ಪ್ರಾಧಾನ್ಯ ನೀಡುವಂತಹುದು, ಆಗಿನ ರಾಮ ಆಗ ಮೌಲ್ಯವೆಂದುಕೊಂಡುದಕ್ಕೆ ಮಾನ್ಯತೆ ನೀಡಿದರೆ, ಈಗ ಇದ್ದಿದ್ದರೆ ಅವನು ಈಗಿನ ಮೌಲ್ಯಕ್ಕೆ ಬೆಲೆಯೀಯುತ್ತಿದ್ದ. ಹೀಗಾಗಿ ಸುಜನತೆ ಅಥವಾ ಸೌಜನ್ಯವನ್ನು ನಡವಳಿಕೆಯ ಬಾಹ್ಯ ಸ್ವರೂಪದಿಂದ ಗುರುತಿಸುವುದರ ಬದಲು ವ್ಯಕ್ತಿಯ ಮನೋಭಾವದಿಂದ ಗುರುತಿಸಬೇಕು ಎಂಬುದು ನನ್ನ ವಾದ. ಹೀಗಾಗಿ ಶ್ರೀರಾಮನನ್ನು ಶ್ರೇಷ್ಠ ವ್ಯಕ್ತಿಯೆಂದು ಕರೆಯುವುದು ಅವನ ಮನೋಭಾವದ ಕಾರಣದಿಂದಲೇ ಹೊರತು ಅವನ ಮಾಡಿದ ಕಾರ್ಯದ ಆಧಾರದ ಮೇಲಲ್ಲ. ಅಂದರೆ ಶ್ರೀರಾಮ ಶ್ರೇಷ್ಠ ವ್ಯಕ್ತಿಯಾದ್ದರಿಂದ ಅವನು ಆಗ ಮಾಡಿದುದನ್ನೇ ನಾವೀಗ ಮಾಡಬೇಕೆಂದು ಸಮಂಜಸ ತರ್ಕವೂ ಅಲ್ಲ, ಆದರ್ಶವೂ

ಅಲ್ಲ, ಅವನ ನಿಸ್ವಾರ್ಥ ಮನಸ್ಸನ್ನು. ನಾವು ಅನುಸರಿಸಬೇಕಾದದ್ದು ಆದರ್ಶ ವ್ಯಕ್ತಿಯ spirit ಅನ್ನೇ ಹೊರತು ಅದರ ಅಕ್ಷರಶಃ ನಕಲನ್ನಲ್ಲ. ಅಂದರೆ ಅಂತಹ ವ್ಯಕ್ತಿಯ ಮನಸ್ಸು, ಪರಿಸ್ಥಿತಿ ಯಾವುದೇ ಆಗಿರಲಿ, ಸ್ವಾರ್ಥರಹಿತವಾಗಿರುತ್ತದೆ ಎಂಬುದು, ಅದೇ ಸೌಜನ್ಯದ ಕುರುಹು. ಅಂದರೆ ಜನಮುಖಿಯಾದ ಮನೋಭಾವ ಸೌಜನ್ಯದ ನೆಲೆ.

ಸಾಮಾನ್ಯವಾಗಿ ಸೌಜನ್ಯ ಎಂದರೆ ವಿನಯಭರಿತ ನಡವಳಿಕೆ ಎಂಬ ಅರ್ಥವಿದೆ. ಆದರೆ ಎಷ್ಟೋ ಮಂದಿ ಬಹಳ ವಿನಯವಂತರಾಗಿ ಕಾಣುವವರು ಆಂತರ್ಯದಲ್ಲಿ ಧೂರ್ತರಾಗಿರಬಹುದು. "ಅತಿ ವಿನಯಂ ಧೂರ್ತ ಲಕ್ಷಣಂ" ಎಂಬ ಮಾತೇ ಇದೆಯಲ್ಲವೆ? "ಬರಿಮೈ ತಣ್ಣಗೆ ಮನದಲಿ ಬಿಸಿ ಹಗೆ" ಇದ್ದರೆ ಅಂಥವರನ್ನು ಸೌಜನ್ಯಭರಿತರು ಎಂದು ಹೇಳಲಾದೀತೇ ? ಹೊರಗೆ ಒರಟಾಗಿದ್ದರೂ ಒಳಗೆ ಕಹಿಯಿಲ್ಲದ ವ್ಯಕ್ತಿತ್ವವೇ ಅಲ್ಲವೇ ಹೆಚ್ಚು ಸ್ವೀಕಾರಾರ್ಹವಾದದ್ದು ? ಕೈಲಾಸಂ ಅವರ ಪೋಲಿಕಿಟ್ಟಿ ಇಂತಹ ಒಂದು ಪಾತ್ರ. ಹಾಗೆಂದಾಕ್ಷಣ ಒರಟುತನದಿಂದ ಕೂಡಿರುವ ವ್ಯಕ್ತಿಗಳೆಲ್ಲ ಪರಹಿತವನ್ನೇ ಆಲೋಚಿಸುತ್ತಾರೆ ಎಂದು ಹೇಳಲಾಗುವುದಿಲ್ಲ. ಅಲ್ಲದೆ, ಎಷ್ಟೋ ಸಲ ನಮಗೆ ಸರಿಯೆನಿಸದಿದ್ದರೂ ಇತರರಿಗೆ ನೋವುಂಟುಮಾಡದೆ, ಆದರೆ ತಾನು ನಂಬಿದ ಮೌಲ್ಯಗಳಲ್ಲಿ ರಾಜಿ ಮಾಡಿಕೊಳ್ಳದೆ, ಸ್ವಲ್ಪಮಟ್ಟಿಗೆ ಸಹಿಸಿಕೊಳ್ಳುವುದು, ಮೃದುವಾಗಿ ನಡೆದುಕೊಳ್ಳುವುದು ಕೂಡ ಸೌಜನ್ಯದ ಭಾಗವೆಂದು ಒಪ್ಪಬೇಕು. ಬದುಕಿನಲ್ಲಿ ಕೊಟ್ಟು ತೆಗೆದುಕೊಳ್ಳುವ ಮನೋಭಾವ ಬಹು ಮುಖ್ಯವಾದದ್ದು. ನಮಗೆ ಸರಿಬರದ್ದನ್ನು ಒಪ್ಪದಿದ್ದರೂ, ಮತ್ತೊಬ್ಬರ ಮನಸ್ಸನ್ನು ನೋಯಿಸುವ, ಅಥವಾ ತನ್ನದೇ ಸರಿ ಎಂಬ ಶಾಠ್ಯವನ್ನು ಪ್ರದರ್ಶಿಸುವುದು ಸೌಜನ್ಯದ ಲಕ್ಷಣವಲ್ಲ. 'ಕವಿರಾಜಮಾರ್ಗ'ದಲ್ಲಿ ಅತ್ಯಂತ ಶ್ರೇಷ್ಠವಾದ ಮಾತೊಂದಿದೆ : "ಕಸವರಮೆಂಬುದು ನೆಱೆ ಸೈರಿಸಲಾರ್ಪೊಡೆ ಪರವಿಚಾರಮುಂ ಪರಧರ್ಮಮುಮುಂ । ಕಸವೇಂ ಕಸವರಮೇನುಬ್ಬಸಮಂ ಬಸಮಲ್ಲದಿರ್ದು ಮಾಡುವರೆಲ್ಲಂ ॥" ಪರರ ವಿಚಾರವನ್ನೂ ಪರರ ಧರ್ಮವನ್ನೂ ಸಹಿಷ್ಣುತೆಯಿಂದ ಕಾಣುವುದು ಚಿನ್ನಕ್ಕೆ ಸಮ. ಆದರೆ ಜನರು ತಮ್ಮ ಅಸಹಿಷ್ಣುತೆಯಿಂದ ಜನರಿಗೆ ಕಷ್ಟವನ್ನುಂಟುಮಾಡುತ್ತಾರೆ. ಅಂಥವರಿಗೆ ಕಸ–ಕಸವರಗಳೆರಡೂ ಒಂದೇ.

ಎಷ್ಟೋ ಸಲ ಕಠಿಣ ನಡವಳಿಕೆ ಅವಶ್ಯಕವಾಗಬಹುದು, ಕೊಂಚಮಟ್ಟಿಗಿನ ಆತ್ಮಪ್ರತ್ಯಯ ಬೇಕಾಗಬಹುದು, ಅನ್ಯಾಯವೆಂದು ಪ್ರಾಮಾಣಿಕವಾಗಿ ಅನ್ನಿಸಿದಾಗ ಪ್ರತಿಭಟನೆ ಬೇಕಾಗಬಹುದು, ಕೆಟ್ಟುದನ್ನು ಕಂಡಾಗ ಕೆಂಡಾಮಂಡಲವಾಗಬಹುದು, ಒಳಗೆ ಕಹಿಯಿರದಿದ್ದರೂ ಹೊರಗೆ ದರ್ಪವೆನ್ನಿಸುವ ನಡವಳಿಕೆಯಿರಬಹುದು. "ಎಡದ ಕೈಯಲಿ ಹಾಲುಬಟ್ಟಲು. ಬಲದ ಕೈಯಲಿ ಓಜುಗಟ್ಟಿಗೆ....ಬಡಿದು ಬುದ್ಧಿಗಲಿಸುವ ತಂದೆ" ಎಂದು

ಬಸವಣ್ಣ ಕೂಡಲಸಂಗಮನನ್ನು ವರ್ಣಿಸುವ ರೀತಿಯಂತಿರಬಹುದು. ಬಾಹ್ಯದಿಂದ ಆಂತರ್ಯವನ್ನು ಅಳೆಯಬಾರದು, ನಿಜ. ಆದರೆ ಎಲ್ಲ ಸನ್ನಿವೇಶಗಳಲ್ಲೂ ನಮ್ಮ ಮನಸ್ಸನ್ನು ತೆರೆದು ತೋರಿಸಲು ಸಾಧ್ಯವೂ ಇಲ್ಲ, ಅವಶ್ಯಕವೂ ಅಲ್ಲ. ನಮ್ಮ ಒಳ್ಳೆಯ ಇರಾದೆ (good intention)ಯನ್ನು ಎಲ್ಲ ಕಾಲದಲ್ಲೂ ಇತರರಿಗೆ ಸಾಬೀತುಪಡಿಸಲು ಪ್ರಯತ್ನಿಸಬೇಕಾಗಿಯೂ ಇಲ್ಲ. ಹೀಗಾಗಿ ಸೌಜನ್ಯ ಎಂಬುದು ನನ್ನ ದೃಷ್ಟಿಯಲ್ಲಿ ಬಾಹ್ಯ ನಡವಳಿಕೆಗಿಂತ ಮನೋಭಾವಕ್ಕೆ ಹೆಚ್ಚು ಅನ್ವಯಿಸುವಂತಹುದು. ಆದರೆ "ಮೃದುವಚನವೇ ಸಕಲ ಜಪಂಗಳಯ್ಯ" ಎಂಬ ಮಾತನ್ನು ನಾನು ಸಾರಾಸಗಟಾಗಿ ತಳ್ಳಿಹಾಕುತ್ತಿಲ್ಲ. ಎಲ್ಲಿ ಅನಿವಾರ್ಯವೋ ಅಲ್ಲಿ ಕೋಪವಿರಬೇಕೇ ಹೊರತು ಎಲ್ಲ ಸಂದರ್ಭಗಳಲ್ಲೂ ಅಲ್ಲ. ಹೀಗಾಗಿ ಸೌಜನ್ಯ ಎಂಬುದನ್ನು ಹೀಗೇಯೇ ಎಂದು ನಿರ್ದಿಷ್ಟ ವ್ಯಾಖ್ಯೆಗೊಳಪಡಿಸುವುದು ಅಸಾಧ್ಯ. ಅಲ್ಲದೆ, ವ್ಯಕ್ತಿಯಾದವನು ಪರಿಪೂರ್ಣವಾಗಿರಲು ಸಾಧ್ಯವಿಲ್ಲ (ಪರಿಪೂರ್ಣತೆಯನ್ನು ಅಳೆಯುವ ಮಾನದಂಡವೂ ಆತ್ಯಂತಿಕವಲ್ಲ, ಜೊತೆಗೆ ಪರಿಪೂರ್ಣತೆ ಎಂಬುದು ಆದರ್ಶವೇ ಹೊರತು ವಾಸ್ತವವಾಗಲು ಸಾಧ್ಯವಿಲ್ಲ). ಆದ್ದರಿಂದ ಇತರರಿಗೆ ನಿಷ್ಕಾರಣವಾಗಿ ನೋವುಂಟುಮಾಡದ, ತನ್ನನ್ನು ಕುರಿತುದಕ್ಕೆ ಬದಲು ಸಮಷ್ಟಿಯ ಹಿತಚಿಂತನೆ ನಡೆಸುವ ಮನೋಭಾವವು ಸೌಜನ್ಯದ ಪ್ರಮುಖ ಲಕ್ಷಣ ಎಂಬುದು ನನ್ನ ಭಾವನೆ.

ಸೌಜನ್ಯವೆಂಬ ತಪಶ್ಚರಣೆ

–ಡಾ. ಎಚ್.ಎನ್. ಮುರಳೀಧರ

ಕಂಡ ಭಕ್ತರಿಗೆ ಕೈಮುಗಿವಾತನೇ ಭಕ್ತ.
ಮೃದುವಚನವೇ ಸಕಲ ಜಪಂಗಳಯ್ಯ,
ಮೃದುವಚನವೇ ಸಕಲ ತಪಂಗಳಯ್ಯ,
ಸುವಿನಯವೇ ಸದಾಶಿವನೊಲುಮೆಯಯ್ಯ.
ಕೂಡಲಸಂಗಯ್ಯನಂತಲ್ಲದೊಲ್ಲನಯ್ಯ.

ನಮ್ಮಲ್ಲಿ ಜಪತಪಗಳಿಗೆ ವಿಶೇಷವಾದ ಸ್ಥಾನಮಾನಗಳಿವೆ. ಅವುಗಳಲ್ಲಿ ಹಲವು ಬಗೆಗಳೂ ಇವೆ. ತಪಸ್ಸಿಗಂತೂ ಹಲವು ಹದಿನೆಂಟು ಬಗೆಯ ಅತಿರೇಕಗಳನ್ನೇ ಆರೋಪಿಸಲಾಗಿದೆ. ಅಸಾಧ್ಯವಾದುದನ್ನು ಮಾಡಲೆತ್ನಿಸುವುದೋ ಕಷ್ಟ ಸಾಧ್ಯವಾದುದನ್ನು ಮಾಡಿಮುಗಿಸುವುದೋ ತಪಸ್ಸೆಂಬ ಹಣೆಪಟ್ಟಿಯನ್ನು ಅಂಟಿಸಿಕೊಳ್ಳುತ್ತದೆ. ಆದರೆ ಬಸವಣ್ಣನ ಈ ಮೇಲಿನ ವಚನ ರೂಢಿಯ ಜಪತಪಗಳ ಕಲ್ಪನೆಗೆ ಬೇರೊಂದು ಪರ್ಯಾಯವನ್ನು ಸ್ಥಾಪಿಸಲು ಯತ್ನಿಸುತ್ತದೆ. ಅದೇ 'ಮೃದುವಚನ'. ಈ ಪರ್ಯಾಯದ ವಿಷಯದಲ್ಲಿ ನಾವು ಸಂದೇಹವನ್ನು ತಾಳದಿರುವ ಅದಕ್ಕೊಂದು ಅವಧಾರಣೆಯನ್ನೂ ('ಮೃದು ವಚನವೇ'), ಜೊತೆಗೆ ಅದು ಯಾವುದಕ್ಕೆ ಪರ್ಯಾಯವಾಗಿದೆಯೋ ಅದಕ್ಕೆ ವಿಶೇಷಣವನ್ನು ('ಸಕಲ') ನೀಡಲಾಗಿದೆ. ಆದರೆ ಇದೇನೇ ಇದ್ದರೂ ನಾವೆಲ್ಲ ತಿಳಿದಿರುವಂತೆ ಜಪತಪಗಳು 'ಮಾಡು'ವಂಥವು; ಮೃದು ವಚನವಾದರೋ 'ಆಡು'ವಂಥದು. ಆಡುವುದು ಎಂದಾದರೂ ಮಾಡುವುದಕ್ಕೆ ಪರ್ಯಾಯವಾಗಲು ಸಾಧ್ಯವೇ?

ಆಡದೇ ಮಾಡುವನು ರೂಢಿಯೊಳಗುತ್ತಮನು
ಆಡಿ ಮಾಡುವನು ಮಧ್ಯಮನು ಅಧಮ ತಾ
ನಾಡಿ ಮಾಡದವ

ಎಂಬ ಸರ್ವಜ್ಞವಾಣಿಯಾಗಲಿ, 'ಆಡುವುದು ಸುಲಭ ಮಾಡುವುದು ಕಷ್ಟ' ಎಂಬ ಅನುಭವದ ಮಾತಾಗಲಿ ಬಸವಣ್ಣ ಹೇಳುತ್ತಿರುವುದಕ್ಕೆ ವಿರುದ್ಧವಾದದ್ದರ ವಾಸ್ತವತೆಯನ್ನು ಸ್ಥಾಪಿಸುವಂತೆ ತೋರುತ್ತದೆಯಲ್ಲವೆ.

ಈ ಪ್ರಶ್ನೆ ಏಳುವುದಕ್ಕೆ ಕಾರಣ, ಮೃದುವಚನವೆನ್ನುವುದು ಬೇರೊಂದು ರೀತಿಯಲ್ಲಿ ನಮಗೊಂದು ಪರ್ಯಾಯ ಅಥವಾ ಆಯ್ಕೆ. ನಾವು ಹೇಳಬೇಕಾದುದನ್ನು ಮೃದುವಾಗಿಯೂ ಹೇಳಬಲ್ಲೆವು ಕಠಿಣವಾಗಿಯೂ ಹೇಳಬಲ್ಲೆವು ; ಅಥವಾ ಸಂದರ್ಭದ ಅಗತ್ಯಕ್ಕೆ ತಕ್ಕಂತೆ ಈ ಎರಡು ಅಲೆಗಳ ನಡುವಣ ಮಧ್ಯಮ ಮಾರ್ಗಗಳನ್ನು ಕಂಡುಕೊಳ್ಳಬಲ್ಲೆವು. ಆದರೆ ಈ ಎಲ್ಲ ಆಯ್ಕೆಗಳ ನಡುವೆ ಒಂದಂತೂ ಖಚಿತ–ಯಾರು ನಮಗೆ ಹಿತರೋ ಅವರ ವಿಷಯದಲ್ಲಿ ನಮ್ಮ ವಚನ 'ಮೃದು'. ಯಾರು ನಮಗೆ ಅಹಿತರೋ ಅವರ ವಿಷಯದಲ್ಲಿ ನಮ್ಮ ವಚನ 'ಕಠಿಣ'. ಸನ್ನಿವೇಶಗಳ ವಿಷಯದಲ್ಲಿಯೂ ಹೀಗೆಯೇ. ಆದರೆ ಕೆಲವೊಮ್ಮೆ ನಾವು ಕೆಲವು ಬಗೆಯ ಇಕ್ಕಟ್ಟುಗಳಿಗೆ ಸಿಲುಕುವುದೂ ಉಂಟು. ಅಹಿತಕರ ಸನ್ನಿವೇಶಗಳಿಂದಾಗಿ ಮನಸ್ಸು ಕಠಿಣವನ್ನು ನುಡಿಯಲು ಹಾತೊರೆಯುತ್ತದೆ. ಆದರೆ ಹೊರಗಿನ ಒತ್ತಡಗಳಿಂದಾಗಿ ಅದು ಸಾಧ್ಯವಾಗುವುದಿಲ್ಲ. 'ಬಡವನ ಕೋಪ ದವಡೆಗೆ ಮೂಲ' ಎನ್ನುವಂತೆ ಒತ್ತಿಕೊಂಡು ಬರುತ್ತಿರುವ ಕೋಪವನ್ನು ಹತ್ತಿಕ್ಕಿ ತುಟಿಗಳಿಗೆ ಸಿಹಿನಗೆಯ ಲೇಪನವನ್ನು ಮಾಡಬೇಕಾಗಿ ಬರುತ್ತದೆ. ಸನ್ನಿವೇಶದ ಒತ್ತಡಕ್ಕೆ ಕಟ್ಟುಬಿದ್ದು 'ಮೃದುವಚನ'ದ ಧಾರೆ ತಾನೇ ತಾನಾಗಿ ಹರಿಯುತ್ತದೆ. ಇದನ್ನು ತಪವೆನ್ನಬಹುದೆ ?

ಇದಕ್ಕೆ ವ್ಯತಿರಿಕ್ತವಾಗಿ ನಾವು ಇನ್ನೊಂದು ಬಗೆಯ ಜನರನ್ನು ನೋಡುತ್ತೇವೆ. ಅವರಿಗೆ ಮೃದುವಚನ ಆಯ್ಕೆಯ ಸಂಗತಿಗಳಲ್ಲಿ ಒಂದಾಗಿರುವುದಿಲ್ಲ. ಬದಲಾಗಿ ಅವರ ಅಸ್ತಿತ್ವದ ಅವಿಭಾಜ್ಯ ವಿಸ್ತರಣೆಯಾಗಿರುತ್ತದೆ. ವಿಷವನ್ನು ಕುಡಿಸಿದವರಿಗೂ ಶುಭವನ್ನು ನುಡಿದ ಸಾಕ್ರೆಟೀಸ್, ಶಿಲುಬೆಯ ಮೇಲಿದ್ದರೂ 'ಕ್ಷಮಿಸವರನೆಲೆ ತಂದೆ' ಎಂದ ಕ್ರಿಸ್ತ, ಗುಂಡೇಟಿಗೆ ಬಲಿಯಾದಾಗಲೂ ಶಮವನ್ನು ಕಾಯ್ದುಕೊಂಡ ಗಾಂಧಿ ಇದಕ್ಕೆ ಕೆಲವು ನಿದರ್ಶನಗಳು. ಇಲ್ಲಿ ವ್ಯಕ್ತಿ ಮತ್ತು ಜಗತ್ತಿನ ಸಂಬಂಧದ ಸ್ವರೂಪವೇ ಬೇರೊಂದು ಬಗೆಯಾಗಿರುತ್ತದೆ. ಒಳಿತಿನ ಜಗತ್ತನ್ನು, ಕೆಡುಕಿನ ಜಗತ್ತನ್ನು, ನಲಿವಿನ ಜಗತ್ತನ್ನು, ನೋವಿನ ಜಗತ್ತನ್ನು ಇಲ್ಲಿ ಪ್ರಜ್ಞೆ ಒಂದೇ ಅಸ್ತಿತ್ವದ ದ್ವಂದ್ವ ಮುಖಗಳೆಂದು ಅಖಂಡವಾಗಿ ಸ್ವೀಕರಿಸುತ್ತದೆ. ಒಂದು ಸನ್ನಿವೇಶವೊದಗಿದಾಗ ಹೊಗಳುವುದಾಗಲಿ, ಮತ್ತೊಂದು ಬಂದಾಗ ಹಳಿಯುವುದಾಗಲಿ ಈ ನೆಲೆಗೆ ಹೊರತಾದದ್ದು. 'ನೆರೆಯವನನ್ನು ನಿನ್ನಂತೆಯೇ ಪ್ರೀತಿಸು' ಎಂಬ ಮಾತಿಗೆ 'ಶತ್ರುವನ್ನು ನಿನ್ನಂತೆಯೇ ಪ್ರೀತಿಸು' ಎಂಬ ತಿದ್ದುಪಡಿಯನ್ನು ತಂದವನು ಕ್ರಿಸ್ತ. ಆ ಶತ್ರುವೂ ನೀನೂ ಅಸ್ತಿತ್ವದ ಆಳದಲ್ಲಿರುವ ಏಕತೆಯಲ್ಲಿ ಒಂದೇ ಆಗಿದ್ದೀರಿ ಎಂದರು ಸ್ವಾಮಿ ವಿವೇಕಾನಂದರು. ಹೀಗಾಗಿ ಈ ಪಕ್ವತೆ ಪ್ರಜ್ಞೆಯ ವೈಶಾಲ್ಯದಿಂದ ಬರುವಂಥದೇ ಹೊರತು ಕೇವಲ ತುಟಿಯಾಳದಿಂದ ವ್ಯಕ್ತವಾಗುವಂಥದಲ್ಲ. ಆದರೆ ಈ ಪಕ್ವತೆಗಾಗಿ ಇಡೀ ಜೀವನವನ್ನೇ ಸವೆಸಬೇಕಾಗುತ್ತದೆ. ಮನಸ್ಸು–ಮಾತು–ಕರಣಗಳೆಲ್ಲವೂ

ನಿರಂತರ ತಪದಲ್ಲಿ ತೊಡಗಬೇಕಾಗುತ್ತದೆ. ತನ್ನನ್ನು ತಾನು ಸುಟ್ಟುಕೊಂಡು ಗಟ್ಟಿಯಾಗಬೇಕಾಗುತ್ತದೆ. ಈ ದೃಷ್ಟಿಯಿಂದ ಮೃದುವಚನವು ಸಿದ್ಧಿಯೂ ಹೌದು, ಸಾಧನೆಯೂ ಹೌದು. ಆದ್ದರಿಂದಲೇ ಅದು ಯಾವುದೇ ಸಾಂಪ್ರದಾಯಿಕ ಜಪತಪಗಳಿಗೆ ಗುಣಾತ್ಮಕವಾಗಿ ಹೆಚ್ಚಿನದಾದ ಪರ್ಯಾಯವಾಗುತ್ತದೆ. ಆಗ ಮಾತ್ರ ವ್ಯಕ್ತಿಯಲ್ಲಿ ಸಹಜವಾದ ಸೌಜನ್ಯ ಸ್ಥಾಪನೆಯಾಗಬಲ್ಲದು. ಈ ಸದುವಿನಯವನ್ನೇ 'ಸದಾಶಿವನ ಒಲುಮೆ' ಎನ್ನುತ್ತಾನೆ ಬಸವಣ್ಣ. ಹೀಗೆ ವಿಸ್ತರಿಸಿಕೊಂಡಾಗ ಸೌಜನ್ಯವೆನ್ನುವುದು ವ್ಯಾವಹಾರಿಕ ವರ್ತನೆಯ ಜಾಣತನವಲ್ಲ. ಅದೊಂದು 'ವಿಷಕಂಠ' ಪ್ರಜ್ಞೆ. ಈ ದೃಷ್ಟಿಯಿಂದ ನೋಡಿದರೆ ಅಭಯರುಚಿಯ ಮೂಲಕ ಜನ್ನನು ನೀಡಿದ ತಪದ ವ್ಯಾಖ್ಯೆಯೂ ಈ ನಿಲುವಿನ ಮುಂದುವರಿಕೆಯೇ ಆಗಿದೆ : 'ಮುಟ್ಟಿದೆಡೆಗೆ ಸೈರಿಸುವುದೆ, ...ಪೆತ್ತ ಪರೀಷಹ ಜಯಮೆ ತಪಂ ; ತಪಕೆ ಬೇರೆ ಕೋಡೆರಡೊಳವೇ ?' —'ಆಪತ್ತು ಬಂದ ಸಂದರ್ಭದಲ್ಲಿ ಸಹಿಸಿಕೊಳ್ಳುವುದೇ, ಉಂಟಾದ ಅಡ್ಡಿಗಳನ್ನು ಜಯಿಸುವುದೇ ತಪಸ್ಸು; ಇದರ ಹೊರತಾಗಿ ತಪಸ್ಸಿಗೇನು ಎರಡು ಕೊಂಬಿವೆಯೇ?' ಆದ್ದರಿಂದ ಮೃದುವಚನವೇ ಸೌಜನ್ಯ ಎಂಬ ಮಾತು ಸರಳೀಕರಣದ ಮಾತಾಗಿದೆ. ನಿಜಕ್ಕೂ ಸೌಜನ್ಯ ತಪಶ್ಚರಣೆಯಿಂದ ಸಾಧಿಸಬೇಕಾದ ಗುಣ ಎನ್ನಬಹುದು.

ಸೌಜನ್ಯದ ಸಾವಿರ ರೂಪ

–ಪ್ರೊ. ಜಿ. ಅಶ್ವತ್ಥನಾರಾಯಣ

ಸೌಜನ್ಯ ಎಂದರೇನು ? ಎಂಬುದನ್ನು ಮೊದಲ ಪ್ರಶ್ನೆ ಕೇಳಬೇಕಾಗಿದೆ. ಪ್ರಶ್ನೆ ಕೇಳಿದಷ್ಟು ಸುಲಭ ಉತ್ತರವಿಲ್ಲ. ಏಕೆಂದರೆ ಸೌಜನ್ಯ ಎಂಬುದು ಗುಣ, ಸ್ವಭಾವ, ಸುಸಂಸ್ಕೃತಿಯ ಪ್ರತೀಕ ಸಜ್ಜನನ ಲಕ್ಷಣ. ಮೊದಲು ಸಜ್ಜನನಾಗಬೇಕು ಸೌಜನ್ಯ ಇರಲು. ಸಜ್ಜನನಾಗುವುದು ಸುಲಭವೇ ? ಅದೂ ಈ ಕಾಲದಲ್ಲಿ ಒಬ್ಬರಿಗಿಂತ ಒಬ್ಬರು ಹೊರಗೆ ಸಜ್ಜನ ಒಳಗೆ ದುರ್ಜನ ಆದವರೇ ಬಹುಜನ. ನಿಜವಾದ ಸಜ್ಜನ ಟಾರ್ಚ್ ಇರಲಿ ಹತ್ತು ಸಾವಿರ ಕಿಲೋವ್ಯಾಟ್ ಡೈನಮೊ ಲೈಟ್ ಹಾಕಿಕೊಂಡು ಹುಡುಕಿದರೂ ತಡಕಿದರೂ ಸಿಗಲಾರದ ವ್ಯಕ್ತಿ ಅಪರೂಪದ ವಸ್ತು. ಸೌಜನ್ಯವಿದ್ದಲ್ಲಿ ಸಂಸ್ಕೃತಿ ಇರುತ್ತದೆ. ಸಂಸ್ಕೃತಿಯ ಅಂತರಂಗವೇ ಸೌಜನ್ಯ. ಅಂದಹಾಗೆ ಸೌಜನ್ಯ ಎಂದರೇನು ?

ನಿಘಂಟುಕಾರರು (ಕವಿ–ಕಸಾಪ, ಪು. ೮೭೪) ಸೌಜನ್ಯವನ್ನು ಅರ್ಥೈಸುವುದು ಹೀಗೆ. "ಸೌಜನ್ಯ ಎಂದರೆ ಒಳ್ಳೆಯತನ, ವಿನಯ, ಸಜ್ಜನಿಕೆ, ಉದಾರತ್ವ, ಔದಾರ್ಯ". ಇಂಥ ಗುಣವಿದ್ದವರಿಗೆ ೧೧ನೇ ಶತಮಾನದಲ್ಲಿ 'ಸೌಜನ್ಯ ರತ್ನಾಕರ' ಎಂದು ಕರೆಯುತ್ತಿದ್ದರು. ಶಾಸನವೊಂದರಲ್ಲಿ ಪ್ರಭು ಶಾಂತಶೆಟ್ಟಿ ಎಂಬಾತನನ್ನು 'ಕಲಿಕಾಲ ಮೇರು ವಿಬುಧಂ ಸೌಜನ್ಯ ರತ್ನಾಕರಂ ಬಲವಂತಂ" ಎಂದು ಕರೆಯಲಾಗಿದೆ. ಸೌಜನ್ಯತೀರ್ಥ, ಸೌಜನ್ಯ ಕಂದಾಂಕುರ, ಮೊದಲಾದ ಬಿರುದುಗಳು ಶಾಸನಗಳಲ್ಲಿ ಕಾಣುತ್ತೇವೆ.

ಶಬರ ಶಂಕರ ವಿಳಾಸ ಕಾವ್ಯದಲ್ಲಿ ಅರ್ಜುನನು ಮಾತೊಂದನು ಹೇಳುತ್ತಾನೆ : "ಮದನುಗ್ರಹಾರ್ಥಂ ಈ ಮಾನ್ಯ ಮಹೇಶ್ವರ ಮಱೆಯೊಳೆಯ್ದಿದುದಂ ತಿಳಿದಾತನಲ್ತು ಸೌಜನ್ಯ ವಿದೂರನಾದೆನಕಟೆನ್ನವೊಲಾದನೊ ಗಾಂಪನುರ್ವಿಯೊಳ್" ಬಂದವರು ಯಾರು ಎಂದು ತಿಳಿದು ಅವರ ಘನತೆ ಗೌರವ ಮರ್ಯಾದೆಗೆ ತಕ್ಕಂತೆ ವರ್ತಿಸುವುದು ಸೌಜನ್ಯದ ಲಕ್ಷಣವಾಗಿದೆ".

ಮನೆಗೆ ಬಂದಾಗ ವಿನಯ–ಸೌಜನ್ಯಗಳಿಂದ ನೋಡಿಕೊಳ್ಳುವುದಕ್ಕೆ ಇನ್ನೊಂದು ಹೆಸರು ಅತಿಥಿ ಸತ್ಕಾರ. ಉಪನಿಷತ್ತುಗಳು ಹೇಳಿರುವ ಮಾತು ಮಾತೃದೇವೋಭವ,

ಪಿತೃದೇವೋಭವ, ಆಚಾರ್ಯದೇವೋಭವ, ಅತಿಥಿದೇವೋಭವ" ಎಂಬ ಮಾತುಗಳ ಅರ್ಥ. ಸೌಜನ್ಯಗುಣವನ್ನು ಲೋಕದ ಸರ್ವೇಜನರಿಗೂ ತೋರಬೇಕು ಏಕೆಂದರೆ ಸರ್ವೇಜನಾಃ ಸುಖಿನೋಭವಂತು" ಸಕಲರ ಹಿತವೇ ಮಾನವ ಧರ್ಮ.

ಮನೆಗೆ ಬಂದಾಗ ಯಾರೇ ಆಗಿರಲಿ ಗುರು ತಂದೆ ತಾಯಿ ಸ್ನೇಹಿತ ಅಪರಿಚಿತ ಅವರನ್ನು ವಿನಯದಿಂದ ಸ್ವಾಗತಿಸುವುದು ಉಪಚರಿಸುವುದು ಸೌಜನ್ಯದ ಲಕ್ಷಣ. ಬಸವಣ್ಣನವರು ಹೇಳಿರುವ ಮಾತು "ಏನಿ ಬಂದಿರಿ ಹದುಳವಿದ್ದಿರೆ ? ಎಂದರೆ ನಿಮ್ಮ ಮೈಸಿರಿ ಹಾರಿ ಹೋಹುದೆ..." ಎಂಬ ವಚನದ ವಿಷಯ ಎಲ್ಲರಿಗೂ ತಿಳಿದಿದ್ದೇ ಆಗಿದೆ. ಒಬ್ಬರನ್ನು ಸ್ವಾಗತಿಸುವಾಗ ಮಾತು ಮೃದುವಾಗಿರಬೇಕು, ಕೋಮಲವಾಗಿರಬೇಕು, ಆತ್ಮೀಯವಾಗಿರಬೇಕು. "ಅಯ್ಯಾ ಎಂದಡೆ ಸ್ವರ್ಗ, ಎಲವೊ ಎಂದಡೆ ನರಕ" ಎಂಬುದು ಈ ಲಕ್ಷಣವನ್ನು ಕುರಿತು ಹೇಳುತ್ತದೆ. ಕಳಬೇಡ, ಕೊಲಬೇಡ...." ಎಂಬ ವಚನದಲ್ಲಿ ಬಸವಣ್ಣನವರು ಸಪ್ತಪಾತಕ ಮಾಡಬೇಡ ನೀನು ಭಕ್ತನಾಗಿದ್ದಲ್ಲಿ ಎನ್ನುತ್ತಾರೆ ಆ ವಚನದಲ್ಲಿ ಹೇಳುವ ಸಪ್ತಪಾತಕಗಳು ಇವು, ೧. ಕಳ್ಳತನ (ಕಲಬೇಡ), ೨. ಕೊಲೆ (ಕೊಲಬೇಡ), ೩. ಸುಳ್ಳು (ಹುಸಿಯ ನುಡಿಯಲುಬೇಡ), ೪. ಕೋಪ (ಮುನಿಯಬೇಡ), ೫. ತಿರಸ್ಕಾರ (ಅನ್ಯರಿಗೆ ಅಸಹ್ಯ ಪಡಬೇಡ), ೬. ಅಹಂಕಾರ (ತನ್ನ ಬಣ್ಣಿಸಬೇಡ), ೭. ಕ್ರೂರನುಡಿ (ಇದಿರ ಹಳಿಯಲುಬೇಡ). ಈ ಏಳರಲ್ಲಿ ೫ ಗುಣಗಳು ಸೌಜನ್ಯ ಇರಬೇಕಾದರೆ ೨ ಗುಣಗಳು ಇರಬಾರದ ಗುಣಗಳು ಯಾವುವು ಎಂದು ಹೇಳುತ್ತವೆ. ನಿತ್ಯ ಜೀವನದಲ್ಲಿ ಮನೆಗೆ ಹೋದಾಗ ಒಂದು ಉಪಚಾರದ ಮಾತು ಆಡುವದು ಸೌಜನ್ಯ ಆ ಗಂಡ ಹೆಂಡಿತಿಗೆ ಇಲ್ಲ ಎನ್ನುವಂಥ ಮಾತುಗಳನ್ನು ಕೇಳುತ್ತೇವೆ. ಸೌಜನ್ಯದ ಪ್ರಮುಖ ಲಕ್ಷಣವಾದ ಉಪಚಾರ ಎಂಬುದು ಅತಿಥಿ ಸತ್ಕಾರದ ಮುಖ್ಯಾಂಗ ಉಪಚಾರ ಇಲ್ಲದಿದ್ದರೆ ಅಪಚಾರ ಆಗುತ್ತದೆ ಎಂಬುದನ್ನು ಎಲ್ಲರೂ ವಿಚಾರ ಮಾಡಬೇಕಾದ ಸಂಗತಿ.

ಅನೇಕ ಕಡೆಗಳಲ್ಲಿ ನಮ್ಮಲ್ಲಿ ಸಾರ್ವಜನಿಕ ಜೀವನದಲ್ಲಿ ಈ ಉಪಚಾರ ಸಂಸ್ಕೃತಿ ಮಾಯವಾಗುತ್ತಿದೆ : ಇಲ್ಲವೇ ಕೃತಕವಾಗುತ್ತಿದೆ ಸಂಘ ಸಂಸ್ಥೆಗಳು ಕಾರ್ಯಕ್ರಮಕ್ಕೆ ಗಣ್ಯವ್ಯಕ್ತಿಗಳನ್ನು ಆಹ್ವಾನಿಸಿದಾಗ ಅತಿಗಣ್ಯ ವ್ಯಕ್ತಿಗಳಿಗೆ, ಸಿನಿಮಾ ನಟ ನಟಿಯರಿಗೆ ಅತಿ ಪ್ರಾಶಸ್ತ್ಯ ನೀಡಿ, ಸಾಹಿತಿ ಮತ್ತು ದೇಶಭಕ್ತರನ್ನು ಇತರ ಸೇವಾಕರ್ತರನ್ನು ಅಲಕ್ಷ್ಯದಿಂದ ಕಾಣುವುದನ್ನು ಅನೇಕ ಕಡೆಗಳಲ್ಲಿ ಕಾಣುತ್ತೇವೆ. ಮೈಸೂರಿನಲ್ಲಿ ಶಿವರಾಮ ಕಾರಂತರು ಸಾಹಿತ್ಯ ಸಮ್ಮೇಳನಕ್ಕೆ ಅಧ್ಯಕ್ಷರಾದಾಗ ಅವರು ಬಂದಾಗ ಅವರಿಗೆ ಭವ್ಯ ಸ್ವಾಗತ ನೀಡಲೇ ಇಲ್ಲ. ಜಯಚಾಮರಾಜೇಂದ್ರ ಒಡೆಯರ್ ಬಂದ ಕೂಡಲೇ ಅದ್ಧೂರಿ ಸ್ವಾಗತ ನೀಡಿದರು. ಆಗ ಸಾಹಿತ್ಯ ಪ್ರಿಯರೂ ಸಜ್ಜನರೂ ಆದ ಒಡೆಯರ್ ಅವರು ಸಮ್ಮೇಳನದ ಅಧ್ಯಕ್ಷರಾದ

ಕಾರಂತರೆಲ್ಲಿ ಕರೆಯಿರಿ ಅವರನ್ನು ಮೊದಲು ಸ್ವಾಗತಿಸಿ ಎಂದರು. ಇದು ಸೌಜನ್ಯದ ಲಕ್ಷಣ.

ಸಮಾರಂಭಗಳಿಗೆ ವೇದಿಕೆಗೆ ಗಣ್ಯವ್ಯಕ್ತಿಗಳನ್ನು ಆಹ್ವಾನಿಸಿದಾಗ ಎಲ್ಲರಿಗೂ ಸಮಾನ ಗೌರವ ಮರ್ಯಾದೆ ನೀಡುವುದು ಸೌಜನ್ಯ. ಒಬ್ಬರಿಗೆ ಶಾಲು ಹೊದಿಸುವುದು ಇನ್ನೊಬ್ಬರಿಗೆ ಬರಿ ಹಾರ ಹಾಕುವುದು. ಹಾರದಲ್ಲೂ ಭರ್ಜರಿ ಹಾರ ಒಬ್ಬರಿಗೆ, ಸಾದಾ ಹಾರ ಒಬ್ಬರಿಗೆ, ಒಬ್ಬರಿಗೆ ಭಾರಿ ಉಡುಗೊರೆ (ಅವರಿಂದ ಕೆಲಸ ಆಗಬೇಕು ಅವರು ಕೇವಲ ಅಧಿಕಾರದಿಂದ ದೊಡ್ಡವರಾಗಿರುತ್ತಾರೆ. ´ಸಾಹಿತ್ಯ, ಕಲೆ ವಿಚಾರದಲ್ಲಿ ಅಜ್ಞಾನಿಗಳಾಗಿರುತ್ತಾರೆ.) ಆದರೆ ಸಾಹಿತ್ಯ ಸಮಾರಂಭದಲ್ಲಿ ಕಲಾ ಮಹೋತ್ಸವದಲ್ಲಿ ರಾಜಕಾರಣಿಗಳಿಗೆ ವಿಶೇಷ ಮರ್ಯಾದೆ ತೋರುವುದು ಅಸೌಜನ್ಯದ ಲಕ್ಷಣ. ಸಂಸ್ಕೃತಿ, ಲಕ್ಷಣವಂತೂ ಅಲ್ಲವೇ ಅಲ್ಲ. ಅಸೌಜನ್ಯವನ್ನು ವ್ಯವಸ್ಥಾಪಕರಿಗಿಂತ ಅಧಿಕವಾಗಿ ತೋರುವುದು ವರದಿಗಾರರು, ಮಾಧ್ಯಮದವರು, ಒಬ್ಬ ಸಾಹಿತಿಗೆ ಸನ್ಮಾನ ಮಾಡಿದಾಗ ಆತ ಸಮಾರಂಭದ ಕೇಂದ್ರ ವ್ಯಕ್ತಿ ಆಗಿರುತ್ತಾನೆ. ಆದರೆ ಆ ಸಮಾರಂಭದ ಉದ್ಘಾಟನೆಯ ರಾಜಕೀಯ ಪುಢಾರಿಯ ಫೋಟೋ ಹಾಕುತ್ತಾರೆ. ಅವನ ಭಾಷಣವನ್ನು ಪತ್ರಿಕೆಗಳಲ್ಲಿ ಪ್ರಕಟಿಸುತ್ತಾರೆ. ಕಾಟಾಚಾರಕ್ಕೆ ಸನ್ಮಾನಿತ ಸಾಹಿತಿಯ ಒಂದೆರಡು ಮಾತು ಹಾಕುತ್ತಾರೆ (ಅದು ಅವನ ಪುಣ್ಯ) ಇಲ್ಲವೇ ಬರಿ ಅವನ ಹೆಸರು ಇರುತ್ತದೆ. ಇದು ಅಸೌಜನ್ಯದ ಲಕ್ಷಣ. ಹತ್ತಾರು ವರ್ಷ ನಾಡಿನ ಜ್ಞಾನಭಂಡಾರ ಹೆಚ್ಚಿಸಿದ ಸಾಹಿತಿಗೆ ಕಲಾವಿದನಿಗೆ ಅಗ್ರಮರ್ಯಾದೆ ತೋರದಿರುವುದು ಅಸೌಜನ್ಯದ ಲಕ್ಷಣ.

ಸೌಜನ್ಯದ ಇನ್ನೊಂದು ಲಕ್ಷಣವೆಂದರೆ ಒಬ್ಬ ಅತಿಥಿಯನ್ನು ಕರೆದರೆ ಅವನ ಮನೆ ಬಾಗಿಲಿಂದ ಕರೆದು ತಂದು ಅವನನ್ನು ಮನೆ ಬಾಗಿಲಿಗೆ ಸೇರಿಸುವವರೆಗೆ ಅವನಿಗೆ ವಾಹನ ವ್ಯವಸ್ಥೆ ಆದರೋಪಚಾರ ಮಾಡುವುದು ವ್ಯವಸ್ಥಾಪಕರ ಕರ್ತವ್ಯ. ನೀವೇ ಬನ್ನಿ ಎನ್ನುವುದು ಬಂದಾಗ ಸ್ವಾಗತಿಸಲು ಯಾರೂ ಗಣ್ಯರು ಇಲ್ಲದಿರುವುದು ಅವರನ್ನು ಒಂದೆಡೆ ಕೊಳೆ ಹಾಕಿ ಮಂತ್ರಿ, ಶಾಸಕ, ಅಧಿಕಾರಿಗಳಿಗೆ ಕಾಯ್ದುಕೊಂಡು ಅವರು ಬಂದಮೇಲೆ ಇವರನ್ನು ವಿಚಾರಿಸಿಕೊಳ್ಳುವುದು ಸೌಜನ್ಯರಹಿತ ಸಂಸ್ಕೃತಿಗೆ ಸಾಕ್ಷಿ. ಈ ವಿಷಯದಲ್ಲಿ ಧರ್ಮಸ್ಥಳದ ಹೆಗ್ಗಡೆ ಅವರ ವ್ಯವಸ್ಥೆ ಆದರ್ಶಪ್ರಾಯವಾದುದು. ಒಬ್ಬ ಅತಿಥಿ ಬಸ್ಸಿನಿಂದಿಳಿದರೆ ಮತ್ತೆ ಬಸ್ಸನ್ನು ಹತ್ತಿಸುವವರೆಗೆ ಒಬ್ಬ ಕಾರ್ಯಕರ್ತನನ್ನೇ ಅವನ ಹಿಂದೆ ಬಿಟ್ಟು ಅತಿಥಿಗೆ ಎಲ್ಲ ಅನುಕೂಲ ಮಾಡಿ ಕೊಟ್ಟ ವ್ಯವಸ್ಥೆ ಎಲ್ಲರಿಗೂ ಅನುಕರಣೀಯವಾದುದು. 1975ರಲ್ಲಿ ಗೋಪಾಲಕೃಷ್ಣ ಅಡಿಗರ ಅಧ್ಯಕ್ಷತೆಯಲ್ಲಿ ಕನ್ನಡ ಸಾಹಿತ್ಯ ಸಮ್ಮೇಳನ ನಡೆದಾಗ ಅಲ್ಲಿ ಪರಿಷತ್ತಿನ ಕಾರ್ಯದರ್ಶಿ ಆಗಿ ಹತ್ತಾರು ದಿನಗಳು ಅವರೊಂದಿಗೆ ವ್ಯವಸ್ಥೆಯಲ್ಲಿ ಪಾಲ್ಗೊಂಡು ಪ್ರತ್ಯಕ್ಷ ಅವರ ಸೌಜನ್ಯದ ಸಾವಿರ ರೂಪವನ್ನು ಕಂಡಿದ್ದೇನೆ.

ವಯಸ್ಸಾದ ಅಜ್ಜ ಅಜ್ಜಿಯರು ಬಂದಾಗ ಅವರು ಕೊಠಡಿಯಲ್ಲಿ ಮಲಗಿದ್ದಾಗ ಇಡೀ ರಾತ್ರಿ ಅವರ ಕೋಣೆ ಬಳಿ ಒಬ್ಬ ಕಾರ್ಯಕರ್ತೆ ಇದ್ದು ಮಧ್ಯರಾತ್ರಿ ಅವರಿಗೆ ಔಷಧಿ ಬೇಕಾದಾಗ ತಂದುಕೊಟ್ಟದ್ದನ್ನು ನಾನು ಕಂಡಿದ್ದೇನೆ. ಮಗುವೊಂದು ಅತ್ತು ರಂಪ ಮಾಡಿದಾಗ ನಡುರಾತ್ರಿ ಆ ಮಗುವನ್ನು ಎತ್ತಿಕೊಂಡು ಪಡಸಾಲೆಯಲ್ಲಿ ಓಡಾಡಿಸಿ ಸಮಾಧಾನ ಮಾಡಿದ್ದನ್ನು ಕಂಡಿದ್ದೇನೆ. ಇದು ಸೌಜನ್ಯದ ಪ್ರಾತ್ಯಕ್ಷಿಕೆ.

ಸೌಜನ್ಯ ಎಂಬುದು ತಾತ್ಕಾಲಿಕವಾಗಿ ತೋರಿಸಿದ ಉದಾರ ಭಾವ ಅಲ್ಲ. ಜೀವಿತದ ಪೂರ್ತಿ ಕೃತಜ್ಞತಾ ಭಾವದಿಂದ ಇದ್ದು ಇತರರು ಮಾಡಿದ ಉಪಕಾರವನ್ನು ಸದಾ ನೆನೆಯುತ್ತ ಅನುಕೂಲವಾದಾಗ, ಅವಕಾಶ ಬಂದಾಗ, ಕೃತಜ್ಞತೆಗಳನ್ನು ಸಹಾಯ ರೂಪದಲ್ಲಿ ಸಲ್ಲಿಸುವುದು ಸೌಜನ್ಯದ ಲಕ್ಷಣ. ಸೌಜನ್ಯ ಎದುರಿಗೆ ಬಂದವರಿಗೆ ಮಾತಾಡಿಸಿ ಕಾಫಿ ತಿಂಡಿ ಕೊಡುವಷ್ಟಕ್ಕೆ ಮುಗಿಯುವುದಿಲ್ಲ. ಬದುಕಿನಲ್ಲಿ ಉಪಕಾರ ಮಾಡುವುದು ಉಪಕೃತರಾದವರು ಮಾಡುವ ಕೆಲಸದಲ್ಲಿ ಸೌಜನ್ಯ ಇದಕ್ಕೆ ಅತ್ಯುತ್ತಮ ನಿದರ್ಶನವಾಗಿ ಸರ್. ಎಂ. ವಿಶ್ವೇಶ್ವರಯ್ಯನವರ ಜೀವನದ ಪ್ರಸಾಂಗವೊಂದನ್ನು ಉಲ್ಲೇಖಿಸಬೇಕಾಗುತ್ತದೆ.

ಅನಕೃ ಅವರ ತಾತ ಕೃಷ್ಣಯೋಗಿಗಳು ಬೆಂಗಳೂರಿನ ಅರಳೇಪೇಟೆಯಲ್ಲಿದ್ದಾಗ ವಿಶ್ವೇಶ್ವರಯ್ಯ ವಿದ್ಯಾಭ್ಯಾಸ ಮಾಡುತ್ತಿದ್ದ ಬೀದಿ ದೀಪದ ಕಂಬದ ಕೆಳಗೆ ಓದುತ್ತಿದ್ದ ಬಡ ವಿದ್ಯಾರ್ಥಿ ಆಗಿದ್ದರು. ಅವರಿಗೆ ಕೆಲವು ಕಾಲ ಓದಲು ಕೃಷ್ಣಯೋಗಿಗಳು ಆಶ್ರಯ ನೀಡಿದ್ದರು. ವಿಶ್ವೇಶ್ವರಯ್ಯನವರು ದಿವಾನರಾದಾಗ ಅವರು ಮೊದಲು ಮಾಡಿದ ಕೆಲಸವೆಂದರೆ ಕೃಷ್ಣಯೋಗಿಗಳ ಮಗ ಅನಕೃ ಅವರ ತಂದೆ ನರಸಿಂಗರಾಯರ ಬಳಿ ಬಂದರು (ಆ ವೇಳಗೆ ಕೃಷ್ಣಪ್ಪನವರು ಗತಿಸಿದ್ದರು) ನಿಮ್ಮ ತಂದೆ ಒಂದು ಕಾಲದಲ್ಲಿ ನನಗೆ ಅನ್ನವಿಟ್ಟವರು, ಆಶ್ರಯ ಕೊಟ್ಟವರು. ದೇವರು ಈಗ ನನಗೆ ಅನುಕೂಲ ಮಾಡಿದ್ದಾನೆ. ಅಧಿಕಾರ ಕೊಟ್ಟಿದ್ದಾನೆ ನಿಮಗೆ ಕೊಡುತ್ತಿರುವ ದಾನ ನೆರವು ಅಲ್ಲ ಅಲ್ಲಿ ನನ್ನ ಅನ್ನದ ಋಣ ತೀರಿಸಿಕೊಳ್ಳುವ ನನಗೆ ಕಷ್ಟ ಕಾಲದಲ್ಲಿ ನೆರವಿತ್ತವರ ಕುಟುಂಬಕ್ಕೆ ನನ್ನ ಕೃತಜ್ಞತೆ ಸಲ್ಲಿಸುವ ಸೌಜನ್ಯದ ವಿಚಾರ ಎಂದರು. ಆಗ ನರಸಿಂಗರಾಯರು ಹೇಳಿದ ಮಾತು ಅಷ್ಟೇ ಸೌಜನ್ಯಪೂರ್ಣವಾದುದು ಬಹಳ ಸಂತೋಷ ನಿಮ್ಮ ಸೌಜನ್ಯಕ್ಕೆ ಕೃತಜ್ಞತೆಗಳು. ದೇವರು ನನಗೆ ಬೇಕಾದುದನ್ನು ಕೊಟ್ಟಿದ್ದಾನೆ. ನನಗೀಗ ನೆರವಿನ ಅಗತ್ಯವಿಲ್ಲ. ಆದರೆ ನಿಮ್ಮ ಮನ ನೋಯಿಸಲು ನನಗಿಷ್ಟವಿಲ್ಲ. ನಮ್ಮ ಸಮಾಜದಲ್ಲಿರುವ ದೀನ ದಲಿತರಿಗೆ ಬಡ ವಿದ್ಯಾರ್ಥಿಗಳಿಗೆ ನೀವು ನೆರವಿತ್ತರೆ ನನಗೆ ನೀವು ನೆರವು ನೀಡಿದಂತೆ ಎಂದರು. ಸೌಜನ್ಯದ ಬಗೆಗಳು ಹೇಗಿರುತ್ತವೆ ಎಂಬುದನ್ನು ಗಮನಿಸಬೇಕು. ಸೌಜನ್ಯ ಎಂಬುದು ಒಮ್ಮುಖದಲ್ಲಿ ಅಲ್ಲ ಇಮ್ಮುಖದಾರಿ ಸೌಜನ್ಯ ತೋರಿದವರಿಗೆ ಪ್ರತಿಯಾಗಿ ನಾವು ಸೌಜನ್ಯ ತೋರುವುದೇ

ಸಂಸ್ಕೃತಿ. ನಮಗೆ ಸೌಜನ್ಯ ತೋರಿದವರಿಗೆ ಮಾತ್ರ ಸೌಜನ್ಯ ತೋರಬೇಕೆಂದು ನಿಯಮವೇನಲ್ಲ ಸೌಜನ್ಯ ನಮ್ಮಲ್ಲಿ ಸಹಜ ಗುಣವಾಗಿರಬೇಕು. ಯಾವುದೇ ಸಂದರ್ಭದಲ್ಲಿ ಪ್ರತಿಫಲಾಪೇಕ್ಷೆಯಿಲ್ಲದೆ ವ್ಯಕ್ತಪಡಿಸುವ ಗುಣ–ಸಂಸ್ಕೃತಿಯೇ ಸೌಜನ್ಯ. ಮಾತಿನಲ್ಲಿ ವಿನಯ, ಮನಸ್ಸಿನಲ್ಲಿ ಉಪಕಾರ ಬುದ್ಧಿ, ಅನ್ಯರಿಗೆ ನೆರವಾಗಲು ತ್ಯಾಗಬುದ್ಧಿ ಇದ್ದಾಗ ಅದು ನಿಜವಾದ ಸೌಜನ್ಯ ಎನಿಸಿಕೊಳ್ಳುತ್ತದೆ. ಒಂದು ಘಟನೆ ಈ ಸಂದರ್ಭಧಲ್ಲಿ ನೆನಪಾಗುತ್ತದೆ.

ದೆಹಲಿಯಲ್ಲಿ ಒಬ್ಬ ಶ್ರೀಮಂತ ವ್ಯಾಪಾರಿ ಇದ್ದರು. ಅವರ ಮಗ ಅಯೋಧ್ಯೆಯಲ್ಲಿದ್ದ. ಶ್ರೀಮಂತ ವ್ಯಾಪಾರಿ ಮನೆಯ ಪಕ್ಕದಲ್ಲಿ ವೃದ್ಧ ದಂಪತಿಗಳು ಇದ್ದರು. ಬಹು ಕಾಲದಿಂದ ಶ್ರೀಮಂತ ವ್ಯಾಪಾರಿಗೆ ಪರಿಚಿತರಾಗಿದ್ದರು. ಆ ವೃದ್ಧ ದಂಪತಿಗಳಿಗೆ ಜೀವನದಲ್ಲೊಮ್ಮೆ ಅಯೋಧ್ಯೆ ನೋಡಬೇಕೆಂಬ ಆಸೆಯಿತ್ತು ಏಕೆಂದರೆ ಅವರು ಶ್ರೀರಾಮ ಭಕ್ತರಾಗಿದ್ದರು. ಅವರಿಗೆ ಯಾರ ಸಹಾಯವೂ ಇರಲಿಲ್ಲ. ಶ್ರೀಮಂತ ವ್ಯಾಪಾರಿ ಅವರಿಗೆ ಧನಸಹಾಯ ನೀಡಿ ಅವರ ಮಗನ ವಿಳಾಸ ನೀಡಿ ಅಯೋಧ್ಯೆಯಲ್ಲಿ ಆತ ಸಕಲ ನೆರವನ್ನು ನೀಡುತ್ತಾನೆಂದು ಹೇಳಿ ಅವನಿಗೆ ಪತ್ರ ಬರೆದನು. ಈ ವೃದ್ಧ ದಂಪತಿಗಳಿಗೆ ಎಲ್ಲ ಬಗೆ ಸಹಾಯ ಮಾಡು ಎಂದು ತಿಳಿಸಿದ್ದನು ವೃದ್ಧ ದಂಪತಿಗಳು ಅಯೋಧ್ಯೆ ಸೇರಿ ವ್ಯಾಪಾರಿ ಕೊಟ್ಟ ವಿಳಾಸವನ್ನು ಟ್ಯಾಕ್ಸಿ ಅವರಿಗೆ ತೋರಿಸಿದಾಗ ಯಾರೂ ಅಲ್ಲಿಗೆ ಬರಲು ಒಪ್ಪಲಿಲ್ಲ. ಏಕೆಂದರೆ ಊರಾಚೆ ಆ ಮನೆ ಇತ್ತು ರಾತ್ರಿ ಆಗಿತ್ತು. ಮಳೆ ಬರಲು ಶುರುವಾಗಿತ್ತು. ಬಹಳ ಹೊತ್ತಿನ ಮೇಲೆ ಚಳಿಯಲ್ಲಿ ನಡುಗುತ್ತಿದ್ದ ಈ ವೃದ್ಧ ದಂಪತಿಗಳ ಮೇಲೆ ಕರುಣೆ ಉಕ್ಕಿ ಒಬ್ಬ ಟ್ಯಾಕ್ಸಿಯವನು ಅವನು ಕರೆದೊಯ್ಯಲು ಬಂದ. ಜೋರು ಮಳೆ ಬಂದಿತು. ಆ ಮಳೆ ನಡುವೆ ಅವರನ್ನು ಟ್ಯಾಕ್ಸಿಯವನು ವಿಳಾಸದ ಮನೆಯಲ್ಲಿ ಬಿಟ್ಟು ಹೊರಟ. ಆ ಮನೆಗೆ ಹೋಗಿ ವೃದ್ಧ ದಂಪತಿಗಳು ಬಾಗಿಲು ತಟ್ಟಿದರು. ರಾಮಲಾಲ್ ಮನೆ ಇದೇನಾ ಎಂದಾಗ ಒಬ್ಬ ಮಧ್ಯ ವಯಸ್ಕ ಬಂದವನು ಹೌದು ಎಂದು ಹೇಳಿ ಅವರನ್ನು ಒಳಕ್ಕೆ ಕರೆದು ಬಿಸಿ ಬಿಸಿ ಕಾಫಿ ಕೊಟ್ಟು ಕ್ಷೇಮ ವಿಚಾರಿಸಿ, ಊಟ ಹಾಕಿ ಆ ರಾತ್ರಿ ಅವರಿಗೆ ಬೆಚ್ಚನೆ ಹಾಸಿಗೆ ನೀಡಿ ಬೇಡವೆಂದರೂ ಅವರ ಕಾಲೊತ್ತಿ ಸೇವೆ ಮಾಡಿದನು.

ಬೆಳಗಾದ ಮೇಲೆ ಫೋನಿನ ಡೈರಕ್ಟರಿಯಲ್ಲಿ ವಿಳಾಸ ಹುಡುಕಿ ಬಹಳ ಸಂತೋಷವಾಯಿತು. ರಾಮಲಾಲ್ ಮನೆ ಸಿಕ್ಕಿತು ಬನ್ನಿ ಹೋಗೋಣ ಅವರ ಮನೆಗೆ ಎಂದನು. ಆಗ ವೃದ್ಧ ದಂಪತಿಗಳು ಹಾಗಾದರೆ ನೀವಾರು ? ನೀವು ರಾಮಲಾಲ್ ಅಲ್ಲವೇ ಎಂದರು. ಅದಕ್ಕೆ ಆತ ಹೇಳಿದ : ನಾನು ರಾಮಲಾಲ್ ಅಲ್ಲ. ನೀವು ಆತನನ್ನು ಹುಡುಕಿಕೊಂಡು ಪರಸ್ಥಳದಿಂದ ಬಂದಿದ್ದೀರಿ. ಅಪರಿಚಿತ ಊರು, ರಾತ್ರಿ ಮಳೆ ಬೇರೆ. ಈ ಪ್ರದೇಶ ಊರಾಚೆ ಇದೆ. ನೀವು ವಯೋವೃದ್ಧರು. ನಿಮಗೆ ನಾನು ಅವರ ಮನೆ ಇದಲ್ಲ

ಎಂದರೆ ನಿಮ್ಮ ಗತಿ ಏನು ? ಆ ಸರಿರಾತ್ರಿಯಲ್ಲಿ ನೀವೇನು ಮಾಡುತ್ತಿದ್ದಿರಿ, ದಿಗ್ಭ್ರಾಂತರಾಗಿ ಎಲ್ಲಿ ಹೋಗಲು ದಿಕ್ಕು ತೋಚದೆ ಕಂಗೆಡುತ್ತಿದ್ದಿರಿ. ಅದಕ್ಕಾಗಿ ನಾನೇ ರಾಮಲಾಲ್‌ನೆಂದೆ. ನಿಮ್ಮನ್ನು ನನ್ನಲ್ಲಿ ರಾತ್ರಿ ಉಳಿಸಿಕೊಂಡೆ ಎಂದು ಹೇಳಿ ಅವರನ್ನು ರಾಮಲಾಲ್‌ರ ಮನೆ ತಲುಪಿಸಿದನು. ಇದು ಸೌಜನ್ಯದ ಲಕ್ಷಣ, ಅತಿಥಿದೇವೋಭವ ಲಕ್ಷಣ, ಭಾರತೀಯ ಸಂಸ್ಕೃತಿಯ ಲಕ್ಷಣ. ಮೃದುಮಾತು ಆಡಿದರೆ ಸಾಲದು ಪರೋಪಕಾರದ ತ್ಯಾಗದ ನಡೆ ಇದ್ದರೆ ಸೌಜನ್ಯ ಸಾರ್ಥಕವಾಗುತ್ತದೆ.

ಯಾರೋ ಒಬ್ಬ ಯುವಕ ಬಸ್ಸಿನಲ್ಲಿ ವೃದ್ಧರ ಕಾಲು ತುಳಿದ ಹಾಗೇ ನಿಂತ ವೃದ್ಧ ಹೇಳಿದ ಅಯ್ಯಾ ಕಾಲನ್ನು ತುಳಿದೆ ಚಿಂತೆಯಿಲ್ಲ. 'ಸಾರಿ' ಕ್ಷಮಿಸಿ ಎನ್ನುವ ಸೌಜನ್ಯವೂ ನಿನ್ನಲ್ಲಿ ಇಲ್ಲವಾಪ್ಪಾ ಎಂದರು. ಅದಕ್ಕೆ ಯುವಕ ನಿಮಗೆ ಕಾಲು ತುಳಿದ ಮೇಲೆ ಸಾರಿ ಹೇಳಬೇಕಿತ್ತ ಗೊತ್ತಾಗಲಿಲ್ಲ. ಈಗ ಕಾಲು ತುಳಿದು ಸಾರಿ ಹೇಳುತ್ತೇನೆ ಎಂದನಂತೆ. ಇಂಥ ವರ್ತನೆ ಸೌಜನ್ಯ ಅಲ್ಲ.

ಮನೆ ಬಾಗಿಲಿಗೆ ಬಂದವರನ್ನು ಬಾಗಿಲಲ್ಲೇ ಮಾತಾಡಿಸಿ ಕಳಿಸುವುದು ಕಚೇರಿಗಳಿಗೆ ಬಂದವರನ್ನು ಕೂಡಿ, ಏನು ವಿಚಾರ ಎಂದು ವಿನಯದಿಂದ ಕೇಳದೆ ಅವರನ್ನು ನಿಲ್ಲಿಸಿ ಹಾಗೆಯೇ ಮಾತನಾಡಿಸುವುದು ಸೌಜನ್ಯ ಅಲ್ಲ. ಹಾಗೆಯೇ ಬೀಳ್ಕೊಡುವುದರಲ್ಲೂ ಸೌಜನ್ಯವಿರಬೇಕು. ಮನೆಗೆ ಬಂದವರನ್ನು ಹೊರಡುತ್ತೀನಿ ಎಂದರೆ ಸಂತೋಷ ಎನ್ನುವುದಲ್ಲ ಮತ್ತೆ ಬನ್ನಿ ಎನ್ನಬೇಕು. ಅದು ಸೌಜನ್ಯ. ಮಾಸ್ತಿ, ಡಿವಿಜಿ ಅವರು ಯಾರಾದರೂ ಬಂದರೆ ಅವರು ಹುಡುಗರೇ ಇರಲಿ, ಮಿತ್ರರೇ ಇರಲಿ, ಅಪರಿಚಿತರೆ ಇರಲಿ ಅವರನ್ನು ನಗುನಗುತ್ತಾ ಗೇಟ್ ಬಾಗಿಲಿನವರೆಗೆ ಬಂದು ಬೀಳ್ಕೊಡುತ್ತಿದ್ದರು. ಮಾಸ್ತಿ ದಾರಿಯಲ್ಲಿ ಬಿದ್ದ ಬಾಳೆಹಣ್ಣಿ ಸಿಪ್ಪೆ, ಗಾಜಿನ ಚೂರನ್ನು ಕಂಡಾಗ ತೆಗೆದು ಪಕ್ಕಕ್ಕೆ ಜನ ಓಡಾಡದ ಕಡೆ ಹಾಕುತ್ತಿದ್ದರು. ಅದು ಸೌಜನ್ಯ. ಸಭೆಗಳಿಗೆ ಬಂದರೆ ಕಾರ್ಯಕ್ರಮದ ಪೂರ್ತಿ ಇರುವುದು ಸೌಜನ್ಯ. ತಮಗೆ ಬೇಕಾದವರ ಭಾಷಣ ಕೇಳಿ ಎದ್ದು ಹೋಗುವುದು ಸೌಜನ್ಯ ಅಲ್ಲ. ಹೀಗೆ ಸೌಜನ್ಯ ಸಾವಿರ ರೂಪವಾಗಿದೆ.

○

ಸೌಜನ್ಯದ ಮಹತ್ವ

–ಸುರೇಶ್ ಮೂನ

ಬೆಂಗಳೂರಿನ ವಿಪರೀತವಾದ ವಾಹನ ದಟ್ಟಣೆಯುಳ್ಳ ರಸ್ತೆಗಳಲ್ಲಿ ದ್ವಿಚಕ್ರವಾಹನ, ಕಾರು ಅಥವಾ ವಾಹನವನ್ನು ಓಡಿಸುವುದು ಇತ್ತೀಚಿನ ದಿನಗಳಲ್ಲಿ ಅತ್ಯಂತ ಪ್ರಯಾಸದ ಕೆಲಸ. ಯಾವಾಗಲೂ ಮುಂದೆ, ಎಡಬಲಗಳಲ್ಲಿ ಹಾಗು ಹಿನ್ನೋಟದ ಕನ್ನಡಿಯ ಮೂಲಕ ಹಿಂದೆ ಬರುತ್ತಿರುವ ವಾಹನಗಳ ಬಗ್ಗೆಯೂ ಗಮನವಿರಿಸಬೇಕಾಗುತ್ತದೆ. ಇವೆಲ್ಲದರಿಂದಾಗಿ ಚಾಲಕರು ಮಾನಸಿಕ ಒತ್ತಡಕ್ಕೆ ಒಳಗಾಗುವುದು ಸಹಜವೇ. ತತ್ಪರಿಣಾಮವಾಗಿ ಸಂಚಾರಕ್ಕೆ ಸ್ವಲ್ಪ ಅಡೆತಡೆಯುಂಟಾದರೂ ಚಾಲಕರು ಸಿಡಿಮಿಡಿಗೊಳ್ಳುವುದು, ಆಕ್ರೋಶದಿಂದ ಇತರರನ್ನು ದೂರುವುದು, ದೂಷಿಸುವುದು ಇವೆಲ್ಲ ಬೆಂಗಳೂರಿನಲ್ಲಿ ಕಂಡುಬರುವ ಸರ್ವೇ ಸಾಮಾನ್ಯ ದೃಶ್ಯ. ದ್ವಿಚಕ್ರವಾಹನ ಸವಾರನೊಬ್ಬನಿಗೆ ಎದುರಿನಿಂದ ಒಂದು ವಾಹನ ಅಡ್ಡ ಬರುತ್ತದೆ. ಈತ ತನ್ನ ವಾಹನವನ್ನು ನಿಲ್ಲಿಸಿ ಆ ಚಾಲಕನನ್ನು ದಿಟ್ಟಿಸಿ ನೋಡುತ್ತಾನೆ. ಆತನೂ ಹಾಗೇ ಮಾಡುತ್ತಾನೆ. “ಯಾಕೆ ನೋಡ್ಕೊಂಡು ಹೋಗೊಕ್ಕೆ ಆಗಲ್ವ ?” ಎಂದು ಗದರುತ್ತಾನೆ ಈತ. “ರಸ್ತೆ ಪಕ್ಕದಲ್ಲಿ ಹೋಗಕ್ಕೆ ನಿನ್‌ಗೇನ್ ದಾಡಿ ?” ಇದು ಅವನ ಉತ್ತರ. ಹೀಗೆ ಮಾತಿಗೆ ಮಾತು ಬೆಳೆಯುತ್ತದೆ. ತಾವು ಇತರರ ವಾಹನಗಳ ಸಂಚಾರಕ್ಕೂ ಅಡ್ಡಿ ಮಾಡುತ್ತಿದ್ದೇವೆಂಬ ಪರಿವೇ ಇಬ್ಬರಿಗೂ ಇರುವುದಿಲ್ಲ. ಅನೇಕ ವೇಳೆ ಈ ಪರಿಸ್ಥಿತಿ ವಿಕೋಪಕ್ಕೆ ಹೋಗಿ ಅಲ್ಲೇ ಹೊಡೆದಾಟಗಳಾಗುವುದೂ ಉಂಟು. ಹೀಗೆ ಇಬ್ಬರ ಅಸಹನೆಯಿಂದ ನೂರಾರು ಜನರು ತೊಂದರೆಗೊಳಗಾಗುತ್ತಾರೆ. ಈ ಇಬ್ಬರಲ್ಲಿ ಯಾರೊಬ್ಬರಾದರೂ ಸ್ವಲ್ಪ ತಾಳ್ಮೆ ಅಥವಾ ಸೌಜನ್ಯತೆಯಿಂದ ವರ್ತಿಸಿದ್ದರೂ ಇಂತಹ ಸನ್ನಿವೇಶ ಉಂಟಾಗುವುದಿಲ್ಲ. ಇದು ಅನೇಕ ಬಾರಿ ನನ್ನ ಅನುಭವಕ್ಕೆ ಬಂದಿರುವ ಸಂಗತಿ. ಸಂಚಾರದ ಒತ್ತಡದಿಂದಾಗಿ ಕೆಲವು ಬಾರಿ ನಾನೂ, ನನ್ನ ಸ್ಕೂಟರನ್ನು ಸೂಚನೆ ನೀಡದೆ ಎಡಕ್ಕೋ, ಬಲಕ್ಕೋ ತಿರುಗಿಸಿರುವುದು ಅಥವಾ ಇನ್ನೊಬ್ಬರ ವಾಹನಕ್ಕೆ ಅಡ್ಡ ಬಂದಿರುವುದೂ ಉಂಟು. ಆ ಚಾಲಕ ದುರುಗುಟ್ಟಿಕೊಂಡು ನೋಡಿದಾಗ ಅಥವಾ ಸಿಡುಗಿದಾಗ ನಾನು ಮುಗಳ್ನಕ್ಕು ‘ಸಾರಿ’ ಎನ್ನುತ್ತೇನೆ. ಆತನ ಮುಖದಲ್ಲಿದ್ದ ಬಿಗಿ ಕಡಿಮೆಯಾಗುತ್ತದೆ. ‘ಇಟ್ಸ್ ಒಕೆ’ ಎನ್ನುತ್ತಾನೆ. ಒಂದು ವೇಳೆ ಹಾಗೆನ್ನದಿದ್ದರೂ ವಾದಕ್ಕಿಳಿಯದೇ ಸುಮ್ಮನಾದರೂ

ಹೋಗುತ್ತಾನೆ. ಇನ್ನು ಕೆಲವು ವೇಳೆ ಬೇರೊಬ್ಬರು ಆ ರೀತಿ ನನಗೆ ತೊಂದರೆ ಮಾಡಿದಾಗಲೂ ನಾನು ಮುಗುಳುನಕ್ಕು ಬಿಡುವುದುಂಟು. ಸೌಜನ್ಯದಿಂದ ಕೂಡಿದ ಒಂದು ಪದ ಅಥವಾ ಆ ಭಾವತುಂಬಿದ ಒಂದು ಮುಗುಳ್ನಗೆ ಅದೆಷ್ಟೋ ಬಿಗಿ ವಾತಾವರಣವನ್ನು ತಿಳಿಗೊಳಿಸಬಹುದು.

ಒಮ್ಮೆ ಸ್ಕೂಟರ್‌ನಲ್ಲಿ ಸಾಗುವಾಗ ಬಲರಸ್ತೆಗೆ ತಿರುಗಿದೆ. ಅದೇ ರಸ್ತೆಯಲ್ಲಿ ಮೋಟರ್ ಬೈಕ್‌ನಲ್ಲಿ ವೇಗವಾಗಿ ಒಬ್ಬ ಯುವಕನು ಬರುತ್ತಿದ್ದ. ನಾನು ತೆಗೆದುಕೊಂಡ ತಿರುವು ಅವನ ವೇಗಕ್ಕೆ ಅಡ್ಡಿಬಂತೆಂದು ಅವನಿಗನಿಸಿತೇನೋ. ಚಲಿಸುತ್ತಲೇ ನನ್ನ ಕಡೆಗೆ ತಿರುಗಿ ಅವಾಚ್ಯ ಶಬ್ದವೊಂದನ್ನು ನುಡಿದು ಮುಂದೆ ಸಾಗಿದ. ನಾನು ಅವನ ಹಿಂದೆಯೇ ಹೋದೆ. ಸ್ವಲ್ಪ ದೂರ ಸಾಗಿದ ಮೇಲೆ ಒಂದು ಅಂಗಡಿಯ ಮುಂದೆ ತನ್ನ ಬೈಕನ್ನು ನಿಲ್ಲಿಸಿ ಹೆಲ್ಮೆಟನ್ನು ತೆಗೆಯತೊಡಗಿದ. ನಾನೂ ಅಲ್ಲಿಯೇ ನಿಲ್ಲಿಸಿ, "ಅಲ್ಲಪ್ಪ, ವೇಗವಾಗಿ ಬಂದವನು ನೀನು. ನನಗೆ ಅವಾಚ್ಯ ಶಬ್ದ ಬಳಿಸಿದ್ದೀಯಲ್ಲ, ಸರಿಯಾ ?" ಎಂದೆ. "ನೀವು ಅಡ್ಡ ಬಂದ್ರಲ್ಲ" ಎಂದ ಆತ ಅದೇ ಬಿಗುವಿನಿಂದ. ನಾನು, "ನಿಧಾನವಾಗಿಯೇ ನಾನು ಪಕ್ಕಕ್ಕೆ ತಿರುಗಿದೆ. ಹೋಗ್ಲಿ. ನಾನು ಅಡ್ಡ ಬಂದೇ ಅಂತನೇ ಇಟ್ಕೊ. ಹಾಗೆ ಕೆಟ್ಟ ಮಾತಿನಿಂದ ಬಯ್ದರೆ ಸರಿ ಹೋಗುತ್ತಾ? ನಾನು ಅದೇ ರೀತಿ ಇನ್ನೊಂದು ಪದ ಬಳಸಿ ನಿನಗೆ ಅಂದಿದ್ರೆ, ಇಬ್ಬರೂ ಅಲ್ಲೆ ನಿಂತು ಜಗಳ ಆಡ್ತಾ ಬೇರೆಯವರಿಗೂ ತೊಂದರೆ ಮಾಡ್ತಾ ಇದ್ವಿ. ಎರಡನೆದಾಗಿ ನೀನಂಥ ಪದ ಬಳಸುತ್ತಾ ಇರೋದು ನಿನಗಿಂತ ವಯಸ್ಸಿನಲ್ಲಿ ಹಿರಿಯಾರಾಗಿರೋ ಒಬ್ಬ ವ್ಯಕ್ತಿಗೆ ಅನ್ನೋ ಪರಿಜ್ಞಾನ ಇರಬೇಕಲ್ವ ?" ಎಂದೆ, ಮುಗುಳ್ನಗುತ್ತಾ. ಆ ಯುವಕ ಕೂಡಲೆ ತನ್ನ ಮುಖಭಾವವನ್ನು ಬದಲಿಸಿ "ಸಾರಿ ಸರ್, ಪ್ಲೀಸ್ ಎಕ್ಸ್‌ಕ್ಯೂಸ್ ಮಿ" ಎಂದ. ಸೌಜನ್ಯದ ಪ್ರಭಾವವಿದು.

ಈ ಟಿವಿಯವರ ಎದೆ ತುಂಬಿ ಹಾಡುವೆನು ಅತ್ಯಂತ ಜನಪ್ರಿಯವಾದ ಸಂಗೀತ ಕಾರ್ಯಕ್ರಮ. ಇದರ ಯಶಸ್ಸಿಗೆ ಬಾಲ ಹಾಗೂ ಯುವ ಪ್ರತಿಭೆಗಳು ಸುಶ್ರಾವ್ಯವಾಗಿ ಹಾಡುವುದು ಎಷ್ಟು ಮುಖ್ಯ ಕಾರಣವೋ ಅಷ್ಟೇ ಅಥವಾ ಅದಕ್ಕಿಂತ ಸ್ವಲ್ಪ ಹೆಚ್ಚಾಗಿ ಕಾರ್ಯಕ್ರಮವನ್ನು ನಡೆಸಿಕೊಡುತ್ತಿರುವ ಎಸ್.ಪಿ. ಬಾಲಸುಬ್ರಮಣ್ಯಾಂ ಮುಖ್ಯ ಕಾರಣರು. ಇಡೀ ಕಾರ್ಯಕ್ರಮಕ್ಕೆ ಮೆರಗು ನೀಡಿರುವುದು ಎಸ್.ಪಿ.ಬಿ ಅವರ ಸೌಜನ್ಯ. ಸ್ಪರ್ಧಿಗಳು ಹಾಡುವಾಗ ಶೃತಿ ತಪ್ಪಿದರಾಗಲಿ, ಸ್ವರ ಏರುಪೇರಾದರಾಗಲೀ, ಸಾಹಿತ್ಯದಲ್ಲಿ ಲೋಪವುಂಟಾದರಾಗಲೀ ಎಸ್.ಪಿ.ಬಿಯವರು ಒಮ್ಮೆಯಾದರೂ ಅವರನ್ನು ನಿಂದಿಸಿ ಹೇಳಿದವರಲ್ಲ. ತಪ್ಪನ್ನೇ ಪ್ರಮುಖವಾಗಿ ಸೂಚಿಸಿದವರಲ್ಲ. ಅದಕ್ಕೆ ಬದಲಾಗಿ "ತಪ್ಪನ್ನು ಎಲ್ಲರೂ ಮಾಡ್ತಾರೆ. ಆಸ್ಥಾನದಲ್ಲಿದ್ದರೆ ನಾನು ಹಾಗೇ ಮಾಡ್ತೇನೆ. ನೀನು ಬಹಳ ಚನ್ನಾಗಿ

ಹಾಡಿದೆ. ಎಲ್ಲೋ ಸಣ್ಣ ಪುಟ್ಟ ತಪ್ಪುಗಳಿವೆ. ಅದು ಈ ವಯಸ್ಸಿಗೆ ಸಹಜ. ಮುಂದೆ ನೀನು ಇನ್ನೂ ಚನ್ನಾಗಿ ಹಾಡುವೆ." ಎನ್ನುವಾಗ ಅವರಲ್ಲಿ ವ್ಯಕ್ತವಾಗುತ್ತಿದ್ದ ವಿನಯ ನಿಜಕ್ಕೂ ಅನುಕರಣೀಯ. ಪ್ರತಿ ಕಂತಿನಲ್ಲೂ ಅವರೊಂದಿಗೆ ತೀರ್ಪುಗಾರರಾಗಿ ಕೂರುವವರು ಸಾಧನೆ ಮಾಡಿದವರೆ, ಪ್ರಸಿದ್ಧರೇ. ಆದರೂ ಅವರು ಕೂರುವ ಭಂಗಿ, ಮಾತನಾಡುವಾಗ ವ್ಯಕ್ತಪಡಿಸುವ ಹಾವಭಾವಗಳನ್ನು ಸೂಕ್ಷ್ಮವಾಗಿ ಗಮನಿಸಿದರೆ ಎಸ್.ಪಿ.ಬಿಯವರ ಸೌಜನ್ಯತೆಗೆ ಆ ಕಲಾವಿದರು ಮಾರುಹೋಗಿರುವುದು ಸ್ಪಷ್ಟವಾಗಿ ಕಂಡುಬರುತ್ತದೆ. ಪ್ರತಿ ಕಾರ್ಯಕ್ರಮದಲ್ಲೂ ಸಂದರ್ಭೋಚಿತವಾಗಿ ಹಿರಿಯ ಹಿನ್ನೆಲೆ ಗಾಯಕರನ್ನಾಗಲೀ, ಗೀತರಚನೆಕಾರರನ್ನಾಗಲೀ, ಸಂಗೀತ ಸಂಯೋಜಕರನ್ನಾಗಲೀ, ಕವಿಗಳನ್ನಾಗಲೀ ನೆನೆಸಿಕೊಳ್ಳುವಾಗ ಅವರ ಹಿರಿಮೆಯನ್ನು ತಿಳಿಸುತ್ತಾ ಜಾನಕಮ್ಮ, ಸುಶಿಲಮ್ಮ, ಲತಮ್ಮ ಎಂದು ಅವರ ಹೆಸರುಗಳನ್ನು ಹೇಳುವಾಗಲೂ ಗೌರವವನ್ನು ಸೂಚಿಸುತ್ತಾ ಮಾತನಾಡುವಾಗ ಎಸ್.ಪಿ.ಬಿ ರವರ ಹೃದಯವಂತಿಕೆ ಗೋಚರವಾಗುತ್ತದೆ. ತಮ್ಮನ್ನು ವಿಶಾಲ ಹೃದಯದಿಂದ ಸ್ವೀಕರಿಸಿದ್ದಾರೆಂದು ಕನ್ನಡ ಚಿತ್ರರಂಗವನ್ನು ಹಾಗು ಕನ್ನಡ ಜನತೆಯನ್ನು ಅವರು ಕೃತಜ್ಞತೆಯಿಂದ ಆಗಾಗ ಸ್ಮರಿಸಿಕೊಳ್ಳುತ್ತಲೇ ಇರುತ್ತಾರೆ. ಕಾರ್ಯಕ್ರಮದ ಪ್ರಾರಂಭದಲ್ಲಿ ಹಾಡುವ ವಚನ ಹಾಗು ಕೊನೆಯಲ್ಲಿ ಧೂಮಪಾನ ಮಾಡಬೇಡಿ, ಪರಿಸರವನ್ನು ಉಳಿಸಿ, ವಾಹನ ಚಲಿಸುವಾಗ ಮೊಬೈಲ್ ಬಳಸಬೇಡಿ ಎಂಬೆಲ್ಲ ಸಂದೇಶಗಳನ್ನು ವಿನಮ್ರತೆಯಿಂದ ತಿಳಿಸುವಾಗ ಅವರೊಳಗಿನ ಸಾಮಾಜಿಕ ಕಾಳಜಿಯ ಪ್ರಾಮಾಣಿಕತೆಯ ಅರಿವಾಗುತ್ತದೆ. ಒಟ್ಟಿನಲ್ಲಿ ಎದೆ ತುಂಬಿ ಹಾಡುವೆನು ಕಾರ್ಯಕ್ರಮದಲ್ಲಿ ತಮ್ಮ ಸೌಜನ್ಯದಿಂದ ಎಸ್.ಪಿ.ಬಿ ಕನ್ನಡಿಗರೆಲ್ಲರ ಹೃದಯದಲ್ಲಿ ತುಂಬಿಹೋಗಿದ್ದಾರೆ.

ಕನ್ನಡದ ಮೇರುನಟ ಡಾ॥ ರಾಜ್‌ಕುಮಾರ್ ಸೌಜನ್ಯದ ಸಾಕಾರಮೂರ್ತಿ. ತಮ್ಮ ಅತ್ಯದ್ಭುತ ಹಾಗು ಪ್ರಬುದ್ಧ ನಟನೆಯಿಂದ ಅವರು ಮನೆಮಾತಾಗಿದ್ದಾರೆ. ಅವರು ಚಿಂತನಶೀಲರ ಹೃದಯವನ್ನು ಗೆದ್ದದ್ದು ತಮ್ಮ ಸೌಜನ್ಯತೆಯಿಂದ ಕೂಡಿದ ನಡುವಳಿಕೆಯಿಂದ. ಮಾಧ್ಯಮಗಳಿಗೆ ನೀಡಿದ ಸಂದರ್ಶನಗಳಲ್ಲಾಗಲೀ, ವೇದಿಕೆ ಮೇಲಿನ ಕಾರ್ಯಕ್ರಮಗಳಲ್ಲಾಗಲೀ ಅವರ ನಡೆ-ನುಡಿ, ಹಾವಭಾವಗಳು ವಿನಯಶೀಲತೆಯಿಂದ ತುಂಬಿ ತುಳುಕಿವೆ. ಅದರಲ್ಲಿ ನಟನೆಯಾಗಲೀ, ಕೃತ್ರಿಮತೆಯಾಗಲೀ ಕಂಡುಬರುವುದಿಲ್ಲ. ಹೃದಯಾಂತರಾಳದಿಂದ ಬರುತ್ತಿದ್ದ ಅವರ ಮಾತುಗಳು ಅವರು ಎಂತಹ ಪ್ರಬುದ್ಧ ವ್ಯಕ್ತಿಯಾಗಿದ್ದರೆಂಬುದನ್ನು ಸೂಚಿಸುತ್ತದೆ. ಆ ಎತ್ತರಕ್ಕೆ ಬಹುಶಃ ಇನ್ನಾವ ಕಲಾವಿದರೂ ಏರಲಾರರೇನೋ.

ಶತಮಾನಕಾಲ ಬದುಕಿ ಬಾಳಿದ ಹಿರಿಯ ಚೇತನ ನಿಟ್ಟೂರು ಶ್ರೀನಿವಾಸರಾಯರು ಸಜ್ಜನಿಕೆಗೊಂದು ಸೂಕ್ತ ಮಾದರಿ. ಅವರ ಸ್ಥಾನಮಾನಗಳ ಕಾರಣದಿಂದಾಗಿ ಅನೇಕ

ಆಹ್ವಾನ ಪತ್ರಿಕೆಗಳು ಅವರಿಗೆ ಬರುತ್ತಿದ್ದವು. ಅವರು ಆಯಾ ದಿನದಂದು ಇರುವ ಕಾರ್ಯಕ್ರಮಗಳ ಪತ್ರಿಕೆಗಳನ್ನು ಜೋಡಿಸಿಕೊಂಡು ಎಲ್ಲಾ ಕಡೆಗಳಿಗೂ ಕೊನೆಯ ಪಕ್ಷ ಒಂದು 5 ನಿಮಿಷವಾದರೂ ಹೋಗಿ ಆಹ್ವಾನಿಸಿದವರಿಗೆ ಶುಭ ಕೋರಿ ಬರುತ್ತಿದ್ದರು. ಇದರಿಂದಾಗಿ ಅತಿಥೇಯರಿಗೆ ಅದೆಷ್ಟೋ ಸಂತೋಷ. ೧೯೯೭ರ ಡಿಸೆಂಬರ್‌ನಲ್ಲಿ ನಾನು ಕಬ್ಬನ್ ಪಾರ್ಕ್‌ನ ಸೆಕ್ರೆಟೇರಿಯಟ್ ಕ್ಲಬ್‌ನಲ್ಲಿ ಬೆಂಗಳೂರಿನ ೪೬೦ನೇ ಸ್ಥಾಪನೆಯ ವರ್ಷವನ್ನು ಆಚರಿಸಿದಾಗ ನಿಟ್ಟೂರರು ಮಧ್ಯಾಹ್ನ ಮೂರು ಘಂಟೆಗೆ ಬಂದು "ಇನ್ನೂ ಹಲವಾರು ಕಾರ್ಯಕ್ರಮಗಳಿವೆಯಪ್ಪಾ, ಹೋಗಬೇಕು. ನೀವು ಬಹಳ ಒಳ್ಳೆಯ ಕೆಲಸ ಮಾಡುತ್ತಿದ್ದೀರಿ. ದೇವರು ಶುಭವನ್ನು ಉಂಟು ಮಾಡಲಿ" ಎಂದು ಹರಸಿ ತೆರಳಿದರು. ಅವರ ಆ ವಿನಯವಂತಿಕೆಯನ್ನು ನಾನೆಂದಿಗೂ ಮರೆಯಲಾರೆ.

ಸೌಜನ್ಯತೆ ಪ್ರತಿಯೊಬ್ಬರಲ್ಲೂ ಇರಬೇಕಾದ ಸದ್ಗುಣ. ವೈದ್ಯರೂ ಮತ್ತು ಶಿಕ್ಷಕರಿಗಂತೂ ಇದು ಅತ್ಯವಶ್ಯಕ. ತನ್ನ ಪಾಂಡಿತ್ಯವನ್ನು ಪ್ರದರ್ಶಿಸದೆ ವಿದ್ಯಾರ್ಥಿಯ ಜ್ಞಾನವನ್ನು ವೃದ್ಧಿಸಲು, ವ್ಯಕ್ತಿತ್ವವನ್ನು ರೂಪಿಸಲು ಪ್ರಾಮಾಣಿಕವಾಗಿ ಸ್ನೇಹಪರತೆಯೊಂದಿಗೆ ಪಾಠ ಹೇಳುವ ಶಿಕ್ಷಕ ವಿದ್ಯಾರ್ಥಿಗೆ ಹತ್ತಿರವಾಗುತ್ತಾನೆ. ತನಗಿಷ್ಟವಾದ ವ್ಯಕ್ತಿ ಹೇಳುವ ಪಠ್ಯ ವಿಷಯವು ಕಷ್ಟವಿದ್ದರೂ ವಿದ್ಯಾರ್ಥಿಗೆ ವೇದ್ಯವಾಗುತ್ತದೆ. ವೈದ್ಯರ ವಿಷಯದಲ್ಲೂ ಅಷ್ಟೇ. ಅವರು ಕೊಡುವ ಔಷಧಿಯಷ್ಟೇ ಪರಿಣಾಮಕಾರಿಯಾಗಿರುತ್ತದೆ, ಅವರಾಡುವ ಮಾತುಗಳು. ನನ್ನ ತಾಯಿಗೆ ಕಣ್ಣಿನ ಆಪರೇಷನ್ ಆಗಿದ್ದಾಗ ಆಸ್ಪತ್ರೆಯಲ್ಲಿ ಅವರಿದ್ದ ವಾರ್ಡ್‌ನ ಪಕ್ಕದಲ್ಲಿ ಸುಮಾರು ೧೦ ವರ್ಷದ ಬಾಲಕಿಯೊಬ್ಬಳಿಗೆ ಕಾರಣಾಂತರಗಳಿಂದ ಎರಡೂ ಕಣ್ಣುಗಳಿಗೆ ಆಪರೇಷನ್ ಆಗಿ ಬ್ಯಾಂಡೇಜ್ ಕಟ್ಟಿದ್ದರು. ಆಪರೇಷನ್ ಮಾಡಿದ ವೈದ್ಯರು ಪರಿಣತರೇ. ಆದರೂ ಸ್ವಭಾವ ಸ್ವಲ್ಪ ಸಿಡುಕು. ಅವರು ಇನ್ನೂ ಬಾಗಿಲ ಬಳಿ ಬಂದು ಮೊದಲ ರೋಗಿಯನ್ನು ಮಾತನಾಡಿಸುತ್ತಿರುವಾಗಲೇ ಹಲವಾರು ಮಂಚಗಳ ದೂರವಿದ್ದ ಈ ಬಾಲಕಿ ಅಳಲು ಪ್ರಾರಂಭಿಸಿಬಿಡುತ್ತಿದ್ದಳು. ಅವಳಿಗೆ ಗುಣವಾಗುವುದು ನಿಧಾನವಾಯಿತು. ವೈದ್ಯರು ಸಮಾಧಾನದಿಂದ ಧೈರ್ಯ ಕೊಡುವ ರೀತಿಯಲ್ಲಿ ಮಾತನಾಡಿದಲ್ಲಿ ಅದು ರೋಗಿಗಳ ಮನಸ್ಸಿನ ಮೇಲೆ ಸತ್ಪರಿಣಾಮ ಬೀರಿ ಗುಣಮುಖವಾಗಲು ಹೆಚ್ಚು ಸಹಕಾರಿಯಾಗುತ್ತದೆ.

ಹೀಗೆ ನಮ್ಮ ದಿನನಿತ್ಯ ಜೀವನದಲ್ಲಿ ಸೌಜನ್ಯತೆಯ ಸ್ವಭಾವವನ್ನು ಬೆಳೆಸಿಕೊಂಡು ನಾವೂ ನೆಮ್ಮದಿಯಿಂದಿರಬಹುದು, ಇತರರಿಗೂ ಸಂತೋಷವನ್ನುಂಟು ಮಾಡಬಹುದು. ಇದಕ್ಕೆ ವಿಶೇಷ ಪ್ರಯತ್ನವನ್ನೇನು ಮಾಡಬೇಕಿಲ್ಲ. ಹಣವಂತೂ ಖರ್ಚಾಗುವುದಿಲ್ಲ. ಮುಖದಲ್ಲಿ ಮುಗುಳ್ನಗೆ. ಮಾತಿನಲ್ಲಿ ನಯವಂತಿಕೆ. ಇವಿಷ್ಟಿದ್ದರೆ ನಾವು ಎಂತಹ ಕಠಿಣ ಹೃದಯದವರ

ಮನಸ್ಸನ್ನು ಗೆಲ್ಲಬಹುದು. ಆದರೆ ಇಂದಿನ ಜನಾಂಗದಲ್ಲಿ ಈ ಸದ್ಗುಣ ಅಪರೂಪವಾಗ ತೊಡಗಿದೆ. ಹಿಂದಿನ ಕಾಲದವರಿಗಿಂತ ಇವರು ಹೆಚ್ಚು ಬುದ್ಧಿವಂತರೇ, ಜ್ಞಾನಿಗಳೇ. ಅನೇಕ ಪದವಿಗಳನ್ನು ಗಳಿಸಿರುತ್ತಾರೆ. ಒಳ್ಳೆಯ ಉದ್ಯೋಗಗಳಲ್ಲಿಯೂ ಇರುತ್ತಾರೆ. ಆರ್ಥಿಕವಾಗಿಯೂ ಶ್ರೀಮಂತರು. ಆದರೆ ಮೂಲಭೂತ ಕೊರತೆಯಿರುವುದು ಹೃದಯ ಶ್ರೀಮಂತಿಕೆಯಲ್ಲಿ. ತಾನು ಯಾರಿಗೇನು ಕಡಿಮೆಯಿಲ್ಲ ಎಂಬ ಅಹಂಭಾವ ಸಾಮಾನ್ಯವಾಗಿ ಕಂಡು ಬರುವ ಗುಣ. ಸೌಜನ್ಯದ ವಿರುದ್ಧ ಸ್ವಭಾವವೇ ಅಹಂಕಾರ. ಇದು ಪ್ರಬಲವಾದಾಗ ಹೊಂದಿಕೊಂಡು ನಡೆಯುವ ಮನಸ್ಸಾದರೂ ಬರುವುದು ಹೇಗೆ. ಇದರಿಂದಾಗಿಯೇ ಇಂದು ದ್ವೇಷ, ಅಸೂಯೆ, ಅಸಮಾಧಾನ, ಅನಾರೋಗ್ಯಕರ ಸ್ಪರ್ಧೆ, ಪೈಪೋಟಿ ಮುಂತಾದುವುಗಳೇ ಸಮಾಜದಲ್ಲಿ ತಾಂಡವವಾಡುತ್ತಿವೆ. ಪ್ರೀತಿಸಿಯೇ ಮದುವೆಯಾದರೂ ಇಬ್ಬರೂ ದುಡಿಯುವ ದಂಪತಿಗಳು ಸೌಜನ್ಯದ ಕೊರತೆಯಿಂದಾಗಿ ಒಂದೆರಡು ವರ್ಷಗಳಲ್ಲೇ ವಿಚ್ಛೇದನ ಪಡೆಯುತ್ತಿದ್ದಾರೆ. ವಯೋವೃದ್ಧ ತಂದೆ ತಾಯಿಯರು ವೃದ್ಧಾಶ್ರಮ ಸೇರುತ್ತಿದ್ದಾರೆ. ಶಾಲಾ ಕಾಲೇಜುಗಳಲ್ಲಿ ವಿದ್ಯಾರ್ಥಿ–ಶಿಕ್ಷಕರ ಸಂಬಂಧ ವ್ಯಾವಹಾರಿಕವಾಗುತ್ತಿದೆ. ಇಂದಿನ ಸಾಮಾಜಿಕ ಪರಿಸ್ಥಿತಿಯಂತೂ ಇವೆಲ್ಲಕ್ಕೂ ಪೂರಕವಾಗಿದೆ. ಸಿನೆಮಾಗಳಲ್ಲಿ ಹಿಂಸೆ, ಹೊಡೆದಾಟ, ರಕ್ತಪಾತ ಇವೇ ಪ್ರಧಾನವಾಗಿರುತ್ತವೆ. ಟಿವಿಗಳ ಮೆಗಾ ಧಾರಾವಾಹಿಗಳಲ್ಲಿ ಬರುವ ಕೌಟುಂಬಿಕ ವಿಷಯಗಳನ್ನುಳ್ಳ ಕಥೆಗಳಲ್ಲೂ ಮೋಸ, ಅಸೂಯೆ, ವಿವಾಹೇತರ ಸಂಬಂಧ ಮುಂತಾದ ಸಂಗತಿಗಳನ್ನೇ ಹಿಗ್ಗಿಸಿ ತೋರಿಸಲಾಗುತ್ತಿದೆ. ದಿನಪತ್ರಿಕೆಗಳು, ನಿಯತಕಾಲಿಕೆಗಳಲ್ಲೂ ಈ ವಿಷಯಗಳದ್ದೇ ಮೇಲುಗೈ. ಮಿಥ್ಯಮೇವ ಜಯತೆ ಎಂಬುದರ ವೈಭವೀಕರಣ. ಹೀಗೆ ಎಲ್ಲೆಲ್ಲೂ ಇದೇ ವಾತಾವರಣವಿದ್ದಾಗ ಸೌಜನ್ಯ ಸುಳಿಯುವುದಾದರೂ ಹೇಗೆ ? ಸದ್ಗುಣಗಳು ಒಂದಾನೊಂದು ಕಾಲದಲ್ಲಿ ಹೇರಳವಾಗಿದ್ದವು ಎನ್ನುವಷ್ಟರಮಟ್ಟಿಗೆ ಇಂದು ಅಪರೂಪವಾಗಿಬಿಟ್ಟಿವೆ. ಈ ಹಿನ್ನೆಲೆಯಲ್ಲಿ ಆಫ್ರಿಕಾದ ಕವಿ ಗೇಬ್ರಿಯಲ್ ಒಖಾರಾನಾ, Once upon a time ಎಂಬ ಪದ್ಯದ ಸಾರಾಂಶದ ಉಲ್ಲೇಖ ಇಲ್ಲಿ ಸೂಕ್ತವೆನಿಸುತ್ತದೆ. ತಂದೆ ತನ್ನ ಕಾಲದವರ ನಡುವಳಿಕೆಯನ್ನು ನೆನಪಿಸಿಕೊಂಡು ಇಂದಿನ ಪರಿಸ್ಥಿತಿಯೊಂದಿಗೆ ಹೋಲಿಸುತ್ತಾ ಮಗನಿಗೆ ಹೇಳುವ ಪದ್ಯವಿದು. "ಆಗ ಜನರು ನಕ್ಕಾಗ ಅವರ ಕಣ್ಣುಗಳಲ್ಲಿಯೂ ನಗುವಿರುತ್ತಿತ್ತು. ಮುಖಭಾವದಲ್ಲಿ ಶಾಂತತೆ ಕಂಡು ಬರುತ್ತಿತ್ತು. ಆದರೆ ಇಂದಿನವರ ನಗು ಕೃತಕವಾಗಿರುತ್ತದೆ. ನೆಟ್ಟ ದೃಷ್ಟಿಯ ಕಣ್ಣುಗಳು ಏನನ್ನೋ ಹುಡುಕುತ್ತವೆ. ಆಗಿನವರು ಕೈಕುಲಿಕಿದಾಗ ಆ ಸ್ಪರ್ಶದಲ್ಲೇ ಆತ್ಮೀಯತೆ ಇರುತ್ತಿತ್ತು. ಆದರೆ ಇಂದು ಬಲಗೈ ಕುಲುಕಿದರೆ ಇನ್ನೊಂದು ನನ್ನ ಜೋಬಿಗೇ ಕೈ ಹಾಕಿರುತ್ತದೆ. ಆಗ ಮನೆಗೆ ಬನ್ನಿ, ಮತ್ತೊಮ್ಮೆ ಬನ್ನಿ ಎಂದು ಮನಃಪೂರ್ವಕವಾಗಿ ಹೇಳುತ್ತಿದ್ದರು. ಈಗ ಒಮ್ಮೆಯಾದರೆ ಸರಿ ಎರಡು ಅಥವಾ ಮೂರನೇ ಬಾರಿ ಹೋದರೆ ಬಾಗಿಲು ರಪ್ ಎಂದು ಮುಖಕ್ಕೆ

ಹೊಡೆಯುತ್ತದೆ. ಇಂದಿನ ಜನಾಂಗ ಊಸರವಳ್ಳಿಯಂತೆ ಪರಿಸ್ಥಿತಿಗನುಗುಣವಾಗಿ ಮುಖವಾಡವನ್ನೂ ಬದಲಿಸುತ್ತದೆ." ಎನ್ನುತ್ತಾನೆ ಕವಿ ಗೇಬ್ರಿಯಲ್ ಒಖಾರ.

ಇಂತಹ ಪರಿಸ್ಥಿತಿಯನ್ನು ಬದಲಿಸಲು ಸಾಧ್ಯವಿಲ್ಲವೇ ? ಮನಸಿದ್ದರೆ ಖಂಡಿತಾ ಮನೆಗಳಲ್ಲಿ ಪ್ರೋಷಕರು, ಶಾಲಾಕಾಲೇಜುಗಳಲ್ಲಿ ಶಿಕ್ಷಕರು ಈ ಬಗ್ಗೆ ಗಂಭೀರ ಚಿಂತನೆ ನಡೆಸಬೇಕಾಗಿದೆ. ಸ್ವತಃ ಅವರೇ ಮೌಲ್ಯಾಧಾರಿತ ಜೀವನವನ್ನು ನಡೆಸಿ ಯುವ ಜನಾಂಗಕ್ಕೆ ಮಾದರಿಯಾಗಬೇಕಾಗಿದೆ. ಸಣ್ಣ ಸಣ್ಣ ಹನಿಗಳು ಜಲಧಾರೆಯನ್ನೂ, ಸಣ್ಣ ಮಣ್ಣಿನ ಕಣಗಳು ಮರುಭೂಮಿಯನ್ನೂ ರೂಪಿಸುವಂತೆ, ಸೌಜನ್ಯತೆಯಿಂದ ಒಡಗೂಡಿದ ಪ್ರತಿಯೊಬ್ಬನು ಆರೋಗ್ಯವಂತ, ಸದೃಢ ಸಮಾಜವನ್ನು ನಿರ್ಮಿಸಲು ಕಾರಣನಾಗುತ್ತಾನೆ. ಇಂತಹ ಸ್ವಾಸ್ಥ್ಯ ನಿರ್ಮಾಣಕ್ಕೆ ಎಲ್ಲರೂ ಪ್ರಯತ್ನಿಸುವಂತಹ ಪ್ರೇರಣೆಯನ್ನು ಭಗವಂತನು ನೀಡಲಿ ಎಂಬುದು ನನ್ನ ಸೌಜನ್ಯತೆಯಿಂದೊಡಗೂಡಿದ ಪ್ರಾರ್ಥನೆ.

ಸೌಜನ್ಯ–ಸಂಪತ್ತು–ಶಕ್ತಿ

–ಪ್ರೊ. ಎನ್.ವಿ. ಗೋವಿಂದರಾಜನ್

ಪ್ರತಿಯೊಬ್ಬರೂ ತಮ್ಮ ಜೀವನವನ್ನು ಸುಖಮಯ ಮಾಡಿಕೊಳ್ಳಲು ಸದಾ ಹಂಬಲಿಸುತ್ತಿರುತ್ತಾರೆ. ಇದಕ್ಕಾಗಿ ತಮ್ಮ ಬುದ್ಧಿ–ಭಾವನೆಗಳನ್ನು ಅನಿವಾರ್ಯವಾಗಿ ಬಳಸಿಕೊಳ್ಳುತ್ತಾರೆ. ಈ ಬುದ್ಧಿ–ಭಾವನೆಗಳು ಉತ್ತಮವಾಗಿದ್ದರೆ ನಮ್ಮ ಬದುಕು ಸವಿ, ಸುಂದರ, ಸಮರ್ಥ, ಸಾರ್ಥಕ ಆಗುತ್ತದೆ. ಇದನ್ನೇ ಒಂದು ರೀತಿಯಲ್ಲಿ ಸಾಧನೆಯ ಬದುಕು ಎಂದು ಕರೆಯುವುದು. ಬದುಕಿನ ಈ ಸಾಧನೆಗೆ ನಮ್ಮ ಗುಣಗಳು ಸಹಾಯಕ ಶಕ್ತಿಗಳಾಗುತ್ತವೆ.

ವ್ಯಕ್ತಿಯಲ್ಲಿ ಗುಣಗಳನ್ನು ಹುಟ್ಟಿನಿಂದ ಬಂದ ಗುಣಗಳು ಮತ್ತು ಗಳಿಸಿಕೊಂಡ ಗುಣಗಳು ಎಂದು ನಾವು ವಿಭಜಿಸಬಹುದು. ಮಾನವೀಯ ಸಹಜವಾದ ಬಾಂಧವ್ಯದ ಗುಣಗಳು ನಮಗೆ ಹುಟ್ಟಿನಿಂದ ಬರುತ್ತವೆ. ಆದರೆ ಜೀವನದ ಹಾದಿಯಲ್ಲಿ ಪರಿಸರ, ಪರಿಸ್ಥಿತಿ ನಮ್ಮನ್ನು ಅನೇಕ ರೀತಿಯಲ್ಲಿ ಸದ್ಗುಣಗಳನ್ನಾಗಿ ಪರಿವರ್ತಿಸುತ್ತದೆ. ಗುಣಗಳು ನಮಗೆ ಜೀವನದಲ್ಲಿ ಅಮೂಲ್ಯವಾದ ಶ್ರೀಮಂತಿಕೆ, ಸದ್ಗುಣಗಳನ್ನು ಕಾಣುವುದು, ಗ್ರಹಿಸುವುದು ದುಂಬಿಯ ಮಧು ಸಂಗ್ರಹಕಾರ್ಯಕ್ಕೆ ಸಮಾನವಾದ ಕಲೆ ಹಾಗೂ ಚಟುವಟಿಕೆ ಎನ್ನಬಹುದು. ಮಹಾತ್ಮರ ಬದುಕಿನಲ್ಲಿ ಈ ಚಟುವಟಿಕೆ ಜೀವಮಾನಪರ್ಯಂತ ನಿರಂತರವಾಗಿರುತ್ತದೆ. ಈ ಚಟುವಟಿಕೆಯಿಂದಲೇ ಮಹಾತ್ಮರ ಬದುಕು ಪ್ರತಿಕ್ಷಣವೂ ಸುಂದರ ಸಾತ್ವಿಕವಾಗಲು ಕಾರಣವಾಗುತ್ತದೆ. ವ್ಯಕ್ತಿಗೆ ಜೀವನದಲ್ಲಿ ಬೆಲೆ ತಂದುಕೊಡುವುದು ಅವನ ಗುಣವೇ ಹೊರತು ಬೇರಾವುದೂ ಅಲ್ಲ. ನಾವು ಹಣದಿಂದ ಸಮಾಜದಲ್ಲಿ ವಿಶ್ವಾಸವನ್ನು ಗಳಿಸಿದರೂ ಅದು ಅಲ್ಪ ಹಾಗೂ ತಾತ್ಕಾಲಿಕ. ನಮ್ಮ ಗುಣದಿಂದ ನಾವು ಸಂಪಾದಿಸಿದ ವಿಶ್ವಾಸ ನಿಜವಾಗಿಯೂ ಅಮೂಲ್ಯ ಹಾಗೂ ಅಪಾರವಾಗಿರುತ್ತದೆ, ಸ್ಥಿರವಾಗಿರುತ್ತದೆ.

ಮಹಾಕಾವ್ಯ ರಾಮಾಯಣದಲ್ಲಿ ಕವಿ ವಾಲ್ಮೀಕಿ ಶ್ರೀರಾಮನನ್ನು "ಗುಣವಾನ್" ಎಂದು ಪರಿಚಯಿಸುತ್ತಾನೆ. ಇದು ವ್ಯಕ್ತಿಯ ನಿಜವಾದ ಪರಿಚಯ ರೀತಿ–ವ್ಯಕ್ತಿಯನ್ನು ಪರಿಚಯಿಸುವ ರೀತಿ. ಕಾವ್ಯದ ಉದ್ದಗಲಕ್ಕೆ ರಾಮನ ಗುಣಗಳು, ಲಕ್ಷ್ಮಣನ ಗುಣಗಳು,

ಸೀತೆಯ ಗುಣಗಳು, ಹನುಮಂತನ ದಾಸ್ಯಗುಣವೈಭವ ನಮ್ಮ ಮನಸ್ಸನ್ನು ಸೂರೆಗೊಳ್ಳುತ್ತವೆ. ಇದೇ ರೀತಿಯಲ್ಲಿ ಗುಣದ ಗಣಿಯಾದ ವಿಭೀಷಣನ ವ್ಯಕ್ತಿತ್ವಕ್ಕೆ ಮನಸೋಲದ ವ್ಯಕ್ತಿಗಳಿಲ್ಲ. ನಮ್ಮ ಗುಣಗಳು ಒಂದೊಂದು ಕಾಲಕ್ಕೆ ಒಂದೊಂದು ರೀತಿಯಲ್ಲಿ ಪ್ರಕಾಶಿತವಾಗಿ ನಮ್ಮ ಬದುಕಿಗೆ ಅರ್ಥವನ್ನು ತುಂಬಿಕೊಡುತ್ತದೆ. ರಾಮಾಯಣದ ಮೊದಲಿಗೆ ಧರ್ಮಾತ್ಮ ಯಾರು ಎಂದು ನಾರದರು ಪ್ರಶ್ನೆಯನ್ನು ಹಾಕಿಕೊಂಡು ಅದಕ್ಕೆ ಉತ್ತರವಾಗಿ 'ಗುಣವಾನ್' ಎನ್ನುತ್ತಾರೆ. ಅಂದರೆ ಧರ್ಮ ಹಾಗೂ ಗುಣಕ್ಕೂ ಅಪೂರ್ವವಾದ ಸಂಬಂಧವಿದೆ ಎಂಬುದನ್ನು ವಾಲ್ಮೀಕಿ ಸ್ಪಷ್ಟವಾಗಿ ಸೂಚಿಸಿದ್ದಾರೆ. ಬದುಕಿನ ಹಾದಿಯಲ್ಲಿ ನಾವು ನಡೆಯುವುದಕ್ಕೆ ಧರ್ಮ ಊರುಗೋಲಾದರೆ, ಗುಣ ನಮ್ಮ ಪಾಲಿಗೆ ಶುದ್ಧ ಬದುಕಿನ ಹಾದಿಯನ್ನು ಕಾಣಿಸುವ ದಿವ್ಯ ಜ್ಯೋತಿಯೆಂದು ನಾವು ಪರಿಭಾವಿಸಬಹುದು.

ವ್ಯಕ್ತಿಗೆ ಜೀವನದಲ್ಲಿ ಬೆಲೆಯನ್ನು ತಂದುಕೊಡುವುದು ಅವನು ಗಳಿಸಿದ ಗುಣವಲ್ಲದೆ ಬೇರಾವುದರಿಂದಲೂ ಅಲ್ಲ. ಇದಕ್ಕೆ ಮುಖ್ಯ ಕಾರಣ ಗುಣವೇ ಬದುಕಿಗೆ ಭೂಷಣ.

ಸಂಸ್ಕೃತಿಯ ತಾಯಿ ಬೇರಾದ ಜಾನಪದ ಗೀತೆಯಲ್ಲಿ ಗುಣದ ಸೂತ್ರ ಹೀಗಿದೆ :

ಆಚಾರಕ್ಕರಸಾಗು ನೀತಿಗೆ ಪ್ರಭುವಾಗು
ಮಾತಿನಲಿ ಚೂಡಾಮಣಿಯಾಗು ನನ ಕಂದ
ಜ್ಯೋತಿಯೆ ಆಗು ಜಗಕೆಲ್ಲ

ನಾವು ನಮ್ಮ ಮನೆಯಲ್ಲಿ, ಸಮಾಜದಲ್ಲಿ ನಮ್ಮ ಬದುಕು ಬೆಳಕಾಗಿ ಸಾರ್ಥಕಗೊಳಿಸಿಕೊಳ್ಳಬೇಕಾದರೆ ಗುಣವೊಂದೇ ಕಾರಣ ಎಂಬುದು ಇಲ್ಲಿ ಸೂಚ್ಯವಾಗಿದೆ–ಸೂತ್ರವಾಗಿದೆ. ಬದುಕಿನಲ್ಲಿ ನಮ್ಮ ಆಚಾರ–ನಡವಳಿಕೆ ನೀತಿಯುಕ್ತವಾಗಿರಬೇಕು, ಗುಣಯುಕ್ತವಾಗಿರಬೇಕು. ಆಗ ಮಾತ್ರ ನೀತಿಯಿಂದ ನಾವು ನಮ್ಮ ಬದುಕಿಗೆ ಪ್ರಭುವಾಗಬಹುದು, ಸಮಾಜಕ್ಕೂ ಸಹ ಸನ್ಮಾರ್ಗ ತೋರಿಸುವ ವ್ಯಕ್ತಿಗಳಾಗಬಹುದು.

ಗುಣದ ಗಣಿಯಲ್ಲಿ ಸೌಜನ್ಯ ಒಂದು ಅಪರೂಪದ ಗುಣ. ಇದು ಹೊರನೋಟಕ್ಕೆ ಒಂದು ಗುಣವಾಗಿ ಕಂಡರೂ ಆಂತರ್ಯದಲ್ಲಿ ಹಲವು ಗುಣಗಳ ಕೂಟವಾಗಿದೆ. ಸೌಜನ್ಯ ಮೃದುತನದ ಲಕ್ಷಣವೂ ಹೌದು, ಸೌಹಾರ್ದತೆಯ ದ್ಯೋತಕವೂ ಹೌದು. ಸಾಂಸಾರಿಕ ಜೀವನದಲ್ಲಿ, ಸಾಮಾಜಿಕ ಜೀವನದಲ್ಲಿ ನಮ್ಮ ಗುಣಗಳು ಪ್ರಕಾಶಿತವಾಗುತ್ತದೆ. ನಮ್ಮ ವೈಯಕ್ತಿಕ ಬದುಕಿನ ಪಾಲಿಗೆ ಎಲ್ಲ ಸಾಧನೆಗೂ ಸಾಧನ ಸಂಪತ್ತಾಗುತ್ತದೆ. ಸೌಜನ್ಯ ಸಂಸಾರದಲ್ಲಿ ಸಾಮರಸ್ಯವನ್ನು ತರುವಂತೆ ಸಮಾಜದ ಸಾಮರಸ್ಯಕ್ಕೂ ಕಾರಣವಾಗುತ್ತದೆ. ಸೌಜನ್ಯದಲ್ಲಿ ಸ್ನೇಹ, ಪ್ರೀತಿ ಅಂತರ್ಗತವಾಗಿರುತ್ತದೆ. ವ್ಯಕ್ತಿಗೆ ಸ್ನೇಹ ಪ್ರೀತಿಗಳೆರಡೂ

ಕಣ್ಣುಗಳಿದ್ದಂತೆ. ನಮ್ಮ ಬದುಕಿನ ಹಾದಿಯಲ್ಲಿ ನಾವು ಪೂರ್ಣದೃಷ್ಟಿಯನ್ನು ಕಾಣುವುದೇ ಈ ಸ್ನೇಹ-ಪ್ರೀತಿಗಳ ಮೂಲಕ, ಸೌಜನ್ಯದ ಮೂಲಕ, ಸೌಜನ್ಯ ಬದುಕಿನಲ್ಲಿ ಪೂರ್ಣ ಅರ್ಥವನ್ನು ತಂದುಕೊಡುವ-ತುಂಬಿಕೊಡುವ ಒಂದು ಮಹಾನ್ ಶಕ್ತಿ. ಈ ಒಂದು ಗುಣದಿಂದ ನಮ್ಮ ವ್ಯಕ್ತಿತ್ವ ಭವ್ಯವಾಗಿ ರೂಪುಗೊಳ್ಳುತ್ತದೆ. ಇದಕ್ಕೂ ಸಹ ಮಹಾಕಾವ್ಯಗಳ ಪಾತ್ರಗಳಲ್ಲಿ ಉದಾಹರಣೆಗಳನ್ನು ನಾವು ಕಂಡುಕೊಳ್ಳಬಹುದು. ಮಹಾಕಾವ್ಯದ ಪಾತ್ರಗಳೇ ನಮ್ಮ ಬದುಕಿನ ಹಾದಿಗೆ ಹಚ್ಚಿಟ್ಟ ನಂದಾದೀಪಗಳು.

ಎಲ್ಲ ಗುಣಗಳಂತೆ ಸೌಜನ್ಯ ಗುಣವೂ ಸಹ ಕೊಟ್ಟು-ಪಡೆಯಬೇಕಾದ ಒಂದು ಗುಣ. ವ್ಯಕ್ತಿ ತನ್ನ ಅಹಂ ಅನ್ನು ಬಿಟ್ಟು ತನ್ನವರೊಂದಿಗೆ ಗುಣಿಯಾಗಿ ಬದುಕಿದರೆ ಆತ ಉತ್ತಮ ವ್ಯಕ್ತಿಯಾಗುತ್ತಾನೆ, ಸಮಾಜಕ್ಕೆ ಉಪಯುಕ್ತ ವ್ಯಕ್ತಿಯಾಗುತ್ತಾನೆ. ಸೌಜನ್ಯವನ್ನು ಎಲ್ಲ ಗುಣಗಳಂತೆ ನಮ್ಮ ಜೀವಮಾನದಲ್ಲಿ, ನಮ್ಮ ಜೀವನ ಪಥದಲ್ಲಿ ಎಲ್ಲರೊಂದಿಗೆ, ಎಲ್ಲ ಕಾಲಕ್ಕೆ ಔದಾರ್ಯ ಭಾವನೆಯಲ್ಲಿ ತೋರಿಸಿಕೊಳ್ಳಬೇಕು. ಸಂಸಾರದ, ಸಮಾಜದ ತೊಡಕುಗಳನ್ನು ಬಿಡಿಸಿಕೊಳ್ಳಲು ಸೌಜನ್ಯವೊಂದೇ ಉತ್ತಮ ಮಾರ್ಗ. ಇಲ್ಲಿ ಎಲ್ಲ ಸಾಮಾಜಿಕ ಅಂತರಗಳನ್ನು ಕಳೆದುಕೊಂಡು ನಾವು ವಿಶಾಲ ಭಾವನೆಯನ್ನು ಪಡೆದುಕೊಂಡು ಒಂದಾಗಲು ಸೌಜನ್ಯ ಕಾರಣವಾಗುತ್ತದೆ. ಸಾಂಸಾರಿಕ ಜೀವನದಲ್ಲಿ ಬಿರುಕುಗಳು ಕಣ್ಮರೆಯಾಗಬೇಕಾದರೆ ಐಕ್ಯತೆ ಮೂಡಬೇಕಾದರೆ ಸೌಜನ್ಯದ ವರ್ತನೆ ನಮ್ಮಲ್ಲಿರಬೇಕು. ಇದನ್ನೇ ನಮ್ಮ ಸಾಮಾಜಿಕ ಜೀವನಕ್ಕೂ ಅನ್ವಯಿಸಿಕೊಳ್ಳಬಹುದು.

ಯುವಶಕ್ತಿಯನ್ನು ಶಿವಶಕ್ತಿಯೆಂದು ವಿವೇಕಾನಂದರು ಕೊಂಡಾಡಿ ಈ ಮೂಲಕ ಯುವಶಕ್ತಿಯನ್ನು ಜಾಗೃತಗೊಳಿಸಿದ್ದಾರೆ. ಯುವಕರಲ್ಲಿ ಕೆಚ್ಚಿನ ಜೊತೆಗೆ ಆವೇಶವೂ ಸಹ ಇರುತ್ತದೆ. ಆದರೆ ಸದಾಕಾಲ ಇರಬೇಕಾದ ಚೈತನ್ಯಗುಣ, ಸಂಯಮ ಎಂಬುದು ಕೆಲವೊಮ್ಮೆ ಮಂಕಾಗಬಹುದು. ಆಗ ಯುವಕರಲ್ಲಿ ಸೌಜನ್ಯದ ಕೊರತೆ ನಮಗೆ ಸಹಜವಾಗಿ ಕಂಡುಬರುತ್ತದೆ. ಸೌಜನ್ಯದಿಂದಾಗಿ ನಮ್ಮ ಔದಾರ್ಯಕ್ಕೆ ವಿಶೇಷವಾದ ಅರ್ಥ ಬರುವುದರ ಜೊತೆಗೆ ಧೀಶಕ್ತಿ ತುಂಬಿಬರುತ್ತದೆ. ಸೌಜನ್ಯ ಗುಣದಿಂದ ನಮ್ಮ ನೈತಿಕ ಬಲ ಸುದೃಢವಾಗುತ್ತದೆ. ಯುವಕರು ಪ್ರಾಯದಲ್ಲಿ ಇಂತಹ ಶಕ್ತಿಯನ್ನು ಗಳಿಸಿಕೊಂಡು ಸಬಲರಾದರೆ-ಸಮರ್ಥರಾದರೆ ಅವರ ಬದುಕು ಎಂದೆಂದಿಗೂ ಗಟ್ಟಿಯಾದ ಪುಟವಿಟ್ಟ ಬದುಕಾಗುತ್ತದೆ.

ಇಂದು ನಮ್ಮ ಸಮಾಜದಲ್ಲಿ ಬಿರುಕುಗಳು ಅಪಾರವಾಗಿದೆ. ಸಾಮಾಜಿಕ ಶಾಂತಿ ಕನಸಿನ ಮಾತಾಗಿದೆ. ಹಲವು ರೀತಿಯ ನೋವನ್ನು ಅನುಭವಿಸುವುದು ನಮ್ಮ ಹಣೆಯಬರಹವಾಗಿದೆ. ದುರಂತವೇನೆಂದರೆ ನಮಗೆಲ್ಲರಿಗೂ ಈ ಸತ್ಯಾಂಶದ ಅರಿವು ಇದ್ದರೂ ಸಹ ತಿದ್ದಿಕೊಳ್ಳದ ಒಂದು ರೀತಿಯ ಮೌಢ್ಯತನಕ್ಕೆ-ದುಷ್ಟತನಕ್ಕೆ-ದುರ್ವಿಧಿಗೆ

ನಾವು ಬಲಿಯಾಗಿದ್ದೇವೆ. ನಮ್ಮನ್ನು ನಾವು ಅರ್ಥ ಮಾಡಿಕೊಂಡಾಗ ನಾವು ನಮ್ಮ ಸಮಾಜವನ್ನು ಅಕ್ಷರಮಟ್ಟಿಗೆ ಅರ್ಥಮಾಡಿಕೊಳ್ಳಬಹುದು ಎಂಬುದು ಮಹಾತ್ಮರ ಸಂದೇಶವಾಗಿದೆ. ಹೊರನೋಟಕ್ಕೆ ಈ ಕ್ರಿಯೆ ಸುಲಭವಾಗಿ ಕಂಡರೂ ವಿಚಾರದ ಅಂತರಾಳಕ್ಕೆ ಇಳಿದಾಗ ಆಚರಣೆಗೆ, ಅನುಷ್ಠಾನಕ್ಕೆ ಈ ವರ್ತನೆ ಎಷ್ಟು ಕಷ್ಟಸಾಧ್ಯ ಎಂಬುದು ನಮಗೆ ಮನವರಿಕೆಯಾಗುತ್ತದೆ. ನಮ್ಮಲ್ಲಿ ಸ್ವಾರ್ಥಗುಣ ಒಂದು ಸಣ್ಣ ವರ್ತನೆಯಿಂದ ಹಿಡಿದು ನಮ್ಮ ಎಲ್ಲ ವರ್ತನೆಗಳಲ್ಲಿಯೂ ಬೃಹತ್ತಾಗಿ ಬೆಳೆದು ನಿಂತಿದೆ. ಈ ಕಾರಣದಿಂದಲೇ ನಮ್ಮ ಹಿರಿಯರು ಕೊಟ್ಟು ತಿನ್ನುವುದನ್ನು ಕಲಿ, ಬದುಕಿಸಿ ಬಾಳುವುದನ್ನು ಕಲಿ ಎಂದು ಎಚ್ಚರಿಸಿರುವುದು. ಸ್ವಾರ್ಥ ಕಡಿಮೆಯಾದಂತೆಲ್ಲ ಪರಾರ್ಥ ನಮ್ಮಲ್ಲಿ ಮೂಡುತ್ತದೆ, ಬೆಳೆಯುತ್ತದೆ. ಯುವಕರು ಈ ತತ್ವವನ್ನು ಪ್ರಾಯದಿಂದಲೇ ತಮ್ಮ ಜೀವನದ ಗುರಿಯನ್ನಾಗಿ ಪರಿಭಾವಿಸಬೇಕು. ಬೆಳೆಯುವ ಪೈರು ಮೊಳಕೆಯಲ್ಲಿ ಚೆನ್ನಾಗಿದ್ದರೆ ಮುಂದೆ ಬೆಳೆ ಹುಲುಸಾಗುತ್ತದೆ, ಫಲವಾಗುತ್ತದೆ. ಶಿವಶಕ್ತಿಗಳಾದ ಯುವಕರು ಗುಣಶ್ರೀಮಂತರಾದಾಗ ಸಮಾಜಕ್ಕೆ ನಿಜವಾಗಿಯೂ ಅಮೂಲ್ಯ ಸಂಪತ್ತಾಗಬಹುದು. ಸೌಜನ್ಯಗುಣ ನಮ್ಮಲ್ಲಿ ವ್ಯಕ್ತಿತ್ವ ವಿಕಾಸವನ್ನು ತಂದುಕೊಡುತ್ತದೆ. ಪ್ರತಿಹಂತದಲ್ಲಿಯೂ ನಮಗೆ ನಮಗಿಂತ ನಮ್ಮವರು ಮುಖ್ಯ ಎಂಬುದು ನಮ್ಮಲ್ಲಿ ದೃಢವಾಗುತ್ತದೆ. ಸಹಜೀವಿಗಳ ಸಂತೋಷವೇ ನನ್ನ ಸಂತೋಷ ಎಂಬ ಭಾವನೆ ಮೂಡಿಬರಬೇಕಾದರೆ ಇಲ್ಲಿ ಸೌಜನ್ಯವೇ ಮೂಲ ಕಾರಣವಾಯಿತು. "ಜಗವೆಲ್ಲ ನಗುತಿರಲಿ ಜಗದಳುವು ನನಗಿರಲಿ" ಎಂಬ ವಿಶಾಲ ಭಾವನೆಯನ್ನು ಕೊಂಡಾಡಿದ ಕವಿ ಸೌಜನ್ಯದ ಗುಣವನ್ನು ಸೂತ್ರರೂಪವಾಗಿ ಹಾಡಿದ್ದಾನೆ.

"ಸರ್ವೇ ಜನಾಃ ಸುಖಿನೋ ಭವಂತು" "ಸಮಸ್ತ ಸನ್ಮಂಗಳಾನಿ ಭವಂತು" ಎಂಬ ವಾಣಿಗಳು ಸೌಜನ್ಯ ಗುಣದ ಬೆಳಕಿನಲ್ಲಿ ಮೂಡಿಬಂದ ದಿವ್ಯ ಸಂದೇಶವಾಗಿದೆ. ಮಹಾತ್ಮರು 'ದರಿದ್ರ ದೇವೋಭವ' ಎಂದರು. ಅಂದರೆ ದರಿದ್ರನಲ್ಲಿ ಮಹಾತ್ಮನ ಗುಣವನ್ನು ಕಾಣಬಯಸುವಾಗ ನಮ್ಮಲ್ಲಿ ಸೌಜನ್ಯದ ಗುಣವಿರಬೇಕು. ಇದಕ್ಕೆ ನಮ್ಮ ವಿಶಾಲಬುದ್ಧಿ ವಿಶಾಲ ಮನಸ್ಸು ಕಾರಣವಾಗುತ್ತದೆ. ಸ್ವಾರ್ಥದ ಕಣ ಸಂಪೂರ್ಣವಾಗಿ ನಮ್ಮಲ್ಲಿ ನಾಶವಾಗಬೇಕಾದರೆ, ಔದಾರ್ಯದ ದಿವ್ಯ ಬೆಳಕು ನಮ್ಮಲ್ಲಿ ಮೂಡಿಬರಬೇಕಾದರೆ ಸೌಜನ್ಯ ಗುಣವಿದ್ದಾಗ ಮಾತ್ರ ಸಾಧ್ಯ.' ಮನೆ ಗೆದ್ದು ಮಂದಿಯನ್ನು ಗೆಲ್ಲು" ಎಂಬುವುದು ನಮ್ಮಲ್ಲಿ ಬಳಕೆಯಲ್ಲಿರುವ ಒಂದು ಸಾಮಾನ್ಯ ಲೋಕೋಕ್ತಿ. ಇಂತಹ ಸ್ವಭಾವ ನಮ್ಮದಾಗಬೇಕಾದರೆ ಸೌಜನ್ಯ ಗುಣವೇ ನಮಗೆ ಮೂಲ ಕಾರಣವಾಗುತ್ತದೆ.

ಸೌಜನ್ಯ ಗುಣ ಅನೇಕ ಸದ್ಗುಣಗಳಿಗೆ, ಸದ್ವರ್ತನೆಗಳಿಗೆ ಮೂಲ ಬೀಜವಾಗುತ್ತದೆ. ಮನುಷ್ಯ ದುಡುಕುವುದು ಸ್ವಾಭಾವಿಕ. ಮುಂಗೋಪಿಯಾಗುವುದು ಅಷ್ಟೇ ಸಹಜ. ಈ

ಎರಡು ದೋಷಗಳೇ ನಮ್ಮ ವ್ಯಕ್ತಿತ್ವಕ್ಕೆ ಕಂಟಕಗಳಾಗಿ ಉಳಿಯುತ್ತವೆ. ಇವುಗಳಿಂದ ನಾವು ಮುಕ್ತರಾಗಬೇಕಾದರೆ ನಾವು ಸೌಜನ್ಯಶಾಲಿಗಳಾಗಬೇಕು. ಸೌಜನ್ಯ ನಮಗೆ ಸಹನೆಯನ್ನು ತಂದುಕೊಡುತ್ತದೆ. ಸಂಯಮದ ಮೂಲಕ ಸಂತೃಪ್ತಿಯನ್ನು ತಂದುಕೊಡುತ್ತದೆ. ಹೀಗೆ ನಾವು ದುರಾಸೆಯಿಂದ ಮುಕ್ತರಾಗಿ ಸಮಾಜದ ಸೌಖ್ಯಕ್ಕೆ ಕಾರಣಶಕ್ತಿಗಳಾಗಿ ಉಳಿಯಬಹುದು, ಬೆಳೆಯಬಹುದು, ಬೆಳಗಬಹುದು.

ಕಪ್ಪೆ ಅರಭಟ್ಟನ ಉತ್ತಮ ಬದುಕಿನ ರೀತಿಯನ್ನು ಹೇಳುವಾಗ ಎಂದೆಂದಿಗೂ ನೆನಪಾಗಿ ಉಳಿಯುವ ಮಾತನ್ನು ಹೀಗೆ ಹೇಳಿದ್ದಾನೆ :

"ಸಾಧುಗೆ ಸಾಧು ಮಾಧೂರ್ಯ್ಯನ್ಗೆ ಮಾಧೂರ್ಯ್ಯಂ
ಬಾಧಿಪ್ಪ ಕಲಿಗೆ ಕಲಿಯುಗ ವಿಪರೀತ
ನ್ಮಾಧವನೀತನ್ಪೆಱನಲ್ಲ"

ಎಂದು ಹೇಳಿ ನಮ್ಮ ಮೃದುತನವನ್ನು ಕೊಂಡಾಡುವಾಗ ನಮ್ಮ ಸೌಜನ್ಯ ಗುಣವನ್ನು ಸೂಚಿಸಿರುವುದನ್ನು ನಾವು ಮರೆಯುವಂತಿಲ್ಲ. ಇದೇ ಸಂದರ್ಭದಲ್ಲಿ ನಾವು ಗುಣಶಾಲಿಗಳಾದಂತೆ, ಕೆಚ್ಚಿನ ವ್ಯಕ್ತಿಗಳಾಗಿಯೂ ಇರಬೇಕು ಎಂಬ ಎಚ್ಚರಿಕೆಯ ಸೂತ್ರವನ್ನು ಸದಾ ನೆನಪಿನಲ್ಲಿಟ್ಟುಕೊಳ್ಳಬೇಕು ಎಂಬ ಸತ್ಯಾಂಶ ಈ ಸೂಕ್ತಿಯಲ್ಲಿ ವ್ಯಕ್ತವಾಗಿದೆ.

ವ್ಯಕ್ತಿತ್ವ ವಿಕಾಸಕ್ಕೆ ಸಮಾಜದ ಸೌಖ್ಯಕ್ಕೆ ಕಾರಣವಾದ ಈ ಸೌಜನ್ಯ ಗುಣಮೌಲ್ಯವನ್ನು ನಾವು ಪ್ರಾಯದಿಂದಲೇ ರೂಢಿಸಿಕೊಂಡು ಬೆಳೆಸಿಕೊಂಡು ಬದುಕಿದರೆ ನಮ್ಮ ಬದುಕು ಭದ್ರವೂ ಆಗಬಲ್ಲದು, ಮಂಗಳಕರವೂ ಆಗಬಲ್ಲದು ಹಾಗೂ ಆದರ್ಶಪ್ರಾಯವೂ ಆಗಬಲ್ಲದು. ಯಾವುದೇ ಬದುಕಿನ ಮೌಲ್ಯಗಳನ್ನು ಕೊಂಡಾಡಿ ಮುಗಿಸುವುದರಲ್ಲಿ ನಮ್ಮ ಜೀವನ ರೀತಿ- ಕಲೆಯಾಗಿ ಮುಗಿಯಬಾರದು. ಸನ್ಮಾರ್ಗಗಳು, ಸಂದೇಶಗಳು ಕೇವಲ ಸ್ಮರಣೆಗಾಗಿ ಅಷ್ಟೇ ಅಲ್ಲ, ಅನುಸರಣೆ-ಅನುಷ್ಠಾನಕ್ಕೆ ಸೂತ್ರಗಳಾಗಿ ಶಕ್ತಿಗಳಾಗಿ ಬೆಳಕಾಗಿ ನಮ್ಮ ಬದುಕಿನಲ್ಲಿ ಫಲಕಾರಿಯಾಗಿ ಉಳಿಯಬೇಕು. ಇದೆಲ್ಲದಕ್ಕೂ ಸೌಜನ್ಯವೆಂಬ ಮೂಲಗುಣವೇ ಕಾರಣವಲ್ಲವೇ....?

ಸೌಜನ್ಯವೇ ಸನಾತನ ಸಂಸ್ಕೃತಿ

–ವಿ. ರಘು

ಸೌಜನ್ಯದ ಬಗೆಗಿನ ಅನಿಸಿಕೆಗಳನ್ನು ದಾಖಲಿಸುವ ಮೊದಲು ಸೌಜನ್ಯ ಎಂದರೇನು ಎಂಬುದು ನಿಷ್ಕರ್ಷೆಯಾಗಬೇಕಾದ ಅಂಶ. ಇದೊಂದು ಮೌಲ್ಯ ಎಂಬುದು ನಿರ್ವಿವಾದದ ವಿಚಾರ. ನಿಘಂಟುವಿನಲ್ಲಿ ಇದಕ್ಕೆ ಒಳ್ಳೆಯತನ; ವಿನಯ ಎಂಬ ಅರ್ಥ ಸೂಚಿಸಿದೆಯಾದರೂ ಈ ಪದದ ವ್ಯಾಪ್ತಿ ಇನ್ನೂ ವಿಶಾಲವಾದದ್ದು. ಇನ್ನು ಈ ಹೆಸರಿನ ವ್ಯಕ್ತಿಗಳು ಎದುರು ನಿಂತಾಗ ಇದು ನಾಮಪದ ಎಂಬುದು ಖಚಿತವಾಗುತ್ತದೆ. ಆದರೆ ಸೌಜನ್ಯ ನಾಮಪದವಾಗಷ್ಟೇ ಉಳಿಯದೆ ಕ್ರಿಯಾರೂಪದಲ್ಲಿ ವ್ಯಕ್ತಿಯ ಜೀವನದಲ್ಲಿ ಬಿಂಬಿತವಾದಾಗ ಮಾತ್ರ ಅದರ ಮೌಲ್ಯ ವರ್ಧಿಸುತ್ತದೆ. ಸರ್ಜನ, ಸಜ್ಜನ, ಸುಜನ, ಸೌಜನ್ಯ ಇವೆಲ್ಲ ಯಾವುದೋ ಒಂದು ಅಪೇಕ್ಷಿತ ಮೌಲ್ಯದ ಸೂಚಿ ಎನಿಸುವುದಿಲ್ಲವೆ ? ಖಂಡಿತ ಹೌದು. ಹಾಗಾದರೆ ಸೌಜನ್ಯದ ಆಂತರಿಕ–ಬಾಹ್ಯ ಲಕ್ಷಣಗಳೇನು ? ಅವುಗಳು ಅಂತರ್ಗತವೊ ಅಥವಾ ಆರೋಪಿತವೊ ? ವ್ಯಕ್ತಿ ಹುಟ್ಟಿನಿಂದಲೇ ಪಡೆದದ್ದೊ ಅಥವಾ ಶಿಕ್ಷಣದಿಂದ ಪಡೆಯಬಹುದಾದದ್ದೊ ? ಈ ಮೌಲ್ಯದ ವೃದ್ಧಿ ಅಗತ್ಯವೊ ಅನಗತ್ಯವೊ ? ಇದರ ಅಳವಡಿಕೆಯಿಂದ ಸಮಾಜದಲ್ಲಿ ಆಗಬಹುದಾದ ಬದಲಾವಣೆಗಳಾವುವು ? ಇತ್ಯಾದಿ ಪ್ರಶ್ನೆಗಳು ಕಾಡುತ್ತವೆ.

ವ್ಯಕ್ತಿ ತನ್ನಿರವಿನ ಪರಿಧಿಯಲ್ಲಿ ಮತ್ತೊಬ್ಬ ವ್ಯಕ್ತಿಯೊಂದಿಗೆ ಮಾತು, ಕೃತಿಗಳ ಮೂಲಕ ಸಭ್ಯ ಸಂತೋಷವನ್ನು ಕೊಟ್ಟು ಪಡೆಯುವುದೇ ಸೌಜನ್ಯವೆಂದು ನನ್ನ ಅನಿಸಿಕೆ. ವಿದ್ಯಾವಂತರು, ಸುಶಿಕ್ಷಿತರು ಸೌಜನ್ಯದಿಂದ ವರ್ತಿಸದಿರುವುದನ್ನು ಕಾಣುವಾಗ ಈ ಮೇಲಿನ ವ್ಯಾಖ್ಯೆಯ ಮಹತ್ವ ತಿಳಿಯುತ್ತದೆ. ರಸ್ತೆಯಲ್ಲಿ ತಾಳ್ಮೆಗೆಟ್ಟು ಹಾರ್ನ್ ಬಾರಿಸುವವರು, ಮಹಿಳೆಯರನ್ನು ಅಸಭ್ಯವಾಗಿ ನೋಡುವುದಷ್ಟೇ ಅಲ್ಲದೆ ಅಶ್ಲೀಲ ಸಂಭಾಷಣೆಯಲ್ಲಿ ತೊಡಗುವವರು, ಸಹೋದ್ಯೋಗಿಗಳ ಸಂಕಟದಲ್ಲಿ ಆನಂದವನ್ನು ಕಾಣುವವರು, ನೆರೆಹೊರೆಯವರ ಕಷ್ಟಗಳಿಗೆ ಸ್ಪಂದಿಸದವರು, ಬಡಿದಾಡಿ ವಚನ ಭ್ರಷ್ಟರಾಗಿ ಲಂಚಕೋರರಾಗಿ ಆಗಾಗ ಬಂದು ಮತ ಬೇಡುವವರು ಸುಜನರೆ ? ಸೌಜನ್ಯಶೀಲರೆ ? ಇನ್ನೂ ಮುಂದುವರೆದು ಪ್ರತಿದಿನ ದೇಶದ

ಶೇ. 33ರಷ್ಟು ಮಕ್ಕಳು ಹಸಿದ ಹೊಟ್ಟೆಯಲ್ಲಿ ಮಲಗುತ್ತಿರುವಾಗ ಬೇಕಾಬಿಟ್ಟಿ ತಿಂದು ಬಿಸಾಕುವ ನಾವು–ನೀವು ಸೌಜನ್ಯಶೀಲರೆ ?

ಸೌಜನ್ಯದ ಬಾಹ್ಯ ಲಕ್ಷಣ ನಡೆ–ನುಡಿ. ಅದರ ಆಂತರಿಕ ಲಕ್ಷಣ ಕರುಣೆ, ಅನುಕಂಪ; ದ್ರವಿಸುವ ಹೃದಯ. ಇತರರನ್ನು ತನ್ನಂತೆ ಭಾವಿಸದಿದ್ದರೆ ಸೌಜನ್ಯ ಮೂಡಿಬರುವುದಿಲ್ಲ. 'ಕುಳ್ಳಿರೆಂದರೆ ಕುಳಿ ಹೋಹುದೆ ?' ಎಂದರು ಬಸವಣ್ಣನವರು. 'ಸಿರಿಗರ' ಬಡಿದವರ ವರ್ತನೆಯನ್ನು ಗಮನಿಸಿ ಈ ಮಾತನ್ನು ಹೇಳಿರಬಹುದು. ಹಾಗೆಯೇ ಕುಲ ಕುಲ ಎಂದು ಬಡಿದಾಡುವವರು ಕೂಡ ಸುಜನರಲ್ಲ ಎಂದು ತಿಳಿಯಬೇಕು.

ನೋವಿಗೆ ಯಾವ ಕುಲ, ನಗೆಗೆ ಯಾವ ಜಾತಿ ? ನೋವ್ಪೊರೆಸಿ ನಗಿಸುವ ವರ್ತನೆಯೇ ಸೌಜನ್ಯ. ಪಡೆಯುವವನ ಅಭಿಮಾನಕ್ಕೆ ಧಕ್ಕೆ ಬಾರದಂತೆ ನೀಡುವ ಕಲೆಯೇ ಸೌಜನ್ಯ. ಧನವೊ ಇತರ ಸಹಾಯವ್ರೊ, ಪಡೆದವನು ಕುಗ್ಗದಂತೆ ನೋಡಿಕೊಳ್ಳುವುದು ಮುಖ್ಯ. ಕೃಷ್ಣ–ಕುಚೇಲನ ಸಂದರ್ಭದಲ್ಲಿ ಇದು ಸೊಗಸಾಗಿ ಚಿತ್ರಿತವಾಗಿದೆ. ಕೃಷ್ಣ ಎಲ್ಲರೆದುರಿಗೆ, ಆಸ್ಥಾನದಲ್ಲಿಯೇ ಕುಚೇಲನಿಗೆ ಐಸಿರಿಯನ್ನು ನೀಡಿ ಬೀಗಬಹುದಿತ್ತು. ಆದರೆ ಅಲ್ಲಿ ಅವನಿಗೆ ಅಲ್ಪೋಪಚಾರ ಮಾಡಿ ಕುಚೇಲ ಮುರುಕು ಮನೆಗೆ ಹಿಂದಿರುಗುವಷ್ಟರಲ್ಲಿ ಅದನ್ನು ಅರಮನೆಯಾಗಿಸಿದ್ದ ಕೃಷ್ಣ. ಜೊತೆಗೆ ಗೆಳೆಯ ಮಾತಾಡಿ ಹೇಳಬೇಕಾದ್ದನ್ನು, ಹೇಳಲಾರದೆ ಇದ್ದುದನ್ನು ಮೌನದ ನೆಲೆಯಲ್ಲೇ ಮನದೊಳಗೆ ಗ್ರಹಿಸಿ, ಅವನು ಕೇಳಬಹುದಾದ್ದಕ್ಕಿಂಥ ಹೆಚ್ಚಿನದನ್ನೇ ನೀಡಿದ್ದ. ಕೃಷ್ಣ ಗೋವಳ, ಗೊಲ್ಲ ; ಯದುಕುಲದ ಹಲವಾರು ನಾಯಕರಲ್ಲಿ ಅವನೂ ಒಬ್ಬ ಯಕಃಶ್ಚಿತ್ ನಾಯಕ. ರುಕ್ಮಿಣಿ ತಡೆಯದಿದ್ದರೆ ಗೆಳೆಯನ ಮನೆಯ ತೊತ್ತಾಗಲೂ ತಯಾರಿದ್ದ–ಗೆಳೆಯನ ಕಷ್ಟ ಕಂಡು ಅವನ ಮನ ಕರಗಿದ್ದು ಹೀಗೆ. ಇದೇ ಸಂದರ್ಭದಲ್ಲಿ ದ್ರುಪದ–ದ್ರೋಣನ ಪ್ರಸಂಗವನ್ನು ಗಮನಿಸೋಣ. ಗೆಳೆಯನ ಬಳಿ ಬೇಡದೇ ಬಂದ ಬ್ರಾಹ್ಮಣ ಕುಚೇಲನಿಗೂ, ವಿದ್ಯಾಗರ್ವದಿಂದ ಕೇಳಿ ಪಡೆದೇ ತೀರುವೆನೆಂಬ ಹಠದಿಂದ ಬಂದ ದ್ರೋಣನೆಂಬ ಬ್ರಾಹ್ಮಣನಿಗೂ ಅದೆಷ್ಟು ವ್ಯತ್ಯಾಸ ! ದ್ರೋಣ ವಿಶ್ವಾಸದಿಂದ ಕಾಣಲು ಬಂದನೆ ? – ಇಲ್ಲ, ಬೇಡಲು ಬಂದ. ಅವನಿಗೆ ಪಡೆಯುವುದೊಂದೇ ಗುರಿ. ಅಲ್ಲದೆ ಬರಿಗೈಯಲ್ಲಿ ಬಂದ, ಗೆಳೆಯನಿಗೆ ನೆನಪು ಮೂಡಿಸಲು ಪ್ರಯತ್ನಿಸಿದ್ದ ಗೆಳೆತನದ ಹಕ್ಕನ್ನು ಸ್ಥಾಪಿಸಲು ಪ್ರಯತ್ನಿಸಿದ್ದ. ಇಲ್ಲಿ ದ್ರುಪದ ಕ್ಷತ್ರಿಯ, ಅಹಂಕಾರಿ ಎಂಬುದೆಷ್ಟು ಸತ್ಯವೋ ; ಗೆಳೆಯರ ಗುಂಪಿನಲ್ಲಿ ದ್ರೋಣ ನೆನಪು ಉಳಿಸಿಕೊಳ್ಳುವಂಥ ವ್ಯಕ್ತಿತ್ವ ಹೊಂದಿರಲಿಲ್ಲ ಎಂಬುದೂ ಅಷ್ಟೇ ಸತ್ಯ ! ಬಾಲ್ಯದ ಗೆಳೆತನ ಬಿಗಿಯಾಗಿದ್ದರೆ ಮರೆಯಲೆಂತು ಸಾಧ್ಯ ? ಕುಚೇಲ ಸಹಾಯ ಯಾಚಿಸಲೆಂದು ಬಂದಿದ್ದರೂ ಗೆಳೆಯನಿಗೆ ತನ್ನ ಹರಕು ಉತ್ತರೀಯದ ಗಂಟಿನಲ್ಲಿ ಅವಲಕ್ಕಿ ತಂದಿದ್ದ ! ಇದು ಗೆಳೆತನ,

ಇದು ಪ್ರೀತಿ, ಇದು ಸಜ್ಜನಿಕೆ. ಕುಚೇಲನನ್ನು ದೂರದಲ್ಲಿ ಕಂಡಿದ್ದೇ ತಡ ಕೃಷ್ಣ ಪ್ರೀತಿಯಿಂದ ಬಂದು ಅಪ್ಪಿಕೊಂಡ, ತನ್ನ ಪೀಠದಲ್ಲಿ ಕುಳ್ಳಿರಿಸಿಕೊಂಡ. ನೆನೆಪಿಸಿಕೊಡುವ ಪ್ರಮೇಯವೇ ಇಲ್ಲ. ಏಕೆಂದರೆ ಕುಚೇಲ ಬಡವನಾದರೂ ಮರೆಯಲಾಗದ ಸಜ್ಜನಿಕೆಯನ್ನು ಹೊಂದಿದ್ದವ. ಅಷ್ಟೇ ಅಲ್ಲ, ಈ ಸಂದರ್ಭದಲ್ಲಿ ಗುರುಕುಲದಲ್ಲಿ ತಾವು ಒಟ್ಟಿಗೆ ಕಳೆದ ದಿನಗಳನ್ನು, ಪ್ರಸಂಗಗಳನ್ನು ಕೃಷ್ಣನೇ ಕುಚೇಲನಿಗೆ ನೆನಪು ಮಾಡಿಕೊಡುತ್ತಾನೆ. ಕುಚೇಲ ಹಿಂದಿರುಗಿ ಮನೆಯಲ್ಲಿನ ಸಿರಿ ಸಂಭ್ರಮ ಸಡಗರ ಕಂಡು ಸಮಾಧಾನದಿಂದ ಕೃಷ್ಣನ ಪ್ರೀತಿಯ ನೆನಪಿನಲ್ಲಿ ಬಾಳುತ್ತಾನೆ. ಆದರೆ ದ್ರೋಣ ಹಠ, ಕೋಪಗಳಲ್ಲಿ ಕುದ್ದು ಕುರುಕುವರರಿಗೆ ಟ್ಯೂಷನ್ ಗುರುವಾಗಿ ದ್ವೇಷ ಸಾಧಿಸಿದ. (ತಾನೇ ಗುರುಕುಲ ಸ್ಥಾಪಿಸಿ ವಿದ್ಯೆ ಕಲಿಸುವ ಬದಲು ಹಂಗಿನರಮನೆ ಸೇರಿ ಭಾರತದಲ್ಲಿ ಟ್ಯೂಷನ್ ಗುರುಪರಂಪರೆ ಆರಂಭಿಸಿದವನು ದ್ರೋಣ !) ವಿದ್ಯೆಯಿದ್ದವರೆಲ್ಲ ಸಜ್ಜನರಾಗರು, ಸೌಜನ್ಯ ಹೊಂದಿರಲಾರರು ಎಂಬುದಕ್ಕೆ ಇದೊಂದು ಉತ್ತಮ ಉದಾಹರಣೆ.

ನೆನ್ನೆ ಮೊನ್ನೆಯಷ್ಟೆ ಇದ್ದರೆನ್ನಬಹುದಾದ ಅವತಾರ ವರಿಷ್ಠ ಶ್ರೀ ರಾಮಕೃಷ್ಣರು, ಶ್ರೀಮಾತೆ ಶಾರದಾದೇವಿಯವರು ಮತ್ತು ಜಗದ್ವಿಖ್ಯಾತ ಸ್ವಾಮಿ ವಿವೇಕಾನಂದರು ಅತ್ಯುನ್ನತ ಮಟ್ಟದ ಸಜ್ಜನಿಕೆಯನ್ನು ಹೊಂದಿದ್ದರು ಎಂಬುದನ್ನು ಅವರ ಜೀವನದ ಪ್ರಸಂಗಗಳಲ್ಲಿ ಕಾಣಬಹುದು. ಸಂತತನಕ್ಕೂ ಸಜ್ಜನಿಕೆಗೂ ನೇರ ಸಂಬಂಧವಿದೆ ಎಂಬುದೂ ಇದರಿಂದ ಗೋಚರವಾಗುವುದು. ಶ್ರೀ ರಾಮಕೃಷ್ಣರು ಕೇಶವ ಚಂದ್ರಸೇನನನ್ನು ಭೇಟಿಯಾಗಲು ಹೋದಾಗ ಬಾಗಿ ನಮಸ್ಕರಿಸಿದರು, ಅವನೂ ಬಾಗಿ ನಮಸ್ಕರಿಸಿದ, ರಾಮಕೃಷ್ಣರು ಮತ್ತೆ ಅವನಿಗಿಂತಲೂ ಹೆಚ್ಚು ಬಾಗಿ ನಮಸ್ಕರಿಸಿದರು. ಕೇಶವ ಚಂದ್ರಸೇನ ಶ್ರೀ ರಾಮಕೃಷ್ಣರ ಸಜ್ಜನಿಕೆಗೆ, ವಿನಯಕ್ಕೆ ಸೋತು ಸುಮ್ಮನಾಗಬೇಕಾಯಿತು. ಶ್ರೀ ರಾಮಕೃಷ್ಣರು ಇತರರ ಬಗ್ಗೆ ಎಂದೂ ತುಚ್ಛವಾಗಿ ಮಾತಾಡಲಿಲ್ಲ, ಹೀಗಳೆಯಲಿಲ್ಲ. ಪತಿತರ ಬಗ್ಗೆಯೂ ಅಪಾರ ಅನುಕಂಪ ತೋರಿದರು. ಅವರ ಭಕ್ತವರ್ಗದ ಗಿರೀಶ ಚಂದ್ರಘೋಷ ಪ್ರಖ್ಯಾತ ನಾಟಕಕಾರ ನಟ ಮೊದಲಿಗೆ ವಿಷಯಲಂಪಟನಾಗಿದ್ದ, ಮದ್ಯವ್ಯಸನಿಯೂ ಆಗಿದ್ದ. ಈ ಮಹಾಗುರುಗಳ ಸಂಪರ್ಕಕ್ಕೆ ಬಂದ ಮೇಲೂ ಈ ಚಾಳಿಗಳು ಬಹುಕಾಲದವರೆಗೆ ಮುಂದುವರೆದಿತ್ತು. ಆದರೆ ಶ್ರೀ ರಾಮಕೃಷ್ಣರಲ್ಲಿನ ಅವನ ಭಕ್ತಿ-ಶ್ರದ್ಧೆಗಳು ಮಾತ್ರ ಅನನ್ಯವಾಗಿತ್ತು. ಶ್ರೀ ರಾಮಕೃಷ್ಣರು ಅವನನ್ನು 'ಭೈರವ' ಎಂದು ಗುರುತಿಸಿದ್ದರು. ಈ ಗಿರೀಶನನ್ನು ಕುರಿತು ಅವರು ಅಶ್ವಿನೀಕುಮಾರ ದತ್ತನ ಬಳಿ ಮಾತನಾಡುತ್ತಿರುವಾಗ ಅವನು, "ಆತ ಮದ್ಯಸೇವನೆ ಮಾಡುತ್ತಾನಂತಲ್ಲ?" ಎಂಬ ಆಕ್ಷೇಪವೆತ್ತಿದಾಗ, "ಸೇವಿಸಲಿ ! ಸೇವಿಸಲಿ ! ನೋಡೋಣ ಇನ್ನೆಷ್ಟು ದಿನ ಸೇವಿಸುತ್ತಾನೆ?...." ಎನ್ನುತ್ತಾರೆ ಶ್ರೀ ರಾಮಕೃಷ್ಣರು. ಮುಂದೆ ಅವನು ಈ ಎಲ್ಲ ದೋಷಗಳಿಂದ

ಮುಕ್ತನಾಗುತ್ತಾನೆ. ಶ್ರೀ ರಾಮಕೃಷ್ಣರು ಅತ್ಯಂತ ರೋಗಗ್ರಸ್ತರಾಗಿದ್ದಾಗ ಅವರನ್ನು ನೋಡಲು ಬಂದ ಗಿರೀಶನಿಗೆ ತಿಂಡಿ ತರಿಸಿಕೊಟ್ಟಿದ್ದಲ್ಲದೆ ತಣ್ಣನೆಯ ನೀರು ಕೊಡಲು ಪ್ರಯತ್ನಿಸುತ್ತಾರೆ. ಆತಿಥ್ಯದ, ಸಜ್ಜನಿಕೆಯ ಪರಾಕಾಷ್ಠೆ ಇದು. ಶ್ರೀ ರಾಮಕೃಷ್ಣ ವಚನ ವೇದದ ಆ ಭಾಗ ಹೀಗಿದೆ :

ಪರಮಹಂಸರು ಅತ್ಯಂತ ರೋಗಗ್ರಸ್ತರಾಗಿದ್ದಾರೆ. ಎದ್ದು ನಿಂತುಕೊಳ್ಳಲೂ ತ್ರಾಣವಿಲ್ಲ. ಆದರೆ ಭಕ್ತರ ಕಣ್ಣಿಗೆ ಬೀಳುತ್ತಿರುವ ಆಶ್ಚರ್ಯಕರವಾದ ದೃಶ್ಯ ಏನು ಎಂಬುದು ಗೊತ್ತೆ? ಪರಮಹಂಸರೇ ಹುಟ್ಟಿದ ನಿರ್ವಾಣದಲ್ಲಿ ಹಾಸಿಗೆಯಿಂದೆದ್ದು ಆ ಹೂಜಿಯ ಕಡೆ ನಡೆದುಹೋಗಿ ಅದರಿಂದ ಒಂದು ಲೋಟಕ್ಕೆ ನೀರು ಬಗ್ಗಿಸುತ್ತಾ ಇದ್ದಾರೆ ! ಇದನ್ನು ನೋಡಿ ಭಕ್ತರ ವಿಶ್ವಾಸ ಸ್ಥಿರವಾಗಿ ನಿಂತುಬಿಟ್ಟಿತು. ನೀರನ್ನು ಲೋಟಕ್ಕೆ ಬಗ್ಗಿಸಿದ ನಂತರ ಅದು ತಣ್ಣಗಿರುವುದೊ ಇಲ್ಲವೊ ಎಂಬುದನ್ನು ಅರಿಯಲೋಸುಗ ಆ ಲೋಟದಿಂದ ಕಿಂಚಿತ್ನೀರನ್ನು ತಮ್ಮ ಕೈಯ ಮೇಲೆ ಸುರಿದುಕೊಂಡು ನೋಡಿದರು. ನೋಡುತ್ತಾರೆ, ಅದು ಅಷ್ಟೇನೂ ತಣ್ಣಗಿಲ್ಲ. ಅದಕ್ಕಿಂತಲೂ ತಣ್ಣಗಿರುವ ನೀರು ಬೇರೆ ಯಾವುದೂ ಇಲ್ಲದೆ ಇರುವುದರಿಂದ, ಮನಸ್ಸಿಲ್ಲದ ಮನಸ್ಸಿನಿಂದ ಅದೇ ನೀರನ್ನು ಗಿರೀಶನಿಗೆ ಕೊಟ್ಟರು.

ಚಿಕಾಗೊ ವಿಶ್ವಧರ್ಮ ಸಮ್ಮೇಳನದ ತಯಾರಿ ನಡೆದಿತ್ತು. ಮರುದಿನವೇ ಧರ್ಮಸಮ್ಮೇಳನದ ಆರಂಭೋತ್ಸವ. ವಿದೇಶೀ ಪ್ರತಿನಿಧಿಗಳನ್ನು ಅತಿಥಿಗಳನ್ನಾಗಿ ಹೊಂದಲು ಬಯಸಿ ಕೆಲವು ಮಹನೀಯರು ಆಯೋಜನಕರಿಗೆ ಮನವಿ ಸಲ್ಲಿಸಿದರು. ಚಿಕಾಗೋದ ಪ್ರತಿಷ್ಠಿತ ಪ್ರದೇಶದ ಲಿಯಾನ್ ನಿವಾಸದ ಕರೆಗಂಟೆ ಮಧ್ಯರಾತ್ರಿಯ ವೇಳೆಗೆ ಸದ್ದು ಮಾಡಿತು. ಮನೆಯವರೆಲ್ಲ ಅದಾಗಲೇ ನಿದ್ರೆಯಲ್ಲಿದ್ದರು. ಶ್ರೀಮತಿ ಎಮಿಲಿ ಲಿಯಾನ್ ಬಾಗಿಲು ತೆರೆದಳು. ಎದುರಿಗೆ ಭಾರತದ ಪ್ರತಿನಿಧಿ ವಿವೇಕಾನಂದರು ನಿಂತಿದ್ದರು. ಅವರಿನ್ನೂ ಚಿಕಾಗೊ ಭಾಷಣ ಮಾಡಿರಲಿಲ್ಲ, ವಿಖ್ಯಾತರಾಗಿರಲಿಲ್ಲ. ಸಮ್ಮೇಳನದ ಆಯೋಜಕರು ವಿವೇಕಾನಂದರನ್ನು ಲಿಯಾನ್ ಕುಟುಂಬದ ಅತಿಥಿಯಾಗಿ ಕಳಿಸಿದ್ದರು. ಶ್ರೀಮತಿ ಲಿಯಾನ್ ಮುಗುಳ್ನಗೆಯೊಂದಿಗೆ ಅವರನ್ನು ಸ್ವಾಗತಿಸಿದಳಾದರೂ ಮನದೊಳಗೆ ಆತಂಕದ ಹೊಗೆ. ವಿಶ್ವಧರ್ಮ ಸಮ್ಮೇಳನವನ್ನು ವೀಕ್ಷಿಸಲು ಅನೇಕ ಬಂಧು–ಮಿತ್ರ ಅತಿಥಿಗಳು ಅದಾಗಲೇ ತಮ್ಮ ಮನೆಯಲ್ಲಿ ತಂಗಿದ್ದಾರೆ. ಅವರಲ್ಲನೇಕರಿಗೆ ನೀಗ್ರೊ/ಕರಿಯ ಜನಾಂಗವೆಂದರೆ ತಿರಸ್ಕಾರ. ಅಂತಹುದರಲ್ಲಿ ಗುಂಗುರು ಕೂದಲ, ಕಂದು ಚರ್ಮದ ಈ ಹೊಸ ಅತಿಥಿ ಬಂದಿದ್ದಾನೆ ! ತಮ್ಮ ಪತಿ ಏನನ್ನುತ್ತಾರೊ? ವಿವೇಕಾನಂದರಿಗೆ ಅವರ ಕೊಠಡಿ ತೋರಿಸಿ, ಶ್ರೀಮತಿ ಲಿಯಾನ್ ತಾನೂ ವಿಶ್ರಮಿಸಿದಳು. ಮುಂಜಾನೆ ಎದ್ದು ನೋಡುತ್ತಾಳೆ, ತನ್ನ ಪತಿ ಜಾನ್ ಲಿಯಾನ್ ಈ ಹೊಸ ಅತಿಥಿಯೊಂದಿಗೆ ಹರಟೆ ಹೊಡೆಯುತ್ತಾ ಕುಳಿತಿದ್ದಾನೆ, ಅಷ್ಟೇ

ಅಲ್ಲ, ಪತ್ನಿಯನ್ನು ಕರೆದು ಹೇಳುತ್ತಾನೆ, "ನೋಡು ಎಮಿಲಿ, ನಮ್ಮ ಇತರ ಅತಿಥಿಗಳೆಲ್ಲ ಇಲ್ಲಿಂದ ಕಾಲ್ಕಿತ್ತರೂ ನನಗೆ ಬೇಸರವಾಗದು, ನಾನು ದುಃಖಿಸುವುದಿಲ್ಲ ! ನಾನು ಕಂಡವರಲ್ಲೆಲ್ಲ ಅತ್ಯಂತ ಮೇಧಾವಿ, ಕುತೂಹಲಕರ ವ್ಯಕ್ತಿ–ಈ ಭಾರತೀಯ. ತನಗಿಷ್ಟ ಬಂದಷ್ಟು ದಿನ ಆತ ಇಲ್ಲಿರಬಹುದು." ಈ ಬಾಂಧವ್ಯ ಎಷ್ಟೊಂದು ಗಟ್ಟಿಯಾಯಿತೆಂದರೆ ಈ ದಂಪತಿಗಳು ವಿವೇಕಾನಂದರನ್ನು ತಮ್ಮ ಮಗನಂತೆಯೇ ಕಾಣುತ್ತಿದ್ದರು. ವಿವೇಕಾನಂದರೂ ಅಷ್ಟೆ, ಇವರನ್ನು ತಮ್ಮ ಸ್ವಂತ ತಂದೆ–ತಾಯಿಯರಂತೆ ಪ್ರೀತಿಸಿ ಗೌರವಿಸುತ್ತಿದ್ದರು. ಸ್ವಾಮಿಗಳು ಹಣದ ವಿಷಯದಲ್ಲಿ ತಮ್ಮ ಗುರು ರಾಮಕೃಷ್ಣರಷ್ಟೇ ಮುಗ್ಧರು, ನಿರ್ಲಿಪ್ತರು. ತಮ್ಮ ಭಾಷಣದಲ್ಲಿ ಸಂಗ್ರಹವಾದ ಹಣವನ್ನು ಕರವಸ್ತ್ರದಲ್ಲಿ ಕಟ್ಟಿಕೊಂಡು ತಂದು, ಅದನ್ನು ಶ್ರೀಮತಿ ಲಿಯಾನ್ ಕೈಗೆ ಸುರಿದುಬಿಡುತ್ತಿದ್ದರು. ಆಕೆ ಅದನ್ನು ಎಣಿಸಿ ಬ್ಯಾಂಕಿನಲ್ಲಿಡುತ್ತಿದ್ದರು. ಈ ವಿಖ್ಯಾತ ಶಿಶುವಿಗೆ ಹಣ ಎಣಿಸುವುದು ಹೇಗೆ, ಜೋಡಿಸುವುದು ಹೇಗೆ ಎಂಬುದನ್ನು ಆ ತಾಯಿ ಕಲಿಸಿಕೊಡಬೇಕಾಯಿತು. ಸ್ವಾಮಿ ವಿವೇಕಾನಂದರು ತಮ್ಮ ಪ್ರೀತಿ, ಸೌಜನ್ಯದ ನಡೆ ನುಡಿಗಳಿಂದ ಅಮೇರಿಕದ ಅನೇಕ ಕುಟುಂಬಗಳ ಮೇಲೆ ಪ್ರಭಾವ ಬೀರಿದರು, ಅವರೊಳಗೊಂದಾಗಿದ್ದರು.

ಸೌಜನ್ಯದ ಪಾಠ ಮಾಡಿ ಸಜ್ಜನಿಕೆಯನ್ನು ವೃದ್ಧಿಸಬಹುದೆ ಎಂಬುದು ಮುಂದಿನ ಆಲೋಚನೀಯ ಅಂಶ. ಬಾಹ್ಯ ನಡವಳಿಗಳನ್ನು, ಶಿಷ್ಟಾಚಾರಗಳನ್ನೂ ಕಲಿಸಬಹುದು. ಆದರೆ ಆಂತರ್ಯದಲ್ಲಿ ಅದನ್ನು ರೂಢಿಸುವುದು ಕಷ್ಟ. ವ್ಯಕ್ತಿಗೆ ಈ ನಿಟ್ಟಿನಲ್ಲಿ ಸಂಸ್ಕಾರವೂ ಇರಬೇಕಾದ್ದು ಅನಿವಾರ್ಯ. ಈಗಿನ ಕಾರ್ಪೊರೆಟ್ ಜಗತ್ತಿನಲ್ಲಿ ಸಾಫ್ಟ್‌ಸ್ಕಿಲ್ ಹೆಸರಿನಲ್ಲಿ ಶಿಷ್ಟಾಚಾರದ ಪಾಠವನ್ನೂ ಹೇಳಿಕೊಡುತ್ತಿದ್ದಾರೆ. ಇದು ವ್ಯಾವಹಾರಿಕ ಜಗತ್ತಿಗಷ್ಟೇ ಸೀಮಿತವಾಗಿ ದೈನಂದಿನ ಬದುಕಿಗೆ ಅನ್ವಯವಾಗದಿದ್ದರೆ ರಾವಣ ವೇದ ವಿದ್ಯೆ ಕಲಿತಂತಾಗುತ್ತದೆ. ಒಂದು ದೇಶ ಮತ್ತೊಂದು ದೇಶವನ್ನು ಅತ್ಯಂತ ಶಿಷ್ಟಾಚಾರದ ಮೂಲಕವೇ ಕಬಳಿಸಲಾರಂಭಿಸುತ್ತದೆ. ಶಿಷ್ಟಾಚಾರದ ನಾಟಕೀಯತೆಯನ್ನು ನೆನಪಿಗೆ ತರುವುದು ವಾತಾಪಿ–ಇಲ್ವಲರ ಪ್ರಸಂಗ. ಸುಂದರ ಪರ್ವತ ತಪ್ಪಲಿನಲ್ಲಿ ಈ ದುಷ್ಟದ್ವಯರ ವಾಸ. ಅತ್ತ ಬಂದ ತಾಪಸಿಗಳಿಗೆ, ಪ್ರಯಾಣಿಕರಿಗೆ ಇವರ ಅತ್ಯಂತ ಪ್ರೀತಿಯ ಸ್ವಾಗತ, ಆದರದ ಉಪಚಾರ. ಅಡುಗೆಯ ಸಮಯಕ್ಕೆ ವಾತಾಪಿ ಮೇಕೆಯಾಗುತ್ತಾನೆ, ಇಲ್ವಲ ಅವನನ್ನು ಕಡಿದಿಕ್ಕಿ ಅಟ್ಟುತ್ತಾನೆ. ಉಂಡ ಅತಿಥಿ ವಿಶ್ರಮಿಸುತ್ತಿರುವಷ್ಟರಲ್ಲಿ ಇಲ್ವಲ ಕುಹಕ ನಗೆಯೊಂದಿಗೆ ಕರೆಯುತ್ತಾನೆ, 'ವಾತಾಪಿ ಬಾ !' ವಾತಾಪಿ ಅತಿಥಿಯ ಹೊಟ್ಟೆ ಸೀಳಿಕೊಂಡು ಹೊರಬರುತ್ತಾನೆ. ಇಂದಿನ ಜಾಗತಿಕ ವಿದ್ಯಮಾನಗಳನ್ನು ವೀಕ್ಷಿಸುವಾಗ ಈ ಕರಾಮತ್ತು ಅವ್ಯಾಹತವಾಗಿ ಸಾಗುತ್ತಿರುವುದು ಸ್ಪಷ್ಟವಾಗಿ ಕಾಣಬರುತ್ತಿದೆ. ಬಡದೇಶಗಳನ್ನು, ಮುಂದುವರೆಯುತ್ತಿರುವ ದೇಶಗಳನ್ನು ತಮ್ಮ ಕಪಿಮುಷ್ಟಿಯಲ್ಲಿರಿಸಿಕೊಳ್ಳುತ್ತಿವೆ. ಮುಗುಳ್ನಗೆಯೊಂದಿಗೆ ವಸಾಹತು

ಹುನ್ನಾರಗಳನ್ನು ಬಿತ್ತಿ ಕಬಂಧ ಬಾಹುಗಳಿಂದ ಬಳಸಿ ಗಹಗಹಿಸಿ ನಗುತ್ತಾ ರಾಷ್ಟ್ರಗಳನ್ನು ನುಂಗಿಹಾಕುತ್ತಿವೆ. ಅತ್ತ ಸೊಮಾಲಿಯಾದ ಹಸುಕಂದಮ್ಮಗಳು ಆಹಾರಾಭಾವದಿಂದ ಹುಡಿಮಣ್ಣು ತಿನ್ನುತ್ತಿದ್ದರೆ ಇತ್ತ ವಿಶ್ವಮಾರುಕಟ್ಟೆಯಲ್ಲಿ ಬೆಣ್ಣೆಯ ಬೆಲೆ ಕುಸಿಯಬಾರದೆಂಬ ದುಷ್ಟ ಕಾರಣಕ್ಕಾಗಿ ಹಡಗುಗಟ್ಟಲೆ ಬೆಣ್ಣೆಯನ್ನು ಸಮುದ್ರಕ್ಕೆಸೆಯುತ್ತಿದ್ದಾರೆ.

ಪರಿಸ್ಥಿತಿ ಅತ್ಯಂತ ನಿರಾಶಾದಾಯಕ ಎಂಬುದೇನೊ ನಿಜ. ಮೌಲ್ಯಗಳಾಗಲೀ ಸಜ್ಜನಿಕೆಯಾಗಲೀ ಸವಕಲು ನಾಣ್ಯ, ಚಲಾವಣೆ ಇಲ್ಲದ ನಾಣ್ಯ ಎಂದು ಭಾವಿಸಬೇಕೆ ? ಅಥವಾ ಇವುಗಳು ವಸ್ತುಸಂಗ್ರಹಾಲಯದಲ್ಲಿರಬೇಕಾದ ಮೌಲ್ಯಗಳೆ ? ಏಕೆಂದರೆ ಸಹಜ ಶಿಷ್ಟಾಚಾರಗಳು, ಸಜ್ಜನಿಕೆಯ ಬಾಹ್ಯ ಲಕ್ಷಣಗಳು ಅವನತಿಯಲ್ಲಿವೆ. ಅತಿಥಿಗಳು ಮನೆಗೆ ಬಂದರೆ ಸಂತೋಷಿಸುತ್ತಿದ್ದ ಕಾಲ ಮರೆಯಾಗಿ ಅತಿಥಿಗಳ ಆಗಮನದಿಂದ ತಮ್ಮ ಏಕಾಂತಕ್ಕೆ ಖಾಸಗಿತನಕ್ಕೆ ಭಂಗ ಬರುತ್ತದೆ ಎಂಬ ಆತಂಕ ಕಾಡಲಾರಂಭಿಸಿದೆ. ವಾಣಿಜ್ಯೀಕರಣ ಗೊಂಡಿರುವುದು, ಕೊಳ್ಳುಬಾಕತನ ವೃದ್ಧಿಸಿರುವುದು ಆರ್ಥಿಕ ವಲಯದಲ್ಲಷ್ಟೇ ಅಲ್ಲ, ನಮ್ಮ ನಿತ್ಯದ ಬದುಕೂ ಈ ಸುಳಿಯಲ್ಲಿ ಕರಗಿಹೋಗಿದೆ. ಮದುವೆ ಇತರ ಸಮಾರಂಭಗಳಲ್ಲಿ ಅದ್ದೂರಿ ದಂದರಾಳತನ ಹೆಚ್ಚಿದೆ, ಪ್ರೀತಿ ವಿಶ್ವಾಸ ಕಡಿಮೆಯಾಗಿದೆ. ಪ್ರೀತಿ ನಟಿಸಿ ಬರಮಾಡಿಕೊಳ್ಳುವವರೂ ಕೂಡ ಬಾಡಿಗೆಗೆ ಸಿಗುತ್ತಾರೆ. ಮನೆಯಲ್ಲಿ ಮರಣವಾದಾಗ ಅಳುವವರನ್ನು ಬಾಡಿಗೆಗೆ ತರುವ ಈ ದಿನಗಳಲ್ಲಿ ಶುಭಸಮಾರಂಭಗಳಿಗೆ ನಿರ್ವಾಹಕರು ದೊರಕುವುದು ಕಷ್ಟವೆ ? ಏರ್ ಇಂಡಿಯಾದ ಮಹಾರಾಜನಿಗಿಂಥ ಹೆಚ್ಚು ಗಾಂಭೀರ್ಯದ, ಹೆಚ್ಚು ವಿನಯದ ಪ್ರದರ್ಶನ ನಡೆಯುತ್ತದೆ. ವಧು-ವರನ ತಂದೆ-ತಾಯಿಗಳೂ ಠಾಕು-ಠೀಕಾಗಿ ಹಣೆಯ ಬೆವರೂ ಹಸಿಯಾಗದಂತೆ (ಬ್ಯೂಟಿಪಾರ್ಲರ್‌ಗೆ ಭೇಟಿಯಿತ್ತ ಪರಿಣಾಮ?!) ಮದುವೆ ಮುಗಿಸಿ ಕೈತೊಳೆದುಕೊಳ್ಳುತ್ತಾರೆ.

ಪ್ರೀತಿ-ವಿಶ್ವಾಸ-ಸಜ್ಜನಿಕೆ ಇತ್ಯಾದಿ ಮೌಲ್ಯಗಳು ಜಾಗತೀಕರಣ ಹೊಂದುತ್ತಿವೆ, ಅಂತಃಸತ್ವ ಕಳೆದುಕೊಂಡು ಕೃತಕವಾಗುತ್ತಿವೆ, ಯುವಜನರಲ್ಲಂತೂ ಈ ಮೌಲ್ಯ ನಶಿಸಿಹೋಗುತ್ತಿದೆ ಎಂದು ನಿರಾಶರಾಗಬೇಕೆ ? ಅಲ್ಲಲ್ಲಿ ಮೌಲ್ಯಭರಿತ ಜೀವನ ನಡೆಸಬಲ್ಲ ಯುವಕ-ಯುವತಿಯರಿದ್ದಾರೆ ಎಂಬುದನ್ನು ಕಂಡಾಗ 'ಸತ್ಯಮೇವ ಜಯತೇ' ನೆನಪಾಗಿ ಸಮಾಧಾನ ಹೊಂದಬಹುದು. ಅಲ್ಲದೆ ಈ ಬಗೆಯ ವಿಪರೀತಗಳು ಎಲ್ಲ ಕಾಲದಲ್ಲೂ ಇರುವಂತಹದ್ದೇ. ಆದರೆ ಇದು ಮಾಹಿತಿಯುಗವಾದ್ದರಿಂದ, ಮಾಧ್ಯಮಗಳು ಸದಾ ರೋಚಕ ಸುದ್ದಿ ಬಯಸುವುದರಿಂದ ಸಮಾಜದ ಕೊಳಕುಗಳು ಬೆಳಕಿನ ವೇಗದಲ್ಲಿ ಜನರನ್ನು ತಲುಪಿಬಿಡುತ್ತಿದೆ. ಮಿಂಚಿನ ಬೆಳಕು ಮೊದಲಿಗೆ ಕಂಡರೂ ಮೇಘದ ಮಾತು ತಡವಾಗಿ ತಲುಪುತ್ತದೆ. ಸಮಾಜದ ಹೊರಪ್ರಭೆ ಕ್ಷಣ ಕೋರೈಸಿದರೂ ಅದರ ಅಂತರಂಗದ

ದನಿ ನಿಧಾನವಾಗಿ ಕೇಳಿಬರುತ್ತದೆ. ಈಗ ನಾವು ಕಾಣುತ್ತಿರುವುದು ಈ ಮಿಂಚನ್ನು. ಯುವಜನತೆಗೆ ಹಣದ ಮಿತಿಯ ಅರಿವು ಮೂಡುತ್ತಿದೆ, ಗುಣದ ಮೌಲ್ಯದ ಬಗ್ಗೆ ಗೌರವವಿದೆ. ಆದರೆ ಇದು ಪೂರ್ಣ ಪ್ರಮಾಣದಲ್ಲಿ ವ್ಯಕ್ತವಾಗಲು ಸಮಯ ಸಂದರ್ಭ ಒದಗಬೇಕು. ಕಾಲಾಂತರದಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಇದು ಖಂಡಿತ ತೋರಿಬರುತ್ತದೆ.

ಸಜ್ಜನಿಕೆ ಕೇವಲ ವಿದ್ಯಾವಂತರ ಸೊತ್ತಲ್ಲ. ಅದು ಸಹೃದಯರ ಲಕ್ಷಣ, ಸೌಜನ್ಯ ಎಂಬುದು ವ್ಯಕ್ತಿತ್ವದ ಆರ್ದ್ರ ಆಯಾಮ. ಅದಿಲ್ಲದೆ ಮನುಷ್ಯ ಪರಿಪೂರ್ಣನಾಗಲಾರ. ಹೀಗಾಗಿ ನಾವು ಮತ್ತೆ ಸನಾತನ ಋಷಿವಾಣಿಯ ಶಾಂತಿ ಮಂತ್ರವನ್ನು ನೆನೆಪಿಸಿಕೊಳ್ಳೋಣ:

ದುರ್ಜನಃ ಸಜ್ಜನೋ ಭೂಯಾತ್
ಸಜ್ಜನಃ ಶಾಂತಿಮಾಪ್ನುಯಾತ್ ।
ಶಾಂತೋ ಮುಚ್ಯೇತ ಬಂಧೇಭ್ಯೋ
ಮುಕ್ತಶ್ಚಾನ್ಯಾನ್ ವಿಮೋಚಯೇತ್ ॥

ಸೌಜನ್ಯ ಗುಣದ ಮೂರು ಪ್ರಸಂಗಗಳು

–ಎಸ್. ಬಿಳಿಗಿರಿವಾಸನ್

'ಸೌಜನ್ಯ' ಎಂಬುದಕ್ಕೆ ಆಂಗ್ಲ ಭಾಷೆಯಲ್ಲಿ 'Courtesy' ಎಂದು ಪರ್ಯಾಯ ಪದವಿದೆ. ಆದರೆ ಈ ಪದದ ಲಕ್ಷಣವನ್ನು ನಿರೂಪಿಸಲಾಗದು. ಅದು ಆಯಾ ವ್ಯಕ್ತಿಯ ಜೀವನದಲ್ಲಿ ಸಂಭವಿಸಿರುವ ಹಾಗೂ ಸಂಭವಿಸುವ ಘಟನಾವಳಿಗಳನ್ನು ಆಧರಿಸಿ ಅರ್ಥೈಸಿಕೊಳ್ಳಬೇಕಾಗಿದೆ. ಒಬ್ಬರಿಗೆ ಸೌಜನ್ಯ ಎನಿಸಿದುದು ಮತ್ತೊಬ್ಬರಿಗೆ ಹಾಗನಿಸದಿರಬಹುದು. 'ಲೋಕೋ ಭಿನ್ನ ರುಚಿಃ' ಅಲ್ಲವೆ ? ದೈನಂದಿನ ಜೀವನದಲ್ಲಿ ಹಿತೈಷಿಗಳೊಬ್ಬರ ಮನೆಯಲ್ಲಿ ಸರಿಯಾದ ಸತ್ಕಾರ ಲಭಿಸದಿದ್ದಾಗ ಬೇಸರಿಸಿಕೊಳ್ಳುವವರಿದ್ದಾರೆ.

ಕೆಲವರಿಗೆ ಕೇಳಿದ್ದಕ್ಕೆ ಉತ್ತರಿಸುವುದಾಗಲೀ, ದೊಡ್ಡವರೆಂಬ ಗೌರವಭಾವದಿಂದ ನಮಸ್ಕರಿಸಿದವರಿಗೆ ಪ್ರತಿನಮಸ್ಕಾರವನ್ನಾಗಲೀ ಅಥವಾ ಅಂತಹ ಸಂಕೇತವನ್ನಾಗಲೀ ನೀಡದೆ ದಿವ್ಯ ನಿರ್ಲಕ್ಷ್ಯದಿಂದ ಹೋಗುವುದು ಸೌಜನ್ಯವಿಲ್ಲದ ದೊಡ್ಡವರ ಸಣ್ಣತನಕ್ಕೆ ಸಾಕ್ಷಿಯಾಗಿದೆ. ಹೀಗೆ ಜೀವನವಾಹಿನಿಯಲ್ಲಿ ಸಂಭವಿಸುವ ಸಂಭವಗಳನ್ನು ಆಧರಿಸಿ ಅನುಭವವನ್ನು ಹೊಂದುವುದರ ಮೂಲಕ ಅರ್ಥೈಸಿಕೊಳ್ಳಬೇಕಾಗುತ್ತದೆ.

ನಮಗೆಲ್ಲರಿಗೂ ತಿಳಿದಿರುವಂತೆ ಶ್ರೀ ರಾಮನು ಪಿತೃವಾಕ್ಯ ಪರಿಪಾಲನೆಗಾಗಿ ಹದಿನಾಲ್ಕು ವರ್ಷಗಳ ವನವಾಸವನ್ನು ಅನುಭವಿಸುತ್ತಿದ್ದಾಗ, ಸೀತಾಪಹರಣವಾಗಿ, ಸೀತಾನ್ವೇಷಣವಾಗಿ, ರಾಮ ರಾವಣರಿಗೆ ಯುದ್ಧ ಸಂಭವಿಸಲು, ಶ್ರೀ ರಾಮನು, ಮಹಾಬ್ರಾಹ್ಮನೂ, ಪೌಲಸ್ತ್ಯ ಗೋತ್ರದವನೂ ವೇದಾಧ್ಯಯನ ಸಂಪನ್ನನೂ, ಕೃಷ್ಣ ಯಜುರ್ವೇದದ ಭಾಷ್ಯಕಾರನೂ (ಈ ಭಾಷ್ಯವು ದೊರೆತಿಲ್ಲ), ಜ್ಯೋತಿಷ್ಯಶಾಸ್ತ್ರ ಪ್ರವೀಣನೂ, ಮಹಾರೂಪ ಸಂಪನ್ನನೂ ಆದ ರಾವಣನನ್ನು ಯುದ್ಧಾರಂಭಕ್ಕೆ ಹಾಗೂ ತನ್ನ ಯಶಸ್ಸಿಗೆ ಅನುಕೂಲವಾಗುವಂತಹ ಸುಮುಹೂರ್ತವನ್ನು ನಿಶ್ಚಯಿಸಿಕೊಡಲು ಕೇಳಿದಾಗ, ಜ್ಯೋತಿಷ್ಯವಿಶಾರದನಾದ ರಾವಣನು ತನಗೆ ಯುದ್ಧದಲ್ಲಿ ಪರಾಭವ ಉಂಟಾಗುವುದನ್ನು ಅರಿತೂ ಸಹಾ, ತನ್ನ ಶತ್ರುವಾದ ರಾಮನಿಗೆ ಅವನ ಕೋರಿಕೆಯನ್ನು ನಿರಾಕರಿಸದೆ, ಶ್ರೀರಾಮನಿಗೆ ಜಯ ಲಭಿಸುವಂತಹ ಸುಮುಹೂರ್ತವನ್ನು ನಿಶ್ಚಯಿಸಿ ಕೊಡುವುದರೊಂದಿಗೆ,

ಈ ಶುಭಮುಹೂರ್ತದಲ್ಲಿ ಯುದ್ಧವನ್ನು ಆರಂಭಿಸಿದರೆ ಜಯವು ಶತಃಸಿದ್ಧವೆಂಬ ಆಶ್ವಾಸನೆಯನ್ನೂ ನೀಡುತ್ತಾನೆ ಎಂಬ ದಂತಕಥೆಯಿದೆ. ಕಥೆಯ ಸತ್ಯಾಸತ್ಯತೆ ಏನೇ ಇರಲಿ, ಕಥೆಯಲ್ಲಿ ವ್ಯಕ್ತವಾಗುವ ಸೌಜನ್ಯಗುಣ ಆದರ್ಶಪ್ರಾಯವಾದುದು. ಈ ಪ್ರಸಂಗದಲ್ಲಿ ರಾವಣನಂತಹ ಖಳನಲ್ಲಿಯೂ ತನ್ನ ಸಹಾಯಾರ್ಥಿಯಾಗಿ ಬಂದ ಶತ್ರುವಿಗೂ ಶುಭವನ್ನು ಬಯಸುವ ಹಾಗೂ ತಾನು ಕಲಿತಿರುವ ವಿದ್ಯೆಗೆ ಪ್ರಾಮಾಣಿಕವಾಗಿರುವ ಸೌಜನ್ಯವನ್ನು ಕಾಣಬಹುದು. ಇಲ್ಲಿ ಶ್ರೀ ರಾಮನು ರಾವಣನ ಖಳತ್ವಕ್ಕೆ ಬೆಲೆಗೊಡದೆ, ಅವನ ಪಾಂಡಿತ್ಯಕ್ಕೆ ಮನ್ನಣೆಯಿತ್ತು, ಅವನಲ್ಲಿರುವ ಸೌಜನ್ಯವು ಅಭಿವ್ಯಕ್ತವಾಗುವಂತೆ ಮಾಡಿದ್ದಾನೆ. ಶತ್ರುವಿನಲ್ಲಿರುವ ಗುಣವನ್ನು ಕಂಡು ಅದನ್ನು ಗೌರವಿಸುವಂತಹ ಉದಾತ್ತವಾದ ಸೌಜನ್ಯ ರಾಮ–ರಾವಣರಿಬ್ಬರಲ್ಲಿ ಕಾಣುತ್ತೇವೆ.

ರಾಮ ರಾವಣರ ಮೊದಲನೆಯ ದಿನದ ನೇರ ಯುದ್ಧದಲ್ಲಿ ರಾವಣನು ಸೋತು, ಸಾರಥಿ, ಕುದುರೆಗಳು ಸತ್ತು, ರಥವು ಪುಡಿ ಪುಡಿಯಾಗಿ, ಶಸ್ತ್ರಗಳೆಲ್ಲ ನಾಶವಾಗಿ, ಕಿರೀಟವೂ ನಾಶವಾಯಿತು. ರಾಮ ಬಾಣಾಘಾತಕ್ಕೆ ಜರ್ಜರಿತನಾಗಿ, ಕೈಯಲ್ಲಿದ್ದ ಶಸ್ತ್ರಗಳೂ ಜಾರಿಹೋಯಿತು. ಇದನ್ನು ಕಂಡ ರಾಮನು "ಅಯ್ಯಾ ! ಇಂದು ಭಯಂಕರವಾದ ಯುದ್ಧ ಮಾಡಿ ದಣಿದಿರುವೆ. ಊರಿಗೆ ಹಿಂದಿರುಗಿ, ಎಲ್ಲರಿಗೂ ಸಮಾಧಾನ ಹೇಳಿ ನಾಳೆ ಮತ್ತೆ ಶಸ್ತ್ರಸಜ್ಜಿತನಾಗಿ ಬಾ, ನನ್ನ ಪರಾಕ್ರಮವನ್ನು ತೋರಿಸುತ್ತೇನೆ" ಎಂದು ಹೇಳಿದುದನ್ನು ಕಂಡಾಗ ರಾಮನಲ್ಲಿರುವ ಕಾರುಣ್ಯಪೂರ್ಣವಾದ ಸೌಜನ್ಯವು ವ್ಯಕ್ತವಾಗುತ್ತದೆ. ಹೀಗೆ ಹಿಂದಿರುಗಿಸಲು ಕಾರಣ ರಾವಣನಿಗೆ ತನ್ನ ತಪ್ಪಿನ ಅರಿವಾಗಿ ಶರಣಾಗುವನೇನೋ ಎಂಬ ಭಾವದಿಂದ ಅವಕಾಶವೊಂದನ್ನು ರಾಮನು ನೀಡಿದನೆಂದು ಶ್ರೀ ರಾಮಾಯಣ ಭಾಷ್ಯಕರರಾದ ಕೂರೇಶರು ಹೇಳುತ್ತಾರೆ. ರಾವಣನು ತನ್ನ ತಪ್ಪನ್ನು ತಿದ್ದಿಕೊಳ್ಳದೇ ಯುದ್ಧದಲ್ಲಿ ರಾಮನಿಂದ ಹತನಾಗಲು, ವಿಭೀಷಣನು ಧರ್ಮಬಾಹಿರನೂ, ವ್ರತ, ಸದಾಚಾರಗಳನ್ನು ತೊರೆದವನಿಗೆ ಅಂತ್ಯಸಂಸ್ಕಾರವನ್ನು ನೆರವೇರಿಸಲು ನಿರಾಕರಿಸಿದಾಗ, ಶ್ರೀ ರಾಮನು ಇವನು ಕಾಮಿ, ದುರಾಚಾರಿಯಾದರೂ, ತೇಜಸ್ವಿ, ಬಲವಾನ್, ಶೂರನೂ ಇಂದ್ರಾದಿಗಳಿಗೂ ಅಜೇಯನೂ, ಹಿರಿಯನೂ ಆಗಿರುವ ರಾವಣನಿಗೆ ಅಂತ್ಯಕ್ರಿಯೆಗಳನ್ನು ನೆರವೇರಿಸುವುದು ನ್ಯಾಯವಾದುದು ಎಂದಿದ್ದಾನೆ.

ಕುಂತಿಯು ಪಾಂಡುವನ್ನು ವಿವಾಹವಾದ ನಂತರ, ಬೇಟೆಗೆಂದು ಪಾಂಡುವು ಅರಣ್ಯಕ್ಕೆ ಹೋಗಿ ಹಲವಾರು ಕಾಡುಪ್ರಾಣಿಗಳನ್ನು ಬೇಟೆಯಾಡಿದನು. ಆಗ ಮುನಿಯೊಬ್ಬನು ಮಿಥುನ ಜಿಂಕೆಯ ವೇಷದಲ್ಲಿ ಪತ್ನಿಯೊಡನಿದ್ದಾಗ ಪಾಂಡುವು ವೇಷಧಾರಿಯಾದ ಮುನಿಗೆ ಮೃಗವೆಂದು ಭಾವಿಸಿ ಬಾಣಪ್ರಯೋಗಿಸಿದನು. ಆಗ ಮುನಿಯು 'ತನ್ನಯ ಲಲನೆಯೊಡನಿರೆ

ಕೊಂದೆ ನಿನ್ನಯ ಲಲನೆಯನು ನೀ ಕೂಡಿದಾಗಲೆ ಮರಣ ನಿನಗಹುದು' ಎಂದು ಶಪಿಸಿ ಮರಣ ಹೊಂದಿದನು. ಮುನಿಹತ್ಯೆಯ ಪಾತಕವನ್ನು ನೀಗಲು ತಪವನಾಚರಿಸಲು ಪತ್ನಿಯರೊಂದಿಗೆ ಅರಣ್ಯದಲ್ಲಿ ಪರಮ ವೈರಾಗ್ಯದಿಂದ, ನಿರುಪಮ ಭಾವಶುದ್ಧಿಯಿಂದ ಧ್ಯಾನಾಸಕ್ತನಾದಾಗ, ಕುಂತಿ, ಮಾದ್ರಿಯರು ವಂಶಕ್ಷಯವಾಗುವುದನ್ನು ಚಿಂತಿಸಿ, ಪಾಂಡುವಿಗೆ ಕುಂತಿಯು ನಯವಾಗಿ, ರಹಸ್ಯವಾಗಿ ತನಗೆ ದೂರ್ವಾಸರಿಂದ ಲಭಿಸಿದ ಮಂತ್ರೋಪದೇಶದ ವಿಚಾರವನ್ನು ತಿಳಿಸಿ, ಅವನ ಅನುಗ್ರಹಪೂರಿತವಾದ ಅನುಮತಿಯು ದೊರೆತಲ್ಲಿ ಮಂತ್ರಶಕ್ತಿಯಿಂದ ಪುತ್ರರನ್ನು ಪಡೆಯುವುದಾಗಿ ತಿಳಿಸುತ್ತಾಳೆ. ಪಾಂಡುವು ಸಂತೋಷದಿಂದ ಸಮ್ಮತಿಸಿದಾಗ ಯಮಧರ್ಮನಿಂದ ಧರ್ಮರಾಯನನ್ನೂ, ವಾಯುವಿನಿಂದ ಭೀಮನನ್ನೂ, ಇಂದ್ರನಿಂದ ಅರ್ಜುನನ್ನೂ ಪಡೆದುಕೊಂಡಳು. 'ಸಾಕು ಮೂವರು ಸುತರು ತನಗೆಂದೀಕೆ ಮಾದ್ರಿದೇವಿಗಗ್ಗದಶೋಕಿತೆಗೆ ಮಂತ್ರೋಪದೇಶ ವಿಧಾನವನು ಕಲಿಸಿ' ದೇವತೆಗಳನ್ನು ಒಲಿಸಿಕೊಂಡು ಸಂತಾನವನ್ನು ಪಡೆದುಕೊಳ್ಳಲು ಸೂಚಿಸಿದಾಗ ಮಾದ್ರಿಯ ಅಶ್ವಿನೀ ದೇವತೆಗಳನ್ನು ಆಹ್ವಾನಿಸಿ ನಕುಲ ಸಹದೇವರೆಂಬ ಮಕ್ಕಳನ್ನು ಪಡೆದಳು.

ಈ ಪ್ರಸಂಗದಲ್ಲಿ ಕುಂತಿಯು, ಹೆಣ್ಣಿನ ಮನಸ್ಸು ಹೆಣ್ಣಿಗೆ ಮಾತ್ರ ತಿಳಿಯುತ್ತದೆ ಎಂಬಂತೆ, ತನ್ನ ಹೆಣ್ತನವನ್ನು ತಾಯ್ತನದಲ್ಲಿ ಸಾರ್ಥಕಗೊಳಿಸಲು ಪ್ರತಿಯೊಬ್ಬ ಸ್ತ್ರೀಯೂ ಸಹಾ ಬಯಸುತ್ತಿರುತ್ತಾಳೆ. ಅಂತಹ ಹೆಣ್ಣಿನ ಮನಸ್ಸಿನ ಒಳತೋಟಿಯನ್ನು ಅರಿತವಳಾದ ಕುಂತಿಯು ತಾನು ಪಡೆದ ತಾಯ್ತನವನ್ನು ಮಾದ್ರಿಯೂ ಪಡೆಯಲೆಂಬ ಆಶಯದಿಂದ ಮಾದ್ರಿಗೆ ಮಂತ್ರೋಪದೇಶ ಮಾಡಿ, ತಾಯಿಯಾಗಿ ತಾಯ್ತನದ ಸುಖವನ್ನು ಪಡೆಯಲು ಸಹಕರಿಸಿದ ಕುಂತಿಯ ಸೌಜನ್ಯ ಸ್ತುತ್ಯಾರ್ಹವಾದುದು.

ಯಮಧರ್ಮರಾಯನ ಅಂಶದಿಂದ ಕುಂತಿಯಲ್ಲಿ ಜನಿಸಿದ ಧರ್ಮರಾಯನು ಧರ್ಮದ ಸಾಕಾರ ಸ್ವರೂಪ. "ಧರ್ಮೋ ವಿವರ್ಧತಿ ಯುಧಿಷ್ಠಿರ ಕೀರ್ತನೇನ" ಎಂದರೆ ಯುಧಿಷ್ಠಿರನನ್ನು ನೆನೆದ ಕಡೆ ಧರ್ಮಬುದ್ಧಿ ಬೆಳೆಯುವುದೆಂದು ಹಿರಿಯರ ಅಭಿಪ್ರಾಯ. ಅನೃತವನ್ನಾಡದ, ಕಪಟಲೇಶವರಿಯದ, ಆಚರಿಸದ, ಸಕಲ ನೀತಿಶಾಸ್ತ್ರಜ್ಞಾನೂ, ಧರ್ಮ, ರಾಜನೀತಿಯಲ್ಲಿ ನಿಷ್ಣಾತನಾಗಿದ್ದ ಇವನ ಹಿರಿತನಕ್ಕೆ ಶ್ರೀ ಕೃಷ್ಣನೂ ತಲೆದೂಗಿದನೆಂದರೆ ಧರ್ಮರಾಯನ ವ್ಯಕ್ತಿತ್ವದ ಅರಿವಾಗದಿರದು. ಇಂತಹ ಧರ್ಮರಾಯನು ಕಪಟದ್ಯೂತದಲ್ಲಿ ತನ್ನದೆಲ್ಲವನ್ನೂ ತನ್ನವರನೆಲ್ಲರನ್ನೂ ಸೋತು ಹನ್ನೆರಡು ವರ್ಷ ವನವಾಸ, ಒಂದು ವರ್ಷ ಅಜ್ಞಾತವಾಸವನ್ನು ಅನುಭವಿಸಬೇಕಾಗಿ ಬಂದಿತು. ವನವಾಸದ ಹನ್ನೊಂದೂವರೆ ವರ್ಷಗಳು ಕಳೆದ ಸಂದರ್ಭದಲ್ಲಿ ಪಾಂಡವರಿಗೆ ಆಪತ್ತು ಬಂದೊದಗಿತು. ಒಮ್ಮೆ ಸಾರಂಗವೊಂದು ಮುನಿಗಳ ಯಾಗಕ್ಕೆ ಅವಶ್ಯಕವಾದ ಅರಣಿ (ಬೆಂಕಿಯ ಕೊರಡು) ಯನ್ನು ಎತ್ತಿಕೊಂಡು ಹೋಯಿತು. ಅದನ್ನು

ಮುನಿಗಳು ಧರ್ಮರಾಯನಿಗೆ ತಿಳಿಸಿ ಅದನ್ನು ತಂದುಕೊಡುವಂತೆ ಹೇಳಿದಾಗ, ಧರ್ಮರಾಯನು ತನ್ನ ಸಹೋದರರೊಂದಿಗೆ ಬೆನ್ನಟ್ಟಿ ಹೋಗಿ ಅರಣಿಯನ್ನು ಒಯ್ದಿದ್ದ ಮೃಗವನ್ನು ಹಿಡಿದು ಅರಣಿಯನ್ನು ಪಡೆದುಕೊಂಡರು. ಆ ಸಮಯಕ್ಕೆ ಧಗೆ ಹೆಚ್ಚಾಗಿ ನಾಲಗೆ ಒಣಗಿ, ಆಯಾಸವಾಗಲು ಬಳ್ಳಿ ಇರುಬಿನಲ್ಲಿ ಮಲಗಿದರು. ಆಗ ಧರ್ಮರಾಯನು ದಾಹವನ್ನು ತಣಿಸಿಕೊಳ್ಳಲು ನೀರನ್ನು ತರಲು ನಕುಲನಿಗೆ ಹೇಳಲು, ಅವನು ಅರಣ್ಯದಲ್ಲಿ ಬಹುದೂರ ನಡೆದು ಅಲ್ಲೊಂದು ಕೊಳವನ್ನು ಕಂಡು ಸಂತಸದಿಂದ ಚರಣವದನವನ್ನು ತೊಳೆದು ತಾನು ದಾಹ ಪರಿಹರಿಸಿಕೊಂಡು ಅನಂತರ ಎಲ್ಲರಿಗೂ ನೀರನ್ನು ಒಯ್ಯುವೆನೆಂದುಕೊಂಡು ಬೊಗಸೆಯಲ್ಲಿ ನೀರನ್ನು ತೆಗೆದುಕೊಂಡು ಇನ್ನೇನು ಕುಡಿಯಬೇಕೆನ್ನುವಷ್ಟರಲಿ ಮೋಡದ ಮರೆಯಿಂದ ಯಕ್ಷನು ನಕುಲನನ್ನು ತಡೆದು, ತನ್ನ ಪ್ರಶ್ನೆಗೆ ಉತ್ತರಿಸಿ ಬಳಿಕ ನೀರನ್ನು ಕುಡಿಯಬೇಕೆಂದು ಹೇಳಿದಾಗ, ಆ ಮಾತನ್ನು ಲೆಕ್ಕಿಸದೆ ನಕುಲನು ನೀರನ್ನು ಕುಡಿದು ಮೈಮರೆತು ಬಿದ್ದನು. ನಕುಲನು ಎಷ್ಟು ಹೊತ್ತಾದರೂ ಬರದಿರಲು ಧರ್ಮರಾಯನು ಸಹದೇವನನ್ನು ಕಳುಹಿಸಿದನು, ಅನಂತರ ಅರ್ಜುನ,ಭೀಮ ಒಬ್ಬರಾದ ಮೇಲೊಬ್ಬರು ಕೊಳದ ನೀರನ್ನು ಕುಡಿದು ಮೈಮರೆತು ಬಿದ್ದರು. ಕೊನೆಗೆ ಧರ್ಮರಾಯನು ಹೋಗಿ ನೋಡಲು ತನ್ನ ತಮ್ಮಂದಿರೆಲ್ಲರೂ ಮೈಮರೆತು ಬಿದ್ದಿರುವುದನ್ನು ಕಂಡು, ಮೊದಲು ನೀರು ಕುಡಿದು ಅನಂತರ ಇದನ್ನು ಪರಿಶೀಲಿಸುವೆನು ಎನ್ನುತ್ತ ಕೊಳದಲ್ಲಿ ನೀರು ಕುಡಿಯಲು ತೊಡಗಿದಾಗ, ಮೊದಲಿನಂತೆಯೇ ಯಕ್ಷನು ತಡೆದು ನನ್ನ ಪ್ರಶ್ನೆಗಳಿಗೆ ಉತ್ತರಿಸಿದ ಬಳಿಕ ನೀರನ್ನು ಕುಡಿ, ನಿನ್ನ ತಮ್ಮಂದಿರು ನನ್ನ ಮಾತನ್ನು ಕೇಳದೆ ನೀರು ಕುಡಿದು ಸತ್ತರೆಂದು ಹೇಳಿದಾಗ, ಧರ್ಮರಾಯನು ಯಕ್ಷನ ಪ್ರಶ್ನೆಗಳಿಗೆ ಉತ್ತರಿಸಲು ಅನುವಾಗುತ್ತಾನೆ :

ಧರ್ಮರಾಯನು ಯಕ್ಷನಿಗೆ ನೀಡಿದ ಉತ್ತರಗಳನ್ನು ಸಂಗ್ರಹಿಸಿ ಹೇಳಬಹುದು. "ಭೂಮೇರ್ಗುರುತರಂ ಮಾತಾ (ಭೂಮಿಗಿಂತ ಹೆಚ್ಚು ಪೂಜ್ಯಳು ತಾಯಿ), ಶೃತೇನ ಶ್ರೋತ್ರಿಯೋ ಭವತಿ (ಬ್ರಾಹ್ಮಣನಾಗುವುದು ವೇದಾಧ್ಯಯನದಿಂದ), ಮರಣಂ ಮಾನುಷೋ ಭಾವಃ (ಮನುಷ್ಯನೆಂಬ ಮಿತಿ ಇರುವುದು ಮರಣದದೆಸೆಯಿಂದ), ಹೊರದೇಶ ಸಂಚಾರಿಗೆ ಹಣವೇ ಮಿತ್ರ. ಗೃಹಸ್ಥನಿಗೆ ಮಡದಿಯೇ ಮಿತ್ರಳು, ರೋಗಿಗೆ ವೈದ್ಯನೂ, ಸಾಯುತ್ತಿರುವವನಿಗೆ ದಾನವೂ ಮಿತ್ರರು, ಒಬ್ಬನೇ ಸಂಚರಿಸುವವನು ಸೂರ್ಯ, ಹುಟ್ಟಿದವನೇ ಹುಟ್ಟುವವನು ಚಂದ್ರ (ಕ್ಷಯ ವೃದ್ಧಿಗಳಲ್ಲಿ), ಅಗ್ನಿಯು ಶೀತಕ್ಕೆ ಮದ್ದು, ಕಾರುಣ್ಯವೇ ಪರಮಧರ್ಮ, ದುರಭಿಮಾನ ಬಿಟ್ಟರೆ ಎಲ್ಲರಿಗೂ ಪ್ರಿಯವಾಗಬಹುದು; ಕ್ರೋಧ ಬಿಟ್ಟವನಿಗೆ ದುಃಖವಿಲ್ಲ; ಆಸೆ ಬಿಟ್ಟವನಿಗೆ ಧನಪ್ರಾಪ್ತಿ, ಲೋಭ ಬಿಟ್ಟರೆ ಸುಖವುಂಟು." "ಧರ್ಮ, ಅರ್ಥ ಕಾಮಗಳು

ಪರಸ್ಪರ ನಿತ್ಯ ವಿರೋಧಿಗಳು, ಇವು ಒಂದಾಗುವುದು ಹೇಗೆಂಬ ಯಕ್ಷನ ಪ್ರಶ್ನೆಗೆ ಧರ್ಮರಾಯನ ಉತ್ತರ ಆಶ್ಚರ್ಯವಾದುದು ; ಒಬ್ಬನ ಧರ್ಮಪ್ರವೃತ್ತಿಯೂ, ಹೆಂಡತಿಯೂ ಪರಸ್ಪರವಾಗಿ ಅವನು ಹೇಳಿದಂತೆ ಕೇಳುವುದಾದರೆ ಆಗ ಮಾತ್ರ ಈ ಪುರುಷಾರ್ಥಗಳ ಸಂಗಮ" ಎನ್ನುತ್ತಾನೆ.-ಈ ಉತ್ತರಗಳಿಂದ ಸಂತೃಪ್ತನಾದ ಯಕ್ಷನು ನಿನ್ನ ತಮ್ಮಂದಿರಲ್ಲಿ ಯಾರನ್ನು ಬದುಕಿಸಲಿ ಎಂದಾಗ, ಧರ್ಮಜನು ನಕುಲನನ್ನು ಬದುಕಿಸುವಂತೆ ಹೇಳುತ್ತಾನೆ. ಆಗ ಯಕ್ಷನು ನಿನ್ನ ಅತ್ಯಂತ ಪ್ರಿಯರಾದ ತಮ್ಮಂದಿರನ್ನು ಬಿಟ್ಟು ನಕುಲನನ್ನೇ ಏಕೆ ಕೇಳಿದೆ ಎಂದಾಗ, ಧರ್ಮಜನು ಕುಂತಿಯ ಮಗನಾಗಿ ನಾನೊಬ್ಬನಿರುವಾಗ ಮಾದ್ರಿಯ ಮಗನಾಗಿ ನಕುಲನು ಬದುಕುವುದು ನ್ಯಾಯವಲ್ಲವೇ ಎನ್ನುತ್ತಾನೆ. ಅದರಿಂದ ಸಂತುಷ್ಟನಾದ ಯಕ್ಷರೂಪದ ಯಮಧರ್ಮನು, ನಿನ್ನ ತಮ್ಮಂದಿರೆಲ್ಲರನ್ನೂ ಬದುಕಿಸುವೆನೆಂದು ಎಲ್ಲರಿಗೂ ಜೀವದಾನ ಮಾಡಿ ಪಾಂಡವರಿಗೆ ಶುಭ ಕೋರಿ, ಆಶೀರ್ವದಿಸಿ ಬೀಳ್ಕೊಡುತ್ತಾನೆ. ಈ ಪ್ರಸಂಗದಲ್ಲಿ ಧರ್ಮಜನ ಧಾರ್ಮಿಕ ಸೌಜನ್ಯ ವ್ಯಕ್ತವಾಗಿದ್ದು, ಎಂಥ ಕ್ಲಿಷ್ಟ ಪರಿಸ್ಥಿತಿಯಲ್ಲಿಯೂ ಪ್ರಶ್ನಿಸಿದವರಿಗೆ ಉತ್ತರಿಸುವ ಸೌಜನ್ಯವನ್ನು ಮೆರೆಯುತ್ತಾನೆ.

ಹೀಗೆ ನಮ್ಮ ಮಹಾಕಾವ್ಯಗಳಲ್ಲಿ ಕಂಡುಬರುವ ಪ್ರಸಂಗಗಳನ್ನು ಅರ್ಥೈಸಿಕೊಂಡು, ಅರ್ಥಪೂರ್ಣವಾದ, ಅನುಕರಣೀಯವಾದ, ಆದರ್ಶಮಯವಾದ ಜೀವನವನ್ನು ರೂಪಿಸಿಕೊಳ್ಳುವುದರ ಮೂಲಕ, ಉನ್ನತವಾದ ಧ್ಯೇಯ, ಆದರ್ಶಗಳನ್ನು ಅಳವಡಿಸಿಕೊಂಡು ನಾವೆಲ್ಲಾ ಒಂದಾಗಿ ಸಾಗೋಣ, ಒಂದಾಗಿ ಬಾಳೋಣ, ಜೀವನವನ್ನು ಸಾರ್ಥಕಪಡಿಸಿ ಕೊಳ್ಳೋಣ.

○

ದೇಶ-ವಿದೇಶಗಳಲ್ಲಿ 'ಸೌಜನ್ಯ'

-ಡಾ. ಕೆ. ನರ್ಮದಾಂಬ

ನಿಘಂಟನ್ನು ತೆರೆದು ನೋಡಿದಾಗ ಸೌಜನ್ಯ ಎಂಬ ಪದಕ್ಕೆ ಒಳ್ಳೆಯತನ, ವಿನಯ, ಸಜ್ಜನಿಕೆ, ಉದಾರತ್ವ ಮತ್ತು ಔದಾರ್ಯ ಎಂಬ ಅರ್ಥಗಳು ಕಂಡುಬರುತ್ತವೆ.

ಸೌಜನ್ಯವಿದೂರ ಎಂಬ ಪದಕ್ಕೆ ವಿನಯದಿಂದ ಬಹು ದೂರವಾದವನು, ಕ್ರೂರಿ, ಅಸಂಸ್ಕೃತ ಎಂಬ ಅರ್ಥಗಳೂ ಕಾಣಸಿಗುತ್ತವೆ.

ಇಂದಿನ ಇಂಗ್ಲೀಷ್‌ಮಯವಾದ ಮಾಹಿತಿ ತಂತ್ರಜ್ಞಾನ, (Knowldge Management) ಜ್ಞಾನಭಂಡಾರಗಳ ಯುಗದಲ್ಲಿ ಇಂಗ್ಲೀಷಿನಲ್ಲಿ ಸೌಜನ್ಯ ಎಂಬ ಪದಕ್ಕೆ Courtesy, Modesty, Goodness, Polish, Gentlemanlilaess, breading etiquette ಹಾಗೂ Polished manners ಎಂಬ ಅರ್ಥಗಳು ಇವೆ.

ಅಲ್ಲಿಗೆ ಸುಸಂಸ್ಕೃತತೆ ಅಥವಾ ಒಳ್ಳೆಯ ನಡವಳಿಕೆ ಇರುವುದು ಸೌಜನ್ಯ ಎಂಬುದಕ್ಕೆ ನಾವು ಸೌಜನ್ಯ ಎಂದು ಕರೆದರೂ ತಪ್ಪಾಗಲಾರದು.

ಇಪ್ಪತ್ತೊಂದನೆಯ ಶತಮಾನದಲ್ಲಿ Global Village ನಲ್ಲಿ ಪ್ರಪಂಚವಿಡೀ ಸಂಕುಚಿತಗೊಂಡು, ಎಲ್ಲವೂ ಎಲ್ಲೆಲ್ಲೂ, ಯಾರನ್ನು ಯಾವಾಗ ಬೇಕಾದರೂ, ಹೇಗೆ ಬೇಕಾದರೂ ಸಂಪರ್ಕಿಸಬಹುದಾದ ಈ ಸಂದರ್ಭದಲ್ಲಿ, ನಮ್ಮಲ್ಲಿ ಕೆಲವು ಭಾಷೆಗಳು, ಭಾಷೆಯ ಬಳಕೆಯ ವಿಧಾನಗಳು, ಭಾಷಿಕ (ಭಾಷೆಯನ್ನು ಬಳಸುವ ವ್ಯಾಕರಣದ) ಕಾನೂನುಗಳು ಕಳೆದು ಹೋಗುತ್ತಿರುವ ಹಿನ್ನೆಲೆಯಲ್ಲಿ, ಕೆಲವು ಪದಗಳು, ಅವುಗಳ ಅಸ್ತಿತ್ವವನ್ನು ಕಳೆದುಕೊಂಡಿರುವುದು ಅತ್ಯಂತ ಸಹಜವಾಗಿದೆ. ಅಂತಹ ಕೆಲವು ಪದಗಳಲ್ಲಿ 'ಸೌಜನ್ಯ'ವೂ ಒಂದಾಗಿದೆ.

ವಾಯುಮಾಲಿನ್ಯ, ಶಬ್ದಮಾಲಿನ್ಯ, ಜಲಮಾಲಿನ್ಯ, ಇನ್ನು ಇತರೇ ಮಾಲಿನ್ಯಗಳ ಜೊತೆಗೆ ಸಮಾಜದ ಜ್ವಲಂತ ಸಮಸ್ಯೆ-ಸಾಂಸ್ಕೃತಿಕ ಮಾಲಿನ್ಯವಾಗಿದೆ. ಅರ್ಥಾತ್ ಸಂಸ್ಕೃತಿಯ ಅಂಗಗಳಲ್ಲೊಂದಾದ ಸಜ್ಜನಿಕೆ, ಔದಾರ್ಯ, ಒಳ್ಳೆಯತನ, ವಿನಯ, ಉದಾರತ್ವಗಳು ಸಮಾಜದಿಂದ ಅತ್ಯಂತ ದೂರ ಸಾಗುತ್ತಲಿರುವುದನ್ನು ಗಮನಿಸುತ್ತಿದ್ದೇವೆ.

ದೇಶ ವಿದೇಶಗಳಲ್ಲಿ ಸೌಜನ್ಯತೆ ನಾನಾ ಬಗೆಯದಾಗಿರುತ್ತದೆ. ಅದು ಜನರ ನಡವಳಿಕೆಯಲ್ಲಿ ವ್ಯಕ್ತವಾಗುತ್ತದೆ. ಇಡೀ ವಿಶ್ವದಲ್ಲೇ ನಮ್ಮ ಭಾರತ ದೇಶ ಅತ್ಯಂತ ಉನ್ನತ ಸಂಸ್ಕೃತಿಗೆ ಹೆಸರಾದದ್ದಾಗಿದೆ. ವೇದೋಪನಿಷತ್ತುಗಳು ಸೌಜನ್ಯತೆಯನ್ನು ಸಾರುವ ಮೂಲ ಸೆಲೆಯಾಗಿ ಮಾನವ ಮೌಲ್ಯಗಳನ್ನು ಎತ್ತಿಹಿಡಿಯಲಾಗಿದೆ. ತೈತ್ತರೀಯ ಉಪನಿಷತ್ತಿನಲ್ಲಿ "ಮಾತೃದೇವೋಭವ, ಪಿತೃದೇವೋಭವ, ಆಚಾರ್ಯದೇವೋಭವ, ಅತಿಥಿದೇವೋಭವ' ಎಂದು ಹೇಳಲಾಗಿದೆ.

ಈ ಸ್ಪರ್ಧಾತ್ಮಕ ಯುಗದಲ್ಲಿ ಮಕ್ಕಳನ್ನು ಸ್ಪರ್ಧೆಗೆ ತಯಾರು ಮಾಡುವಲ್ಲಿ ಪುಸ್ತಕದ ಓದಿನ ಬಗ್ಗೆ ಮಾತ್ರ ಗಮನವಿತ್ತು ಅವರನ್ನು ಕೂಚಂಭಟರನ್ನಾಗಿ ಮಾಡಿ ಮಾನವೀಯ ಮೌಲ್ಯಗಳ ಬಗ್ಗೆ ಕಿಂಚಿತ್ತು ಅರಿವೇ ಇಲ್ಲದಂತೆ ಮಾಡಲಾಗುತ್ತಿದೆ. ಉದಾಹರಣೆಗೆ ಐಐಟಿಯಲ್ಲೋ ಐಐಎಸ್ಸಿನಲ್ಲೋ ವ್ಯಾಸಂಗ ಮಾಡಿದ ಕೆಲವರನ್ನು ಸಂಪರ್ಕಿಸಿದರೆ, 'ಸೌಜನ್ಯ'ವೆಂಬುದಕ್ಕೆ ಅವರ ಜೀವನದಲ್ಲಿ ಎಡೆಯೇ ಇಲ್ಲದಿರುವುದನ್ನು ಗಮನಿಸಬಹುದು. ದೊಡ್ಡವರಿಗೆ 'ನಮಸ್ಕಾರ' ಎಂದು ಹೇಳಲೂ ಅವರು ಹಿಂದೇಟು ಹಾಕುತ್ತಾರೆ.

ಐಐಟಿಗಳಲ್ಲೋ ಐಐಎಂಗಳಲ್ಲೋ ಸೀಟು ಗಿಟ್ಟಿಸಿಬಿಟ್ಟರೆ ಅದೇ ಅವರ ಜೀವನದ ಪರಮಾರ್ಥ ಸಾಧಿಸಿದಂತೆ ಭ್ರಮಿತರಾಗುತ್ತಾರೆ. ತಮ್ಮನ್ನು ಇಂಥ ಉನ್ನತ ಸ್ಥಿತಿಗೆ ತಂದ ವೃದ್ಧ ತಂದೆ ತಾಯಿಯರನ್ನು ಸಾಕುವುದಕ್ಕೆ ಅವರಿಗೆ ಸೌಜನ್ಯವಿರುವುದಿಲ್ಲ. ಹೀಗಾಗಿಯೇ ಅನೇಕ ವೃದ್ಧಾಶ್ರಮಗಳು (ಪಾಶ್ಚಾತ್ಯರಲ್ಲಿರುವಂತೆ) ಇಂದು ನಮ್ಮಲ್ಲಿ ತಲೆ ಎತ್ತುತ್ತಿರವುದನ್ನು ಕಾಣುತ್ತೇವೆ. ಆರ್ಥಿಕವಾಗಿ ಸದೃಢವಾದ ತಂದೆ ತಾಯಂದಿರೇನೋ ಈ ವೃದ್ಧಾಶ್ರಮಗಳಿಗೆ ಹೋಗಬಹುದು. ಆದರೆ, ಆರ್ಥಿಕ ಭದ್ರತೆ ಇಲ್ಲದವರು, ಮಗನಿಗಾಗಿ, ಮಗನ ಓದಿಗಾಗಿ ಆಸ್ತಿಯನ್ನೆಲ್ಲ ಕಳೆದುಕೊಂಡು, ಮಗನೇ ಆಸರೆಯಾಗುತ್ತಾನೆಂದು ನಂಬಿ, 'ಸೌಜನ್ಯ'ದಿಂದ ಮಗನನ್ನು ಆಕಾಶದೆತ್ತರಕ್ಕೆ ತಂದವರು ಅದೇ ಮಗ ಅತ್ಯಂತ 'ಅಸೌಜನ್ಯ'ದಿಂದ ಆಕಾಶದಿಂದ ಅಧಃಪಾತಾಳಕ್ಕೆ ಅವರನ್ನು ತಳ್ಳುತ್ತಿರುವ ಉದಾಹರಣೆಗಳೇ ಇಂದು ಸಮಾಜದಲ್ಲಿ ತುಂಬಿಹೋಗಿದೆ.

ತಂದೆ ತಾಯಂದಿರ ವಿಷಯದಲ್ಲಿ ಈ ರೀತಿ ನಡೆದುಕೊಳ್ಳುವ ಈ ಮಂದಿ ಗುರುಗಳ ಬಗ್ಗೆಯೂ ಇದೇ ಧೋರಣೆ ಕಂಡುಬರುತ್ತದೆ. ಇತ್ತೀಚೆಗೆ ನಾನು ಭೇಟಿಯಾದ 30 ವರ್ಷ ಅನುಭವವಿರುವ ಐಐಟಿ ಪ್ರಾಧ್ಯಾಪಕರೊಬ್ಬರು ಹೇಳಿದರು. ಅಲ್ಲಿ "ಈಗ ಐಐಟಿಗೆ ಬರುವ ವಿದ್ಯಾರ್ಥಿಗಳಿಗೆ ಪಾಠ ಮಾಡುವುದು, ಅವರನ್ನು ನಿಭಾಯಿಸುವುದು ಬಹಳ ಕಷ್ಟಕರವಾಗಿಬಿಟ್ಟಿದೆ. ಕಾರಣ ಅವರಲ್ಲಿ ನಮಗಿಂತಲೂ ಅವರು ಬಹಳ ಬುದ್ಧಿವಂತರೆಂಬ ಭಾವನೆ ಬಂದುಬಿಟ್ಟಿದೆ" ಎಂದು ಆಚಾರ್ಯ ದೇವರಿಗೆ ಇಷ್ಟರಮಟ್ಟಿಗೆ ಸೌಜನ್ಯದ

ಬದಲು ಅಹಂಭಾವ ತೋರುವ ಪಡೆಯ ನಿರ್ಮಾಣವಾಗಿಬಿಟ್ಟಿದೆ. ಇನ್ನು ಸಮಾಜದ ಇನ್ನಿತರರು ಈ 'ಸೌಜನ್ಯಧಾರಿ'ಗಳಿಗೆ ಅತ್ಯಂತ ನಿಕೃಷ್ಠರು.

ಹೀಗಿರುವಾಗ ಸಮಾಜದ ಒಂದು ಭಾಗವಾದ ಈ 'ಸೌಜನ್ಯವಿದೂರ'ರಿಂದ ನಮ್ಮ ಸಾಂಸ್ಕೃತಿಕ ಪರಂಪರೆಯಲ್ಲಿ ಅನೂಚಾನವಾಗಿ ನಡೆದು ಬಂದಿರುವ ಅತಿಥಿ ಸೇವೆಯನ್ನು ಅಪೇಕ್ಷಿಸುವುದು, ಪರಮ ದಡ್ಡತನವಲ್ಲವೇ ? ಮನೆಗೆ ಅತಿಥಿಗಳು ಯಾರೂ ಬರಲೂ ಆಸ್ಪದವೇ ಇಲ್ಲ, ಬಂದರೂ-"ಬನ್ನಿರಿ, ಕುಳ್ಳಿರಿ" ಎಂಬುದು ಅತ್ಯಂತ ದೂರ ಉಳಿದ ಮಾತು ಇನ್ನು ಆತಿಥ್ಯ-"ಕಾಫಿ ಕೊಡಲೇ" ಎಂಬುದು ಕಾಫಿ ನೀಡುವ ಸೌಜನ್ಯವೇ ಇಲ್ಲವಾದಾಗ ಊಟವೆಲ್ಲಿಂದ ಬರಬೇಕು ? ಅತಿಥಿಸೇವೆ ಮಾಡಲರಿಯದ ಇವರಿಗೆ ಹೊಟ್ಟೆ ತುಂಬಾ ಅನ್ನವನ್ನು ನೀಡುವುದು-ದಾಸೋಹ-ಇವೆಲ್ಲಾ ಜೀವನವೆಂಬ ನಿಘಂಟಿನಲ್ಲಿ ಇವರ ಪಾಲಿಗೆ ಇಲ್ಲದ ಪದಗಳು.

ಇಂತಹ ಸೌಜನ್ಯಶೀಲರು ಬೆಳೆಸಿದ ಮಕ್ಕಳಲ್ಲಿ 'ಸೌಜನ್ಯ'ವನ್ನು ಹುಡುಕ ಹೊರಡುವ 'ಸೌಜನ್ಯ'ವೇ ಬೇಡ.

ಹೊರದೇಶಕ್ಕೆ ಹೋದ ಮಗನಿಂದ ಸೌಜನ್ಯಶೀಲರಾದ ತಂದೆ ತಾಯಂದಿರು ಏನೇನೋ ಕನಸಿನ ಗೋಪುರಗಳನ್ನು ಕಟ್ಟುತ್ತಾರೆ. ಆದರೆ, ಮಗನಿಂದ ಅವನು ಹೊರದೇಶಕ್ಕೆ ಹೋದ ಹೊಸತರಲ್ಲಿ ವಾರಕ್ಕೆ ನಾಲ್ಕು ಫೋನುಗಳು ಬರುತ್ತವೆ. ಕ್ರಮೇಣ ಅದು ತಿಂಗಳಿಗೆ ನಾಲ್ಕಾಗಿ, ನಾಲ್ಕು ತಿಂಗಳಿಗೆ ಒಂದಾಗಿ ಕಾಣಬರುತ್ತದೆ. ಅಲ್ಲಿ ಅವರ ವಿಲಾಸ ಜೀವನವೇ ಅವರಿಗೆ ಹಿರಿದಾಗಿ ತಂದೆ ತಾಯಿಯರನ್ನು ಮರೆಯುವ ಸೌಜನ್ಯ ಅವರಲ್ಲಿ ಜಾಗೃತವಾಗುವುದು ಅವರಿಗೆ ಒಂದು ಮಗುವಾದಾಗ, ಆ ಮಗುವನ್ನು ಡೇಕೇರ್‌ನಲ್ಲಿ ಬಿಟ್ಟಾಗ, ತಿಂಗಳೊಂದಕ್ಕೆ ೮೦೦ ರಿಂದ ೧೦೦೦ ಡಾಲರ್ ಕೊಡಬೇಕಾಗಿ ಬಂದಾಗ ಆಗ ಯೋಚಿಸುತ್ತಾರೆ. ತಂದೆ ತಾಯಿಯರು ಬಂದರೆ ಅವರಿಗೆ ಒಮ್ಮೆ ೧೦೦೦ ಡಾಲರ್ (ಒಬ್ಬರಿಗೆ) ಖರ್ಚು ಮಾಡಿದರೆ, ಮಗುವನ್ನು ನೋಡಿಕೊಳ್ಳಲು ಮನೆ ಕಾಯಲು ಬಹಳ ಅಗ್ಗದ ಕೂಲಿಯಾಳು ಸಿಗುತ್ತಾರೆಂದು ! ತಂದೆ ತಾಯಿಯರ ಸೌಜನ್ಯ, ಮೊಮ್ಮಕ್ಕಳ ಮೇಲಿನ ಪ್ರೀತಿ, ಇವೆಲ್ಲವೂ ಅವರನ್ನು ದೂರ ದೇಶಕ್ಕೆ ಹೋಗುವಂತೆ ಮಾಡುತ್ತವೆ. ಅಲ್ಲಿನ 'ಬಂಧನ' ಹಾಗೂ 'ಪರದೇಶೀ ಭಾವನೆ'ಯನ್ನೂ ಮರೆಸುವ ಹಾಗೆ ಅವರ ಸೌಜನ್ಯ ಅವರನ್ನು ಸಾಂತ್ವನಗೊಳಿಸುತ್ತದೆ. ಅಲ್ಲಿಂದ ಬಂದ ನಂತರ ಅವರ ಸ್ನೇಹಿತರ ಬಳಿ ತಮ್ಮ ಸಂಕಷ್ಟಗಳನ್ನು ತೋಡಿಕೊಂಡರೂ ಬಂಧುಗಳೊಂದಿಗೆ ಸಂತಸವನ್ನೇ ಹಂಚಿಕೊಳ್ಳುವ ಅವರ ಸೌಜನ್ಯಕ್ಕೆ ಕೋಟಿ ನಮಸ್ಕಾರ !

ಇದು ಕುಟುಂಬಗಳಲ್ಲಿನ ಸೌಜನ್ಯವಾದರೆ, ಕೆಲವು ಸಹೋದ್ಯೋಗಿಗಳ ಸೌಜನ್ಯ ಅತ್ಯಂತ ಪ್ರಮುಖವಾದುದು. ನೀವೇನಾದರೂ ಸ್ವಲ್ಪ ಹೆಚ್ಚಿನ ಬುದ್ಧಿವಂತರಾಗಿದ್ದಿರೋ,

ನಿಮ್ಮನ್ನು ತುಳಿಯುವ ಪ್ರಯತ್ನ ಮೊದಲ ದಿನದಿಂದಲೇ ಪ್ರಾರಂಭ. ನಿಮ್ಮ ತಾಯಿಗೋ, ಗಂಡನಿಗೋ, ಹೆಂಡತಿಗೋ, ಮಕ್ಕಳಿಗೋ ಯಾರಿಗಾದರೂ ಶರೀರದಲ್ಲಿ ಸೌಖ್ಯವಿಲ್ಲದೆ ಆಸ್ಪತ್ರೆಯಲ್ಲಿದ್ದಾರೆಂದುಕೊಳ್ಳಿ, ಆಗ ಇನ್ನಷ್ಟು ಹೆಚ್ಚಿನ ಕೆಲಸ ಹೇರಿ ಸುಖಿಸುವ 'ಸೌಜನ್ಯಶೀಲ' ರಾಗಿರುತ್ತಾರೆ. ಇಂಥವರು ಏನಾದರೂ ನಿಮ್ಮ ನಿಕಟ ಅಧಿಕಾರಿ (Immidiate Boss) ಆಗಿದ್ದರೆ ಅವರ ಸೌಜನ್ಯತೆಯ ಔನ್ನತ್ಯ ನಿಮ್ಮ ಕೆಲಸಕ್ಕೆ ಸಂಚಕಾರ ತರುವವರೆಗೂ ಮುಂದುವರೆಯುತ್ತದೆ.

ಅತಿಥಿ ಸತ್ಕಾರದ ಬಗ್ಗೆ ಹೇಳಬೇಕೆಂದರೆ, ಭಾರತದಲ್ಲೇ ಯಾರ ಮನೆಗೆ ಹೋಗಬೇಕಾದರೂ ಫೋನಾಯಿಸಿ ಹೋಗಬೇಕಾದ ಪರಿಸ್ಥಿತಿ ಇದೆ. ಇಷ್ಟವಿಲ್ಲದಿದ್ದರೆ ಧಾರಾಳವಾಗಿ "ನಾವು ಹೊರಗಡೆ ಹೋಗುತ್ತಿದ್ದೇವೆ" ಎಂದು ಅತಿಥಿಗಳ ಬರವನ್ನೇ ತಪ್ಪಿಸಿಬಿಡುತ್ತಾರೆ. ಮೊಬೈಲ್ ಫೋನಾದರೆ, ಮನೆಯಲ್ಲಿದ್ದುಕೊಂಡೇ ಬೇರೆಲ್ಲೋ ಯಾವುದೋ ಊರಿನಲ್ಲೋ ಇದ್ದೇವೆ ಎಂದು 'ಸೌಜನ್ಯ'ತೆಯಿಂದ ಅತಿಥಿಗಳಿಗೆ ಆತಿಥ್ಯ ನೀಡುತ್ತಾರೆ ! ವಿದೇಶದಲ್ಲಿಯಾದರೆ, ಬೆಳಗ್ಗೆ ಕೋಳಿ ಕೂಗುವ ಹೊತ್ತಿಗೆ ಹೋಗಿ ನಡುರಾತ್ರಿ ಬರುವ ಹೆಣ್ಣಿನಿಂದ ಆತಿಥ್ಯ ಬಯಸುವುದು ಎಂತಹ ಸೌಜನ್ಯ ?

ಆದರೆ ಇತ್ತೀಚೆಗೆ ನಾನು ಅಮೆರಿಕ ದೇಶಕ್ಕೆ ಹೋಗಿದ್ದ ಸಂದರ್ಭದಲ್ಲಿ ನನಗೆ ಅಲ್ಲಿನ ಜನರ ಸೌಜನ್ಯದ ಬಗ್ಗೆ ಅತ್ಯಂತ ಸಂತೋಷವಾಯಿತು.

ವಿಮಾನ ಹತ್ತುವಾಗ–ಗಗನ ಸಖಿಯರು ನಮ್ಮನ್ನು ವಿಚಾರಿಸಿಕೊಳ್ಳುವ ಸೌಜನ್ಯದಿಂದ ಹಿಡಿದು, ಸಹ ಪ್ರಯಾಣಿಕರು (ವಿದೇಶಿಯರು) ನಮ್ಮೊಂದಿಗೆ ಸೌಜನ್ಯದಿಂದ ನಡೆದುಕೊಳ್ಳುವುದು ಬಹಳ ಸಂತೋಷ ತರಿಸುವಂಥದ್ದು. ರಸ್ತೆಯಲ್ಲೇ ಆಗಲಿ, ಲಿಫ್ಟ್‌ನಲ್ಲೇ ಆಗಲಿ, ಅಂಗಡಿಯಲ್ಲೇ ಆಗಲಿ ಯಾರನ್ನೇ ಕಂಡರೂ, "Hello How are you" ಎಂಬ ಸೌಜನ್ಯಯುತ ನುಡಿಗಳು ಮನಸ್ಸಿಗೆ ತಂಪನ್ನೆರೆಯುತ್ತವೆ. "ಆದರೆ ನಮ್ಮವರಿಗೇ ನಾವು "Who are You" ಎಂಬ 'ಸೌಜನ್ಯ' ಭಾವನೆ ಬಂದಿರುವುದನ್ನು ಕಂಡಾಗ ಅತ್ಯಂತ ಖೇದವಾಗುತ್ತದೆ. ಏನನ್ನು ಕೊಳ್ಳ ಹೋದರೂ ಅಂಗಡಿಯಲ್ಲಿ (ಮಾಲ್‌ಗಳಲ್ಲಿ) ಸೌಜನ್ಯಯುತ ವಾತಾವರಣ, ಎಲ್ಲೇ ಪ್ರಯಾಣಿಸಿದರೂ (Subway ಗಳನ್ನು ಸೇರಿ) ಸೌಜನ್ಯಯುತ ನಡವಳಿಕೆ ನಮ್ಮನ್ನು ಮೂಕರನ್ನಾಗಿಸುತ್ತದೆ. ಸರತಿಯ ಸಾಲುಗಳಲ್ಲಿ ನಿಂತು ಹಣ ಪಾವತಿ, ಹೆಂಗಸರಿಗೆ ನೀಡುವ ಆದ್ಯತೆ, ಶುಭ್ರತೆ, ಈ ಸೌಜನ್ಯಯುತ ನಡವಳಿಕೆ ನಮ್ಮಲ್ಲೂ ಅಳವಡಿಸಿಕೊಂಡರೆ ಬಹಳ ಚೆನ್ನಾಗಿರುತ್ತದೆ. ಸಹೋದ್ಯೋಗಿಗಳ ಬೆನ್ನಿಗೆ ಚೂರಿ ಹಾಕುವ 'ಸೌಜನ್ಯತೆ' ವಿದೇಶೀಯರಲ್ಲಿಲ್ಲದ್ದು ತುಂಬಾ ಸಂತೋಷಪಡಬೇಕಾದ ಸಂಗತಿ.

ಇಂದು ಮರೆಯಾಗುತ್ತಿರುವ ಮಾನವೀಯ ಮೌಲ್ಯಗಳಲ್ಲೊಂದಾದ ಸೌಜನ್ಯವನ್ನು ಬೇರೂರ ಬಿಟ್ಟು, ಯುವ ಜನರಲ್ಲಿ ಅದರ ಅರಿವನ್ನು ಮೂಡಿಸಿ, ಸೌಜನ್ಯಯುತ ಸಮಾಜ ನಿರ್ಮಾಣವಾಗಬೇಕು. ಆದಷ್ಟು ಉನ್ನತ ತಾಂತ್ರಿಕ ವಿದ್ಯಾಭ್ಯಾಸದಲ್ಲಿ ಉದ್ಯೋಗ ಪರಿಣಿತಿ ಶಿಕ್ಷಣದಲ್ಲಿ ಮಾನವೀಯ ಮೌಲ್ಯಗಳನ್ನು ಬೋಧಿಸುವ ಉತ್ತಮ ಸಮಾಜ ನಿರ್ಮಾಣ ಮಾಡಲು ನೆರವಾಗುವ ಸೌಜನ್ಯದಂತಹ ಸದ್ಗುಣಗಳ ನೈತಿಕ ಶಿಕ್ಷಣಕ್ಕೆ ವಿಶೇಷ ಗಮನ ನೀಡಬೇಕು.

ಆದಷ್ಟು ಬೇಗನೆ ಉನ್ನತ ತಾಂತ್ರಿಕ ವಿದ್ಯಾಭ್ಯಾಸದಲ್ಲಿ ಉದ್ಯೋಗ ಪರಿಣಿತಿ ಶಿಕ್ಷಣದಲ್ಲಿ ಪ್ರತಿ ವಿದ್ಯಾರ್ಥಿ ಸದ್ಗುಣಶೀಲನಾಗುವಂತೆ ಮಾನವೀಯ ಮೌಲ್ಯಗಳಲ್ಲಿ ಒಂದಾದ ಸೌಜನ್ಯ ಗುಣವನ್ನು ಜೀವನದಲ್ಲಿ ರೂಢಿಸಿಕೊಳ್ಳಲು ಬೇಕಾದ ಅಗತ್ಯ ಶಿಕ್ಷಣ ಮಾರ್ಗದರ್ಶನವನ್ನು ಪಠ್ಯಕ್ರಮದಲ್ಲಿ ಅಳವಡಿಸಿ ಅನುಷ್ಠಾನಕ್ಕೆ ತರಬೇಕು ಇದು ಪರೀಕ್ಷೆಯ ವಿಷಯದಲ್ಲಿ ಅನುಷ್ಠಾನದ ಸಂಗತಿ ಆಗಬೇಕು.

ಸೌಜನ್ಯವೆಂಬ 'ಸ್ವರ್ಣ'

–ನಾ. ಗೀತಾಚಾರ್ಯ

ಸೌಜನ್ಯ ಎಂದರೇನು ? ವಿವರಿಸುವುದು ಕಷ್ಟ. ಆದರೆ ಬಳಸುವುದು ಸುಲಭ. ಸೌಜನ್ಯದಿಂದಿರಬೇಕು. ಸೌಜನ್ಯವೇ ಮನುಷ್ಯನ ಲಕ್ಷಣ, ಅವನೆಂತಹ ವ್ಯಕ್ತಿ ? ಸ್ವಲ್ಪವೂ ಸೌಜನ್ಯವಿಲ್ಲ, ಕನಿಷ್ಟ ಸೌಜನ್ಯವನ್ನು ತೋರಿಸುತ್ತಿಲ್ಲ, ಇವನೊಬ್ಬ ಪರಿಪ್ರೂರ್ಣ ಸೌಜನ್ಯಮೂರ್ತಿ– ಇತ್ಯಾದಿ ಧಾರಾಳವಾಗಿ ಈ ಮಾತುಗಳನ್ನು ಬಳಸುತ್ತಿರುತ್ತೇವೆ ಈ ಸೌಜನ್ಯವನ್ನು 'ಸಜ್ಜನಿಕೆ' ಎಂದೂ ಹೇಳಬಹುದು, 'ವಿನಯವಂತಿಕೆ' ಎಂದೂ ಹೇಳಬಹುದು, 'ಔದಾರ್ಯ' ಎಂದೂ ಹೇಳಬಹುದು, 'ಮೃದು ಸ್ವಭಾವ' ಎಂದೂ ಹೇಳಬಹುದು', 'ಸನ್ನಡತೆ' ಎಂದೂ ಹೇಳಬಹುದು, 'ಕ್ಷಮಾಗುಣ' ಎಂದೂ ಹೇಳಬಹುದು, 'ಶೀಲ' ಎನ್ನಬಹುದು. ಏನೇನು 'ಒಳ್ಳೆಯತನ' ಇದೆಯೋ ಅವೆಲ್ಲ ಸೌಜನ್ಯವೇ. ಒಟ್ಟಾರೆ ಸೌಜನ್ಯ ಎನ್ನುವುದು 'ಸುಸಂಸ್ಕೃತಿ' ಎನಿಸುತ್ತದೆ, 'ಸಭ್ಯತೆ', 'ಸಭ್ಯ ನಾಗರೀಕತೆ'ಯೇ ಸೌಜನ್ಯವಾಗುತ್ತದೆ. ಇಂಗ್ಲಿಷ್‌ನ 'ಜಂಟಲ್ ಮ್ಯಾನ್'ಗೆ ಸಂವಾದಿಯಾಗಿ 'ಸೌಜನ್ಯಮೂರ್ತಿ' ಎನ್ನಬಹುದು. ಒಬ್ಬ ವ್ಯಕ್ತಿ ಜಂಟಲ್ ಮ್ಯಾನ್ ಆಗಬೇಕಾದರೆ, ಸಭ್ಯ ನಾಗರಿಕನೆನಿಸಬೇಕಾದರೆ ಹಲವು ಗುಣಗಳನ್ನು ಹೊಂದಿರಬೇಕು. ಮೇಲೆ ಹೇಳಿದ ಒಂದೊಂದೂ ಬೇರೆ ಬೇರೆ ಗುಣಗಳಾಗಿದ್ದು ಇವೆಲ್ಲವನ್ನೂ ಹೊಂದಿರಬೇಕಾಗುತ್ತದೆ. ಇವುಗಳೊಂದಿಗೆ ಇಂತಹ ಇನ್ನೂ ಹಲವು ಗುಣಗಳಿದ್ದು ಈ ಎಲ್ಲಾ ಗುಣಗಳ ಮೊತ್ತವೇ 'ಸೌಜನ್ಯ'.

ಅಂದರೆ ಸೌಜನ್ಯ ಎಂಬುದು ಒಂದು ನಿರ್ದಿಷ್ಟ ಗುಣವಲ್ಲ, ಹಲವು ಸದ್ಗುಣಗಳ ಮೊತ್ತ. ಅಂದರೆ ಇದೊಂದು ಸಾಮಾನ್ಯ ಧರ್ಮ. 'ಸಾಮಾನ್ಯ ಧರ್ಮ' ಎನ್ನುವುದೂ ಹೀಗೆ ಹಲವು ಗುಣಗಳನ್ನು ಹೊಂದಿರುವ ಒಂದು ವಿಶೇಷ ವ್ಯಕ್ತಿತ್ವ. ಈ ಸಾಮಾನ್ಯ ಧರ್ಮ ಭಾರತೀಯರಲ್ಲಿ ಹಾಸುಹೊಕ್ಕಾಗಿರುವ ನೀತಿ. ಸಾಮಾಜಿಕ ಲಕ್ಷಣ, ವ್ಯಕ್ತಿತ್ವ ವಿಶೇಷ ಗುಣ. ವೇದ, ಉಪನಿಷತ್ತು, ರಾಮಾಯಣ ಮಹಾಭಾರತ–ಭಾಗವತ–ಭಗವದ್ಗೀತೆ– ಧರ್ಮ ಶಾಸ್ತ್ರ ಗ್ರಂಥಗಳಲ್ಲೆಲ್ಲಾ ಪರಂಪರೆಯಿಂದಲೂ ಹೇಳುತ್ತಲೇ ಬರಲಾಗಿದೆ. ಒಬ್ಬೊಬ್ಬ ಧರ್ಮಶಾಸ್ತ್ರಜ್ಞರೂ ಈ ಸಾಮಾನ್ಯ ಧರ್ಮಕ್ಕೆ ಹಲವು ಗುಣವಿಶೇಷಗಳನ್ನು ಸೇರಿಸುತ್ತಲೇ

ಬಂದಿದ್ದಾರೆ. ಮನುಸ್ಮೃತಿಯಲ್ಲಿ ಬರುವ ಈ ಕೆಳಗಿನ ಶ್ಲೋಕ ಸಾಮಾನ್ಯ ಧರ್ಮದಲ್ಲಿರಬೇಕಾದ ದಶ ಗುಣಗಳನ್ನು ಹೇಳುತ್ತದೆ.

ಧೃತಿಃ ಕ್ಷಮಾ ದಮೋಸ್ತೇಯಂ ಶೌಚಮಿಂದ್ರಿಯ ನಿಗ್ರಹಃ ।
ಧೀರ್ವಿದ್ಯಾ ಸತ್ಯಮಕ್ರೋಧೋ ದಶಕಂ ಧರ್ಮ ಲಕ್ಷಣಂ ॥

ಧೈರ್ಯ, ಕ್ಷಮೆ, ಮನಸ್ಸಿನ ಹಿಡಿತ (ದಮೆ), ಕದಿಯದಿರುವಿಕೆ (ಆಸ್ತೇಯ), ಶುಚಿತ್ವ (ಶೌಚ) ಇಂದ್ರಿಯ ನಿಗ್ರಹ, ಬುದ್ಧಿ (ಧೀ), ಜ್ಞಾನ, (ವಿದ್ಯೆ) ಸತ್ಯ ಮತ್ತು ಕ್ರೋಧರಾಹಿತ್ಯ ಈ ಹತ್ತು ಗುಣಗಳೇ ಸಾಮಾನ್ಯ ಧರ್ಮದ ಲಕ್ಷಣ ಎಂಬುದು ಸಿದ್ಧ ತಿಳುವಳಿಕೆ. ಇದಕ್ಕೆ ಮುಂದಿನ ಸ್ಮೃತಿಕಾರರು, ಶಾಸ್ತ್ರಜ್ಞರು, ಋಷಿಮುನಿಗಳು ಇನ್ನೂ ಅನೇಕ ಗುಣಗಳನ್ನು ಸೇರಿಸಿದ್ದಾರೆ. ಅಹಿಂಸೆ, ಶಾಂತಿ, ದಾನ, ದಯೆ, ಬ್ರಹ್ಮಚರ್ಯೆ, ಕರ್ಮನಿಷ್ಠೆ, ಋಜುತ್ವ, ಗುರು ಹಿರಿಯರಲ್ಲಿ ಗೌರವ ಸೇವೆ, ವಿನಯ, ಔದಾರ್ಯ ಹೀಗೆ ಏನೇನು ಒಳ್ಳೆಯ ಗುಣಗಳಿವೆಯೋ ಅವೆಲ್ಲವನ್ನೂ ಸೇರಿಸಿ ಈ ಸಾಮಾನ್ಯ ಧರ್ಮವನ್ನು ವಿಸ್ತರಿಸಿದ್ದಾರೆ, ವಿವರಿಸಿದ್ದಾರೆ. ಎಲ್ಲ ನೀತಿ ಶಾಸ್ತ್ರ ಗ್ರಂಥಗಳೂ ನಿಂತಿರುವುದು ಈ ಸಾಮಾನ್ಯ ಧರ್ಮದ ವಿಸ್ತರಣೆಯ ಮೇಲೆಯೇ ರಾಮಾಯಣ ಮಹಾಭಾರತಾದಿ ಕಾವ್ಯ ಗ್ರಂಥಗಳಲ್ಲಿ ಕವಿಗಳು, ಪರಿಪೂರ್ಣ ವ್ಯಕ್ತಿತ್ವದ ಪಾತ್ರಗಳನ್ನು ಕಟ್ಟಿರುವುದು ಈ ಸಾಮಾನ್ಯ ಧರ್ಮದ ತಳಹದಿಯ ಮೇಲೆಯೇ. ಯಾವುದಾದರೂ ಒಂದು ಪಾತ್ರ ಅಥವಾ ಯಾರಾದರೂ ಒಬ್ಬ ವ್ಯಕ್ತಿ 'ಮರ್ಯಾದಾ ಪುರುಷ'ನೆನಿಸಿಕೊಂಡಿದ್ದರೆ ಅವನಲ್ಲಿ ಈ ಎಲ್ಲ ಗುಣಗಳೂ ಮೇಳವಿಸಿರುತ್ತವೆ. ಇಂತಹ ಗುಣ ಸಂಪನ್ನನೇ 'ಸೌಜನ್ಯಮೂರ್ತಿ ಯಾರಾದರೊಬ್ಬರು ಸೌಜನ್ಯವಂತರೆನಿಸಿಕೊಳ್ಳಬೇಕಾದರೆ ಹಲವು ಒಳ್ಳೆಯ ಗುಣಗಳನ್ನು ಹೊಂದಿರಬೇಕು. ಹೀಗೆ ಸೌಜನ್ಯ ಎನ್ನುವುದು ಹಲವು ಗುಣಗಳ ಸಮಷ್ಟಿ ರೂಪವಾಗಿದೆ.

ಈ ಪದದ ವಿಶೇಷತೆಯೆಂದರೆ ಒಂದೊಂದು ಸದ್ಗುಣಗಳಿಗೂ ಇದನ್ನು ಪ್ರತ್ಯೇಕವಾಗಿ ಹೇಳುವಂತೆಯೇ ಎಲ್ಲ ಗುಣಗಳ ಮೊತ್ತಕ್ಕೂ ಹೇಳುವುದು. ಸಂದರ್ಭ ಸನ್ನಿವೇಶಗಳಿಗೆ ಅನುಗುಣವಾಗಿ ಈ ಪದವನ್ನು ಬಳಸಬಹುದಾಗಿದೆ. 'ಇವನೊಬ್ಬ ಸೌಜನ್ಯಮೂರ್ತಿ' ಎಂದಾಗ ಎಲ್ಲ ಸದ್ಗುಣಗಳ ಮೊತ್ತವನ್ನೇ ಗ್ರಹಿಸಬೇಕಾಗುತ್ತದೆ. ಆದರೆ 'ಇವನಲ್ಲಿ ಗೌರವಿಸಬೇಕೆಂಬ ಕನಿಷ್ಟ ಸೌಜನ್ಯವೂ ಇಲ್ಲ' ಎಂಬಲ್ಲಿ ಸೌಜನ್ಯ ಒಂದು ಸೀಮಿತ, ನಿರ್ದಿಷ್ಟ ಅರ್ಥದಲ್ಲಿ ಗ್ರಹೀತವಾಗುತ್ತದೆ. ಗುರು ಹಿರಿಯರನ್ನು ಗೌರವಿಸಬೇಕು ಎಂಬ ಒಂದು ಸನ್ನಡತೆಯನ್ನು ಮಾತ್ರ ಇದು ನಿರ್ದೇಶಿಸುತ್ತದೆ. ಆದ್ದರಿಂದಲೇ 'ಸೌಜನ್ಯ'ಕ್ಕೆ 'ಇದಮಿತ್ಥಂ' ಎಂದು ಒಂದು ನಿರ್ದಿಷ್ಟ ಅರ್ಥವನ್ನು ಹೇಳಲಾಗುವುದಿಲ್ಲ. ಆದರೂ ಒಂದು ಅರ್ಥಕ್ಕೆ ಇದನ್ನು ಸಿಲುಕಿಸಬೇಕಲ್ಲ ! ನಿಘಂಟುಗಳಲ್ಲೂ ಯಾವುದೇ 'ಒಂದು' ಅರ್ಥ ಇದಕ್ಕಿಲ್ಲ; ಈ

ಹಲವು ಗುಣಗಳಲ್ಲಿ ಕೆಲವನ್ನು ಕೊಡಲಾಗಿದೆ. ಕಾವ್ಯ-ಕೃತಿ-ಶಾಸನಗಳಲ್ಲೂ ಹೀಗೇ ಭಿನ್ನಾರ್ಥಗಳಲ್ಲೇ ಸೌಜನ್ಯ ಪದವನ್ನು ಬಳಸಲಾಗಿದೆ. ಈ ಪದವನ್ನು ಬಳಸಿ ಹಲವು ಬಿರುದುಗಳನ್ನೂ ಕಟ್ಟಲಾಗಿದೆ.

೧. 'ಸೌಜನ್ಯ ಕಂದಾಂಕುರ' – 'ಸೌಜನ್ಯ ಕಂದಾಂಕುರಂಗರ್ಚಿಸಿ ದೂತನಂ ವಿಸರ್ಜಿಸಿ' (ಶಾಂತಿ ಪುರಾಣ)

೨. 'ಸೌಜನ್ಯ ತೀರ್ಥ' – ಕೋದಂಡಪಾರ್ಥಂ ಸೌಜನ್ಯ ತೀರ್ಥಂ (ಶಾಸನೋಲ್ಲೇಖ)

೩. 'ಸೌಜನ್ಯ ರತ್ನಾಕರ' – ಕಲಿಕಾಲ ಮೇರು ವಿಬುಧಂ ಸೌಜನ್ಯ ರತ್ನಾಕರಂ (ಶಾಸನೋಲ್ಲೇಖ)

ಇಲ್ಲೆಲ್ಲ ಹಲವು ಗುಣಗಳ ಪರಿಪೂರ್ಣ ವ್ಯಕ್ತಿತ್ವ-ಮರ್ಯಾದಾಪುರುಷ-ಅರ್ಥದಲ್ಲಿ ಸೌಜನ್ಯವನ್ನು ಬಳಸಿರುವ ಅರ್ಥವಿದೆ. ಇವುಗಳೊಂದಿಗೆ ಕನ್ನಡ ನಿಘಂಟು ಈ ಪದದ ನಿಷೇದಾರ್ಥ. ಒಂದು ಬಿರುದನ್ನು ದಾಖಲಿಸಿದೆ ! 'ಸೌಜನ್ಯ ವಿದೂರ' ! ಇದರಲ್ಲಿ ಸೌಜನ್ಯವಿಲ್ಲದವನು, 'ಸೌಜನ್ಯ'ದಲ್ಲಿರುವ ಗುಣಗಳಿಂದ ದೂರಾದವನು; ಅವಿನಯವಂತ, ಕ್ರೂರಿ, ಅಸಂಸ್ಕೃತ ಎಂಬ ಅರ್ಥಗಳಿವೆ. 'ಸೌಜನ್ಯ ವಿದೂರನಾದೆನಕಟಾ ಎನ್ನವೊಲಾವ ನೋಗಾಂಪನ್ ಉರ್ವಿಯೊಳ್' (ಶಬರ ಶಂಕರ ವಿಳಾಸದ ಉಲ್ಲೇಖ).

'ಕುಳ್ಳಿರಿ ಎಂದರೆ ನೆಲಕುಳಿ ಹೋಗುವುದೇ'....ಎಂದು ಬಸವಣ್ಣ ಪ್ರಶ್ನಿಸುವಲ್ಲಿಯೂ ಮನುಷ್ಯನಲ್ಲಿರಬೇಕಾದ ಈ ಸೌಜನ್ಯವನ್ನೇ ಗುರುತಿಸುತ್ತೇವೆ. ಎಲ್.ಎಸ್. ಶೇಷಗಿರಿರಾವ್ ಅವರಿಗೆ 'ಸೌಜನ್ಯ' ಹೆಸರಿನಲ್ಲೇ ಕಿರುಪುಸ್ತಕವನ್ನು ಗೌರವ ಗ್ರಂಥವಾಗಿ ಪ್ರಸಿದ್ಧಪಡಿಸಲಾಗಿದೆ. ಒಬ್ಬ ವ್ಯಕ್ತಿಯ ಒಳ್ಳೆಯತನವನ್ನು ಹೇಳುವಾಗ 'ಸೌಜನ್ಯಶೀಲ', 'ಸೌಜನ್ಯಮೂರ್ತಿ' ಎನ್ನುತ್ತೇವೆ. 'ಮನುಷ್ಯತ್ವ'ದ ಒಂದು ಸಹಜವರ್ತನೆಯನ್ನು ನಿರೀಕ್ಷಿಸುವ ಎಲ್ಲ ಸಂದರ್ಭದಲ್ಲೂ ಅದಕ್ಕೆ ಭಂಗವಾದಾಗಲೆಲ್ಲ ಈ ಸೌಜನ್ಯವನ್ನು ನಿರೀಕ್ಷಿಸುತ್ತೇವೆ. ಮನೆಗೆ ಬಂದವರನ್ನು ಉಪಚರಿಸಿದಿದ್ದಾಗ, ಭೇಟಿ ಮಾಡಲು ಬಂದವರನ್ನು ಕುಳಿತುಕೊಳ್ಳಲು ಹೇಳದಿದ್ದಾಗ, ಹಸಿದು ಬಂದವರಿಗೆ ಆಹಾರವಿದ್ದರೂ ನೀಡದಿದ್ದಾಗ, ಕಷ್ಟದಲ್ಲಿರುವವರಿಗೆ ಹಣವಂತರು ನೆರವಾಗದಿದ್ದಾಗ , ಸಂಕಷ್ಟ-ಅಪಘಾತ-ಆಘಾತದಲ್ಲಿರುವಾಗ ಎದುರಿಗಿದ್ದು ಸಹಾಯ ಮಾಡದಿದ್ದಾಗ ಅಥವ ಒಡವೆ-ವಸ್ತು ಅಪಹರಿಸಿದಾಗ ಹೀಗೆ ಹತ್ತು ಹಲವು ಸಂದರ್ಭಗಳಲ್ಲಿ 'ಮಾನವೀಯತೆ'ಯನ್ನು ಪ್ರದರ್ಶಿಸವು ಸನ್ನಿವೇಶಗಳಲ್ಲೆಲ್ಲ 'ಕನಿಷ್ಟ ಸೌಜನ್ಯ'ವನ್ನು ನಿರೀಕ್ಷಿಸಲಾಗುತ್ತದೆ ಇದೂ ಸೌಜನ್ಯವೇ. ಅದೂ ಸೌಜನ್ಯವೇ. ಹಾಗಾದರೆ ಸೌಜನ್ಯದ ಅರ್ಥವ್ಯಾಪ್ತಿ ಎಷ್ಟು ಇದೇ ಇದರ ವೈಶಿಷ್ಟ್ಯ ಕನಿಷ್ಟದಿಂದ ಗರಿಷ್ಟದವರೆಗೆ. ಒಂದೊಂದು ಮಾನವೀಯ ಗುಣಗಳೂ ಸೌಜನ್ಯವೇ. ಎಲ್ಲ ಮಾನವೀಯ ಗುಣಗಳ ಮೊತ್ತವೂ

ಸೌಜನ್ಯವೇ. ಆದ್ದರಿಂದ 'ಕನಿಷ್ಟ ಸೌಜನ್ಯ'–ಮ್ಯಾನರ್ಸ್–ಮಾನವೀಯತೆಯ ಅರ್ಥದಿಂದ ಹಿಡಿದು 'ಗರಿಷ್ಟ ಮಾನವತ್ವ'– 'ಗ್ರೇಟ್ ಪರ್ಸನಾಲಿಟಿ'ಯವರೆಗೆ ಇದರ ಅರ್ಥವ್ಯಾಪ್ತಿ ಇದೆ.

ಯಾರಾದರೊಬ್ಬರನ್ನು 'ಸೌಜನ್ಯವಂತ', 'ಸೌಜನ್ಯಮೂರ್ತಿ' ಎಂದು ಕರೆಯುಬೇಕಾದರೆ, ಸೌಜನ್ಯವನ್ನು ಗುಣವಿಶೇಷವನ್ನಾಗಿ ಅವರಲ್ಲಿ ಗುರುತಿಸಬೇಕಾದರೆ ಅಂಥವರು ಇದರಲ್ಲಿರುವ ಎಲ್ಲ ಗುಣಗಳನ್ನು ಹೊಂದಿರಬೇಕೆಂದೇನಿಲ್ಲ; ಹಾಗೆ ಹೊಂದಿರಲೂ ಸಾಧ್ಯವಿಲ್ಲ, ಅಂಥವರು ಎಲ್ಲ ಗುಣಗಳನ್ನು ಹೊಂದಿರುವವರು ಶತಮಾನಕ್ಕೊಬ್ಬರೂ ಸಿಗುವುದಿಲ್ಲ. ಕನಿಷ್ಟ ಐದಾರು ಗುಣಗಳನ್ನಾದರೂ ನಿಷ್ಠೆಯಿಂದ ಪಾಲಿಸುವವರಾಗಿರುತ್ತಾರೆ. ಅಂದರೆ ಆ ಗುಣಗಳನ್ನೇ ತಮ್ಮ ವ್ಯಕ್ತಿತ್ವದ ನಡವಳಿಕೆಯನ್ನಾಗಿ ರೂಪಿಸಿಕೊಂಡಿರುತ್ತಾರೆ. ಆ ಗುಣಗಳನ್ನು ಪಾಲಿಸುವುದಕ್ಕಾಗಿ ಯಾವುದೇ ರಾಜಿಗೂ ತಯಾರಿರುವುದಿಲ್ಲ. ಅದರಿಂದ ತಮಗೆ ತೊಂದರೆ ಯಾದರೂ ಎದುರಿಸಲು ಸಿದ್ಧರಿರುತ್ತಾರೆ. ಯಾವುದೇ ಆಮಿಷಗಳಿಗೂ ಒಳಗಾಗುವುದಿಲ್ಲ, ನಷ್ಟಕ್ಕೂ ಎದೆಯೊಡ್ಡುತ್ತಾರೆ. ಇಂತಹ ನಿಷ್ಠಾವಂತರ ಒಂದೆರಡು ಗುಣಗಳನ್ನಷ್ಟೇ ಪಾಲಿಸಿದರೂ ಸಾಕು 'ಸೌಜನ್ಯವಂತ'ರೆಂದು ಗುರುತಿಸಲಾಗುತ್ತದೆ. ಇಂತವರು ಸಮಾಜದಲ್ಲಿ ಅನೇಕರು ಕಾಣಸಿಗುತ್ತಾರೆ.

ಆದರೆ ಪ್ರಸ್ತುತ ಸಮಾಜದಲ್ಲಿ ಇಂತವರ ದರ್ಶನ ಅಪರೂಪ. ಇರುತ್ತರಾದರೂ ಪ್ರಕಾಶಿತರಾಗುವುದಿಲ್ಲ. ಇದಕ್ಕೆ ತದ್ವಿರುದ್ಧವಾದ ನಡವಳಿಕೆಯವರೇ ಅಧಿಕವಾಗಿರುವಾಗ ಅಂದರೆ ಅಂತಹ ಗುಣಗಳು ತಮ್ಮಲ್ಲಿಲ್ಲದಿದ್ದರೂ ಇದೆ ಎಂದು ತೋರಿಸಿಕೊಳ್ಳುವ; ಅದರಂತೆ ನಟನೆ ಮಾಡುವ; ತಾವೇ ನಿಜವಾದ ವಿನಯಶೀಲರು, ಸತ್ಯಸಂದರು, ನ್ಯಾಯವಾದಿಗಳು, ದಯಾಪರರು, ಉಪಕಾರಿಗಳು, ಸೇವಾಧುರೀಣರು, ಸ್ನೇಹಶೀಲರು, ನಂಬಿಕಸ್ಥರು, ದಾನಿಗಳು ಇತ್ಯಾದಿ ಸೌಜನ್ಯ ಗುಣಗಳನ್ನು ಹೊಂದಿರುವವರೆಂದು ಬೂಟಾಟಿಕೆಯಿಂದ ಜನರನ್ನು ನಂಬಿಸುವ ವಚನಭ್ರಷ್ಟರೇ ತುಂಬಿರುವಾಗ ನಿಜವಾದ ಸೌಜನ್ಯಶೀಲರು ಕಾಣುವುದಾದರೂ ಹೇಗೆ ? ಅಷ್ಟೇ ಅಲ್ಲ ಈ ಕಪಟಿಗಳು ಎಷ್ಟು ಚಾಣಾಕ್ಷರೆಂದರೆ ನಿಜವಾದ ಸೌಜನ್ಯವಂತರು ಕಾಣಿಸಿಕೊಳ್ಳದಂತೆ, ತಾವೇ ವಿಜೃಂಭಿಸುವಂತೆ ವ್ಯವಸ್ಥಿತ ಜಾಲವನ್ನೇ ಹೆಣೆದಿರುತ್ತಾರೆ.

ಆದರೆ ವಾಸ್ತವವೆಂದರೆ ನಿಜವಾದ ಸೌಜನ್ಯಶೀಲರು ಇವರನ್ನು ಮೀರಿ ಬೆಳೆಯುತ್ತಲೇ ಇರುತ್ತಾರೆ. ಇವರ ಬೆಳವಣಿಗೆಯನ್ನು ಯಾರೂ ತಡೆಯಲು ಸಾಧ್ಯವೇ ಇಲ್ಲ. ತಡೆಯುವವರು ನಾವು ತಡೆದಿದ್ದೇವೆಂದುಕೊಂಡರೆ ಅದು ಅವರ ಭ್ರಮೆಯಾಗಿರುತ್ತದೆ, ಜೊತೆಗೆ ಕಪಟವೇಷಧಾರಿಗಳು ನಾವು ಬೆಳೆಯುತ್ತಿದ್ದೇವೆಂದುಕೊಂಡರೆ ಅದು ಅವರ

ಮೂರ್ಖತನವಾಗಿರುತ್ತದೆ. ತತ್ಕಾಲಕ್ಕೆ ಗೋಲ್‌ಮಾಲ್ ಮಾಡಿ, ಜನರನ್ನು ಮರುಳು ಮಾಡಿ ತಾವು ಲಾಭ ಪಡೆಯಬಹುದಾದರೂ ಆ ಲಾಭದಿಂದ ಅವರು ಬೆಳೆಯುವುದೂ ಇಲ್ಲ, ನ್ಯಾಯವಾದ ಸೌಜನ್ಯವಂತರಿಗೆ ಆಗುವ ನಷ್ಟದಿಂದ ಅವರ ಬೆಳವಣಿಗೆಗೆ ಯಾವ ಅಡ್ಡಿಯೂ ಆಗುವುದಿಲ್ಲ. ಹೊಳೆಯುವ ಸೂರ್ಯನಂತೆ, ಅರಳುವ ಹೂವಿನಂತೆ, ಸೂಸುವ ಸುಗಂಧದಂತೆ ನೈಜ ಸೌಜನ್ಯಶೀಲರು ತಾವಾಗಿಯೇ ಎಲ್ಲರ ಗಮನವನ್ನು ಸೆಳೆಯುತ್ತಾರೆ, ಆಕರ್ಷಿಸುತ್ತಾರೆ, ಆಯಸ್ಕಾಂತದಂತೆ ಶಕ್ತಿವರ್ಧಿತರಾಗುತ್ತಾರೆ. ತಮ್ಮ ನಿಯತವಾದ, ಶಿಸ್ತುಬದ್ಧವಾದ ನಡವಳಿಕೆಯಿಂದ ನಳನಳಿಸುತ್ತಿರುತ್ತಾರೆ.

ಸಮಾಜ ಅಂಥವರನ್ನು ಗುರುತಿಸದಿದ್ದರೆ ಅದು ಸಮಾಜದ ದೋಷವೇ ವಿನಃ ಅವರದ್ದಲ್ಲ, ಅದಕ್ಕಾಗಿ ಅವರು ಹಾತೊರೆಯುವುದಿಲ್ಲ, ಆಕ್ಷೇಪಿಸುವುದಿಲ್ಲ, ಕೊರಗುವುದಿಲ್ಲ. ಅಂಥವರನ್ನು ಗೌರವಿಸಿದರೆ ಸಮಾಜಕ್ಕೆ ಗೌರವ ಬರುತ್ತದೆ; ಮರೆತರೆ ನಷ್ಟವಾಗುತ್ತದೆ, ಸಾಂಸ್ಕೃತಿಕ ದಿವಾಳಿತನದಿಂದ ದೇಶ ನರಳುತ್ತದೆ. ಇಂತಹ ಸೌಜನ್ಯ ಭಾರತೀಯ ಸಂಸ್ಕೃತಿಯಲ್ಲಿ ಹಾಸುಹೊಕ್ಕಾಗಿದೆ. ಆದರೆ ಆಧುನಿಕ ಸಮಾಜದಲ್ಲಿ ಇದರ ಮೌಲ್ಯವನ್ನು ಕಡೆಗಣಿಸಲಾಗುತ್ತಿದೆ. ಬೇರೆ ಬೇರೆ ಆಸಕ್ತಿಗಳು ಬದುಕನ್ನು ಕಟ್ಟುತ್ತಿರುವಾಗ ಈ ಹಳೆಯ ಹೊನ್ನು ಮಸುಕಾಗುತ್ತಿದೆ. ಕೃತಕ ಬಂಗಾರವೇ ಮೆರೆಯುತ್ತಿದೆ. ಜನ ಅಸಲಿ ಯಾವುದು ನಕಲಿ ಯಾವುದು ಎಂಬುದನ್ನು ತಿಳಿಯುವಷ್ಟೂ ಕನಿಷ್ಟ ಅರಿವಿನಿಂದ ದೂರವಾಗುತ್ತಿದ್ದಾರೆ. ಹಾಗೆಂದು ಚಿನ್ನದ ಬೆಲೆಯೇನೂ ಕುಗ್ಗಿಲ್ಲ, ದಿನೇ ದಿನೇ ಏರುತ್ತಲೇ ಇದೆ !

ಸೌಜನ್ಯವೇ ಸಮಾಜದ ನೆಲೆ-ಬೆಲೆ

-ಕೋ. ವೆಂ. ರಾಮಕೃಷ್ಣೇಗೌಡ

ಇಂದಿನ ಹಿರಿಯರು ಒಂದೆಡೆ ಕಲೆತಾಗ, ಪರಸ್ಪರರ ಮಾತಿನ ಮಧ್ಯೆ ಯುವಕರ ವರ್ತನೆಯ ಬಗೆಗೆ ಪ್ರಸ್ತಾಪ ಬಂದೇ ಬರುತ್ತದೆ. ಮಗನ, ಮಗಳ, ಮೊಮ್ಮಕ್ಕಳ ನಡೆ-ನುಡಿಗಳು ಚರ್ಚೆಗೆ ಗ್ರಾಸವಾಗುವುದು ಸಹಜ. ಯುವಕ, ಯುವತಿಯರು ಮರೆಯುತ್ತಿದ್ದಾರೆ, ಅವರಿಗೆ ಗುರು ಹಿರಿಯರ ಬಗೆಗೆ ಗೌರವ ಭಾವನೆಯೇ ಇಲ್ಲ. ಸಾಮಾನ್ಯರ ಅರ್ಥದಲ್ಲಿ ಹೇಳುವುದಾದರೆ 'ತಲೆಯೇ ನಿಲ್ಲುವುದಿಲ್ಲ'. ಇಂಥವರಿಂದ ಮನೆಯೂ ಉದ್ಧಾರವಾಗದು, ದೇಶವೂ ಉದ್ಧಾರವಾಗದು ! ಈ ರೀತಿ ಹೇಳುತ್ತಾ ಕಾಲ ಕೆಟ್ಟು ಹೋಗಿದೆ ಎಂಬ ತೀರ್ಮಾನಕ್ಕೆ ಬರುವುದು ಹಿರಿಯರ ಸಾಮಾನ್ಯ ಗುಣವೊ ? ಎಂಬಂತಾಗಿದೆ. ಈ ಪ್ರಸ್ತಾವನೆಯನ್ನು ಮಾಡುತ್ತಿರುವುದು 'ಸೌಜನ್ಯ'ವನ್ನು ಕುರಿತು ಎರಡು ಮಾತು ಹೇಳುವುದಕ್ಕಾಗಿ.

ಈ ಅಭಿಪ್ರಾಯದ ಬೆನ್ನು ಹತ್ತಿ ನನಗಾದ ಅನುಭವಗಳ ಹಿನ್ನೆಲೆಯಲ್ಲಿ 'ಸೌಜನ್ಯ'ವನ್ನು ಕುರಿತು ಹಲವು ವಿಚಾರಗಳನ್ನು ಓದುಗರೊಡನೆ ವಿನಿಯಮ ಮಾಡಿಕೊಳ್ಳಬಯಸುತ್ತೇನೆ. ಇತ್ತೀಚೆಗೆ ರಾಷ್ಟ್ರಕವಿ ಜಿ.ಎಸ್. ಶಿವರುದ್ರಪ್ಪ ಅವರನ್ನು ಅವರ ಮನೆಯಲ್ಲಿ ಭೇಟಿ ಮಾಡುವ ಅವಕಾಶ ಲಭ್ಯವಾಗಿತ್ತು. ಕಾರ್ಯಕ್ರಮಕ್ಕೆ ಅವರನ್ನು ಕರೆದುಕೊಂಡು ಹೋಗುವ ಹೊಣೆ ನನ್ನ ಮೇಲೆ ಬಿದ್ದಿತ್ತು. ಇಳಿಹೊತ್ತು ಸುಮಾರು ಮೂರು ಮುಕ್ಕಾಲು ಗಂಟೆಗೆ ಅವರ ಮನೆಗೆ ಹೋದೆ. ಅವರೇ ಬಂದು ಬಾಗಿಲು ತೆಗೆದರು. ಯಾರು ? ಬನ್ನಿ. ಎಂದು ಒಳಗೆ ಕರೆದರು. ನಾನು ಸಂಕೋಚ, ಸ್ವಲ್ಪ ಭಯದಿಂದಲೇ ಒಳಗೆ ಅಡಿಯಿಟ್ಟೆ. ಜಿಎಸ್‌ಎಸ್ ಅವರಿಗೆ ಮುಂಗೋಪ ಎಂಬುದನ್ನು ನಾನು ಬಲ್ಲೆ. ಹಲವಾರು ಬಾರಿ ದೂರವಾಣಿಯ ಮೂಲಕ ಕಾರ್ಯಕ್ರಮಗಳಿಗೆ ಆಹ್ವಾನಿಸಿ ವಿಫಲನಾಗಿದ್ದೆ. ಪಂಪನ ೧೧೦೦ನೇ ಹುಟ್ಟುಹಬ್ಬಕ್ಕೆ ಮಾತ್ರ ಒಪ್ಪಿ ಬಂದಿದ್ದರು. ಆಗಲೂ ಹೆಚ್ಚು ಮಾತನಾಡಿರಲಿಲ್ಲ. ಬಾಗಿಲಿನಿಂದ ಒಳನಡೆದು ಎಡಭಾಗದ ಕೊಠಡಿಗೆ ಅವರ ಹಿಂದೆ ನಡೆದ ನನ್ನನ್ನು ಆತ್ಮೀಯವಾಗಿ ಬರಮಾಡಿಕೊಂಡರು. ನನಗೋ ಮುಜುಗರವೋ ಮುಜುಗರ. ಕುಳಿತೊಡನೆ, ಏನು ಬಂದದ್ದು ? ಎಂದರು ಇಂದು ಕಾರ್ಯಕ್ರಮವಿದೆಯಲ್ಲ ಸಾರ್, ಕರೆದುಕೊಂಡು ಹೋಗಲು ಕಾರು ತಂದೆ ಎಂದೆ.

ಇದೇನು? ಐದೂವರೆಗೆ ಇರುವ ಕಾರ್ಯಕ್ರಮಕ್ಕೆ ಮೂರುಮುಕ್ಕಾಲು ಗಂಟೆಗೇ ಬರುವುದೆ ? ಈಗ ನಾನು ರೆಸ್ಟ್ ತಗೊಬೇಕು ಅಂದುಕೊಂಡಿದ್ದೆ' ಅಂದರು. ನಾನೆಂದೆ 'ಸಾರ್ ನಾನು ಹೊರಗೆ ಕಾರಿನಲ್ಲಿ ಕುಳಿತುಕೊಳ್ಳುತ್ತೇನೆ. ತಾವು ವಿಶ್ರಾಂತಿ ತೆಗೆದುಕೊಳ್ಳಿ, ನಾಲ್ಕೂವರೆಗೆ ಮನೆ ಬಿಡೋಣ ಎಂದೆ. ಅದಕ್ಕವರು ಇಲ್ಲ. ನಿಮ್ಮೊಡನೆ ಮಾತಾಡುತ್ತಿದ್ದರೆ ರಿಲಾಕ್ಸ್ ಆಗುತ್ತೆ ಕುಳಿತು ಮಾತಾಡಿಕೊಳ್ಳೋಣ ಎಂದು ಮಾತಿಗಿಳಿದರು. ಅವರು ನನ್ನನ್ನು ಹಾಸ್ಯಗಾರ ಎಂ. ಕೃಷ್ಣೇಗೌಡ ಎಂದು ಭಾವಿಸಿದ್ದಂತೆ ತೋರಿತು. ಅದಕ್ಕಾಗಿ ಇಷ್ಟು ಸಲಿಗೆಯಿಂದ ಮಾತನಾಡುತ್ತಿದ್ದಾರೆ ಎಂದುಕೊಂಡು ಸಾರ್ ನನ್ನ ಹೆಸರು ಕೋ. ವೆಂ. ರಾಮಕೃಷ್ಣೇಗೌಡ, ಬೆಂಗಳೂರು ನಗರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ನಿಕಟಪೂರ್ವ ಅಧ್ಯಕ್ಷ ಎಂದು ವಿವರಣೆ ನೀಡಿದೆ. ಅವರ ಮಾತಿನ ಧಾಟಿಯಲ್ಲಿ ಯಾವ ಬದಲಾವಣೆಯೂ ಕಾಣಲಿಲ್ಲ, ಅಷ್ಟೇ ಆತ್ಮೀಯವಾಗಿ ಮಾತನಾಡಿದರು. ಬೆಂಗಳೂರಿನ ಕನ್ನಡ ಚಳುವಳಿ, ರೈಲ್ವೆ ಇಲಾಖೆಯಲ್ಲಿ ಕನ್ನಡಿಗರಿಗೆ ಆಗುತ್ತಿರುವ ಅನ್ಯಾಯ, ಇಂದಿನ ರಾಜಕಾರಣಿಗಳ ಮಾತು, ವರ್ತನೆ, ಸಾಹಿತ್ಯ, ಜಲವಿವಾದ, ಗಡಿವಿವಾದ ಹೀಗೆ ಮುಕ್ಕಾಲು ಗಂಟೆ ಮುಕ್ತವಾಗಿ ಮಾತನಾಡಿದರು.

ಮಾತಿನ ಮಧ್ಯೆ 'ನೀವು ಏನು ಕುಡಿಯುತ್ತೀರಿ ? ಕಾಫಿಯೊ, ಟೀನೊ ? ಎಂದು ಕೇಳಿದರು. ನನಗೆ ಕಾಫಿ, ಟೀ ಅಭ್ಯಾಸವಿಲ್ಲ ಸಾರ್, ಏನೂ ಬೇಡ ಎಂದೆ. ಅವರು, ನಾನೂ ಕುಡಿಯುವುದಿಲ್ಲ, ಕಷಾಯ ಕುಡಿಯುತ್ತೀರೊ ? ಇಬ್ಬರೂ ಕುಡಿಯೋಣ' ಅಂದರು. ಕಷಾಯ ಬಂತು, ಇಬ್ಬರೂ ಕುಡಿದೆವು. ನಾನು ಕುಡಿದಿದ್ದ ಲೋಟವನ್ನು ಸೇರಿಸಿಕೊಂಡು ಅವರೇ ಒಳಗೆ ತೆಗೆದುಕೊಂಡು ಹೋದಾಗ, ನನ್ನ ಹೃದಯ ತುಂಬಿ ಬಂದಿತು. ಅವರು ತೋರಿದ ಗೌರವ ನನ್ನನ್ನು ಅಂತರ್ಮುಖಿಯನ್ನಾಗಿಸಿತು. ಒಂದೋ ಎರಡೊ ಪುಸ್ತಕವನ್ನು ಬರೆದಾಕ್ಷಣ ತಾವು ದೊಡ್ಡ ಸಾಹಿತಿಯೆಂದು ಬೀಗುವ, ಒಂದೆರಡು ಗೀತೆಗಳನ್ನು ಹಾಡಲು ಬಂದರೆ ದೊಡ್ಡ ಸಂಗೀತಗಾರನೆಂದು ಹಮ್ಮುಪಡುವ, ಏನಿಲ್ಲದಿದ್ದರೂ ಎಲ್ಲವೂ ನನಗಿದೆ ಎಂದು ಅಹಂಕಾರದಿಂದ ಮೆರೆಯುವ ಜನರ ಮಧ್ಯೆ ಇಂಥ ತುಂಬಿದ ಕೊಡಗಳು ಇವೆಯಲ್ಲ ಎಂದು ಹೆಮ್ಮೆಯಿಂದ ಅಂದು ಸಂತೋಷಪಟ್ಟು ಮನದಲ್ಲೇ ನಮಿಸಿದೆ.

ಡಾ॥ ರಾಜಕುಮಾರ್ ಅವರಿಗೆ ದಾದಾಸಾಹೇಬ್ ಫಾಲ್ಕೆ ಪ್ರಶಸ್ತಿ ಬಂದ ಸಂದರ್ಭದಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿಗೆ ಅವರು ಒಂದು ಲಕ್ಷ ರೂಪಾಯಿ ದತ್ತಿ ನೀಡಿದರು. ಆಗ ಕನ್ನಡ ಸಾಹಿತ್ಯ ಪರಿಷತ್ತು ಕುವೆಂಪು ಕಲಾಕ್ಷೇತ್ರದಲ್ಲಿ ಸಮಾರಂಭ ಏರ್ಪಡಿಸಿತ್ತು. ಡಾ॥ ರಾಜ್ ದಂಪತಿಗಳು ಪರಿಷತ್ತಿಗೆ ಬಂದಿದ್ದರು. ಕನ್ನಡದ ಮೇರು ನಟರನ್ನು ಸನಿಹದಿಂದ ಕಂಡು, ಮಾತನಾಡಿಸಿ, ಕೈ ಕುಲುಕುವ ಸೌಭಾಗ್ಯ ನನಗೆ ದೊರೆತ್ತಿತ್ತು. ಕನ್ನಡಿಗರ ಹೃದಯ ಸಿಂಹಾಸನಾಧೀಶ್ವರರ ಸರಳತೆ, ಸಜ್ಜನಿಕೆ, ಎಲ್ಲರೊಡನೆ ಬೆರೆತು ಮಾತನಾಡಿದ ರೀತಿ ಇವು

ನನ್ನನ್ನು ಮೂಕವಿಸ್ಮಿತನನ್ನಾಗಿ ಮಾಡಿತು. ಆ ಘಟನೆ ಎಂದೆಂದಿಗೂ ನನ್ನನ್ನು ಕಾಡುತ್ತಲೇ ಇರುತ್ತದೆ. ಅಷ್ಟು ಹೃದಯಸ್ಪರ್ಶಿಯಾಗಿತ್ತು ಅವರ ಸೌಜನ್ಯ.

ಕರ್ನಾಟಕದ ಮುಖ್ಯಮಂತ್ರಿಯಾಗಿದ್ದ ವೀರಪ್ಪಮೊಯಿಲಿ ಅವರು ಸಾಹಿತ್ಯ ಕ್ಷೇತ್ರದಲ್ಲೂ ಸಾಧನೆಗೈದಿದ್ದಾರೆ. ರಾಷ್ಟ್ರೀಯ ಮಟ್ಟದಲ್ಲಿ ಹೆಸರು ಮಾಡಿರುವ ಅವರು ಸಾಮಾನ್ಯರನ್ನು ಗೌರವಿಸುವ ರೀತಿಗೆ ನಾನು ಬೆರಗಾಗಿದ್ದೇನೆ. ಇತ್ತೀಚೆಗೆ ಭಾರತೀಯ ವಿದ್ಯಾಭವನದಲ್ಲಿ ಅವರನ್ನು ಕುರಿತ ಕೃತಿಯೊಂದರ ಲೋಕಾರ್ಪಣ ಸಮಾರಂಭವಿತ್ತು. ನಾನೂ ಆ ಸಮಾರಂಭದಲ್ಲಿ ಭಾಗವಹಿಸಿದ್ದೆ. ಕಾರ್ಯಕ್ರಮ ಮುಗಿದ ನಂತರ ಅವರು ಎಲ್ಲರನ್ನೂ ಮಾತನಾಡಿಸುತ್ತಿದ್ದರು. ನಾನೂ 'ನಮಸ್ಕಾರ ಸಾರ್' ಎಂದೆ. ಮೊಯಿಲಿಯವರು ನಮಸ್ಕಾರ ಮಾಡಿ, ಏನು ಗೌಡರೆ, ಬಹಳ ವರ್ಷಗಳಿಂದ ನನ್ನನ್ನು ಸಂಪರ್ಕಿಸಲೇ ಇಲ್ಲ. ನನ್ನಿಂದ ದೂರವಾಗಬೇಕೆಂದೊ? ಎಂದರು. ಅವರ ಮಾತಿಗೆ ನಾನು ಹೇಗೆ ಪ್ರತಿಕ್ರಿಯೆ ನೀಡಬೇಕು ಎಂದು ಗೊತ್ತಾಗದೆ ತಬ್ಬಿಬ್ಬಾದೆ. ಕೂಡಲೇ, ಹಾಗೇನಿಲ್ಲ ಸಾರ್. ಇನ್ನು ಮುಂದೆ ಸಂಪರ್ಕದಲ್ಲಿರುತ್ತೇನೆ ಎಂದಷ್ಟೇ ಹೇಳಿದೆ. ವೀರಪ್ಪ ಮೊಯಿಲಿಯಂಥ ಸದಾ ಜನಸಂಪರ್ಕದಲ್ಲಿರುವ ರಾಜಕಾರಣಿಗಳು ತಮ್ಮನ್ನು ಜನ ನೆನಪಿನಲ್ಲಿ ಇಟ್ಟುಕೊಳ್ಳುತ್ತಾರೋ, ಇಲ್ಲವೋ ಎಂಬ ಭಯವನ್ನು ಹೊಂದಿರುವುದಿಲ್ಲ ಎಂಬುದು ನನಗೆ ಗೊತ್ತು. ಆದರೆ ಸಜ್ಜನಿಕೆಯನ್ನು ಅವರು ಮರೆತಿಲ್ಲ ಎಂಬ ಕಾರಣಕ್ಕೆ ಸದಾ ನೆನಪಿನಲ್ಲಿರುತ್ತಾರೆ.

ಮೇಲೆ ಹೇಳಿದ ಮೂರು ಘಟನೆಗಳೂ ಮೂರು ಕ್ಷೇತ್ರಗಳನ್ನು ಪ್ರತಿನಿಧಿಸುವ ಗಣ್ಯರ ಸ್ವಭಾವಕ್ಕೆ ಹಿಡಿದ ಕನ್ನಡಿ ಎಂದು ನಾನು ಭಾವಿಸುವೆ. ಸಾಹಿತ್ಯ, ಚಿತ್ರರಂಗ ಹಾಗೂ ರಾಜಕಾರಣ ಈ ಮೂರೂ ರಂಗಗಳೂ ಸಾಮಾನ್ಯ ಜನರೊಡನೆ ನೇರವಾಗಿ ಅಥವಾ ಪರೋಕ್ಷವಾಗಿ ಸಾಮಾನ್ಯರೊಡನೆ ಮುಖಾಮುಖಿಯಾಗುವವು. ಇಂಥ ಕ್ಷೇತ್ರಗಳ ಸಾಧಕರನ್ನು ಜನ ಸೂಕ್ಷ್ಮವಾಗಿ ಗಮನಿಸುತ್ತಿರುತ್ತಾರೆ. ಅವರ ನಡೆ-ನುಡಿ, ವೇಷ-ಭೂಷಣ, ರೀತಿ-ನೀತಿ, ವರ್ತನೆಗಳನ್ನು ತಾವೂ ಅಳವಡಿಸಿಕೊಳ್ಳಲು ಯತ್ನಿಸುತ್ತಾರೆ. ಆದುದರಿಂದ ಸಾಹಿತಿಗಳು, ಚಿತ್ರನಟ-ನಟಿಯರು, ರಾಜಕಾರಣಿಗಳು ಸಾರ್ವಜನಿಕ ಬದುಕಿನಂತೆ ವೈಯಕ್ತಿಕ ಬದುಕಿನಲ್ಲೂ ಸೌಜನ್ಯಕ್ಕೆ ಮಹತ್ವ ನೀಡುವಂತಾದರೆ ಆರೋಗ್ಯಕರ ಮನಸ್ಥಿತಿಯ ವೃದ್ಧಿಗೆ ಅದು ಪೂರಕವಾಗುವುದೆಂದು ಹೇಳಬಹುದು.

ನಿತ್ಯಜೀವನದಲ್ಲಿ ನಾವು ಹೇಗಿರುತ್ತೇವೆ ? ಯಾವ ರೀತಿಯ ಮಾತನಾಡುತ್ತೇವೆ ? ಬಟ್ಟೆಯ ಅಭಿರುಚಿ ಎಂಥವು ಎಂಬುದನ್ನು ಸಾವಿರಾರು ಕಣ್ಣು, ಮನಸ್ಸುಗಳು ಸೂಕ್ಷ್ಮವಾಗಿ ಗಮನಿಸುತ್ತಿರುತ್ತವೆ ಎಂಬ ಅರಿವು ನಮಗಿರುವುದಿಲ್ಲ. ನಾವು ವೈಯಕ್ತಿಕವಾಗಿ ಇರುತ್ತಲೇ ಒಂದು ಸಮೂಹವೊಂದರ ಪ್ರತಿನಿಧಿಗಳು ಎಂಬ ಪ್ರಜ್ಞೆ ನಮ್ಮಲ್ಲಿ ಜಾಗೃತವಾಗದಿದ್ದರೆ,

ಸೌಜನ್ಯದ ಎಲ್ಲೆಯನ್ನು ಮೀರಿ, ಉದ್ಧಟತನವನ್ನು ಪ್ರಕಟಿಸಲು ಹಿಂಜರಿಯುವುದಿಲ್ಲ. ಒಮ್ಮೆ ಆ ಬಗೆಯ ನಡತೆ ರೂಢಿಯಾಯಿತೆಂದರೆ, ಆ ವ್ಯಕ್ತಿ ಯಾವ ಸ್ಥಾನಕ್ಕೆ ಏರಿದರೂ ಸ್ಥಾನಘನತೆಯನ್ನೂ ನಿರ್ಲಕ್ಷಿಸಿ ತನಗೆ ಅನಿಸಿದ್ದನ್ನು ಮಾತ್ರ ಮಾಡಲು ತೀರ್ಮಾನಿಸುತ್ತಾನೆ. ಇಂಥ ತೀರ್ಮಾನಗಳು ದೂರಗಾಮಿ ಆಲೋಚನೆ, ವಿಶಾಲ ದೃಷ್ಟಿಕೋನಕ್ಕೆ ವಿರುದ್ಧವಾದುವಾಗಿ ಪರಿಣಮಿಸುವುದರಲ್ಲಿ ಸಂಶಯವಿಲ್ಲ.

ಸರ್ಕಾರಿ ಕಛೇರಿಗಳಲ್ಲಿ ಸಿಬ್ಬಂದಿಗಳು–ಅಧಿಕಾರಿಗಳ ವರ್ತನೆ, ಶಿಕ್ಷಕ–ವಿದ್ಯಾರ್ಥಿಗಳು ತರಗತಿಗಳಲ್ಲಿ ನಡೆದುಕೊಳ್ಳುವ ರೀತಿ ; ವ್ಯಾಪಾರಿಗಳು ಗ್ರಾಹಕರವನ್ನು ಕಾಣುವ ರೀತಿ, ಪೊಲೀಸರು ಸಾರ್ವಜನಿಕರನ್ನು ನಡೆಸಿಕೊಳ್ಳುವ ಬಗೆ, ಚಾಲಕ–ನಿರ್ವಾಹಕರು ಪ್ರಯಾಣಿಕರ ಜೊತೆ ವರ್ತಿಸುವ ಬಗೆ ಮುಂತಾದವುಗಳ ಮೇಲೆ ಸಾವಿರಾರು ಕಣ್ಣು ಬೀಳುತ್ತಿರುತ್ತವೆ– ಎಂಬ ಎಚ್ಚರ ನಮ್ಮಲ್ಲಿ ಜಾಗೃತವಾಗಿದ್ದರೆ ಎಷ್ಟೋ ಅವಗಢಗಳು ಮರೆಯಾಗುತ್ತವೆ. ಸೌಜನ್ಯ–ಬಡವ–ಶ್ರೀಮಂತರೆನ್ನದೆ ಯಾರಲ್ಲಿ ಬೇಕಾದರೂ ಇರಬಹುದು. ಹಿರಿಯ, ಕಿರಿಯ, ಪುರುಷ–ಮಹಿಳೆ ಯಾರಲ್ಲಾದರೂ ನಾವು ಸಜ್ಜನಿಕೆಯನ್ನು ಕಾಣಬಹುದು. ಸಾಮೂಹಿಕ ಸಜ್ಜನಿಕೆ, ವೈಯಕ್ತಿಕ ಸಜ್ಜನಿಕೆಗಳು ಅಷ್ಟೇ ಪ್ರಭಾವಶಾಲಿಯಾಗಿರುತ್ತವೆ. ಸೌಜನ್ಯ ಇಂಥದ್ದೇ ಎಂದು ನಿರ್ದಿಷ್ಟವಾಗಿ ಹೇಳಲು ಬರುವುದಿಲ್ಲವಾದರೂ, ಅಲಿಖಿತ ನಿಯಮ ಸದಾ ನಮ್ಮನ್ನು ಎಚ್ಚರಿಸುತ್ತಿರುತ್ತದೆ ಎಂಬುದು ಸತ್ಯ. ಕುಟುಂಬದ ಪರಿಸರ, ಹಿರಿಯರ ವರ್ತನೆಗಳು ಕಿರಿಯರ ಮೇಲೆ ಸಂಪೂರ್ಣ ಪ್ರಭಾವವನ್ನು ಬೀರುವಷ್ಟು ಪರಿಣಾಮಕಾರಿಯಾಗಿರುತ್ತವೆಂದು ನಾವು ತಿಳಿಯಬೇಕಾಗಿಲ್ಲ. ಸೌಜನ್ಯ ವ್ಯಕ್ತಿಯ ಅಂತರಂಗದಲ್ಲಿ ಮೂಡುವ ಭಾವನೆಯನ್ನು ಅವಲಂಬಿಸಿರುತ್ತದೆ. ಎಲ್ಲಾ ವೇಳೆಯಲ್ಲೂ ಅದು ಒಂದೇ ಬಗೆಯಾಗಿ ಇರುತ್ತದೆ ಎಂದೂ ತಿಳಿಯಬೇಕಾಗಿಲ್ಲ. ಕಾಲ, ಸಂದರ್ಭ, ವ್ಯಕ್ತಿಯ ಮನಃಸ್ಥಿತಿ, ಪರಿಸರಗಳೂ ಸೌಜನ್ಯದ ಮೇಲೆ ಪರಿಣಾಮ ಉಂಟು ಮಾಡುವ ಅಂಶಗಳಾಗಿವೆ ಎಂದು ಹೇಳಬಹುದು.

ಹೊಸದಾಗಿ ಯೌವನಕ್ಕೆ ಅಡಿ ಇಡುವ ಹುಡುಗ–ಹುಡುಗಿಯರಲ್ಲಿ ಸೌಜನ್ಯದ ಕೊರತೆ ಎದ್ದು ತೋರುವುದೆಂಬುದು ಸಾಮಾನ್ಯ ಸಂಗತಿ. ಅವರ ಈ ಬಗೆಯ ವರ್ತನೆಗೆ ಕಾರಣ ಏನು ಎಂಬುದನ್ನು ಯಾರೂ ಸೂಕ್ಷ್ಮವಾಗಿ ಅರ್ಥ ಮಾಡಿಕೊಳ್ಳಲು ಬಯಸುವುದಿಲ್ಲ. ಹುಡುಗ ಅಥವಾ ಹುಡುಗಿಗೆ 'ತಲೆ ತಿರುಗಿದೆ' ಎಂಬ ತೀರ್ಮಾನಕ್ಕೆ ಬರುವುದೇ ಹೆಚ್ಚು. ಆ ವಯಸ್ಸಿನ ಹುಡುಗ–ಹುಡುಗಿಗೆ ದೈಹಿಕ ಬೆಳವಣಿಗೆಗಳು ಆಗಿರುತ್ತವೆ. ಅದಕ್ಕನುಗುಣವಾಗಿ ಮಾನಸಿಕ ವೃದ್ಧಿಯಾಗಿರುವುದಿಲ್ಲ. ದೇಹದ ಅಂಗಾಂಗಗಳಲ್ಲಿ ಉಂಟಾಗುವ ಪುಳಕ, ರೋಮಾಂಚನಗಳು ಇತರರಿಗೆ ಗೋಚರಿಸುವುದಿಲ್ಲ, ಹಾಗಾಗಿ ತಂದೆ–ತಾಯಿ, ಅಜ್ಜ–ಅಜ್ಜಿ, ಅಕ್ಕ–ತಮ್ಮ ಕಣ್ಣು ಮುಂದೆ ಆಡುತ್ತಿದ್ದ ಸಾಮಾನ್ಯ ಹುಡುಗ–ಹುಡುಗಿಯಾಗಿಯೇ

ಕಾಣುತ್ತಿರುತ್ತಾರೆ. ಆದರೆ ಹುಡುಗ-ಹುಡುಗಿಗೆ ಹಾಗಲ್ಲ. ತಾವೂ ದೊಡ್ಡವರಾಗಿದ್ದೇವೆ. ಇತರರಿಗೆ ನೀಡುವಂತೆ ನಮಗೂ ಗೌರವವನ್ನು ನೀಡಬೇಕು. ಮಾತಿನಲ್ಲಿ ಏಕವಚನ ಇರಬಾರದು. ತಮ್ಮನ್ನು ಗುರ್ತಿಸಿ ಮರ್ಯಾದೆ ಕೊಡಬೇಕು. ತಮಗೂ ಸ್ವತಂತ್ರ ವ್ಯಕ್ತಿತ್ವವಿದೆ ಎಂಬುದನ್ನು ತಿಳಿಯಬೇಕೆಂದು ಬಯಸುತ್ತಾರೆ. ಯಾವ ಹಿರಿಯರೂ ಅವರನ್ನು ಹೀಗೆ ಕಾಣದಿದ್ದಾಗ, ಹಿರಿಯರ ಬಗೆಗೆ ತಿರಸ್ಕಾರವನ್ನು ಬೆಳೆಸಿಕೊಳ್ಳುತ್ತಾರೆ. ಅವರ ವರ್ತನೆಯಲ್ಲಿ ಇದ್ದಕ್ಕಿದ್ದಂತೆ ಬದಲಾವಣೆಗಳು ಗೋಚರಿಸುತ್ತವೆ. ತಮ್ಮ ವಯಸ್ಸಿನ ಹುಡುಗ-ಹುಡುಗಿಯೊಡನೆ ಮಾತ್ರ ತಮ್ಮ ಅಳಲನ್ನು ತೋಡಿಕೊಳ್ಳುತ್ತಾರೆ. ಸಾಮಾನ್ಯವಾಗಿ ಆ ವಯಸ್ಸಿನ ಎಲ್ಲರಿಗೂ ಒಂದೇ ಬಗೆಯ ಅನುಭವಗಳಾಗುವುದರಿಂದ, ಸಮಾನ ಮನಸ್ಕರಾದ ಅವರ ಯೋಚನೆ ಹಾಗೂ ನಡತೆಯಲ್ಲೂ ಸಾಮ್ಯತೆಯನ್ನು ರೂಢಿಸಿಕೊಳ್ಳುತ್ತಾರೆ. ಓದಿನಲ್ಲಿ ಆಸಕ್ತಿ ಕಡಿಮೆಯಾಗುತ್ತಾ ಬರುತ್ತದೆ. ಹೇಳಿದ ಮಾತನ್ನು ಕೇಳಬಾರದೆಂಬ ಮನೋಭಾವ ರೂಢಿಯಾಗುತ್ತದೆ. ತನ್ನಿಷ್ಟದಂತೆ ನಡೆಯುವ, ತನಗೆ ಬೇಕೆನಿಸಿದ್ದನ್ನು ಪಡೆಯುವ, ಬಯಸಿದ್ದೆಲ್ಲವೂ ಈಡೇರಬೇಕೆಂಬ ಹಠದ ಪ್ರವೃತ್ತಿ ಅಧಿಕಗೊಳ್ಳುತ್ತಾ ಹೋಗಿ, ಕೊನೆಗೆ ಅಸೌಜನ್ಯ, ಅಹಂಕಾರಗಳು ಮೈಗೂಡುತ್ತವೆ.

ನಮ್ಮ ಸಾಮಾಜಿಕ ಹಾಗೂ ಸಾಂಸಾರಿಕ ವ್ಯವಸ್ಥೆಯಲ್ಲಿ ಇಂಥ ವಯಸ್ಸಿನವರ ಸಮಸ್ಯೆಗಳನ್ನು ಬಗೆಹರಿಸುವ ಪ್ರಯತ್ನಗಳು ವ್ಯವಸ್ಥಿತವಾಗಿ ನಡೆಯುವುದಿಲ್ಲವಾದ್ದರಿಂದ ಅವರು ಅಡ್ಡದಾರಿ ಹಿಡಿಯುತ್ತಾರೆ. ಹದಿಹರೆಯದವರನ್ನು ಆಕರ್ಷಿಸಲು ಸಿನಿಮಾ, ಟಿ.ವಿ., ಮೊಬೈಲು ಫೋನು, ಇಂಟರ್‌ನೆಟ್ ವೆಬ್‌ಸೈಟುಗಳು, ವಿಡಿಯೊಗೇಮ್ ಪಾರ್ಲರ್, ಪಾರ್ಕುಗಳು ಹೇರಳವಾಗಿವೆ. ಮನೆಯವರೊಡನೆ ಹೇಳಲಾರದೆ, ಶಾಲಾ ಕಾಲೇಜಿನಲ್ಲಿ ತಿಳಿಸಲಾಗದೆ ತೊಳಲುವ ಅವರು ಮೇಲೆ ತಿಳಿಸಿರುವ ಯಾವುದಾದರೊಂದು ಅಥವಾ ಹಲವು ಆಕರ್ಷಣೆಗೆ ಒಳಗಾಗುವರು. ಬಹಳಷ್ಟು ಮಂದಿ ಏಕಾಂತದಲ್ಲಿ ಇರಲು ಬಯಸುತ್ತಾರೆ. ಕೆಲವೊಮ್ಮೆ ಮಾದಕ ದ್ರವ್ಯ ವ್ಯಸನಿಗಳಾಗುವ ಅಪಾಯವೂ ಉಂಟು. ಹೀಗೆ ಸಜ್ಜನ ಪ್ರಜೆಗಳಾಗಿ ಬಾಳಬೇಕಾದವರು ಅಸೌಜನ್ಯವನ್ನು ರೂಢಿಸಿಕೊಂಡು ಅಕ್ರಮ, ಅನ್ಯಾಯ, ಅತ್ಯಾಚಾರಗಳಂಥ ಸಮಾಜ ವಿರೋಧಿ ಕೃತ್ಯಗಳಲ್ಲಿ ತೊಡಗುವ ಅಪಾಯವಿದೆ ಎಂದು ನಾವ್ಯಾರೂ ಗಂಭೀರವಾಗಿ ಯೋಚಿಸುವುದೇ ಇಲ್ಲ.

ಅಪ್ಪ-ಮಗ, ಅಮ್ಮ-ಮಗಳು, ಅತ್ತೆ-ಸೊಸೆ ಹೀಗೆ ಯಾವ ಸಂಬಂಧಗಳೂ ಈ ಬಗೆಯ ಚಿಂತನೆಯನ್ನು ನಡೆಸಿದಂತೆ ಕಂಡುಬರುವುದಿಲ್ಲ. ಪಾಶ್ಚಾತ್ಯ ಶಿಕ್ಷಣ, ಸಂಗೀತ, ಸಂಸ್ಕೃತಿಯ ಪ್ರಭಾವಕ್ಕೆ ಒಳಗಾಗಿ ಅವುಗಳ ಆಕರ್ಷಕ ಲಕ್ಷಣಗಳಿಗೆ ಮನವೀಯುತ್ತಿರುವ ನಮ್ಮ ತರುಣ ಪೀಳಿಗೆಯನ್ನು ಸಜ್ಜನ ಪ್ರಜೆಗಳನ್ನಾಗಿ ರೂಪುಗೊಳಿಸಲು ಕೇವಲ ಹಣ,

ಅಧಿಕಾರ, ಕಾರು, ಬಂಗಲೆಗಳಷ್ಟೇ ಸಾಲವು. ಜೀವನ ಹೇಗಾದರೂ ನಡೆಯಬಾರದು. ಇತರರು ಪರವಾಗಿಲ್ಲ ಎಂಬಂತಾದರೂ ನಡೆಯಬೇಕು. ಸಮಾಜಕ್ಕೆ ನಮ್ಮಿಂದ ಒಳ್ಳೆಯದು ಆಗದಿದ್ದರೂ ಕೆಟ್ಟುದು ಆಗದಿದ್ದರೆ ಸಾಕು. ನಾವು ಸ್ವತಂತ್ರವಾಗಿ ಬದುಕುತ್ತಿರುವಾಗ, ಇತರರ ಸ್ವಾತಂತ್ರ್ಯಕ್ಕೆ ಎಷ್ಟು ಪ್ರಮಾಣದಲ್ಲಿ ನಾವು ಚ್ಯುತಿ ತರುತ್ತಿದ್ದೇವೆ ಎಂಬ ಬಗ್ಗೆ ಕೆಲ ಸಮಯವಾದರೂ ಯೋಚಿಸಿದರೆ; ಸಾಮಾಜಿಕ ಎಚ್ಚರ ನಮ್ಮಲ್ಲಿ ಮೂಡಿದರೆ ಸೌಜನ್ಯ ನಮ್ಮ ಜೊತೆಗೇ ಇರುತ್ತದೆ. ಅದು ನಮ್ಮನ್ನಷ್ಟೇ ಎತ್ತರಕ್ಕೆ ಕೊಂಡೊಯ್ಯುವುದಿಲ್ಲ. ನಮ್ಮ ಜೊತೆಗಾರರನ್ನೂ, ಸಮಾಜವನ್ನೂ ಉನ್ನತವಾಗಿಸಲು ಸಹಕಾರಿಯಾಗುತ್ತದೆ. ಆದ್ದರಿಂದ ಪ್ರತಿಯೊಬ್ಬರ 'ಸೌಜನ್ಯ'ಕ್ಕೆ ಅಪಾರ ಬೆಲೆ ಇದೆ ಎಂಬ ತೀರ್ಮಾನಕ್ಕೆ ಬರಬಹುದು.

ಸನ್ನಡತೆಯಲ್ಲಿ ಸೌಜನ್ಯದ ಪಾತ್ರ

–ಡಾ॥ ಅನಸೂಯಾದೇವಿ

'ಸೌಜನ್ಯ' ಮಾನವ ಬದುಕಿನಿಂದ ಕಾಲ್ದೆಗೆಯುತ್ತಿರುವ ಕಾಲವಿದು. ಸೌಜನ್ಯವೆ ?.... ಏನು ಹಾಗೆಂದರೆ ? ಎಂದು ಕೇಳುವ ಕಾಲವಿದೆಂದರೂ ತಪ್ಪಿಲ್ಲ. ನಾಗರಿಕನೆನಿಸಿಕೊಂಡ ಮನುಷ್ಯನಲ್ಲಿ, ವಿದ್ಯಾವಂತರಲ್ಲಿ, ಸುಸಂಸ್ಕೃತರೆನ್ನಿಸಿ ಬಾಳುವವರಲ್ಲಿ ಅತಿ ಅಗತ್ಯವಾಗಿರಬೇಕಾದ ಒಂದು ಸದ್ಗುಣ, ಇಂದಿನ ಜನರಲ್ಲಿ ಕಾಣದೆ ಮರೆಯಾಗುತ್ತಿರುವ ಒಂದು ನಡವಳಿಕೆ. ವೈಜ್ಞಾನಿಕವಾಗಿ ಸಾಗುತ್ತಿರುವ, ವೇಗವಾಗಿ ದೌಡಾಯಿಸುತ್ತಿರುವ ಇಂದಿನ ದಿನಗಳ ಬದುಕಿನಲ್ಲಿ, ಸ್ಪರ್ಧಾತ್ಮಕವಾಗಿ ಸವಾಲುಗಳನ್ನೆಸೆಯುತ್ತ ಸಾಗುತ್ತಿರುವ ಇಂದಿನ ಜೀವನದಲ್ಲಿ 'ಸೌಜನ್ಯ'ವನ್ನು ಮೈಗೂಡಿಸಿಕೊಂಡು ನಡೆಯಲು ಯಾರಿಗೂ ಪುರುಸೊತ್ತೆಂಬುದೂ ಇಲ್ಲ, ಅದಕ್ಕೆ ಅತ್ಯಗತ್ಯವಿರುವ ತಾಳ್ಮೆಯಂತೂ ಮೊದಲೇ ಇಲ್ಲ.

ಭಾರತೀಯ ಸಂಸ್ಕೃತಿಯ ಅವಿಭಾಜ್ಯ ಅಂಗ ಈ 'ಸೌಜನ್ಯ'ವೆಂಬ ಗುಣ. ಸೌಜನ್ಯಯುಕ್ತರಾಗಿರಲು ಸಹನೆ ಎನ್ನುವುದಂತೂ ಅತ್ಯಗತ್ಯವಾಗಿ ಬೇಕೇಬೇಕು. ಇನ್ನೊಬ್ಬರ ಅಹವಾಲು, ತೊಂದರೆಗಳನ್ನು ಕುರಿತು ಕೇಳುವ, ಕೇಳಿಸಕೊಳ್ಳುವ ಗುಣವೆನಿಸುತ್ತದೆ. ಯಾರು ಕೋಪಿಷ್ಟರೋ, ಸಿಟ್ಟಿನ ಗುಣದವರಾಗಿರುತ್ತಾರೋ ಅವರಲ್ಲಿ ಈ ಗುಣ ಕಡಿಮೆಯೆ. 'ತಾನು' ಅಥವಾ 'ನಾನು' ಎಂಬ 'ಅಹಂ' ಯಾರಲ್ಲಿ ಹೆಚ್ಚಾಗಿ ತುಂಬಿರುತ್ತದೆಯೋ ಅವರಲ್ಲಿಯೂ ಈ ನಡಾವಳಿಗಳನ್ನು ನಿರೀಕ್ಷಿಸಲಾಗದು. ಮೇಲರಿಮೆಯಿಂದ ಬೀಗಿ ನಡೆಯುವವರು ಇತರರು ತನ್ನ ಬಳಿ ಸೌಜನ್ಯದಿಂದ ನಡೆದುಕೊಳ್ಳಬೇಕೆಂದು ನಿರೀಕ್ಷಿಸುತ್ತಾರೆಯೇ ವಿನಾ ಅವರು ಮತ್ತೊಬ್ಬರ ಬಳಿ ಹೀಗೆಯೇ ನಡೆದುಕೊಳ್ಳುತ್ತಾರೆಂದು ಹೇಳಬರುವಂತಿಲ್ಲ.

ಮೇಲಧಿಕಾರಿಯೊಬ್ಬರ ಚೇಂಬರಿನೊಳಗೆ ಸಾಮಾನ್ಯನೊಬ್ಬ ಏನನ್ನೋ ಹೇಳಿಕೊಳ್ಳಲು ಹೋದಾಗ 'ಕುಳಿತುಕೊಳ್ಳಿ' ಎನ್ನುವ ಒಂದು ಪ್ರಶಾಂತ ಸ್ನಿಗ್ಧತೆಯ ಮಾತನ್ನು ಆ ಅಧಿಕಾರಿ ಖಂಡಿತವಾಗಿಯೂ ಹೇಳಬಹುದಲ್ಲವೆ ? ಎತ್ತರದ ಸ್ಥಾನಮಾನಗಳಲ್ಲಿರುವವರಿಗೆ ಸೌಜನ್ಯವೆನ್ನುವುದು ಹೆಚ್ಚು ಶೋಭೆಯನ್ನೇ ತರುತ್ತದೆ. ಹಾಗೆಯೇ ನಮಗಿಂತ ವಿದ್ಯೆಯಲ್ಲಿ, ತಿಳುವಳಿಕೆಯಲ್ಲಿ, ವಯಸ್ಸಿನಲ್ಲಿ ಹಿರಿಯರಾಗಿರುವವರ ಮುಂದೆ ಕಾಲಿನ ಮೇಲೆ ಕಾಲು

ಹಾಕಿ ಕುಳಿತುಕೊಳ್ಳುವುದು, ಹಿರಿಯರ ಮಾತಿಗೆ ಎದುರುತ್ತರ ನೀಡುವುದಾಗಲೀ, ಸಿಟ್ಟಿನಿಂದ ಕಿರುಚಾಡುವುದಾಗಲೀ, ಎಗ್ಗಿಲ್ಲದೆ ಅವರ ಮುಂದೆ ಸಿಗರೇಟು ಸೇದುತ್ತ ಭುಸುಭುಸು ಹೊಗೆಯನ್ನು ಕವಿಸುವುದಾಗಲೀ ಅಸೌಜನ್ಯವೆಂದೇ ಕರೆಯಿಸಿಕೊಳ್ಳುತ್ತದೆ.

ಹಾಗಾದರೆ ಈ 'ಸೌಜನ್ಯ'ವೆಂಬುದೇನು ? ಅಸೌಜನ್ಯ ಯಾಕೆ ತಪ್ಪು ? ಸೌಜನ್ಯವೆಂದರೆ ಅದು ಮಾನವತೆಗೆ ತೋರುವ ಗೌರವವಷ್ಟೇ ಅಲ್ಲ, ಅದು ಮಾವನೀಯ ಗುಣಗಳಲ್ಲಿ ಒಂದು. ಹಿರಿಯರಿರಲಿ, ಕಿರಿಯರಿರಲಿ, ಇನ್ನೊಬ್ಬರಿಗೆ ನೋವಾಗದಂತೆ ಮಾತನಾಡುವ ಗುಣವೇ ಆಗಿದೆ. ಮಾಸವ ಜೀವಿಗೆ ಸಲ್ಲುವ ಗೌರವ ಆದರಗಳಿಗೆ ಸಂಕೇತವಾಗಿ ನಾವು ಸೌಜನ್ಯಶೀಲರಾಗಿರಬೇಕು ಎಂದು ಹೇಳುವುದೇ ನಮ್ಮ ಭಾರತೀಯ ಸಂಸ್ಕೃತಿ. ನಾವು ಮನುಷ್ಯ ಜನ್ಮಕ್ಕೆ ಬಂದಿದ್ದಕ್ಕೆ ಪ್ರತಿಯಾಗಿ ಸಲ್ಲಿಸುವ ಒಂದು ಮರ್ಯಾದೆಯ ಗುಣವೇ ಆಗಿದೆ.

"ಅಯ್ಯಾ ಎಂದರೆ ಸ್ವರ್ಗ, ಎಲವೋ ಎಂದರೆ ನರಕ" ಎಂದರು ಬಸವಣ್ಣನವರು. ಯಾರನ್ನಾದರೂ ಯಾಕೆ ಒರಟಾಗಿ ಮಾತನಾಡಿಸಬೇಕು ? "ನಾಲಿಗೆ ಕುಲ ಹೇಳಿತು" ಎನ್ನುವ ನುಡಿಗಟ್ಟು ಇದೇ ಸತ್ಯವನ್ನು ಹೇಳುತ್ತದೆ. ಕುಲವೆಂದರೆ ಇಲ್ಲಿ ಹುಟ್ಟಿನಿಂದ ಬಂದ ಜಾತಿಯನ್ನು ಕುರಿತು ಅಲ್ಲ, ನಾವು ಇನ್ನೊಬ್ಬರೊಂದಿಗೆ ನಡೆದುಕೊಳ್ಳುವಾಗಿನ, ಮಾತಾಡುವಾಗಿನ ರೀತಿ ನೀತಿಗಳನ್ನು ನಮ್ಮ ನಾಲಿಗೆಯೇ ನಿರ್ದೇಶಿಸುತ್ತದೆ ಎನ್ನುವುದು ಈ ನುಡಿಗಟ್ಟಿನ ಅರ್ಥ. ಕಣ್ಣು, ಮುಖಗಳು ನಮ್ಮ ಮನಸ್ಸಿನ ಕನ್ನಡಿಯಾದರೆ ನಮ್ಮ ಮಾತು, ಅಥವಾ ನಾವು ಮತ್ತೊಬ್ಬರನ್ನು ಸಮೀಪಿಸುವ ರೀತಿ ಇವು ನಮ್ಮ ವ್ಯಕ್ತಿತ್ವದ ಅಭಿವ್ಯಕ್ತಿಯಾಗುತ್ತದೆ ಎನ್ನುವುದನ್ನು ನಾವು ಮರೆಯಬಾರದು.

ಸೌಜನ್ಯಯುತವಾದ ನಡವಳಿಕೆ, ಮಾತುಗಾರಿಕೆ ಎನ್ನುವುದು ನಿಜಕ್ಕೂ ಒಂದು ಕಲೆಗಾರಿಕೆಯೇ ಹೌದು. ಇಂಥ ಕಲೆ ನಮ್ಮ ವ್ಯಕ್ತಿತ್ವದ ಅವಿಭಾಜ್ಯತೆಯಾಗಿ ಇರಬೇಕು. ಬಾಲ್ಯದಿಂದಲೂ ಇಂಥ ಗುಣವನ್ನು ರೂಢಿಸಿಕೊಳ್ಳುವಲ್ಲಿ ನಮ್ಮನ್ನು ರೂಪಿಸುವ ತಾಯಿ ತಂದೆ ಹಿರಿಯರ ಪಾಲೂ ಬೇಕಷ್ಟಿದೆ. "ಮನೆಯೆ ಮೊದಲ ಪಾಠಶಾಲೆ । ಜನನಿ ತಾನೆ ಮೊದಲ ಗುರುವು" ಅಲ್ಲವೆ ? ಸಭ್ಯತೆ, ಸೌಜನ್ಯಶೀಲತೆಗಳನ್ನು ಚಿಕ್ಕಂದಿನಿಂದಲೂ ತಾಯಿಯಾದವಳು ಮಗುವಿಗೆ ಎರೆದಿರಬೇಕು, ಸದ್ಗುಣ ನಡಾವಳಿಗಳನ್ನು ಕುರಿತ ಶಿಕ್ಷಣ ತಾಯಿಯಿಂದಲೇ ಮಗುವಿಗೆ ಬರಬೇಕು. ವ್ಯಕ್ತಿಯ ಸಂಸ್ಕೃತಿಯನ್ನು ಕಟ್ಟುವಲ್ಲಿ ಮಾತೆ ಎನಿಸಿಕೊಂಡವಳ ಪಾಲು ಬಹು ದೊಡ್ಡದಿದೆ. ನಮ್ಮ ಸಂಸ್ಕೃತಿಯನ್ನು ಉಳಿಸುವ, ಬೆಳೆಸುವ ಕಾರ್ಯದಲ್ಲಿ ಹೆಣ್ಣಾದವಳಿಗೆ ಮಿಗಿಲಾದ ಪಾತ್ರವಿದೆ, ಮಹತ್ತರವಾದ ಕರ್ತವ್ಯವಿದೆ. ಈ

ವಿಷಯದಲ್ಲಿ ಹೆಣ್ಣು ಕರ್ತವ್ಯ ವಿಮುಖಿಯಾದರೆ ಮಕ್ಕಳು ಅಸಭ್ಯತೆ, ಅಸೌಜನ್ಯಗಳ ಪ್ರತೀಕವಾಗಿ ಬೆಳೆದು ದಾರಿ ತಪ್ಪುವ ಸಂಭವ ಹೆಚ್ಚಾಗುತ್ತದೆ.

ಸೌಜನ್ಯಪೂರಿತ ವ್ಯಕ್ತಿತ್ವವಿರುವವರ ಮಾತು ಮೌಲಿಕವಾಗಿಯೂ, ಹಿತಕಾರಿಯೂ ಆಗಿರಬಲ್ಲದು. ಸೌಜನ್ಯವೇ ಗೊತ್ತಿಲ್ಲದವರ ಮಾತು ಕಾರ್ಯಸಾಧನೆಯಲ್ಲೂ ನಿರರ್ಥಕವಾದ ನೆಲೆಯನ್ನೇ ಕಾಣಬೇಕಾಗಿ ಬರುತ್ತದೆ. ಅದಕ್ಕೇ ಸರ್ವಜ್ಞ ಹೀಗೆ ಹೇಳಿಬಿಟ್ಟಿದ್ದಾನೆ :

ಮಾತು ಬಲ್ಲಾತಂಗೆ ಮಾತೊಂದು ಮಾಣಿಕವು
ಮಾತು ತಾನರಿಯದಧಮಂಗೆ ಮಾಣಿಕವು
ತೂತು ಬಿದ್ದಂತೆ ಸರ್ವಜ್ಞ ।

'ಸೌಜನ್ಯಶೀಲತೆ' ಎನ್ನುವುದು ತೋರಿಕೆಯ ವಿನಯವಂತೂ ಖಂಡಿತಾ ಅಲ್ಲ. ಕೆಲವರು 'ಕಾರ್ಯಾವಾಸೀ....' ಎಂಬಂತೆ ನಡೆದುಕೊಳ್ಳುತ್ತಾರೆ. ಡಂಭಾಚಾರ 'ಒಳಗೊಂದು ಹೊರಗೊಂದು' ಎಂಬಂತೆ ಬದುಕುವವರ ತೋರಿಕೆಯ ರೀತಿ. 'ಕೈಯ್ಯಲ್ಲಿ ಶರಣಾರ್ಥಿ, ಕಂಕುಳಲ್ಲಿ ದೊಣ್ಣೆ' ಎಂಬಂಥ ವ್ಯಕ್ತಿಗಳ ವಿಷಯ. ಅಂಥವರ ವಿಷಯ ಬಿಟ್ಟು ಹೇಳುವುದಾದರೆ ಸೌಜನ್ಯಶೀಲ ನಡಾವಳಿ ಎನ್ನುವುದು ನಿಜವಾದ ಸುಸಂಸ್ಕೃತ ವ್ಯಕ್ತಿತ್ವದ ಅಭಿವ್ಯಕ್ತಿ. ಅನುಭವಜನ್ಯ ಜ್ಞಾನದ ಆಳದಿಂದ ಹುಟ್ಟುವ ವಿವೇಕದಿಂದೊಡಗೂಡಿದ ಮಾತು, ನಡಾವಳಿಗಳನ್ನು ಸುಸಂಸ್ಕೃತ ವ್ಯಕ್ತಿಯು ಜನಮನಗಳಲ್ಲಿ ಬಿಂಬಿಸಬಲ್ಲ, ತನ್ಮೂಲಕ ತನ್ನ ಸುತ್ತಣವರ ನಡೆನುಡಿಗಳಲ್ಲಿ ಸಭ್ಯತೆ, ಸುಶೀಲತೆಗಳನ್ನು ಹುಟ್ಟು ಹಾಕಬಲ್ಲ. ಎಲ್ಲರಿಗೂ ಮನಃಪ್ರಿಯನಾಗಬಲ್ಲ.

ಮಾನವತೆಗೆ ಸಲ್ಲಿಸುವ ಗೌರವಾದರಗಳ ಪ್ರತೀಕವಾಗಿ ನಡೆದುಕೊಂಡರೆ ನಮಗಾಗುವ ನಷ್ಟವಾದರೂ ಏನು ? ಆದರೆ ಕೆಲವರಿಗೆ ಇಷ್ಟಾದರೂ ನಡೆದುಕೊಳ್ಳುವ ಇಷ್ಟವಿಲ್ಲ. ದರ್ಪ, ಬಿಗುಮಾನ, ಸೆಡವುಗಳೇ ಅಂಥವರಲ್ಲಿ ಹೆಚ್ಚಿನಂಶವಾಗಿ ತುಂಬಿಕೊಂಡು ಬೇರೆಯವರನ್ನು ಅವರು ತಿರಸ್ಕಾರ ಧೋರಣೆಯಿಂದಲೇ ಕಾಣುತ್ತಾರೆ. ನಡೆಯಿಸಿಕೊಳ್ಳುತ್ತಾರೆ. ಇಂಥವರನ್ನು ಕಂಡೇ ಬಸವಣ್ಣನವರು ಏನು ಬಂದಿರಿ ಹದುಳವಿದ್ದಿರೇ ವಚನದಲ್ಲಿ ನೊಂದು ನಿಟ್ಟುಸಿರಿಟ್ಟಿದ್ದಾರೆ, ಕೇಳಿಯೂ ಬಿಟ್ಟಿದ್ದಾರೆ.

ಕೆಡಹಿ ಅಹಂಕಾರದ ವರ್ತನೆಗಳನ್ನು ಖಂಡಿಸುತ್ತ ದೇವರು ನಿಮ್ಮ ಅಹಂಕಾರವನ್ನು ತಗ್ಗಿಸದೆ ಬಿಡುವುದಿಲ್ಲ ಎಂದು ತಮ್ಮ ವಚನದಲ್ಲಿ ಬಸವಣ್ಣನವರು ಎಚ್ಚರಿಸಿದಂತೆಯೇ ಡಿವಿಜಿಯವರು ಕೂಡ ತಮ್ಮ ಕಗ್ಗದಲ್ಲಿ ಒಂದೆಡೆ "ವಿಧಿ ಸೈರಿಸನು ದರ್ಪವನದಾರೊಳಂ' ಎಂದಿದ್ದಾರೆ. ಹೌದು, ಅಶಾಶ್ವತವಾದ ಈ ಬಾಳಿನಲ್ಲಿ ಬೀಗಿ ನಡೆಯುವ ಅಹಂಕಾರವಾದರೂ

ನಮಗೇಕೆ ? ನಯ ವಿನಯ ಸೌಜನ್ಯ ಸುಶೀಲತೆಗಳ ಸುಭಗವಾದ ಬಾಳು ನಮ್ಮದಾಗಿರಬೇಕಲ್ಲವೆ?

ಪುರಂದರದಾಸರ ಕೆಲವೊಂದು ಅನುಭವಗಳತ್ತ ಅವರ ಕೃತಿಗಳ ಮೂಲಕವೇ ನಾವು ಕಣ್ಣು ಹಾಯಿಸಿದಾಗ ಈ ಸೌಜನ್ಯ, ಅಸೌಜನ್ಯ ನಡಾವಳಿಗಳು ಅಂದಿನ ಸಮಾಜದಲ್ಲೂ ಇದ್ದುದನ್ನು ಕಾಣಬಹುದಾಗಿದೆ. ಅಂದಿನ ದಿನಗಳಲ್ಲಿ ಹರಿದಾಸರುಗಳಿಗೆ ಜನರಿಂದ ಪ್ರೀತಿ, ಗೌರವಗಳ ಮನ್ನಣೆಯೇ ದೊರೆಯುತ್ತಿತ್ತು. ಆದರೆ ಎಲ್ಲೆಲ್ಲಿಯೂ ಹೀಗೇ ಇತ್ತು ಎಂದೂ ಹೇಳಬರುವಂತಿಲ್ಲ. ಮನೆ ಬಾಗಿಲಿಗೆ ಬಂದಾಗ ಅವರ ಜೋಳಿಗೆಗೆ ನೀಡಲು ಒಲ್ಲದ, ಮನಸ್ಸು ಇಲ್ಲದ ಗೃಹಿಣಿಯರೂ ಇದ್ದರು. ಎದ್ದು ಬಂದು ಬಾಗಿಲು ತೆರೆದು ಭಿಕ್ಷೆ ನೀಡಲು ಮನಸ್ಸಿಲ್ಲ. ಆದರೆ ಕಾಠಿಣ್ಯದಿಂದ "ನೀಡಲೊಲ್ಲೆ, ಹೋಗು" ಎಂದು ಅಟ್ಟಿಬಿಡಲಾರದಂತೆ ಅವರನ್ನು ತಡೆದಿದೆ. ಹೇಗೆ ? ಏನೇನೋ ನೆಪಗಳನ್ನೊಡುತ್ತಿದ್ದಾರೆ. 'ಇಕ್ಕಲಾರೆ ಕೈ ಎಂಜಲು। ಚಿಕ್ಕ ಮಕ್ಕಳು ಅಳುತಾವೆ. ಹೋಗೋ ದಾಸಯ್ಯ' ಎಂಬ ಕೃತಿಯು ಇಂಥ ಚಿತ್ರಣ ನೀಡುತ್ತದೆ. 'ಅಟ್ಟದ ಮೇಲಿನ ಅಕ್ಕಿ ತೆಗೆಯಲಾರೆ । ಹೊಟ್ಟೆನೋವು ಮುಟ್ಟಾಗಿ ಕುಳಿತೇನೆ । ಕಟ್ಟುಗ್ರ ಮಾಡದೆ ಹೋಗೋ ದಾಸಯ್ಯ' ಅಚ್ಚ ಹೆಣ್ತನದ ನಾನಾ ನೆಪಗಳು ! ಇಂತಹ ನೆಪಗಳನ್ನೊಡ್ಡಿ ದಾಸರನ್ನು ಮುಂದೆ ಹೋಗುವಂತೆ ಮಾಡುತ್ತಿದ್ದಾರೆ ಈ ಮಹಿಳಾಮಣಿಗಳು ! ಮಹಿಳೆಯೊಬ್ಬಳು ಹರಿನಾಮ ಹಾಡುತ್ತ ಬರುತ್ತಿರುವ ದಾಸರನ್ನು ಅಷ್ಟು ದೂರದಿಂದಲೇ ಕಂಡು 'ಧಡಾರ್' ಎಂದು ತನ್ನ ಮನೆಯ ಬಾಗಿಲನ್ನು ಹಾಕಿದ್ದಿರಬೇಕು. ಪುರಂದರದಾಸರು 'ಕದವ ಮುಚ್ಚಿದಳದಕೋ ಗಯ್ಯಾಳಿ ಮೂಳಿ ॥' ಎಂದು ಪ್ರತಿಕ್ರಿಯಿಸಿ ಹಾಡಿಯೇಬಿಟ್ಟಿದ್ದಾರೆ. ಮೇಲಿನ ಮಹಿಳಾಮಣಿಗಳು ಕುಂಟು ನೆಪಗಳನ್ನು ಹೇಳಿ ದಾಸರ ಕಣ್ತಪ್ಪಿಸಿದರೆ ಈಕೆ ಎದುರಾಗಿ ಮುಖಕ್ಕೆ ಹೊಡೆದಂತೆ ಕದವನ್ನು ಅಪ್ಪಳಿಸಿ ಹಾಕಿ 'ಗಯ್ಯಾಳಿ' ಎನಿಸಿಕೊಂಡಳು! ಕೊಡಲು ಇಷ್ಟವಿಲ್ಲದಿದ್ದಲ್ಲಿ ಅಷ್ಟೇ ಹೋಯಿತು. ಬಸವಣ್ಣ ಹೇಳಿದ ಹಾಗೆ ಸೌಜನ್ಯದಿಂದ 'ಇಲ್ಲ' ಎಂದು ಹೇಳುವ ಗುಣವೂ ಇಲ್ಲದಿದ್ದರೆ ಹೇಗೆ ?

ಸಂಸ್ಕೃತ ಭಾಷೆಯ ಮಾತೊಂದು "ನ ಬ್ರೂಯಾತ್ ಸತ್ಯಂ ಅಪ್ರಿಯಂ' ಎನ್ನುತ್ತದೆ. ಇದು ಸೌಜನ್ಯಕ್ಕೆ ಬರೆದ ಭಾಷ್ಯವೇ ಆಗಿದೆ. ಕಟುಸತ್ಯವನ್ನು ಹೇಳಿ ಎದುರಿದ್ದವರ ಮನಸ್ಸು ನೋಯಿಸಬೇಡ ಎಂಬ ಈ ಮಾತಿನ ವ್ಯಾಖ್ಯಾನವನ್ನು ಮನಗಾಣಬೇಕು. ಹೇಳಲೇಬೇಕಾಗಿ ಬಂದಲ್ಲಿ ಆದಷ್ಟೂ ಮೃದುವಾಗಿ, ಮನನೋಯದಂತೆ ಅವರ ಮುಂದೆ ಸತ್ಯವನ್ನು ತಿಳಿಸುವುದೇ ವಿವೇಕಯುಕ್ತವಾದದು. ಅಪ್ರಿಯವಾದ ಸತ್ಯವನ್ನು ಹೇಳುವ ಮುಂಚೆ ವಿವೇಚಿಸಿಕೋ. ಚುಚ್ಚಿ ಕೆಣಕಿ ಮಾತನಾಡುವುದೇ ದೊಡ್ಡಸ್ತಿಕೆ ಅಲ್ಲ. ಬೇರೆಯವರ

ಮನಸ್ಸಿಗೆ ನೋವು ಕೊಡುವುದೇ ನಿನ್ನ ಉದ್ದಿಶ್ಯವಾಗಿರಬಾರದು ಎನ್ನುವುದನ್ನೆಲ್ಲ ಮೇಲಿನ ನುಡಿ ತಿಳಿಸಿಕೊಡುತ್ತದೆ.

ಇಂದಿನ ಸಮಾಜದಲ್ಲಿನ ಜನರನೇಕರಲ್ಲಿ ಸೌಜನ್ಯಯುಕ್ತ ನಡಾವಳಿಗೆ ಎಡೆಯೇ ಇಲ್ಲ ಎಂಬಂತಾಗಿದೆ. ವಿಪರೀತ ಜನಸಂದಣಿ, ವಾಹನಗಳ ಓಡಾಟ, ಸದ್ದುಗದ್ದಲದ ನಡುವೆ ಅವಸರದ ಪಾದಚಾರಿಗಳ ಒದ್ದಾಟದ ನಮ್ಮ ಬೆಂಗಳೂರಿನ ನಗರ ಜೀವನಶೈಲಿಯಲ್ಲಂತೂ ಸೌಜನ್ಯವೆಂಬುದಕ್ಕೆ ಹಣಿಕಿಕ್ಕಲೂ ದುಸ್ಸಾಧ್ಯವೆಂಬಂತಾಗಿದೆ. ಎಷ್ಟೋ ಆಟೋಚಾಲಕರಿಗೆ ಜನರು ಕರೆದಲ್ಲಿಗೆ ಬರುವ ಇಚ್ಛೆ ಇರುವುದಿಲ್ಲ. ಅದನ್ನು ಹೇಳುವಲ್ಲಿ ಒಂದು ಸೌಜನ್ಯ ಬೇಡವೆ ? ನೋಡಬೇಕು ಅವರ ಉದ್ಧಟತನದ, ತಿರಸ್ಕಾರ ಪ್ರಕಟಿಸುವ ಚರ್ಯೆಗಳನ್ನು ! ಇನ್ನು ಕೆಲವೆಡೆ ದಟ್ಟವಾದ ವಾಹನ ಸಂಚಾರದ ನಡುವೆಯೇ ಇಬ್ಬರು ವಾಹನಗಳನ್ನು ಅಡ್ಡಾದಿಡ್ಡಿ ನಿಲ್ಲಿಸಿಕೊಂಡು ಜಗಳವ್ರೋ ಜಗಳ, 'ನೀನೇ ತಗುಲಿಸಿದೆ, ನೀನೇ ಅಡ್ಡಬಂದೆ. ನಿನ್ನದೇ ತಪ್ಪು' ಎಂದು ಇಬ್ಬರು ಚಾಲಕರದ್ದೂ ಮಾತಿಗೆ ಮಾತು, ಕೈ ಕೈ ಮಿಲಾಯಿಸಿಕೊಂಡು ಜಗಳ ಯಾವ ಮಟ್ಟಕ್ಕಾದರೂ ತಿರುಗಬಹುದು ! ಪರಿಣಾಮವಾಗಿ ಎಷ್ಟೋ ಉದ್ದಕ್ಕೂ ಟ್ರಾಫಿಕ್ ಜ್ಯಾಮ್ ! ಉಳಿದೆಲ್ಲ ವಾಹನ ಚಾಲಕರಿಗೆ, ಪಯಣಿಗರಿಗೆ ಅಸಹನೆ, ಚಡಪಡಿಕೆ, ಹಾರ್ನ್‌ಗಳ ಸಂದೇಶ. ಪೊಲೀಸ್ ಬಂದು ಬಿಡಿಸುವವರೆಗೂ ಈ ಬವಣೆ ತಪ್ಪಿದ್ದಲ್ಲ. ಮಹಾನಗರಿಯಲ್ಲಿ ಈ ಗಲಾಟೆ, ಗೊಂದಲಗಳು ನೂರು ಮುಖ ತಾಳಿ ಅವತರಿಸಿ ಅಣಕಿಸುತ್ತವೆ ! ಸೌಜನ್ಯದ ನಾಲ್ಕು ಮಾತುಗಳಾಡಿ ಪರಸ್ಪರ ಬಗೆಹರಿಸಿಕೊಳ್ಳಬಹುದಾಗಿದ್ದ ಘಟನೆಯು ಹೀಗೆ ಉದ್ದಾನುದ್ದಕ್ಕೂ ಎಳೆದು ಎಲ್ಲರಿಗೂ ತೊಂದರೆ ಕೊಡುವಂತೆ ಆಗಿದ್ದಾದರೂ ಯಾಕೆ ? ಯಾರಿಗೂ ಸಹನೆ ಎನ್ನುವುದಿಲ್ಲ. ವಿಪರೀತ ಕೋಪದ ಪ್ರಕ್ರಿಯೆಗಳೇ ಎಲ್ಲರಲ್ಲೂ. ಮಾತಿಗೆ ಮಾತು, ಕೈ ಕೈ ಮಿಲಾಯಿಸಿ ಪ್ರತಿ ಉತ್ತರ ಕೊಟ್ಟಲ್ಲದೆ ಸಾಗದು, ಸೌಜನ್ಯಶಿಲರನ್ನು ಕೆಳಗೆ ತುಳಿದು ಅಟ್ಟಹಾಸ ಮಾಡುವವರದೇ ಕಾಲವಿದು !

ಮಹಾನ್ ಬೆಂಗಳೂರಿನಲ್ಲಿ ಸೌಜನ್ಯವೆನ್ನುವುದನ್ನು ದುರ್ಬೀನಿಟ್ಟು ಹುಡುಕಬೇಕೋ ಏನೋ! ಕೈಗಾಡಿಯ ತರಕಾರಿ ಮಾರುವ ಹೆಂಗಸರಿರಲಿ, ಮಾರುಕಟ್ಟೆಯಲ್ಲಿ ನಾನಾ ವಸ್ತುಗಳನ್ನು ಮಾರುವವರಿರಲಿ, ಎಷ್ಟೋ ಬಾರಿ ಕೇಳಿದ್ದಕ್ಕೆ ಸರಿಯಾದ ಉತ್ತರವೇ ಇಲ್ಲ. ಮುಖ ದಪ್ಪ ಮಾಡಿಕೊಂಡೇ ಅಥವಾ ಮೊಗದಿರುಹಿಕೊಂಡೇ ಒರಟಾದ ಉತ್ತರದ ವರ್ತನೆ ! ''ಬೇಕಿದ್ರೆ ತಗೋ, ಬೇಡದಿದ್ರೆ ಬಿಡು' ಎನ್ನುವ ಧೋರಣೆ ! ನಗೆಮೊಗದಿಂದ ವ್ಯವಹರಿಸುವವರು ತೀರಾ ಕಡಿಮೆಯೇ ! ಯಾರೇ ಇರಲಿ, ಕರೆದು ಕರೆದು ಜೀವನ ಕೊಡುತ್ತದಲ್ಲ ಈ ನಮ್ಮ ಬೆಂಗಳೂರು ತನ್ನ ಮಹಾಮಡಿಲಿನಲ್ಲಿ, ಅದರ ಪರಿಣಾಮವಿದು.

ಯಾರಿಗೆ ಯಾರ ದಾಕ್ಷಿಣ್ಯವೂ ಇಲ್ಲವೇ ಇಲ್ಲ. ಇನ್ನೊಂದು ಬಗೆಯ ಮಾರುವವರಿದ್ದಾರೆ. ಅವರದು ಬಗೆಬಗೆಯ ಬಣ್ಣಬಣ್ಣದ ಮಾತುಗಳಾಡಿಕೊಳ್ಳುವವರನ್ನು ಬಲೆಯಲ್ಲಿ ಬೀಳಿಸುವ ತೋರಿಕೆಯ ಸೌಜನ್ಯ !

ಕಾಲೇಜು ವಿದ್ಯಾರ್ಥಿಗಳೂ ಸೌಜನ್ಯ ಕಡಿಮೆಯಾಗುತ್ತಿರುವುದನ್ನು ತೋರಿಸಿಯೇಬಿಟ್ಟಿದ್ದಾರೆ! ಶಿಕ್ಷಕರೊಂದಿಗೆ ವಿದ್ಯಾರ್ಥಿಗಳು ನಡೆದುಕೊಳ್ಳುವ ಬಗೆಗಳಲ್ಲಿ ವಿಪರೀತ ಪ್ರಕ್ರಿಯೆಗಳು ಇವೆ. ಮೊದಲಿನ ಗುರು ಶಿಷ್ಯ ಸೌಹಾರ್ದ ಸಂಬಂಧ ಈಗೆಲ್ಲಿ ? ಎಲ್ಲ ವಿದ್ಯಾರ್ಥಿಗಳೂ ಹೀಗೇ ಎಂದಲ್ಲ. ಆದರೆ ಪಾಠ ಹೇಳುವ ಗುರುವಿನ ಬಗ್ಗೆ ಆದರ, ಗೌರವ ಸೂಚಿಸುವ ನಡವಳಿಕೆಗಳು ಕಮ್ಮಿಯಾಗಿವೆ. ಗುರುಹಿರಿಯರ ಮುಂದೆ ಉದ್ಧಟರಾಗಿ ನಡೆದುಕೊಳ್ಳುವ ಯುವಜನಾಂಗ ವರ್ಗ ಇದ್ದೇ ಇದೆ.

ಮನುಷ್ಯ ಮನುಷ್ಯನಿಗೆ ಮಾತ್ರ ಸಲ್ಲಿಸುವ ಸೌಜನ್ಯವಿದ್ದರೆ ಸಾಲದು. ನಮ್ಮ ಎಲ್ಲ ಅನ್ಯಾಯದ ವರ್ತನೆಗಳನ್ನೂ ಸಹಿಸಿಕೊಂಡೇ ನಮ್ಮನ್ನು ಪೊರೆಯುತ್ತಿರುವ ಪ್ರಕೃತಿಗೂ ನಾವು ತೋರಲೇಬೇಕಾದ ಪ್ರೀತಿ, ಸಲ್ಲಿಸಲೇಬೇಕಾದ ವರ್ತನೆಗಳಿವೆ. ಆದರೆ ಈ ವಿಷಯದಲ್ಲಿ ಮನುಷ್ಯ ಉದ್ಧಟತನದ, ಅವಿವೇಕದ ಪರಮಾವಧಿಯನ್ನೇ ಪ್ರಕಟಿಸುತ್ತಿದ್ದಾನೆ. ಟೂರಿಗೋ ಊರಿಗೋ ಹೋಗುತ್ತಾನೆ. ಪ್ರಶಾಂತ ಪ್ರಕೃತಿಯ ಮಡಿಲಿಗೆ ತಾನು ತಿಂದುಂಡು ಬೇಡವಾದ ಪ್ಲಾಸ್ಟಿಕ್ ತ್ಯಾಜ್ಯಗಳನ್ನು ಎಲ್ಲೆಂದರಲ್ಲಿ ನಿರ್ದಾಕ್ಷಿಣ್ಯವಾಗಿ ಬಿಸಾಕಿ ಪರಿಸರವನ್ನು ಹೊಲಸು ಮಾಡಿಬರುತ್ತಾನೆ. ಬೇಡವಾದ ಕಸವನ್ನೆಲ್ಲ ಹಾಕಲು 'ಯೂಸ್ ಮಿ' ಡಬ್ಬಿಗಳಿದ್ದರೂ ಕಾಣದ ಕುರುಡ ಇವನು. ಅಮ್ಮನ ಮಡಿಲನ್ನು ಹಾಳುಗೆಡಿಸುವ ಅನ್ಯಾಯಗಾರ, ಆಲಸಿ ಇವನು. ಪ್ರಕೃತಿ, ಪರಿಸರಕ್ಕೆ ಇಂಥ ದೇಣಿಗೆ ನೀಡುವ ನಾಗರಿಕನಿವನು !

ಎಷ್ಟೋ ಜನ ರಸ್ತೆಯುದ್ದಕ್ಕೂ ಎಲ್ಲೆಂದರಲ್ಲಿ, ಹೇಗೆಂದರೆ ಹಾಗೆ ಉಗುಳುವವರಿದ್ದಾರೆ. ಪ್ರಕೃತಿಯ, ಪರಿಸರದ ಮಾಲಿನ್ಯಕ್ಕೆ ಇವರ ಉದಾರ ದೇಣಿಗೆಯಿದು. ಬೇರೆಯವರಿಗೆ ತೊಂದರೆ, ಗಲೀಜು ಎನಿಸಬಹುದು ಎಂಬ ಪರಿವೆಯೇ ಇಲ್ಲದೆ ನಡೆದುಹೋಗುತ್ತಿರಲಿ, ವಾಹನದಲ್ಲಿ ಚಲಿಸುತ್ತಿರಲಿ, ತಮ್ಮ ಉಗುಳೇ ಪವಿತ್ರ ಎನ್ನುವಂತೆ ಹಾರಿಸಿಯೇ ಬಿಡುತ್ತಿರುತ್ತಾರೆ. ಎಂಥ ಅಸಭ್ಯತೆ ! ಬೆಂಗಳೂರಿನ ರಸ್ತೆಯ ಸಂಚಾರದಲ್ಲಿ ಎಲ್ಲ ಕಡೆಯೂ ಕಾಣುವಂಥ ದೃಶ್ಯಗಳಿವು! ಅವಿದ್ಯಾವಂತರು ಹೀಗೆ ಮಾಡುವುದಿರಲಿ, ನಾಗರಿಕರೆನ್ನಿಸಿಕೊಂಡವರು, ಟಿಪ್ ಟಾಪ್ ಡ್ರೆಸ್ ಮಾಡಿಕೊಂಡಿರುವವರು, ವೈಭವದ ಪ್ರತೀಕವಾದ ವಾಹನಗಳಲ್ಲಿ ಚಲಿಸುತ್ತಿರುವವರೂ ಹೀಗೆ ಉಗುಳುವುದನ್ನು ತಮ್ಮ ಹಕ್ಕು ಎಂಬಂತೆ ಚಲಾಯಿಸುವುದನ್ನು ಕಾಣುವಾಗ ಇವರ ಅಸಂಸ್ಕೃತ, ಅಸಭ್ಯ ನಡವಳಿಕೆಗೆ ಏನು ಹೇಳಬೇಕು ? ಹಾಗೆ ಉಗಿಯಬಾರದೆನ್ನುವ ವಿವೇಕವೂ ಇಲ್ಲವೆ ಇಂಥ ವಿದ್ಯಾವಂತ ನಾಗರಿಕರಿಗೆ ?

ನಾನು ಇಂಥ ದೃಶ್ಯಗಳನ್ನು ಕಂಡಾಗ ಅನೇಕ ಬಾರಿ ಪ್ರತಿಭಟಿಸಿದ್ದೇನೆ. 'ಏನು ನಿಮ್ಮಪ್ಪಂದಾ ರಸ್ತೆ ?' ಎನ್ನುವ ಅಸೌಜನ್ಯದ ದಾಷ್ಟಿಕ ಉತ್ತರಗಳನ್ನು ಪಡೆದಿದ್ದೇನೆ. ಸುಮ್ಮನಾಗದೆ ನಾನು 'ನಮ್ಮಪ್ಪಂದೂ ಅಲ್ಲ, ನಿಮ್ಮಪ್ಪಂದೂ ಅಲ್ಲ. ಸಾರ್ವಜನಿಕ ರಸ್ತೆಯಲ್ಲಿ ಹಾಗೆಲ್ಲ ನಟ್ಟ ನಡುವೆ ಉಗಿಯಬಾರದು' ಎಂದು ಲೆಕ್ಚರ್ ಕೊಟ್ಟೇ ಮುಂದೆ ಹೋಗಿದ್ದೇನೆ. ನಾನು ದಿನನಿತ್ಯ ಪಯಣಿಸುವ ಆಟೋ ಚಾಲಕರು ಎಷ್ಟೋ ಮಂದಿ ಹೀಗೇ. ಪ್ರತಿ ಸಿಗ್ನಲ್‌ನಲ್ಲೂ ಅವರ ಉಗುಳಿನ ದೇಣಿಗೆ. ಅಲ್ಲೂ ಇಳಿಯುವಾಗ ತಿಳಿಹೇಳಿದ್ದೇನೆ, ತಪ್ಪೆಂದು ಖಂಡಿಸಿದ್ದೇನೆ. ಅವರಿಂದ ಬೈಸಿಕೊಂಡಿದ್ದೇನೆ. ನನಗಿನ್ನೂ ನೆನಪಿದೆ. ಒಬ್ಬ ಆಟೋ ಚಾಲಕ ಮಾತ್ರ "ಹೌದಾ ಮೇಡಂ ? ಇದು ತಪ್ಪು ಎಂದು ಯಾರೂ ನನಗೆ ಹೀಗೆ ತಿಳುವಳಿಕೆ ಹೇಳಿರಲಿಲ್ಲ. ತಪ್ಪಾಗುತ್ತೆ ಅಂತ ನಾನು ಯೋಚಿಸಿರಲೇ ಇಲ್ಲ. ನೀವು ತಿಳಿಸಿಕೊಟ್ರಿ. ಇನ್ನು ಮೇಲೆ ಖಂಡಿತಾ ಹೀಗೆ ಉಗೀತಾ ಹೋಗೋಲ್ಲ ಮೇಡಂ. ಥ್ಯಾಂಕ್ಸ್" ಎಂದು ಹೇಳಿ ತನ್ನ ಸೌಜನ್ಯತೆಯನ್ನು ಪ್ರಕಟಿಸಿದ್ದು!

ಸೌಜನ್ಯಗುಣ ಹುಟ್ಟುವುದು ಆಂತರಿಕ ವ್ಯಕ್ತಿತ್ವದಿಂದ, ಅಂತರಂಗದ ಕಾಂತಿಗಳಲ್ಲಿನ ಒಂದು ಗುಣ. ಬರಿಯ ಬಾಹ್ಯ ವೇಷಭೂಷಣಗಳಿಂದ, ಬಾಹ್ಯಾಡಂಬರದಿಂದ, ತೋರಿಕೆಯ, ಸೋಗಲಾಡಿತನದ ಶಿಷ್ಟಾಚಾರವಾಗಿ ಕಾಣಿಸಿಕೊಳ್ಳಬಹುದೇ ವಿನಾ ನಿಜವಾದ ಸಭ್ಯತೆಯು ಅಲ್ಲಿರುವುದಾದರೂ ಹೇಗೆ ? ಒಳವ್ಯಕ್ತಿತ್ವದಿಂದ ಮೂಡಿ ನಡೆನುಡಿಗಳಲ್ಲಿ ತುಂಬಿಕೊಳ್ಳುವ ಶಾಂತ, ಸಂತಗುಣವೇ ಆಗಿರುತ್ತದೆ. ಉಡುಗೆ ತೊಡುಗೆಗಳ ವೈಭವದ ಪ್ರದರ್ಶನದಲ್ಲಿ, ಫ್ಯಾಶನ್ ಲೋಕದ ಬೆರಗು ಬಿನ್ನಾಣಗಳಲ್ಲಿ ಕೃತಕವಾಗಿ ತೋರುವುದು ನಿಜವಾದ ಸೌಜನ್ಯವಾಗಿರುವುದಕ್ಕೆ ಸಾಧ್ಯವಿಲ್ಲ.

'ಸೌಜನ್ಯ'ವೆಂದರೆ ದೈನ್ಯವೆಂದು ಅನೇಕರು ತಪ್ಪಾಗಿ ತಿಳಿದಿದ್ದಾರೆ. ದೈನ್ಯವೇ ಬೇರೆ, ಸೌಜನ್ಯವೇ ಬೇರೆ. ದೈನ್ಯವಿರುವುದು ಕೀಳರಿಮೆ, ಅಸಹಾಯಕತೆಯಲ್ಲಿ. ಆದರೆ ಎಲ್ಲ ಧನಾತ್ಮಕ ಅಂಶಗಳಿದ್ದೂ ಸೌಜನ್ಯಪೂರಿತರಾಗಿರುವುದು ಆ ವ್ಯಕ್ತಿಯ ಗುಣದ ಉನ್ನತಿಕೆಯನ್ನೇ ತೋರಿಸುತ್ತದಲ್ಲದೆ ಅದನ್ನು ದೈನ್ಯವೆಂದೇಕೆ ತಪ್ಪಾಗಿ ವ್ಯಾಖ್ಯಾನಿಸಬೇಕು ? ಸೌಜನ್ಯಶೀಲ ಅಂತರಂಗದ ಉನ್ನತಿಕೆಯನ್ನು ಅರ್ಥೈಸಿಕೊಳ್ಳಲಾರದವರಷ್ಟೇ ಅದನ್ನು ದೈನ್ಯವೆಂದು ಪರಿಗಣಿಸಿಯಾರು. ಆದರೆ ಸೌಜನ್ಯವು ನಿಜವಾಗಿಯೂ ವ್ಯಕ್ತಿತ್ವದ ಭಾಗವಾಗಿರುವವರು ಅಂತರಂಗದಲ್ಲಿ ತುಂಬಾ ಸಬಲರಾಗಿರುತ್ತಾರೆ. ಅಂಥವರ ಒಳ್ಳೆಯ ಗುಣವಾದ ಸೌಜನ್ಯವನ್ನು ದುರುಪಯೋಗಪಡಿಸಿಕೊಳ್ಳುವವರು ಇರುತ್ತಾರಾದರೂ ಸಜ್ಜನರ ನಡೆನುಡಿ, ಅಂತರಂಗದ ಧೀಶಕ್ತಿಯನ್ನು ಸೋಲಿಸುವದು ಅಷ್ಟು ಸುಲಭವೇನಲ್ಲ.

ಸೌಜನ್ಯಶೀಲರು ಅಂತರಂಗದಲ್ಲಿ ಗಟ್ಟಿ, ಪ್ರಬಲರು. ಯಾವ ದುಸ್ಸಾಧ್ಯ ಸಾಧನೆಗಳಲ್ಲೂ ಅವರಿಗೆ ಹಿಂಜರಿತವಿರುವುದಿಲ್ಲ. ಹೊರನೋಟಕ್ಕೆ ಅವರು ಮೃದು, ಅವರು ಸಜ್ಜನರು. ಆದರೆ ಅವರ ಅಂತರಂಗ ಪ್ರವೇಶ ದುರ್ಲಭ. ಅವರು 'ಕುಸುಮಾದಪಿ ಮೃದೂನಿ ವಜ್ರಾದಪಿ ಕಠೋರಾನಿ' ಆಗಬಲ್ಲವರು. ಸೌಜನ್ಯಶೀಲ ಸಜ್ಜನರೆಲ್ಲ ಹೇಡಿಗಳಲ್ಲ, ಕೈಲಾಗದವರಲ್ಲ. ಸೌಜನ್ಯವೇ ಅವರ ಸಾಧನೆಯ ಪ್ರತೀಕ, ಗೆಲುವಿನ ಪ್ರತೀಕ !

○

ಶ್ರೀ ಪುರಂದರದಾಸರ 'ಸೌಜನ್ಯ'ದ ಪರಿಕಲ್ಪನೆ

–ಬಿ.ಎಸ್. ವೇಣುಗೋಪಾಲ

ನಮ್ಮ ದೈನಂದಿನ ಜೀವನದಲ್ಲಿ, ಒಂದಿಲ್ಲೊಂದು ಕಾರಣದಿಂದ, ಒಂದಿಲ್ಲೊಂದು ರೀತಿಯಲ್ಲಿ ಪ್ರಯೋಗವಾಗುತ್ತಿರುವ ಶಬ್ದ 'ಸೌಜನ್ಯ'. ಈ ಪದದ ಪ್ರಯೋಗ ಸಾಮಾನ್ಯವಾಗಿದ್ದರೂ ಅದರ ವ್ಯಾಖ್ಯೆ ಸುಲಭ ಸಾಧ್ಯವಲ್ಲ. ಈ ಶಬ್ದದ ಅರ್ಥವ್ಯಾಪ್ತಿ ಸಂದರ್ಭಗಳಿಗನುಗುಣವಾಗಿ ಬದಲಾಗುತ್ತಿರುವುದರಿಂದ ಈ ಬಗೆಯ ತೊಡಕು ಅಪರಿಹಾರ್ಯ. ಕೆಲವೊಮ್ಮೆ ಶಿಷ್ಟಾಚಾರವಾಗಿ, ಕೆಲವೊಮ್ಮೆ ಸನ್ನಡತೆಯಾಗಿ, ವಿನಯವಾಗಿ ಮತ್ತೆ ಕೆಲವೊಮ್ಮೆ ಜೀವನ ಸಂಸ್ಕೃತಿಯಾಗಿ ವಿಶಾಲವಾದ, ವ್ಯಾಪಕವಾದ ಅರ್ಥವ್ಯಾಪ್ತಿಯನ್ನು ಹೊಂದಿರುವ 'ಸೌಜನ್ಯ' ಸ್ಥೂಲವಾಗಿ ಹೇಳಬೇಕೆಂದರೆ ಆತ್ಮವ್ಯವಸಾಯದ ಫಲಿತ. ಮನುಷ್ಯ ತನ್ನಲ್ಲಿರುವ ಉತ್ತಮ ಗುಣಗಳ ಉತ್ಕರ್ಷಕ್ಕೆ, ಕೀಳುಗುಣಗಳ ನಿಯಂತ್ರಣಕ್ಕೆ, ನಿರ್ಮೂಲನೆಗೆ ಪ್ರಯತ್ನಿಸಿ ಗಳಿಸಿಕೊಂಡ ಗುಣ ವಿಶೇಷ. ಐಶ್ವರ್ಯ, ಅಧಿಕಾರ, ಬುದ್ಧಿವಂತಿಕೆ, ವಿದ್ಯೆ, ನಾಗರೀಕತೆಗಳಿಗಿಂತ ಮಿಗಿಲಾದ ಜೀವನಮೌಲ್ಯ. ನಾಗರೀಕತೆ ಮೊದಲಾದವು ಸಮಾಜದಲ್ಲಿ ನಮ್ಮ ನಡವಳಿಕೆಯನ್ನು ರೂಪಿಸುವ, ಸಾಮಾಜಿಕ ಸ್ಥಾನಮಾನಗಳನ್ನು ಹೆಚ್ಚಿಸುವ ಕಾರ್ಯನಿರ್ವಹಿಸಿದರೆ, 'ಸೌಜನ್ಯ' ಆತ್ಮಸಂಸ್ಕಾರ ನೀಡುತ್ತದೆ. ಮೇಲ್ಕಂಡ ಎಲ್ಲಾ ಸೌಭಾಗ್ಯಗಳಿಗೂ ಮೆರುಗನ್ನು ನೀಡುತ್ತದೆ. ಅವುಗಳೊಂದಿಗೆ ಸೌಜನ್ಯ ಮಿಳಿತವಾದಾಗ ಅವುಗಳ ಮೌಲ್ಯವೂ ಹೆಚ್ಚುತ್ತದೆ. ಸತ್ಯ, ಜ್ಞಾನ, ಅಹಿಂಸೆ, ಭಕ್ತಿ, ವೈರಾಗ್ಯ, ಧೃತಿ, ಕ್ಷಮಾ, ದಮ, ಆಸ್ತೇಯ, ಶೌಚ, ಧೀ, ವಿದ್ಯಾ, ಅಕ್ರೋಧ ಮುಂತಾದವುಗಳನ್ನು 'ಸೌಜನ್ಯ'ದ ಸಾಮಾನ್ಯ ಲಕ್ಷಣಗಳೆಂದು ಪರಿಭಾವಿಸಬಹುದಾದರೂ, 'ಸೌಜನ್ಯ'ದ ವ್ಯಾಪ್ತಿ, ವ್ಯಾಖ್ಯೆ ಅವುಗಳಿಗಿಂತ ಹಿರಿದಾದದ್ದು ಎಂಬುದು ನಿರ್ವಿವಾದ. 'ಒಳ್ಳೆಯತನ' ಎಂದು ಸರಳವಾಗಿ ಹೇಳಬಹುದೇನೋ.

ಈ ದೈವೀಗುಣದ ಆವಿಷ್ಕಾರದಿಂದ, ಉತ್ಕರ್ಷದಿಂದ ಮನುಷ್ಯನ ಜೀವನ ಉನ್ನತೋನ್ನತ ನೆಲೆಯನ್ನು ತಲುಪಬೇಕೆನ್ನುವ ಹೆಬ್ಬಯಕೆಯಿಂದ, ಅನೇಕ ತತ್ತ್ವವೇತ್ತರು, ದಾರ್ಶನಿಕರು ಈ ಗುಣದ ಮಹತ್ವವನ್ನು ಪರಿಪರಿಯಾಗಿ ಹೇಳಿದ್ದಾರೆ. ಕೆಲವೊಮ್ಮೆ ಈ ಶಬ್ದದ ಪ್ರಯೋಗವಾಗಿರದಿದ್ದರೂ ಅವರ ಉದ್ದೇಶ ಸೌಜನ್ಯ–ಸಂಸ್ಕೃತಿಯನ್ನು ಕುರಿತು

ಹೇಳುವುದೇ ಆಗಿದೆ. 'ಭಗವಂತನ ರಾಜ್ಯದ ಪ್ರಜೆಗಳಾದ ನಾವು, ಆತನಿಗೆ ಸಲ್ಲಿಸಬೇಕಾದ ಕಂದಾಯವೆಂದರೆ ದೀನದುರ್ಬಲರಿಗೆ ನೀಡುವ ನೆರವು, ಸಲ್ಲಿಸುವ ಸೇವೆ' ಎಂದು ಅತ್ಯಂತ ಉನ್ನತವಾದ ಮೌಲ್ಯವನ್ನು ಪ್ರತಿಪಾದಿಸಿದ ಆಚಾರ್ಯ ಮಧ್ವರ ಚಿಂತನೆಯ ಹಿನ್ನೆಲೆಯಲ್ಲಿ ಬೆಳೆದುಬಂದ ಕರ್ನಾಟಕದ ಹರಿದಾಸ ಸಾಹಿತ್ಯ ಪರಂಪರೆ, ಭಕ್ತಿಯ ಪ್ರಸಾರದೊಂದಿಗೇ, ಸಾಮಾಜಿಕ ಪರಿವರ್ತನೆಯ ಹೊಸ ಶಕೆಯನ್ನೂ ಆರಂಭಿಸಿತು. ಸಮಾಜ ಜೀವನದ ಉನ್ನತಾದರ್ಶವಾದ 'ಸೌಜನ್ಯ' ಹರಿದಾಸರ ಕೃತಿಗಳಲ್ಲಿ ವಿಶಿಷ್ಟವಾದ ಸ್ಥಾನವನ್ನು ತನ್ನದಾಗಿಸಿಕೊಂಡಿದೆ. ದಾಸಶ್ರೇಷ್ಠರಾದ ಶ್ರೀ ಪುರಂದರದಾಸರು ತಮ್ಮ ಅನೇಕ ಕೃತಿಗಳಲ್ಲಿ ಮನುಷ್ಯ ಸೌಜನ್ಯಯುಕ್ತ ಜೀವನವನ್ನು ನಡೆಸಬೇಕೆಂದು ಒತ್ತಿ ಹೇಳಿದ್ದಾರೆ.

'ರಾಗಿ ತಂದಿರಾ ಭಿಕ್ಷಕೆ ರಾಗಿ ತಂದಿರಾ' ಎಂಬ ಕೃತಿಯಲ್ಲಿ ಅವರ ಚಿಂತನ ಅತ್ಯಂತ ವಿಶದವಾಗಿ ಮೂಡಿಬಂದಿದೆ.

'ಅನ್ನದಾನವ ಮಾಡುವರಾಗಿ
ಅನ್ನ ಛತ್ರವನಿಟ್ಟವರಾಗಿ
ಅನ್ಯವಾರ್ತೆಗಳ ಬಿಟ್ಟವರಾಗಿ
ಅನುದಿನ ಭಜನೆಯ ಮಾಡುವರಾಗಿ ।
ಮಾತಾ ಪಿತರನು ಸೇವಿಪರಾಗಿ
ಪಾತಕ ಕಾರ್ಯವ ಬಿಟ್ಟವರಾಗಿ
ಖ್ಯಾತಿಯಲ್ಲಿ ಮಿಗಿಲಾದವರಾಗಿ
ನೀತಿ ಮಾರ್ಗದಲಿ ಖ್ಯಾತರಾಗಿ ।
....
ಗುರುವಿನ ಪಾದವ ಸ್ಮರಿಸುವರಾಗಿ ।
ಪರಮ ಪುಣ್ಯವನು ಮಾಡುವರಾಗಿ

ಮೊದಲಾದ ನುಡಿಗಳನ್ನು ಸೂಕ್ಷ್ಮವಾಗಿ ಗಮನಿಸಿದಾಗ ಸೌಜನ್ಯಯುತ, ಸಂಸ್ಕೃತಿಯುಕ್ತ ಬದುಕಿಗೆ ಶ್ರೀ ಪುರಂದರದಾಸರು ನೀಡಿರುವ ಪ್ರಾಶಸ್ತ್ಯ ತಿಳಿಯುತ್ತದೆ.

'ಆಚಾರವಿಲ್ಲದ ನಾಲಿಗೆ – ನಿನ್ನ

ನೀಚ ಬುದ್ಧಿಯ ಬಿಡು ನಾಲಿಗೆ' ಎಂಬ ಕೃತಿಯಲ್ಲಿ ಪರನಿಂದೆಯನ್ನು ಮಾಡದಿರುವಂತಹ ಸೌಜನ್ಯಯುತ ನಡವಳಿಕೆಗೆ ಒತ್ತು ನೀಡಿರುವ ಪುರಂದರದಾಸರು 'ಬಿಲ್ಲಾಗಬೇಕು ಬಲ್ಲವರ ಒಳಗೆ' ಎಂದು ವಿನಯವಂತನಾಗಿರಬೇಕೆಂದು ಸೂಚಿಸಿದ್ದಾರೆ.

'ಪಕ್ಷಪಾತವಿಲ್ಲದನ್ನ ದಾನವನು ಮಾಡುವವನಿಗೆ,
ಗುರು ಹಿರಿಯರನು ಉಪೇಕ್ಷೆ ಮಾಡದವನಿಗೆ
ಪರಹಿತವನು ಮಾಡಿ ಕೆರೆ ಬಾವಿಗಳ

ಅರವಟಿಕೆ ಸಾಲು ಮರವ ಹಾಕುವವರಿಗೆ ವೈಕುಂಠ ಬೇರೆಡೆ ಇಲ್ಲ, 'ಇಲ್ಲೇ ವೈಕುಂಠ ಕಾಣಿರೋ ಎಂದು ಸಾರಿ ಹೇಳಿದ ಪುರಂದರದಾಸರು 'ಸೌಜನ್ಯ'ಕ್ಕೆ ನೀಡಿರುವ ಪ್ರಾಶಸ್ತ್ಯವು

'ಎಚ್ಚರದಲಿ ನಡೆ ಮನವೆ – ನಡೆ ಮನವೆ ಮುದ್ದು
ಅಚ್ಯುತನ ದಾಸರ ಒಡಗೂಡಿ ಬರುವೆ'

ಎಂಬಲ್ಲಿ ಅತ್ಯಂತ ಸ್ಪಷ್ಟವಾಗಿ ಮೂಡಿಬಂದಿದೆ.

ಬಾಹ್ಯಾಡಂಬರ ತೋರಿ, ಆಂತರ್ಯದಲ್ಲಿ ಕಪಟಿಗಳಾಗಿರುವ ಜನರನ್ನು ಬಗೆಬಗೆಯಲ್ಲಿ ಖಂಡಿಸಿರುವ ಪುರಂದರದಾಸರು ತನ್ಮೂಲಕ ಸೌಜನ್ಯಯುತ ಜೀವನಕ್ಕೆ ಹೆಚ್ಚಿನ ಒತ್ತು ನೀಡಿದ್ದಾರೆ.

'ನರನಾದ ಮೇಲೆ ।
ಹರಿನಾಮ ಜಿಹ್ವೆಯೊಳಿರಬೇಕು ।
ಭೂತದಯಾಪರನಾಗಿರಬೇಕು
ಪಾತಕವೆಲ್ಲವ ಕಳೆಯಬೇಕು'

ಎಂದು ಮಾರ್ಗದರ್ಶನ ಮಾಡಿ ಸುಜನರಲ್ಲದ ವ್ಯಕ್ತಿಗಳನ್ನು 'ಜಾಲಿಯ ಮರದಂತೆ ದುರ್ಜನರು' ಎಂದು ಅತ್ಯಂತ ಸಮರ್ಪಕವಾಗಿ ಹೋಲಿಸುತ್ತಾರೆ.

'ನೀಚ ಮಾನವರಿಗೆ ಸಿರಿ ಬಂದರೇನು
ಈಚಲಮರ ದಟ್ಟ ನೆರಳಾದರೇನು'

ಎಂದು ದುರ್ಜನರಿಗೆ ಸಿರಿಯು ಬಂದರೂ,

ಯಾತಕೂ ಬಾರದ ಬದುಕು ಬಾಳಿದ್ದರೇನು
ರೀತಿಯಿಲ್ಲದ ನೆರೆಯ ಸ್ನೇಹವಿನ್ನೇನು ।

ಎಂಬ ಪುರಂದರರ ನುಡಿಗಳನ್ನು ಗಮನಿಸಿದಾಗ ಸೌಜನ್ಯಯುತವಾದ ಬಾಳಿಗೆ ದಾಸಶ್ರೇಷ್ಠರು ನೀಡಿರುವ ಪ್ರಾಮುಖ್ಯತೆ ಗೋಚರವಾಗುತ್ತದೆ. ಸನಾತನ ಧರ್ಮದ ಆಚರಣೆಯ

ಜೊತೆಗೆ ಸಮಸ್ತ ಜೀವರಾಶಿಗೆ ಒಳಿತನ್ನು ಬಯಸುವ, ಲೋಕದ ಕ್ಷೇಮಚಿಂತನೆಯನ್ನು ಮಾಡುವ ಮನಸ್ಸನ್ನು ಪ್ರತಿಯೊಬ್ಬರೂ ಹೊಂದಬೇಕೆಂಬುದು ಪುರಂದರ ಅಭೀಪ್ಸೆ.

'ಧರ್ಮವೇ ಜಯವೆಂಬ ದಿವ್ಯಮಂತ್ರ'ವೆಂಬ ಸೂತ್ರರೂಪವಾದ, ಮಂತ್ರ ತುಲ್ಯವಾದ ಸಂದೇಶ ನೀಡಿದ ಪುರಂದರದಾಸರು, ಮನುಷ್ಯ ಅಹಂಕಾರವನ್ನು ಪಡದೆ, ಮಮಕಾರವನ್ನು ಹೊಂದದೆ, ಸಕಲ ಚರಾಚರ ಜಗತ್ತಿಗೆ ಒಳಿತನ್ನು ಬಯಸುತ್ತಾ, ಶ್ರೀಹರಿಯ ಅಮಲವಾದ ಭಕ್ತಿಯನ್ನು ಹೃದಯಸ್ಥವಾಗಿಸಿಕೊಂಡು, ಯಾವುದೇ ರೀತಿಯ ಕಪಟರಹಿತವಾದ ಜೀವನವನ್ನು ನಡೆಸುತ್ತಾ, ಸತ್ಯ, ಜ್ಞಾನ ನಿಷ್ಠವಾದ ಬದುಕನ್ನು ಸಾಗಿಸುವುದೇ 'ಸೌಜನ್ಯ' ಅಥವಾ 'ಸಂಸ್ಕೃತಿ' ಎಂದು ಅಚಲವಾಗಿ ನಂಬಿ ತಮ್ಮ ಕೃತಿಗಳಲ್ಲಿ ಅದರ ಪ್ರತಿಪಾದನೆಯನ್ನು ಮಾಡಿದ್ದಾರೆ. ವಿಶೇಷವೆಂದರೆ 'ಸೌಜನ್ಯ' ಶಬ್ದದ ಪ್ರಯೋಗವನ್ನು ಪುರಂದರರು ಮಾಡದಿದ್ದರೂ, ಅಮೂರ್ತವಾದ ಆ ಆದರ್ಶಕ್ಕೆ, ಮೌಲ್ಯಕ್ಕೆ ಸ್ಪಷ್ಟವಾದ ರೂಪವನ್ನು ಕೊಡುವಲ್ಲಿ ಅತ್ಯಂತ ಸಫಲರಾಗಿದ್ದಾರೆ.

ಹೃದಯವಂತಿಕೆಯೇ ಸೌಜನ್ಯ

–ಕೆ. ಚಂದ್ರಮೌಳಿ

ಹೃದಯವಂತಿಕೆಗೆ ಇನ್ನೊಂದು ಸಮಾನಾರ್ಥ ಪದ ಸೌಜನ್ಯ. ಸೌಜನ್ಯಕ್ಕೆ ವಿರುದ್ಧವಾದ ಚೌಕಾಶಿ, ಲೋಭ, ಜಿಪುಣತನ, ಮಾತಿನ ಬರ ಇತ್ಯಾದಿ. ಚೌಕಾಶಿ ಎಂದರೆ ಅಸಾಧ್ಯ ಲೆಕ್ಕಾಚಾರ, ಕೀಳುಮಟ್ಟದ ಜಾಣತನ, ವಿವೇಚನೆಯಿಲ್ಲದ ಬಲವಂತದ ಉಳಿತಾಯ, ಜುಜುಬಿ ಚೌಕಾಶಿ ಇವೆಲ್ಲವೂ ಒಂದು ರೀತಿಯಲ್ಲಿ ಜಿಪುಣತನವೇ. ಜಿಪುಣತನ, ಜಿಗುಟುತನ, ಕಾರ್ಪಣ್ಯ ಇವೆಲ್ಲವೂ ಲೋಭವೇ ಸರಿ. 'ಲೋಭ' ಅಂದ್ರೆ ಏನೋ ದೊಡ್ಡ ಲೆಕ್ಚರ್ ಕೊಟ್ಟ ಹಾಗೆ ಅನ್ನಿಸುತ್ತೆ. ಚೌಕಾಶಿ ಅನ್ನುವುದಕ್ಕೆ ಲೋಭದಷ್ಟು ಅರ್ಥವ್ಯಾಪ್ತಿಯಿಲ್ಲದಿದ್ದರೂ ನಿಮ್ಮೊಡನೆ ಮಾತಾಡಲು ಸುಲಭ. ಆದ್ದರಿಂದ ಇವನ್ನೆಲ್ಲಾ ಸೇರಿಸಿ ಚೌಕಾಶಿ ಬುದ್ಧಿ ಅಂತಲೇ ಮಾತಾಡುವುದು ಸೂಕ್ತ.

ಚೌಕಾಶಿ ಅಂದರೆ ಬರೀ ಹಣಕಾಶಿನ ಲೆಕ್ಕಚಾರ, ಜಾಣತನವೇ ಅಲ್ಲ. ಮಾತಿನಲ್ಲಿ, ಹೊಗಳಿಕೆಯಲ್ಲಿ, ಕೃತಜ್ಞತೆಯಲ್ಲಿ, ಹೃದಯವಂತಿಕೆ ತೋರುವಲ್ಲಿ.... ಹೀಗೆ ನಾಲ್ಕಾರು ಕಡೆ ಚೌಕಾಶಿ ಬುದ್ಧಿಯನ್ನು, ಮನಸ್ಸು ಹಿಂಜುವುದನ್ನು ನೋಡಬಹುದು. ಬೈಯ್ಯಬೇಕಾದರೆ, ಆಕ್ಷೇಪಣೆ ತೆಗೀಬೇಕಾದರೆ, ಯಾರ ತಪ್ಪು – ಹುಳುಕನ್ನಾದರೂ ಹುಡುಕಬೇಕಾದರೆ ನಾಲಿಗೆ ಇಷ್ಟುದ್ದ ಚಾಚಿಕೊಂಡು, ಕಣ್ಣು ಭೂತಗನ್ನಡಿಯಂತೆ ಉಬ್ಬಿಕೊಂಡು ಹೊರಗೇ ಬರುತ್ತದೆ. ಅದಕ್ಕೆ ಸರಿಯಾಗಿ ಗಂಟಲಿನಾಳ ಬಿಗಿಹಿಡಿದು ಧ್ವನಿಯನ್ನು ಕಿರುಚಿಸುತ್ತದೆ. ರಕ್ತ ಹೆಚ್ಚಿ, ಕೋಪದ ಬಿಸಿ ಮಾತಿಗೆ ಬರುತ್ತದೆ, ಮುಖದ ಚರ್ಯೆಯೇ ಬದಲಾಯಿಸಿ, ನಗುಮುಖ ಗಂಟಿಕ್ಕುತ್ತದೆ. ಆದರೆ ಒಂದು ಒಳ್ಳೇ ಕೆಲಸದ ಬಗ್ಗೆ ಒಂದೇ ಒಂದು ತುಸು ಹೊಗಳಿಕೆ ಹೊರಡಬೇಕಾದರೂ ಬಾಯಿಂದ ಮಾತೇ ಹೊರಡುವುದಿಲ್ಲ, ಗಂಟಲಿಗೂ ಬರುವುದಿಲ್ಲ. ನಿಮ್ಮ ಮನೆಗೆಲಸದವಳಿಂದ ಹಿಡಿದು ಆಫೀಸು, ಕಾರ್ಖಾನೆಯಲ್ಲಿ ನಿಮ್ಮ ಅಸಿಸ್ಟೆಂಟ್‌ವರೆಗೆ ಒಳ್ಳೇ ಕೆಲಸಕ್ಕೆ ತಕ್ಷಣ 'ಹಾ ಚೆನ್ನಾಗಿದೆ', 'ಶಭಾಸ್', 'ಒಳ್ಳೇ ಕೆಲಸ, ಥ್ಯಾಂಕ್ಸ್' ಎಂಬ ಎರಡೇ ಮಾತನ್ನು ಎಷ್ಟು ಜನ ಹೇಳ್ತಾರೆ ? ಹಾಗೆಲ್ಲಾ ಹೇಳಿಬಿಟ್ಟರೆ ಅವರು ಕೊಬ್ಬಿ ಕೂತುಬಿಡ್ತಾರೆ, ಮಾರನೇ ದಿನವೇ ತಮ್ಮದೇನೋ ಬೇಡಿಕೆ ಹೊತ್ತು ಬರ್ತಾರೆ ಅಂತ ಅನ್ನುವುದು ಸಾಮಾನ್ಯ ವಿವರಣೆ. ಕೆಟ್ಟ ಕೆಲಸಕ್ಕೆ ಬೈದಾಗ, ತಕ್ಷಣ ತಮ್ಮ ತಪ್ಪನ್ನು ಅರ್ಥ ಮಾಡಿಕೊಂಡು ಪಾಠ

ಕಲಿತು ಬಿಡುತ್ತಾರೆ ಅಂತ ಅಂದುಕೊಂಡಿದ್ದೀರೇನು ? ಹಾಗೆ ಬೈದಾಗ ಅವರ ಮನಸ್ಸು ಹಿಂಡೋದಿಲ್ಲವೆ ? ಬೈಯೋದಕ್ಕೆ ಧಾರಾಳ. ಹೊಗಳೋದಕ್ಕೆ ಯಾಕೆ ಚೌಕಾಶಿ ? ಒಂದು ಒಳ್ಳೇ ಮಾತಿಗೇಕೆ ಕಾರ್ಪಣ್ಯ, ನಾಲಿಗೆ ಏಕೆ ಹಿಡಿಯುತ್ತದೆ ?

ಸಂಗೀತ ಕಛೇರಿಗೆ ಹೋಗ್ತೀವಿ, ನಾಟಕಕ್ಕೆ ಹೋಗ್ತೀವಿ. ಮಂಗಳ ಹಾಡುವ ಕೊನೆ ಗಳಿಗೆಯಲ್ಲಿ, ಪರದೆ ಬೀಳುವ ಎರಡು ಕ್ಷಣ ಮುಂಚೆಯೇ ನಮ್ಮ ಜಾಗ ಬಿಟ್ಟು ಬಾಗಿಲ ಕಡೆ ಓಡುತ್ತೀವಿ – ಮೊದಲು ಹೊರಗೋಡಿ ಬಸ್ಸು, ರೈಲು ಹಿಡಿದು ಮನೆ ತಲುಪಿದರೆ ಸಾಕು ಅಂತ. ಅನೇಕ ಬರಡು ದಿನಗಳ ನಂತರ ಸಂಜೆಯ ಎರಡು ಮೂರು ಗಂಟೆ ನಮ್ಮನ್ನು ಭಾವನಾ ಪ್ರಪಂಚಕ್ಕೆ, ಬೇರೆ ಲೋಕಕ್ಕೇ ಕೊಂಡೊಯ್ದು ನಮಗೆ ಅತೀವ ಆನಂದವನ್ನಿತ್ತ ಆ ಕಲಾಕಾರರನ್ನು ಭೇಟಿ ಮಾಡಲು ಎರಡು ನಿಮಿಷ ಕೊಡಲಾರೆವು. ಒಂದೆರಡು ಪ್ರಶಂಸೆಯ ಮಾತಿಲ್ಲದಿದ್ದರೂ, ಸುಮ್ಮನೆ "ನಿಮ್ಮನ್ನು ಭೇಟಿ ಮಾಡಲು ಬಂದೆ, ನಮಸ್ಕಾರ", ಅನ್ನುವ ಎರಡು ಮಾತು ಹೇಳಲೂ ನಮಗೆ ಪುರುಸೊತ್ತಿರುವುದಿಲ್ಲ. ರಾತ್ರಿ ಹನ್ನೊಂದರವರೆಗೂ ಕೂತವರಿಗೆ ಇನ್ನು ಐದು ನಿಮಿಷದಲ್ಲಿ ಮನೆಗೋಡುವ ಅವಸರ!

ಒಳ್ಳೆಯ ಲೇಖಕರಾದ ನನ್ನ ಸ್ನೇಹಿತರೊಬ್ಬರು ಹೇಳಿದ ಈ ಮಾತನ್ನು ಕೇಳಿ : "ನನ್ನ ಪುಸ್ತಕಗಳು, ನನ್ನ ಲೇಖನ ಬಂದ ಪತ್ರಿಕೆ ಎಲ್ಲವನ್ನೂ ನನ್ನಿಂದಲೇ ಎರವಲು ತಗೊಂಡು ಹೋಗ್ತಾರೆ – ನನ್ನ ಸ್ನೇಹಿತರು, ನೆಂಟರು, ತುಂಬ ಬೇಕಾದವರು. ವಾಪಸ್ಸು ಮಾಡೋದಿರಲಿ, ಅದನ್ನು ಓದಿದೆ, ಹಿಡಿಸಿತು, ಹಿಡಿಸಲಿಲ್ಲ ಅಂತ ಸಹ ಹೇಳಿಲ್ಲ. ಅದರ ವಿಚಾರವೇ ಎತ್ತುಲ್ಲ... ಓದುತ್ತಾರೋ ಇಲ್ಲವೋ ಅಂತಲೇ ನನ್ನ ಅನುಮಾನ." ಓದಿದ ಪುಸ್ತಕದ ವಿಚಾರ ಮಾತನಾಡಿದರೆ, ಆ ಪುಸ್ತಕ ವಾಪಸ್ಸು ಕೊಡಬೇಕಾಗುತ್ತದಲ್ಲ ಎಂದು ಅವರ ಭಯ ಇರಬೇಕು. ಇರುವ ವಿಚಾರ ಹಾಗಲ್ಲ ; ಓದಿದ ಮೇಲೆ ಎರಡು ಮಾತು (ಹೊಗಳಿಕೆಯೋ, ಟೀಕೆಯೋ) ಹೇಳಿದರೆ ಲೇಖಕನಿಗೆ ಉತ್ತೇಜನ ಅಂತ ತಿಳಿಯುವುದಿರಲಿ, ಅದು ಸಾಮಾನ್ಯ ನಡೆವಳಿಕೆ ಅನ್ನೋದು ಸಹ ಎಷ್ಟೋ ಮಂದಿಗೆ ತಿಳಿದಿರುವುದಿಲ್ಲ. ಎರಡು ಮಾತಿಗೆ ಯಾಕೀ ಮೀನ ಮೇಷವೋ ಅರ್ಥವಾಗುವುದಿಲ್ಲ ! 'ಅಲ್ಲಾರೀ, ಲೇಖಕರ ಮುಂದೆ ಸಾಮಾನ್ಯರಿಗೆ ಮಾತು ಹೊರಡುವುದಿಲ್ಲ' ಅಂತ ಒಬ್ಬರ ವಾದ. ಇದಕ್ಕೆ ವಿರುದ್ಧವೆಂದರೆ ಪುಸ್ತಕ ಓದದೆಯೆ ಅದರ ಪರಿಚಯ ಭಾಷಣ ಮಾಡುವವರದು. ಇವರುಗಳಲ್ಲಿ ಯಾರದು ಹೃದಯವಂತಿಕೆಯೊ, ಯಾರದು ಭಂಡತನವೊ, ಸಾಚಾತನವೊ ವಿಚಾರಮಾಡಿ ನೋಡಿ.

ನಮ್ಮ ಕಾಲೋನಿಯ 'ಕನ್ನಡ ಬಳಗ'ಕ್ಕೆ ಹೊಸ ಸದಸ್ಯರೊಬ್ಬರು ಬಂದು ಸೇರಿದ್ದರು. ಹೊಸಬರ ಮೇಲೆ ಬಿದ್ದು ಮಾತನಾಡಿಸುವುದಕ್ಕೆ ಅವರೇನು ನಮ್ಮೂರವರೇ, ನಮ್ಮ

ಮಂದಿಯೇ, ನಮ್ಮ ಜಾತಿಯೇ ಅಂತ ಅನೇಕ ಜನ ಅವರಿಂದ ದೂರವಾಗೇ ಇದ್ದರು. ಅವರು ಮಿತಭಾಷಿಗಳಾದ್ದರಿಂದ ಅವರಾಗಿಯೇ ಮುನ್ನುಗ್ಗಿ ನಾಲ್ಕು ಜನರ ಮಧ್ಯೆ ಸೇರಲಿಲ್ಲ. ವರ್ಷದಲ್ಲಾಗುತ್ತಿದ್ದ ನಾಲ್ಕು ಸಮಾರಂಭಗಳಲ್ಲಿ ಭಾಗವಹಿಸಿ, ಅಲ್ಲೊಂದಿಲ್ಲೊಂದು ಮಾತಾಡಿ ವಾಪಸ್ಸಾಗಿ ಬಿಡುತ್ತಿದ್ದರು. ಅವರೂ ಒಬ್ಬ ಒಳ್ಳೆಯ ಬರಹಗಾರರೂಂತ ಗೊತ್ತಾಗಿದ್ದುದು ಅವರು ಆ ಜಾಗ ಬಿಟ್ಟು ಬೇರೆ ಕಡೆ ಹೊರಡುವ ಒಂದು ವಾರದ ಹಿಂದೆ ! ಅವರ ನಿಕಟ ಸ್ನೇಹಿತ, ಅವರ ಜೊತೆ ಓಡಾಡಿಕೊಂಡು ಅವರ ಲೇಖನಗಳನ್ನೆಲ್ಲಾ ಓದಿದ್ದವ ಒಂದೇ ಒಂದು ದಿನವಾದರೂ ಬಾಯಿಬಿಟ್ಟು "ನೋಡಿ ಇವರೊಬ್ಬರು ಒಳ್ಳೇ ಬರಹಗಾರರು, ಜೊತೆಗೆ ಒಳ್ಳೆ ಚೆನ್ನಾಗಿ ಲಾವಣಿ ಹಾಡ್ತಾರೆ", ಎಂದು ಒಬ್ಬರಿಗೂ ಪರಿಚಯ ಮಾಡಿಕೊಡಲಿಲ್ಲ. ಊರ ಸಮಾಚಾರವೆಲ್ಲಾ ಹರಟೆ ಬೋರು ಹೊಡೆಯುತ್ತಿದ್ದ ಆ ಮನುಷ್ಯನಿಗೆ ಅವರ ಬಗ್ಗೆ ಎರಡು ಒಳ್ಳೆಯ ಮಾತನಾಡುವಾಗ ಎರಡು ವರ್ಷವೂ ಬಾಯಿ ಕಟ್ಟಿಹೋಗಿತ್ತು ! ಇವೆರಡು ಉದಾಹರಣೆಯಿಂದ ಜೆ.ಪಿ. ರಾಜರತ್ನಂ ಹೇಳಿದ್ದು ನೆನಪಾಗುತ್ತದೆ : "ಕಂಕಣವೆಂದರೆ ಕಣ್ಣಿನಲ್ಲಿ ಬಂದ ನೀರಹನಿ. ಸರಸರ....ರಸವನ್ನು ಆಸ್ವಾದಿಸಿ, ತಮಗೆ ಆದ ಆನಂದ ಕಣ್ಣೀರ ಹನಿಯಾಗಿ ಹೊರಗೆ ಹರಿದುಬಂದಾಗ, ಆ ಕಂಕಣದಿಂದ ಕವಿಯ (ಕಲಾವಿದನ) ಜೀವಕ್ಕೆ ದೊರಕುವ ಆಹಾರ ಅನ್ಯಾದೃಶ್ಯವಾದದ್ದು". ರಸವನ್ನು ಆಸ್ವಾದಿಸುವುದೂ ಬೇಡ, ಆನಂದ ಕಂಕಣವಾಗಿ ಹರಿಯುವುದೂ ಬೇಡ, ಕಲಾವಿದನ ಜೀವಕ್ಕೆ ಆಹಾರವೂ ಬೇಡ; ನಿಮ್ಮಲ್ಲಿ ಹೃದಯ ಮಿಡಿಯುತ್ತಿದೆ ಎಂದು ತೋರಿಸಿಕೊಳ್ಳುವ ಹೃದಯವಂತಿಕೆಯೂ ಬೇಡವೆ ?

ನೀವು ನಮ್ಮ ಪ್ರಭಾವ ಬೀರಿಯೋ ಅಥವಾ ಗೋಗರೆದೊ, ಹೇಗೋ ಯಾರಿಗೋ ಕೆಲಸ ಕೊಡಿಸಿರುತ್ತೀರಾ, ಇನ್ಯಾರಿಗೋ ಅವರ ಕಂಟ್ರಾಕ್ಟ್ ಸುಗಮವಾಗಿಸಿರುತ್ತಿರಾ. ಅವರಿಂದ ನೀವಂತೂ ಒಂದು ಪುಡಿಗಾಸೂ ಅಪೇಕ್ಷಿಸುವುದಿಲ್ಲಾಂತ ಗೊತ್ತು. ಆದರೆ....ಒಂದ್ನಾಕು ತಿಂಗಳ ಅನಂತರ ಆ ಮನುಷ್ಯ ನಿಮ್ಮನ್ನು ದೂರದಿಂದಲೇ ನೋಡಿಯೂ ನೋಡದವನಂತೆ ಆ ಕಡೆ ತಿರುಗಿ ಹೋದರೆ, ನಿಮಗೆ ಏನನ್ನಿಸುತ್ತದೆ ? "ಅರೆ, ನನಗೆ ನ್ಯಾಯವಾಗಿ ಸಲ್ಲಬೇಕಿದ್ದ ಒಂದು ಸಲಾಮ್, ಒಂದೆರಡು ಮಾತಿರಲಿ, ಒಂದು ಪರಿಚಯದ ನಗುವನ್ನೂ ಕೊಡಲಿಲ್ಲವಲ್ಲಾ" ಎಂದು ಅನ್ನಿಸುತ್ತೋ ಇಲ್ಲವೋ ? ಇದೆಲ್ಲದರಿಂದ ನಿಮಗೆ ಏನೂ ಆಗಬೇಕಿಲ್ಲದಿದ್ದರೂ ಏನೋ ಕೊರೆ ಅನ್ನಿಸಿ ಅವನ ಬಗ್ಗೆ ಮನಸ್ಸು ಕೆಡುತ್ತದೆ. "ಸ್ವಲ್ಪವೂ ಕೃತಜ್ಞತೆಯೇ ಇಲ್ಲ" ಅಂತ ಒಳಗೊಳಗೇ ಬೈದುಕೊಳ್ಳುತ್ತೀರಿ. ಈ ವಿಚಾರದ ಪ್ರಸ್ತಾಪ ಇನ್ನೊಂದು ಕಡೆಯೂ ಬಂದಿದೆ. ಅದರಲ್ಲೂ ನೀವೇನಾದರೂ ಉತ್ತರ ಭಾರತದಲ್ಲಿ ಎಲ್ಲಿಯೋ ಇದ್ದು, ಅಲ್ಲಿನ ದಾಸತ್ವಕ್ಕೆ ಹತ್ತಿರ ಹತ್ತಿರವಾಗುವ ಕೃತಜ್ಞತೆಯನ್ನು ಅನುಭವಿಸಿದ್ದು,

ನಂತರ ಇಲ್ಲಿ ನಮ್ಮ ಕರ್ನಾಟಕದ ಜನರನ್ನು ನೋಡಿದರೆ ನಿಮಗೆ ಅಂತಹವರ ಮೇಲೆ ಸಿಟ್ಟಿಗಿಂತ "ಏನಾಗಿದೆ ಈ ನಮ್ಮ ಜನಕ್ಕೆ ?" ಅಂತ ಅಳುವೇ ಬರುತ್ತದೆ ! ಇದೇ ರೀತಿ ಅಣ್ಣ ತಮ್ಮ, ಬಂಧು ಬಳಗ, ನೆಂಟರು ಇಷ್ಟರು ಅಂತ ನೀವೇನಾದರೂ ಸಹಾಯ ಮಾಡಿದ್ದರೆ ಅದನ್ನು ನೆನಪಿಟ್ಟುಕೊಂಡು ವರ್ತಿಸುವುದು ಅವರ ಸೌಜನ್ಯ. ಆ ರೀತಿ ಬಿಟ್ಟು "ಓಹೋ, ಏನು ಮಹಾ ಮಾಡಿದ್ದು. ಅದಕ್ಕೆ ಮಂದಿರ ಸುತ್ತಿದ ಹಾಗೆ ಇವನ ಮನೆ ಪ್ರದಕ್ಷಿಣೆ ಹಾಕಬೇಕೇನು ? ಅಷ್ಟಕ್ಕೇ ನಮ್ಮನ್ನು ಕೊಂಡುಕೊಂಡು ಬಿಟ್ಟ ಹಾಗಾಯ್ತೇನು" ಎನ್ನುವುದು ಉದ್ಧಟತನ. ಅಂದ ಹಾಗೆ ನಿಮಗೂ ಅನೇಕ ಜನರು ಒಂದಲ್ಲ ಒಂದು ವೇಳೆ, ಸ್ವಲ್ಪವೋ ಹೆಚ್ಚೋ ಸಹಾಯ ಮಾಡಿರಲೇಬೇಕಲ್ಲವೇ? ಅವರನ್ನು ನೋಡಿದಾಗಲಾದರೂ ಒಮ್ಮೆ ನಿಮ್ಮ 'ಅಹಂ' ತಗ್ಗಿಸಿಕೊಂಡು, ಕೈ ಜೋಡಿಸಿ, ಒಂದು ಒಳ್ಳೇ ಮಾತು ಆಡಿರಿ. ಇಷ್ಟಕ್ಕೂ ಕಾರ್ಪಣ್ಯವೇ ?....

ನನ್ನ ಸ್ನೇಹಿತರೊಬ್ಬರು ತುಂಬಾ ನಿಗರ್ವಿಗಳು, ಸಹೃದಯರು.... ಆದರೆ ಅವರ ಮುಖ ಕಲ್ಲಿನ ಮೂರ್ತಿಯಂತೆ, ಸದಾ ಸ್ಥಿರ. ಅವರನ್ನು ನೋಡಿದರೇ ಹೆಚ್ಚು ಜನ ಹೆದರಿಕೊಂಡು ಓಡ್ತಾರೆ. ಅವರ ಮಾತೂ ಕಡಿಮೆಯಾದ್ದರಿಂದ ಅವರೇನು ಯೋಚನೆ ಮಾಡ್ತಾರೆ, ನಾವು ಹೇಳಿದ್ದು ಅವರಿಗೆ ಹಿಡಿಸಿತೋ ಇಲ್ಲವೋ, ಒಂದೂ ತಿಳಿಯೋದಿಲ್ಲ. "ಇಲ್ಲಪ್ಪಾ, ತುಂಬಾ ಒಳ್ಳೇವರು, ಅವರಿಗೆ ನಿಮ್ಮ ಕಷ್ಟ ಹೇಳಿಕೊಳ್ಳಿ", ಅಂದರೂ ಅವರ ಹತ್ತಿರ ಹೋಗಲು ಅನೇಕರು ತಯಾರಿರುವುದಿಲ್ಲ. ಅಂದರೆ ಕೇವಲ ಮನಸ್ಸಿನಲ್ಲಿ ಒಳ್ಳೇ ಯೋಚನೆ ಸದ್ಭಾವನೆಗಳಿದ್ದರೆ ಸಾಲದು. ಮನಸಾ, ವಾಚಾ, ಕಾಯಾ ಮೂರರಲ್ಲೂ ವ್ಯಕ್ತವಾದರೆ ಮಾತ್ರ ಹೃದಯವಂತಿಕೆ ಬೆಳಕಿಗೆ ಬರೋದು. ಬರೀ ಬಾಯಿನ ಮಾತಿನಲ್ಲಿ ಮಾತ್ರ ವ್ಯಕ್ತವಾದರೆ ಅದು ಬುಡಬುಡಿಕೆ, ಬೂಟಾಟಿಕೆ ಎಂದು ಹಿಂದೊಮ್ಮೆ ಹೇಳಿದ್ದೇನೆ. ಹೃಯದವಂತಿಕೆ ಅಂದರೆ ವಿಶಾಲವಾಗೋದು, ಅಲ್ಲಿ ಏತಕ್ಕಾಗಿ ಸಂಕುಚಿತವಾಗಿರುವ ಲೋಭ ಅಥವಾ ಚೌಕಾಶಿ ?

'ದಿನಕ್ಕೊಂದು ಒಳ್ಳೇ ಕೆಲಸ ಮಾಡಿ', ಅನ್ನೋದು ಸ್ಕೌಟಿನ ಧ್ಯೇಯ. ಆ ಒಳ್ಳೇ ಕೆಲಸಕ್ಕೆ ತಕ್ಕುದಾಗಿ ದಿನಕ್ಕೊಂದಾದರೂ ಒಳ್ಳೇ ಯೋಚನೆ, ಒಳ್ಳೇ ಮಾತು, ಒಳ್ಳೇ ಕೆಲಸ ನಮ್ಮದಾದರೆ ಅದೆಷ್ಟು ಚೆನ್ನ ! ಈ ಹೃದಯವಂತಿಕೆ ನಮ್ಮಲ್ಲೇಕೆ ಬೆಳೆಯೋದಿಲ್ಲ. ಏಕೆ ವ್ಯಕ್ತವಾಗೋದಿಲ್ಲ. ಏಕೆ ಕಾರ್ಯರೂಪಕ್ಕೆ ಬರೋದಿಲ್ಲ ? ಇನ್ನೊಬ್ಬರು ನಿಮ್ಮ ಹೃದಯವಂತಿಕೆಯ ದುರುಪಯೋಗ ಪಡೆದುಕೋತಾರೇ ಅನ್ನೊ ಭಯವೇ ? ಈ ಸಲ್ಲದ ಭಯಕ್ಕೆ ನಿಮ್ಮ ವಿಶಾಲತೆಯನ್ನು ಮನದೊಳಗೇ ಬಂಧಿಸಿ, ಅದಕ್ಕೆ ಮೂಕುತನದ ಬೀಗ ಹಾಕಿ, ಅದನ್ನು ಸಂಕುಚಿತಗೊಳಿಸಿ, ಮೊಟಕು ಮಾಡಿ ನಿಮಗೆ ಸಲ್ಲುವ ಲೋಭಿತನವನ್ನು ಏಕೆ ಬೀಗಬೇಕು?

ಏಳಿ, ಇನ್ನೂ ಕೈಕಟ್ಟಿ, ಮನಮುದುಡಿ ಕುಳಿತುಕೊಳ್ಳಬೇಡಿ. ಏಳಿ, ಕೈ ಚಾಚಿ, ಮನತೆರೆದು, ಹೃದಯ ತುಂಬಿ, ಮುಸಿನಕ್ಕು, ಒಂದು ಹೆಜ್ಜೆ ಮುಂದಿಟ್ಟು, ಕೈ ಮುಂದೆ ಮಾಡಿ – ಮನಸಾ, ಕಾಯಾ, ವಾಚಾ, ಒಂದು ಒಳ್ಳೆಯ ಹೃದಯವಂತಿಕೆಗೆ, ಒಳ್ಳೆಯ ಮಾತಿಗೆ, ಒಳ್ಳೆಯ ಕೆಲಸಕ್ಕೆ ನಿಮ್ಮನ್ನು ನೀವೇ ಮುಂದಾಗಿಸಿ ಸೌಜನ್ಯಮೂರ್ತಿಗಳಾಗಿ, ಮಾನವೀಯತೆಯ ಒಂದು ಗುಣದ ಅಂಶಾವತಾರಿಗಳಾಗಿ.

○

ಸೌಜನ್ಯ ಮತ್ತು ಆಧುನಿಕತೆ

–ಶಾಂತರಾಜು

ಒಮ್ಮೆ ದಿನಪತ್ರಿಕೆಯಲ್ಲೋ, ವಾರಪತ್ರಿಕೆಯಲ್ಲೋ ಓದಿದ ನೆನಪು. ವೇಗವಾಗಿ ಬಂದ ಬಿ.ಎಂ.ಟಿ.ಸಿ. ಬಸ್ಸೊಂದು ರಸ್ತೆ ದಾಟುತ್ತಿದ್ದ ವ್ಯಕ್ತಿಯೋರ್ವನಿಗೆ ಡಿಕ್ಕಿ ಹೊಡೆದ ಪರಿಣಾಮವಾಗಿ ಆತನ ಕಾಲು ಚಕ್ರದ ಅಡಿಯಲ್ಲಿ ಸಿಲುಕಿ ನಜ್ಜುಗುಜ್ಜಾಯಿತು. ಬಸ್ ಚಾಲಕ ಜನರ ಹೊಡೆತವನ್ನು ತಪ್ಪಿಸಿಕೊಳ್ಳಲು ಓಡಿಹೋಗಿ ಪೊಲೀಸ್ ಠಾಣೆಯಲ್ಲಿ ಶರಣಾದ. ಆದರೆ ಅಪಘಾತಕ್ಕೀಡಾದ ಆ ವ್ಯಕ್ತಿಯ ಬಗ್ಗೆ ಸೌಜನ್ಯಕ್ಕಾದರೂ ವಿಚಾರಿಸಲಿಲ್ಲ. ಆಗ ಅಪರಿಚಿತ ಟ್ಯಾಕ್ಸಿ ಚಾಲಕನೊಬ್ಬ ಬಂದು ಆ ವ್ಯಕ್ತಿಯನ್ನು ಕರೆದುಕೊಂಡು ಬೌರಿಂಗ್ ಆಸ್ಪತ್ರೆಗೆ ಹೋದ. ಅಲ್ಲಿ ವೈದ್ಯರ ಕೊರತೆಯಿದ್ದ ಕಾರಣ ಚಿಕಿತ್ಸೆ ದೊರೆಯದೆ ಅಲ್ಲಿಂದ ಆಂಬುಲೆನ್ಸ್ ಮೂಲಕ ವಿಕ್ಟೋರಿಯಾ ಆಸ್ಪತ್ರೆಗೆ ಸೇರಿಸಿ ರೋಗಿಗೆ ಸಂಬಂಧಪಟ್ಟವರಿಗೆಲ್ಲ ದೂರವಾಣಿ ಮಾಡಿ ವಿಚಾರವನ್ನು ತಿಳಿಸಿ ಆಂಬುಲೆನ್ಸ್ ಬಾಡಿಗೆಯನ್ನೂ ಸಹ ತಾನೇ ಕೊಟ್ಟು ತನ್ನ ವ್ಯಕ್ತಿತ್ವವನ್ನು ಮೆರೆದ.

ಇನ್ನೊಮ್ಮೆ ನನಗೆ ತಿಳಿದವರಿಂದ ಆತ್ಮೀಯರೊಬ್ಬರು ಒಂದು ಕೆಲಸಕ್ಕಾಗಿ ಕಛೇರಿಗೆ ಬಂದು ದುಂಬಾಲುಬಿದ್ದು ಕಾರ್ಯವನ್ನು ಸಾಧಿಸಿಕೊಂಡೇ ಹೋದರು. ಆದರೆ ಕೃತಜ್ಞತೆ ಸಹ ತಿಳಿಸಲಿಲ್ಲ. ಆಗ ನನಗನ್ನಿಸಿದ್ದು ಕೆಲಸವಾಗುವವರಗೆ ದೈನ್ಯದಿಂದ ಬೇಡಿ ನಿಂತ ಇವರು ಕೆಲಸ ಮುಗಿದ ಮೇಲೆ ಸೌಜನ್ಯಕ್ಕಾದರೂ ಒಂದು ಥ್ಯಾಂಕ್ಸ್ ಅಂತ ಹೇಳಬಹುದಿತ್ತಲ್ಲವೇ ಎನಿಸಿತು. ಆಗ ನೆನಪಾದ ಗಾದೆ ಹೊಳೆ ದಾಟಿದ ಮೇಲೆ....

ಇಂದು ಜಾತಿ ಧರ್ಮದ ಹೆಸರಿನಲ್ಲಿ ಒಡೆದು ಛಿದ್ರವಾಗಿರುವ ಭಾರತೀಯ ಸಮಾಜ ಸಂಕುಚಿತವಾದ ಮನಸ್ಸುಗಳಿಂದ ಶೋಚನೀಯವಾದ ರೀತಿಯಲ್ಲಿ ಮಲಿನಗೊಂಡಿದೆ. ಒಬ್ಬ ವ್ಯಕ್ತಿಯಲ್ಲಿ ದೇಹದ ಯಾವುದೇ ಅಂಗ ಊನವಾದರೆ ಆತನನ್ನು ವಿಕಲಾಂಗ ಎಂದು ಗುರುತಿಸುತ್ತೇವೆ. ಒಬ್ಬ ವ್ಯಕ್ತಿಯ ಎಲ್ಲಾ ಅಂಗಾಂಗಗಳು ಸದೃಢವಿದ್ದಾಗ ಮಾತ್ರ ಆತನನ್ನು ದೃಢಕಾಯನೆಂದು ಕರೆಯುತ್ತೇವೆ. ಹಾಗೆಯೇ ವ್ಯಕ್ತಿಯೊಬ್ಬ ಸನ್ನಡತೆ, ಸದಾಚಾರ, ಸದ್ಭಕ್ತಿ, ಸದ್ವಿನಿಯೋಗ ಈ ಎಲ್ಲಾ ಪ್ರಮುಖ ಗುಣಗಳಿಂದ ಕೂಡಿದ್ದರೆ 'ಸುಜನ' ಎಂತಲೂ ಆತನಿಂದ ಹೊರಹೊಮ್ಮಲ್ಪಟ್ಟ ನಡತೆಗೆ ಸೌಜನ್ಯವೆಂದು ಗುರುತಿಸುತ್ತೇವೆ.

ಇಡೀ ವಿಶ್ವವೇ ಬಾಯ ಮೇಲೆ ಬೆರಳಿಟ್ಟು ನಿಬ್ಬೆರಗಾಗುವಂತಹ ಮಹೋನ್ನತ ಸಂಸ್ಕೃತಿ ನಮ್ಮ ಭಾರತೀಯ ಸಂಸ್ಕೃತಿ, ಜಗತ್ತಿನ ಅನೇಕ ಪಂಡಿತೋತ್ತಮರೇ ಹಾಡಿ, ಹೊಗಳಿದ ಭವ್ಯ ಸಂಸ್ಕೃತಿ. ಆದರೆ ಪಾಶ್ಚಿಮಾತ್ಯ ಪ್ರಭಾವದಿಂದ ಪೂರ್ಣವಲ್ಲದಿದ್ದರೂ ಆದಷ್ಟೂ ಬದಲಾಗುತ್ತಿರುವ ಅನೇಕ ಶೀಲಗಳಲ್ಲಿ ಸೌಜನ್ಯವೂ ಒಂದು. ಹಣದ ಆವಿಷ್ಕಾರವೂ ಮಾನವ ಜಗತ್ತಿನಲ್ಲಿ ಉಂಟು ಮಾಡಿದ ಬದಲಾವಣೆಯನ್ನು ಇತಿಹಾಸದ ಪುಟಗಳನ್ನು ತಿರುಗಿಸಿದಾಗ ತಿಳಿಯಬಹುದು. ಜೀವನ ನಿರ್ವಹಣೆಗೆ ಸಹಕಾರಿಯಾಗಿ ರೂಪ ತಾಳಿದ ವಾಣಿಜ್ಯ ಇಂದು ಹಲವು ಬಗೆಯ ರೂಪವನ್ನು ತಾಳಿ ನರ್ತಿಸುತ್ತಿದೆ ಈ ವಾಣಿಜ್ಯೀಕರಣದ ಬರಾಟೆಯಲ್ಲಿ ಇಂದು ಸೌಜನ್ಯವೂ ವಾಣಿಜ್ಯೀಕರಣವಾಗಿದೆ. ಈ ಎಲ್ಲಾ ಬದಲಾವಣೆಯನ್ನು ಸಹಜವಾಗಿಯೇ ಸ್ವೀಕರಿಸಿರುವ ಯುವಪೀಳಿಗೆ ನಮ್ಮ ಪರಂಪರೆಯನ್ನು ಅರಿಯದ ಹೊರತು ಇಂದು ಅಂದಿನ ಸಾಧಕ–ಬಾಧಕಗಳನ್ನು ತಿಳಿಯಲು ಸಾಧ್ಯವಿಲ್ಲ.

ಅಂದಿನ ತಾಯಿ ತನ್ನ ಮಗುವಿಗೆ ಹಾಲು ಕುಡಿಸುವಾಗ "ಆಚಾರಕರಸಾಗು, ನೀತಿಗೆ ಪ್ರಭುವಾಗು, ಮಾತಿನಲಿ ಚೂಡಾಮಣಿಯಾಗು, ಜ್ಯೋತಿಯೇ ಆಗು ಜಗಕೆಲ್ಲ" ಎಂದು ಸನ್ನಡತೆಯ ಸಾಮಾಜಿಕ ಬದುಕಿಗೆ ಬೇಕಾದ ಮಾನವೀಯ ಮೌಲ್ಯಗಳನ್ನು ಬಿತ್ತಿ ಒಬ್ಬ ಸತ್ಪ್ರಜೆಯನ್ನಾಗಿ ರೂಪಿಸುವಲ್ಲಿ ಆಕೆ ಮುಂದಾಗಿದ್ದಳು. ಆದರೆ ಇಂದಿನ ತಾಯಿ ಮಗು ಈ ಜಗತ್ತಿಗೆ ಕಾಲಿಡುವ ಮೊದಲೇ ಕಾನ್ವೆಂಟು ಸಂಸ್ಕೃತಿಯನ್ನೂ, ವ್ಯಾವಹಾರಿಕ ಪ್ರಜ್ಞೆಯನ್ನೂ, ಯಾಂತ್ರಿಕ ಯುಗಕ್ಕೆ ಒಗ್ಗುವ ಯಂತ್ರವನ್ನಾಗಿ ನಿರ್ಧರಿಸುವಲ್ಲಿ ಅವಿರತ ಹೋರಾಟ ಮಾಡುತ್ತಿದ್ದಾಳೆ. ಈಕೆಗೆ ಮಾನವೀಯ ಮೌಲ್ಯಕ್ಕಿಂತ ಈ ಸ್ಪರ್ಧಾ ಪ್ರಪಂಚದಲ್ಲಿ ನಾಲ್ಕು ಜನರ ಮುಂದೆ ಆರ್ಥಿಕವಾಗಿ, ಶೈಕ್ಷಣಿಕವಾಗಿ, ವ್ಯಾವಹಾರಿಕವಾಗಿ ಮಿಂಚಬೇಕೆಂಬ ಅಂತರಾಳದ ತುಡಿತದಿಂದ ಮೌಲ್ಯಯುತ ಬದುಕನ್ನು ರೂಪಿಸುವಲ್ಲಿ ವಿಫಲಳಾಗಿದ್ದಾಳೆ. ಇಂದು ಅನೇಕರ ನಡತೆಯ ಕಥೆಯೂ ಇದಕ್ಕೆ ನಿದರ್ಶನ ಒದಗಿಸುತ್ತದೆ. ಅಂದ ಮಾತ್ರಕ್ಕೆ ಇಂದಿನ ಯುವಪೀಳಿಗೆಯಲ್ಲಿ ಸೌಜನ್ಯವೇ ಇಲ್ಲವೆಂದೇನಲ್ಲ ಇದೆ. ಆದರೆ ವಿಧಾನದಲ್ಲಿ ಆಧುನಿಕವಾಗಿದೆ, ಯಾಂತ್ರಿಕವಾಗಿದೆ. ಇದಕ್ಕೆ ಕಾರಣವಿಲ್ಲದಿಲ್ಲ. ಇಂದಿನ ದೃಶ್ಯ ಮಾಧ್ಯಮಗಳ ಪ್ರಭಾವ ಅಷ್ಟಿಷ್ಟಲ್ಲ. ಒಂದು ಕಾಲಕ್ಕೆ ಅವಿಭಕ್ತ ಕುಟುಂಬವಾಗಿ ಮನೆ ಮಂದಿಯೆಲ್ಲಾ ಯಾವುದೇ ರೀತಿಯ ತಾರತಮ್ಯವಿಲ್ಲದೆ ಕಲೆತು ಆನಂದವನ್ನು ಅನುಭವಿಸುತ್ತಿದ್ದ ಬದುಕು ಇಂದು ಅನೇಕ ಕಾರಣಗಳಿಂದ ಛಿದ್ರವಾಗಿ, ಪ್ರತ್ಯೇಕ, ಪ್ರತ್ಯೇಕವಾಗಿ ಹೊಡೆದು ಹೋಳಾಗಿ ಸಂಬಂಧಗಳ ಅರಿವೇ ಇಲ್ಲದಂತೆ ಅಸೂಯೆ, ದ್ವೇಷಕ್ಕೆ ಎಡೆ ಮಾಡಿಕೊಡುತ್ತಿದೆ. ಸರಳವಾಗಿಯೇ ಬಗೆಹರಿಯಬಹುದಾದ ಅನೇಕ ಸಣ್ಣಪುಟ್ಟ ಸಮಸ್ಯೆಗಳು ಅತಿ ಕ್ಲಿಷ್ಟವಾಗಿ ಪರಿಣಮಿಸಿ ಬದುಕನ್ನು ದುರಂತಕ್ಕೆ ಎಡೆಮಾಡಿದೆ.

ದಿನದಿನವು ಕುಸಿದು ಕಟ್ಟಿಸಿಕೊಳ್ಳುವ ಗುಡಿ ವಿಶ್ವ
ಜನರೆಲ್ಲರಾಗುಡಿಯ ಕೆಲಸದಾಳುಗಳು
ಮನೆಯೇನು ? ನಾಡೇನು ? ಕುಲವೇನು ? ಮಠವೇನು ?
ಎಣಿಸಿಲ್ಲವದೆಯೆಂದು ಮಂಕುತಿಮ್ಮ

ಎಂಬ ಡಿವಿಜಿಯವರ ಹೇಳಿಕೆಯಲ್ಲಿಯೆ ಪ್ರತಿನಿತ್ಯವೂ ವಿಶ್ವಗುಡಿ ಕುಸಿದು ಕಟ್ಟಿಸಿಕೊಳ್ಳುವಂತೆ. ಸೌಜನ್ಯವೂ ಸಹ ಕುಸಿದು ಮತ್ತೆ ಹೊಸ ರೂಪದಲ್ಲಿ ಮೂಡಿ ಬರುತ್ತದೆ. ಮೂಡುವಾಗ ಪ್ರಸ್ತುತದ ಬಾಹ್ಯ ಪ್ರಭಾವಕ್ಕೆ ಮಣಿದು ಬೆಳೆಯುತ್ತದೆ. ಇಂದು ನಿಂತು ನೋಡುವ ನಾವು ನೆನ್ನೆಯೇ ಸರಿ, ಅದು ಉತ್ತಮ ಎಂದು ತಿಳಿಯುವಂತೆ ನಾಳೆಗಿದು ಉತ್ತಮವಾಗಿ ಮುಂದಿನ ದಿನ ನಿಕೃಷ್ಟವಾಗುತ್ತದೆ. ಹಾಗಾಗಿಯೇ ಇರುವ ವ್ಯವಸ್ಥೆಯಲ್ಲಿಯೇ ಒಳ್ಳೆಯದನ್ನು ಹುಡುಕಿ ಆಶಾವಾದಿಗಳಾಗಿ ಮಕ್ಕಳಿಗೆ "ಸಜ್ಜನರ ಸಂಗವದು ಹೆಜ್ಜೇನು ಸವಿದಂತೆ, ದುರ್ಜನರ ಸಂಗವದು ಕಿವಿಗೆ ಕೂರ್ದಸಿಯ ಬಡಿದಂತೆ" ಎಂದು ಬೋಧಿಸಿ ಸಜ್ಜನರ ಸಹವಾಸ ಮಾಡಲು ಆಶಿಸುತ್ತೇವೆ ಎಂದ ಮೇಲೆ ಇಂದೂ ಸಹ ಸೌಜನ್ಯವನ್ನು ಕಾಣಲು ಸಾಧ್ಯವಿದೆ ಎಂದಂತೆಯೆ ಸರಿ.

ಏನಿ ಬಂದಿರಿ ಹದುಳಿದ್ದಿರೆ ಎಂದಡೆ
ನಿಮ್ಮೈಸಿರಿ ಹಾರಿ ಹೋಹುದೆ ?
ಒಡನೆ ನುಡಿದಡೆ ಸಿರಿ ಹೊಟ್ಟೆಯೊಡೆವುದೆ ?
ಕೊಡಲಿಲ್ಲದಿದ್ದದೊಂದು ಗುಣವಿಲ್ಲದಿದ್ದಡೆ
ಮೂಗ ಕೊಯ್ವುದ ಮಾಣ್ಬನೆ

ಎಂಬ ಬಸವಣ್ಣನವರ ಈ ವಚನ ೧೨ನೇ ಶತಮಾನದ ಸಮಾಜದತ್ತ ವಸ್ತುಸ್ಥಿತಿಗೆ ಹಿಡಿದ ಕನ್ನಡಿ ಆಗಿದೆ. ಆ ಕಾಲಕ್ಕೆ ಸೌಜನ್ಯದ ಕೊರತೆ ಎದ್ದುಕಾಣುತ್ತಿತ್ತು "ವಿನಾಶಕಾಲೇ ವಿಪರೀತ ಬುದ್ಧಿ" ಎಂಬ ಸಂಗತಿಯನ್ನು ಸಾರುತ್ತದೆ. ನಿರಾಶಾವಾದಿಗಳಾಗಿ ಮಾತನಾಡಬೇಕಾದ ಅವಶ್ಯಕತೆ ಇಲ್ಲ.

ಪೊಸರಸಂ ಬೇರಿಗನುದಿನಮೊದವಿ ಧರೆಯಿಂದ
ಸಸಿಗೆ ಹೊಸ ತಳಿರ ತಲೆಯಲಿ ಮುಡಿಸುವಂತೆ
ಹೊಸ ಸೃಷ್ಟಿ ಸತ್ತ್ವ ಮೆತ್ತಣಿನೊ ಬರುತನುದಿನಂ
ಹೊಸತಾಗಿಪ್ಪುದು ಜಗವ ಮಂಕುತಿಮ್ಮ

ಪ್ರತಿನಿತ್ಯ ಭೂಮಿಯಿಂದ ಹೊಸ ರಸವನ್ನು ಪಡೆದು ಹೊಸ ತಳಿರಿನಿಂದ ನಳನಳಿಸುವಂತೆ ಮನುಷ್ಯನೂ ಸಹ ಎಲ್ಲ ಹೊಸ ಹೊಸ ಪ್ರಭಾವ, ಪ್ರೇರಣೆಗಳಿಗೆ ಒಳಗಾಗಿ ಎಲ್ಲಾ ರೀತಿಯಲ್ಲೂ ಹೊಸತಾಗುವಂತೆ ಸೌಜನ್ಯವೂ ಆಧುನಿಕವಾಗಿ ಸಾಗುತ್ತಿದೆ. ಮನುಷ್ಯ ವೈಚಾರಿಕವಾಗಿ, ವೈಜ್ಞಾನಿಕವಾಗಿ, ವ್ಯಾವಹಾರಿಕವಾಗಿ ಬೆಳೆದಂತೆ ಆತನ ನಡವಳಿಕೆಯಲ್ಲಿಯೂ ಆ ಗುಣಗಳು ಅಚ್ಚೊತ್ತುವುದು ಸಹಜವೇ ಸರಿ.

> ಕೃತಯುಗದಲ್ಲಿ ಶ್ರೀ ಗುರು ಶಿಷ್ಯಂಗೆ ಬಡಿದು ಬುದ್ಧಿಯ ಕಲಿಸಿದಡೆ ಆಗಲಿ
> ಮಹಾಪ್ರಸಾದವೆಂದನಯ್ಯ
> ತ್ರೇತಾಯುಗದಲ್ಲಿ ಶ್ರೀಗುರು ಶಿಷ್ಯಂಗೆ ಬೈದು ಬುದ್ಧಿಯ ಕಲಿಸಿದಡೆ ಆಗಲಿ
> ಮಹಾಪ್ರಸಾದವೆಂದನಯ್ಯ
> ದ್ವಾಪರಾಯುಗದಲ್ಲಿ ಶ್ರೀಗುರು ಶಿಷ್ಯಂಗೆ ಬೈದು ಬುದ್ಧಿಯ ಕಲಿಸಿದಡೆ ಆಗಲಿ
> ಮಹಾಪ್ರಸಾದವೆಂದನಯ್ಯ
> ಕಲಿಯುಗದಲ್ಲಿ ಶ್ರೀಗುರು ಶಿಷ್ಯಂಗೆ ವಂದಿಸಿ ಬುದ್ಧಿಯ ಕಲಿಸಿದಡೆ
> ಆಗಲಿ ಮಹಾಪ್ರಸಾದವೆಂದನಯ್ಯ
> ಗುಹೇಶ್ವರ ನಿಮ್ಮ ಕಾಲದ ಕಟ್ಟಳೆಯ ಕಲಿತನಕ್ಕೆ ಬೆರೆಗಾದೆನು.

ಕಾಲ ಕಾಲಕ್ಕೂ ಗುರು ಶಿಷ್ಯರ ಸಂಬಂಧದಲ್ಲಿ ಬದಲಾವಣೆ ಸ್ಪಷ್ಟವಾಗಿ ಗೋಚರವಾಗುತ್ತಿದೆ. ಕಾಲದಿಂದ ಕಾಲಕ್ಕೆ ಶಿಷ್ಯನು ಬುದ್ಧಿವಂತನಾಗುತ್ತಿದ್ದಾನೆ, ಚುರುಕಾಗುತ್ತಿದ್ದಾನೆ ಎಂಬುದನ್ನು ಗುರುತಿಸಬೇಕೆ ಹೊರತು, ಅದು ಶಿಷ್ಯನ ಉದ್ಧಟತನ, ಸೌಜನ್ಯವಿಲ್ಲವೆಂದು ತಿಳಿಯುವ ಅವಶ್ಯಕವಿಲ್ಲ. ಗುರುವು ಶಿಷ್ಯನೂ ಇಬ್ಬರೂ ಕಾಲಧರ್ಮಕ್ಕೆ ತಕ್ಕಂತೆ ಬದಲಾಗುತ್ತಿದ್ದಾರೆ. ಅವರ ಸೌಜನ್ಯದ ವರ್ತನೆಯ ರೀತಿಯೂ ಬೇರೆ ಬೇರೆ ರೂಪ ತಾಳುತ್ತಿದೆ. ಬದಲಾದ ಶಿಷ್ಯನ ಮನೋಧರ್ಮಕ್ಕೆ ತಕ್ಕಂತೆ ಗುರು ಬದಲಾಗುತ್ತಿರುವುದನ್ನು ಈ ವಚನ ಸಾರುತ್ತದೆ. ಬಡಿದು ಬುದ್ಧಿಯ ಕಲಿಸಿದಾಗ ಇದ್ದ ಶಿಷ್ಯನ ವರ್ತನೆ ಬದಲಾಗುತ್ತಿದ್ದ ಹಾಗೆ ಗುರುವೂ ಸಹ ಬದಲಾಗುತ್ತ ವಂದಿಸಿ ಪೇಳ್ವ ಹಂತಕ್ಕೆ ಬಂದಿರವುದು ಶ್ರೀ ಗುರು ಸೌಜನ್ಯದ ಮಹತ್ವ ಮನಗಂಡಿರುವುದು ಅರಿವಾಗುತ್ತದೆ.

ಸೌಜನ್ಯ – ಸೌಶೀಲ್ಯ

–ಡಾ॥ ಇಂದ್ರಾಣಿ ನಂದಕುಮಾರ್

ಮಾನವನ ಅನೇಕ ಒಳ್ಳೆಯ ಗುಣಗಳಲ್ಲಿ ಸೌಜನ್ಯವೂ ಒಂದು. ನಮ್ಮ ಹಿಂದೂ ಧರ್ಮದಲ್ಲಿ ನಮ್ಮ ಸಂಸ್ಕೃತಿ ಏನು ? ಯಾವ ರೀತಿ ಸೌಜನ್ಯವನ್ನು ತೋರಬೇಕು ಎಂದು ಅನಾದಿ ಕಾಲದಿಂದಲೂ ಅನೇಕ ಇತಿಹಾಸ–ಪುರಾಣಗಳು ತಿಳಿಸುತ್ತವೆ.

ಕಠೋಪನಿಷತ್ತಿನಲ್ಲಿ ವಾಜಶ್ರವಸನೆಂಬ ಋಷಿಯು ವಿಶ್ವಜಿತ್ ಯಾಗವನ್ನು ಮಾಡಿ ಕೊನೆಯಲ್ಲಿ ತನ್ನಲ್ಲಿರುವ ಸಂಪತ್ತನ್ನೆಲ್ಲಾ ದಾನ ಮಾಡಬೇಕು. ಆದರೆ ಈ ಋಷಿಯು ತನಗೆ ಬೇಡದ, ಸಲ್ಲದ, ಉಪಯೋಗಕ್ಕೆ ಬಾರದಂತಹ ವಸ್ತುಗಳನ್ನೂ, ಹಾಲು ಕೊಡದ, ವಯಸ್ಸಾದಂತಹ ಉಪಯೋಗವಿಲ್ಲದಿರುವಂತಹ ಹಸುಗಳನ್ನು ದಾನವಾಗಿ ಕೊಡುತ್ತಿರುತ್ತಾನೆ. ಆಗ ನಚಿಕೇತನೆಂಬ ವಾಜಶ್ರವಸನ ಮಗನು ತನ್ನ ತಂದೆಯ ಬಳಿಗೆ ಬಂದು ತಂದೆಗೆ ಬುದ್ಧಿವಾದ ಹೇಳುತ್ತಾನೆ ಆ ರೀತಿ ಮಾಡಬಾರದೆಂದು. ಇದರಿಂದ ನಚಿಕೇತನ ತಂದೆಯಾದ ವಾಜಶ್ರವಸನಿಗೆ ಅತ್ಯಂತ ಕೋಪವುಂಟಾಗಿ ಸುಮ್ಮನೆ ಕುಳಿತುಕೋ ನೀನಿನ್ನೂ ಬಾಲಕ ನಿನಗೇನೂ ತಿಳಿಯದು ಎಂದು ಬೈಯುತ್ತಾನೆ ಮತ್ತೆ ಅದೇ ರೀತಿ ಯಥಾಪ್ರಕಾರ ಸ್ವೀಕರಿಸುವವರ ಅನುಕೂಲಕ್ಕೆ ಬಾರದುದನ್ನೇ ದಾನವಾಗಿ ಕೊಡುತ್ತಿರುತ್ತಾನೆ. ಇದರಿಂದ ನಚಿಕೇತನಿಗೆ ತಡೆಯಲಾಗದೆ ಪುನಃ ತನ್ನ ತಂದೆಯ ಬಳಿಗೆ ಬಂದು ನಾನೂ ಸಹ ನಿಮಗೇ ಸೇರಿದವನಲ್ಲವೇ ! ಆದ್ದರಿಂದ ನನ್ನನ್ನೂ ಯಾರಿಗಾದರೂ ದಾನ ಮಾಡಿ ಎನ್ನುತ್ತಾನೆ. ಆಗ ವಾಜಶ್ರವಸನು ಅತ್ಯಂತ ಕೋಪದಿಂದ ಮತ್ತೆ ಮತ್ತೆ ವಿಘ್ನವನ್ನುಂಟು ಮಾಡುತ್ತಿರುವೆ ಎನ್ನುತ್ತಾ "ನಿನ್ನನ್ನು ಯಮನಿಗೆ ನೀಡಿದ್ದೇನೆ" ಎನ್ನುತ್ತಾನೆ. ಆ ಕೂಡಲೇ ನಚಿಕತೇನು ಯಮಲೋಕಕ್ಕೆ ಹೋಗುತ್ತಾನೆ. ಆದರೆ ಯಮ ತನ್ನ ಸ್ವಸ್ಥಾನದಲ್ಲಿ ಇಲ್ಲದಿದ್ದುದರಿಂದ ಅಲ್ಲಿಯೇ ಬಾಗಿಲಿನಲ್ಲಿ ಕಾಯುತ್ತಾ ಕುಳಿತುಕೊಳ್ಳುತ್ತಾನೆ. ಹೀಗೆ ಎರಡು ರಾತ್ರಿ ಮೂರು ಹಗಲು ಕಳೆಯುತ್ತದೆ. ಆಗ ಯಮ ಅಲ್ಲಿಗೆ ಧಾವಿಸುತ್ತಾನೆ. ಬಾಗಿಲಿನಲ್ಲಿಯೇ ಪ್ರಜ್ವಾಲ್ಯಮಾನವಾದ ಬೆಳಕೊಂದನ್ನು ಕಂಡು ಹತ್ತಿರ ಬಂದು ನೋಡಿದಾಗ ನಚಿಕೇತನೆಂಬ ಬಾಲಕನನ್ನು ನೋಡಿ ಅತ್ಯಂತ ದುಃಖದಿಂದ ವಿಲಪಿಸುತ್ತಾನೆ. ಮನೆಗೆ ಬಂದಂತಹ ಅತಿಥಿಗೆ ತೋರಿಸಬೇಕಾದ ಕನಿಷ್ಠ ಸೌಜನ್ಯವನ್ನು

ತಾನು ತೋರದೆ ಮೂರು ದಿನಗಳು ಬಾಗಿಲಿನಲ್ಲಿ ಕಾಯಿಸಿದೆನಲ್ಲಾ ಎನ್ನುತ್ತಾ ಅವನಿಗೆ ಮೂರು ವರಗಳನ್ನು ನೀಡುತ್ತಾನೆ.

ವಾಜಶ್ರವಸನು ಪುತ್ರನಿಗೆ ತೋರಬೇಕಾದ ಸೌಜನ್ಯವನ್ನು ಮರೆತು ಅವನನ್ನು ಯಮನಿಗೆ ಕೊಡುತ್ತಾನೆ.

ವಿಷ್ಣುಶರ್ಮನೆಂಬ ಕವಿಯು ಪಂಚತಂತ್ರದಲ್ಲಿ ಹೀಗೆ ಹೇಳಿದ್ದಾನೆ. "ಯದಿ ಚಾನ್ನಂ ಗೃಹೇ ತದಾ ಪ್ರೀತಿ ವಚಸಾಽಪಿ ಅತಿಥಿಃ ಪೂಜ್ಯ ಏವ"

ತೃಣಾನಿ ಭೂಮಿರುದಕಂ ವಾತ್ ಚತುರ್ಥೀ ಚ ಸೂನೃತಾ ।
ಏತಾನ್ಯಪಿ ಸತಾಂ ಗೇಹೇ ನೋಚ್ಛಿದ್ಯಂತೀ ಕದಾಚನ ॥

ಅಂದರೆ ಮನೆಯಲ್ಲಿ ಅನ್ನವಿಲ್ಲದಿದ್ದರೆ ಆಗ ಪ್ರೀತಿಯ ಮಾತುಗಳಿಂದಲಾದರೂ ಅತಿಥಿಯನ್ನು ಪೂಜಿಸಬೇಕು. ಏಕೆಂದರೆ ಹುಲ್ಲು, ನೆಲ, ನೀರು ಮತ್ತು ಒಳ್ಳೆಯ ಮಾತುಗಳು ಇವು ಸಜ್ಜನರ ಮನೆಯಲ್ಲಿ ಇಲ್ಲವೆನ್ನುವುದಿಲ್ಲನ್ನಲಾಗದು.

ಆದ್ದರಿಂದ ಕನಿಷ್ಠ ಸೌಜನ್ಯವಾದರೂ ತೋರಬೇಕು ಇಲ್ಲವಾದರೆ ನಮ್ಮ ಪುಣ್ಯವನ್ನೆಲ್ಲಾ ಅವರು ತೆಗೆದುಕೊಂಡು ಅವರ ಪಾಪಗಳನ್ನು ನಾವು ಅನುಭವಿಸಬೇಕಾಗುತ್ತದೆ ಎಂದಿದ್ದಾನೆ.

ಮಹಾಭಾರತದಲ್ಲಿ ಕುಂತಿಯು ಋಷಿಯನ್ನು ಅತ್ಯಂತ ಸೌಜನ್ಯದಿಂದ ಸೇವಿಸಿ ಅವನಿಂದ ಮಂತ್ರಗಳನ್ನು ಪಡೆದುಕೊಂಡು ಅತ್ಯಂತ ಉತ್ತಮ ಮಕ್ಕಳನ್ನು ಪಡೆದುಕೊಂಡಳು. ಹೀಗೆ ಸೌಜನ್ಯದಿಂದ ಏನನ್ನಾದರೂ ಸಾಧಿಸಬಹುದು. ಅದು ಅಷ್ಟೊಂದು ತೀವ್ರತೆಯಿಂದ ಕೂಡಿದೆ.

ಅದೇ ರೀತಿ ಹನುಮಂತನು ವಾನರನಾಗಿದ್ದರೂ ಸಹ ಶ್ರೀ ರಾಮನಲ್ಲಿ ಅತ್ಯಂತ ಸೌಜನ್ಯದಿಂದಲೇ ವರ್ತಿಸುತ್ತಾನೆ. ಅದನ್ನೆಂದೂ ಮೀರಿದವನಲ್ಲ. ಲಂಕೆಯಲ್ಲಿ ಸೀತೆಯಿದ್ದಾಳೋ ಇಲ್ಲವೋ ತಿಳಿಯಲು ಲಂಕೆಗೆ ಹೋದಾಗಲೂ, ಸೀತೆಯನ್ನು ಕಂಡು ಅತ್ಯಂತ ಸೌಜನ್ಯದಿಂದ ವರ್ತಿಸುತ್ತಾನೆ. ಇದರಿಂದ ಸೀತೆಯೂ ಸಹ ಅತ್ಯಂತ ಸಂತೋಷದಿಂದ ಚೂಡಾಮಣಿಯನ್ನಿತ್ತು ರಾಮನಿಗೆ ತಿಳಿಸಲು ಕಳಿಸಿಕೊಡುತ್ತಾಳೆ.

ಹೀಗೆ ಪ್ರಾಣಿ–ಪಕ್ಷಿ–ಮಾನವರು–ರಾಕ್ಷಸರು ದೇವತೆಗಳು–ಋಷಿಗಳು ಎಲ್ಲರೂ ಸಹ ಸೌಜನ್ಯದಿಂದ ಹೊರತಲ್ಲ.

ಭರ್ತೃಹರಿಯೆಂಬ ಕವಿಯು ಸೌಜನ್ಯವನ್ನು ಹೀಗೆ ಹೇಳಿರುವನು :

ಐಶ್ವರ್ಯಸ್ಯ ವಿಭೂಷಣಂ ಸುಜನತಾ ಶೌರ್ಯಸ್ಯ ವಾಕ್‌ಸಂಯಮೋ
ಜ್ಞಾನಸ್ಯೋಪಶಮಃ, ಶ್ರುತಸ್ಯ ವಿನಯೋ, ವಿತ್ತಸ್ಯ ಪಾತ್ರೇ ವ್ಯಯಃ ।
ಅಕ್ರೋಧಸ್ತಪಸಃ, ಕ್ಷಮಾ ಪ್ರಭವಿತುರ್ಧರ್ಮಸ್ಯ ನಿರ್ವ್ಯಾಜತಾ
ಸರ್ವೇಷಾಮಪಿ ಸರ್ವಕಾರಣಮಿದಂ ಶೀಲಂ ಪರಂ ಭೂಷಣಂ ॥

ಅಂದರೆ ಸಿರಿಗೆ ಸೌಜನ್ಯ, ಪರಾಕ್ರಮಕ್ಕೆ ನಾಲಿಗೆ ಹಿಡಿತ, ಜ್ಞಾನಕ್ಕೆ ಶಾಂತಿ, ವಿದ್ಯೆಗೆ ವಿನಯ, ಸಂಪತ್ತಿಗೆ ಸತ್ಪಾತ್ರದೊಳ್ ದಾನ, ತಪಸ್ಸಿಗೆ ಕ್ರೋಧ ತ್ಯಾಗ, ಸಮರ್ಥನಿಗೆ ಸಹನೆ ಧರ್ಮಕ್ಕೆ ನಿಷ್ಕಪಟತೆ – ಇವು ಅಲಂಕಾರಗಳು ಆದರೆ ಸಕಲರಿಗೂ ಇವೆಲ್ಲವುಗಳ ಕಾರಣವಾಗಿ ಸದ್ವರ್ತನೆಯು ಪರಮ ಭೂಷಣವು ಎಂದಿದ್ದಾನೆ.

ಇಲ್ಲಿ ಎಲ್ಲಕ್ಕಿಂತಲೂ ಮೊಟ್ಟ ಮೊದಲಿಗೆ ಸಿರಿಗೆ ಸೌಜನ್ಯ ಎಂದಿದ್ದಾನೆ. ಎಂದರೆ ಸಿರಿ ಸಂಪತ್ತುಗಳು ಬಂದಾಗ ನಮಗೇ ತಿಳಿಯದಂತೆ 'ಅಹಂ' ಅವನಲ್ಲ ಮನೆ ಮಾಡುತ್ತದೆ. ಇದರಿಂದ ತಾನು ಏನು ಮಾಡುತ್ತಿದ್ದೇನೆ ಎಂಬ ಅರಿವಿಲ್ಲದೆ ಮೂರ್ಖನಂತೆ ವರ್ತಿಸುತ್ತಾನೆ. ಆದ್ದರಿಂದ ಇದರಿಂದ ಜಾಗೃತರಾಗಿದ್ದು ಸಿರಿ–ಸಂಪತ್ತುಗಳು ಬಂದಾಗಲೂ ಸೌಜನ್ಯದಿಂದ ವರ್ತಿಸುತ್ತಾ ನಮ್ಮ ಸಂಸ್ಕೃತಿಯನ್ನು ಕಾಪಾಡಿಕೊಳ್ಳಬೇಕು. ಹೀಗೆ ಸಿರಿಗೂ ಸೌಜನ್ಯಕ್ಕೂ ಅತ್ಯಂತ ನಿಕಟ ಸಂಬಂಧವಿದೆ.

ಅಶ್ವಘೋಷನೆಂಬ ಕವಿಯು ತನ್ನ 'ಸೌಂದರಾನಂದ' ಎಂಬ ಮಹಾಕಾವ್ಯದಲ್ಲಿ ಹೀಗೆ ಹೇಳಿದ್ದಾನೆ.

ಅನುಗ್ರಹಾಯಾಸ್ಯ ಜನಸ್ಯ ಶಂಕೇ ಗುರುಗೃಹಂ ನೋ ಭಗವಾನ್ ಪ್ರವಷ್ಟಃ ।
ಬಿಕ್ಷಾಮಲಬ್ದ್ವ ಗಿರಮಾಸನಂ ವಾ ಶೂನ್ಯಾದರಣ್ಯಾದಿವ ಯಾತಿಭೂಯಃ ॥

ಅಂದರೆ ಅತ್ಯಂತ ಗೌರವ ಹಾಗೂ ಪೂಜನೀಯನೂ ಆದ ಬುದ್ಧನು ನಮ್ಮನ್ನು ಅನುಗ್ರಹಿಸಲು ನಮ್ಮ ಅರಮನೆಗೆ ಬಂದಾಗ ಅವನಿಗೆ ಭಿಕ್ಷೆಯನ್ನಾಗಲೀ, ಸತ್ಕಾರದ ಮಾತುಗಳನ್ನಾಗಲೀ ಅಥವಾ ಕುಳಿತುಕೊಳ್ಳಲು ಆಸನವಾಗಲೀ ಪಡೆಯದೆ ನಿರ್ಜನವಾದ ಅರಣ್ಯವೋ ಎಂಬಂತೆ ಹಿಂತಿರುಗಿದನು. ಅಂದರೆ ಯಾರ ಮನೆಯಲ್ಲಿ ಕುಳಿತುಕೊಳ್ಳಲು ಸ್ವಲ್ಪ ಸ್ಥಳ, ಸ್ವಲ್ಪ ಊಟ ಹಾಗೂ ಉಪಚಾರದ ಮಾತುಗಳು ಇರುವುದಿಲ್ಲವೋ ಅದು ನಿರ್ಜನವಾದ ಅರಣ್ಯಕ್ಕೆ ಸಮಾನವಾಗುತ್ತದೆ ಎಂದಿದ್ದಾನೆ.

ಇದನ್ನು ಅರಿತುಕೊಂಡ ನಂದನೆಂಬ ರಾಜನು ತನ್ನರಮನೆಗೆ ಬಂದ ಬುದ್ಧನು ಏನೂ ಸ್ವೀಕರಿಸದೆ ಹೊರಟನಲ್ಲ ಎಂದು ತಿಳಿದು ಅತ್ಯಂತ ಸೌಜನ್ಯದಿಂದ ಮತ್ತೆ ತನ್ನ ಮನೆಗೆ ಬರುವಂತೆ ಆಹ್ವಾನಿಸುತ್ತಾನೆ. ಆದರೆ ಬುದ್ಧನೂ ಸಹ ಸೌಜನ್ಯದಿಂದ ಅವನ

ಆದರವನ್ನು ನಿರಾಕರಿಸಿ ಅವನೊಂದಿಗೆ ಆತ್ಮೀಯತೆಯಿಂದ ವರ್ತಿಸಿ ಕೊನೆಗೆ 'ನಿರ್ವಾಣ'ವನ್ನು ಹೊಂದುವಂತೆ ಮಾಡುತ್ತಾನೆ. ಹೀಗೆ ಮಹಾತ್ಮರು ತಪ್ಪು ಮಾಡಿದವರನ್ನೂ ಕ್ಷಮಿಸಿ ಉದ್ಧಾರ ಮಾಡುತ್ತಾರೆ. ಹೀಗೆ ಸೌಜನ್ಯಕ್ಕೂ-ಕ್ಷಮೆಗೂ ಸಂಬಂಧವಿದೆ.

ಬಡವನ ಮನೆಗೆ ಸಿರಿವಂತನು ಆಗಮಿಸಿದಾಗ ಅವನು ಅತ್ಯಂತ ಸಂಭ್ರಮದಿಂದ ಬರಮಾಡಿಕೊಂಡು ಅತ್ಯಂತ ಹೆಚ್ಚಿನ ಸೌಜನ್ಯವನ್ನು ತೋರುತ್ತಾನೆ. ಆದರೆ ಶ್ರೀಮಂತನ ಮನೆಗೆ ಬಡವನು ಬಂದರೆ ಕೇವಲ ಹಣಕ್ಕಾಗಿಯೇ ಬಂದಿರುವನೆಂದು ಭಾವಿಸಿ ಅವನಿಗೆ ಕನಿಷ್ಠ ಸೌಜನ್ಯವನ್ನೂ ತೋರುವುದಿಲ್ಲ. ಹೀಗೆ ಸಿರಿಗೂ-ಸೌಜನ್ಯಕ್ಕೂ ಅವಿನಾಭಾವ ಸಂಬಂಧವಿದೆ.

ಇಂದು ಇದರಲ್ಲಿ ಆಧುನಿಕತೆಯನ್ನು ಕಾಣುತ್ತೇವೆ. ಉದಾಹರಣೆಗೆ 'ಹುಟ್ಟಿದ ಹಬ್ಬ' ಬಂದಾಗ ಹಿರಿಯರ ಬಳಿ ಆಶೀರ್ವಾದ ಪಡೆಯುತ್ತಿದ್ದರು. ಹಬ್ಬದಡಿಗೆ ಮಾಡಿ ಎಲ್ಲರೂ ಸೇರಿ ಸಂಭ್ರಮಪಡುತ್ತಿದ್ದರು. ಇಂದು ಅದನ್ನೇ 'ಕೇಕ್' ಕತ್ತರಿಸುವುದರ ಮೂಲಕ, ಗ್ರೀಟಿಂಗ್ ಕಾರ್ಡ್ ಕಳಿಸುವುದರ ಮೂಲಕ, ಇ-ಮೇಲ್, ಮೆಸೇಜ್ ಹೀಗೆ ಆಧುನಿಕತೆ ತಲೆದೋರಿದೆ. ಆದರೆ ಅದರಲ್ಲಿಯೂ ನಾವು ಸೌಜನ್ಯವನ್ನು ಕಾಣಬಹುದು.

ಹೀಗೆ ಕಾಲ ಬದಲಾದಂತೆ ತೋರುವಿಕೆಯಲ್ಲೂ ಬದಲಾವಣೆಯನ್ನು ಕಾಣಬಹುದು. ವಿನಾ ನಮ್ಮ ನಾಡು ನಮ್ಮ ಸಂಸ್ಕೃತಿ ನಾವು ಹುಟ್ಟಿದ ನೆಲದಲ್ಲಿಯೇ ಅಡಗಿದೆ. ಅದನ್ನೆಂದೂ ಬೇರ್ಪಡಿಸಲಾಗದು. ಆದ್ದರಿಂದಲೇ ವಿದೇಶೀಯರೂ ಸಹ ಮನಸೋತು ನಮ್ಮ ಸಂಸ್ಕೃತಿಗೆ ತಲೆ ಬಾಗಿರುವುದು. ಅಂತಹ ಉತ್ತಮವಾದ, ಉತ್ತಮ ಸಂಸ್ಕೃತಿಯನ್ನು ಹೊಂದಿರುವಂತಹ ದೇಶ ಭಾರತ. ಅಲ್ಲಿನ ಭಾರತೀಯರಾದ ನಾವೇ ಧನ್ಯರು. ಅಲ್ಲವೇ ! ಸೌಜನ್ಯ ಸಂಸ್ಕೃತಿಯೆಂಬ ಪುಷ್ಪದ ಪರಿಮಳವಿದ್ದಂತೆ. ಪುಷ್ಪ ಕಾಣುತ್ತದೆ ಪರಿಮಳ ಕಾಣುವುದಿಲ್ಲ ಆದರೆ ಸೌಜನ್ಯವೆಂಬ ಪರಿಮಳ ಅನುಭವವೇದ್ಯವಾಗಿರುತ್ತದೆ. ಆದಕಾರಣ ಸಂಸ್ಕೃತಿಯ ಜೀವಂತಿಗೆ ಸೌಜನ್ಯ ಸಾಕ್ಷಿ ಆಗಿದೆ ಎಂದರೆ ತಪ್ಪಲ್ಲ.

○

ಮಹಿಳೆಯರು ಮತ್ತು ಸೌಜನ್ಯ

–ಪ್ರೊ. ಎಂ.ಆರ್. ಲಕ್ಷ್ಮೀದೇವಿ

ಮಹಿಳೆ ಮತ್ತು ಸೌಜನ್ಯ – ಇವೆರಡಕ್ಕೂ ಒಂದು ರೀತಿಯ ಅವಿನಾಭಾವ ಸಂಬಂಧವಿದೆ. ಮಹಿಳೆಯಲ್ಲಿ ಸೌಜನ್ಯ ಅಂತರ್ಗತ ಗುಣವಾಗಿದ್ದರೆ, ಪುರುಷನಲ್ಲಿ ಅದು ಸಾಧಿತ ಗುಣವಾಗಿದೆ. ತಾಯಿ, ಸೋದರಿ, ಹೆಂಡತಿ, ದಾದಿ – ಇತ್ಯಾದಿ ರೂಪಗಳಲ್ಲಿ ಕಾಣಿಸಿಕೊಳ್ಳುವ ಪುರುಷನಿಗೆ ಒತ್ತಾಸೆಯಾಗಿ ನಿಲ್ಲುವ ಹೆಣ್ಣಿನ ಸಹಜ ಸೌಜನ್ಯಪೂರ್ಣ ನಡವಳಿಕೆ ಇಂದೂ ನಮ್ಮ ಭಾರತೀಯ ಸಮಾಜದ ಬದುಕಿಗೆ ಭದ್ರ ಬುನಾದಿಯಾಗಿದೆ.

ಹೀಗೆಂದ ಮಾತ್ರಕ್ಕೆ ಹೆಣ್ಣು ಸದ್ಗುಣಗಳ ಗಣಿ, ಗಂಡು ದುರ್ಗುಣಗಳ ಕಣಿ ಎಂದೇನೂ ಅರ್ಥವಲ್ಲ. ಲೋಕದಲ್ಲಿ ಸದ್ಗುಣ ದುರ್ಗಣಗಳು ಎರಡೂ ಸ್ತ್ರೀ ಪುರುಷರಿಬ್ಬರಲ್ಲೂ ಸಮಾನವಾಗಿರುವುದು ಸಾಮಾನ್ಯ ಸಂಗತಿ. ನಮ್ಮ ರಾಮಾಯಣ, ಮಹಾಭಾರತ, ಭಾಗವತ ಪುರಾಣಾದಿಗಳಲ್ಲಿ ಈ ಎರಡಕ್ಕೂ ನಿದರ್ಶನಗಳು ಕಂಡುಬರುತ್ತವೆ. ಸೀತೆಯನ್ನು ಶಿಷ್ಟೆ ಎಂದೂ ಕೈಕೆಯಿಯನ್ನು ದುಷ್ಟೆ ಎಂದು ಚಿತ್ರಿಸಿದ ಕಾವ್ಯಗಳನ್ನು ಕಾಣುತ್ತೇವೆ. ಅಂತೆಯೇ ರಾಮ ಶಿಷ್ಟ ರಾವಣ ದುಷ್ಟ ಎಂಬ ಚಿತ್ರಣವನ್ನು ರಾಮಾಯಣದಲ್ಲಿ ಕಾಣುತ್ತೇವೆ. ಇದರರ್ಥ ಗುಣಗಳಿಗೆ ಸ್ತ್ರೀಪುರುಷ ಭೇದವಿಲ್ಲ. ಇಡೀ ಮಾನವ ಕುಲಕ್ಕೇ ಅನ್ವಯಿಸುವ ಗುಣಗಳು ಹಲವಿವೆ. ಅವುಗಳಲ್ಲಿ ಸೌಜನ್ಯವೂ ಒಂದು.

ಎಲ್ಲ ದೇಶಗಳಲ್ಲೂ ಎಲ್ಲ ಜನಾಂಗಗಳಲ್ಲೂ ಸೌಜನ್ಯದ ಗುಣವುಳ್ಳವರನ್ನು ಕಾಣಬಹುದು. ಸೌಜನ್ಯದ ಗುಣ ಇಬ್ಬರಲ್ಲೂ ಇರಬಹುದಾದ ಗುಣವಾದರೂ ಪುರುಷರಿಗಿಂತ ಸ್ತ್ರೀಯರಲ್ಲಿ ಹೆಚ್ಚಾಗಿ ಕಂಡುಬರುವ ಗುಣ ಎನ್ನುವುದು ನನ್ನ ಭಾವನೆ. ಮನೆಗೆ ಯಾರಾದರೂ ಬಂದರೆ ಅವರು ಕೆಟ್ಟವರಿರಲಿ, ಒಳ್ಳೆಯವರಿರಲಿ, ಬೇಕಿರಲಿ, ಬೇಡದಿರಲಿ ಅವರನ್ನು ಪ್ರೀತಿಯಿಂದ ನಗುನಗುತ್ತಾ ಸ್ವಾಗತಿಸಿ, ಸತ್ಕರಿಸುತ್ತಾಳೆ. ಬಂದವರಿಗೆ ಕಾಫಿ ಟೀ ಮತ್ಯಾವುದೇ ಪಾನೀಯ ತಿಂಡಿ ತೀರ್ಥ ಏನಾದರೂ ಸರಿ ಕೊಡಬೇಕು, ಹಾಗೇ ಕಳಸಿಬಾರದು ಎಂಬುದು ಸಾಮಾನ್ಯವಾಗಿ ಎಲ್ಲ ಗೃಹಿಣಿಯರಲ್ಲಿ ಕಂಡುಬರುವ ಸೌಜನ್ಯಗುಣ, ಆದರೆ ಪುರುಷರಲ್ಲಿ ಇದು ಅಪರೂಪ, ಮನೆಯಲ್ಲಿ ಹೆಂಗಸರಿಲ್ಲ ಎಂದರೆ, ಅನೇಕರ ಮನೆಗಳಲ್ಲಿ ಬಂದವರಿಗೆ

ಒಂದು ಲೋಟ ಕಾಫಿಯೂ ಸಿಗದು. ಅತಿಥಿಸತ್ಕಾರ ಭಾರತೀಯ ಸಂಸ್ಕೃತಿಯ ಮುಖ್ಯ ಲಕ್ಷಣಗಳಲ್ಲಿ ಒಂದು. ಅದು ಸೌಜನ್ಯದ ಪ್ರತೀಕ. ಅದರ ಅಸ್ತಿತ್ವ ಕಾಣುವುದು ಹೆಣ್ಣು ಮಕ್ಕಳಲ್ಲಿ ಎನ್ನುವುದು ನಿಜ.

ಸೌಜನ್ಯ ಎನ್ನುವುದು ಮಾತಿನಲ್ಲೂ ವ್ಯಕ್ತವಾಗುವ ಒಂದು ಗುಣ. ಸಾಮಾನ್ಯವಾಗಿ ಮೆಲ್ಲಗೆ ಮಾತನಾಡುವುದು ಮಹಿಳೆಯರ ಸ್ವಭಾವ, ಗಟ್ಟಿಯಾಗಿ ಮಾತನಾಡುವುದು ಪುರುಷರ ಸ್ವಭಾವ, ಅದರಲ್ಲೂ ಗಂಟಲು ಜೋರಾಗಿದ್ದರೆ ಕಥೆ ಹೇಳುವುದೇ ಬೇಡ. ಮನೆಯಲ್ಲಿ ಎಷ್ಟೋ ವೇಳೆ “ಸ್ವಲ್ಪ ಮೆಲ್ಲಗೆ ಮಾತಾಡಿ, ಮಗು ಮಲಗಿದೆ” ಎಂಬ ಮಾತನ್ನು ಗೃಹಿಣಿ ಹೇಳುವುದು ಸಾಮಾನ್ಯ. ಮನೆ ಮಾಲೀಕ, ಸಾಲಗಾರ, ಮತ್ತಾರೇ ಯಾವುದೇ ಕಾರಣಕ್ಕಾದರೂ ಮನೆಬಾಗಿಲಿಗೆ ಬಂದು ದನಿ ಎತ್ತರಿಸಿ ಮಾಡಿದರೆ ಗಂಡಸರು ಪ್ರತಿಯಾಗಿ ದನಿಯೆತ್ತರಿಸುತ್ತಾರೆ. ಆದರೆ, ಮನೆಯ ಗೃಹಿಣಿಯು ಎಷ್ಟೇ ಅವಮಾನ, ಅಸಮಾಧಾನ ಎನಿಸಿದರೂ ಹೊರಗೆ ತನ್ನ ಅಷ್ಟೇ ಸಮಾಧಾನಕರ, ಮೆಲ್ನುಡಿಯಿಂದ ಎದುರಾಳಿಯನ್ನು ತಾತ್ಕಾಲಿಕವಾಗಿಯಾದರೂ ತಣಿಸುವುದು, ಆಕೆಯ ಸೌಜನ್ಯತೆಗೆ ಸಾಕ್ಷಿಯಾಗಿದೆ.

ಆದರೆ ಎಲ್ಲ ಮಹಿಳೆಯರು ಹೀಗೇ ಇರುತ್ತಾರೆ ಎಂದೇನು ಇಲ್ಲ. ಸಜ್ಜನಿಕೆ ಸೌಜನ್ಯಗಳಿಲ್ಲದ ಮಹಿಳಾ ಮಣಿಗಳನ್ನು ಕಾಣಬಹುದು. ಅವರ ನಡವಳಿಕೆ ರೀತಿ-ನೀತಿಗಳನ್ನು ಕಂಡಾಗ, ಸದ್ಯ ಅಂಥ ಲಂಕಿಣಿಯರ ಸಹವಾಸವೇ ಬೇಡ, ಅವರ ಸಹವಾಸಕ್ಕೆ ಹೋದರೆ ಹೋದವರ ಮಾನ ಹೋಗುತ್ತದೆ ಎಂದು ಹಿಂದೇಟು ಹಾಕುವಂತೆ ಮಾಡುತ್ತದೆ. ಇದು ವಸ್ತುಸ್ಥಿತಿಯ ಒಂದು ಮುಖವಾದರೂ ಇದೇ ಪರಿಪೂರ್ಣ ಸತ್ಯವಲ್ಲ. ಇದು ಕೇವಲ ಅತ್ಯಲ್ಪ ಸಂಖ್ಯೆಗೆ ಅನ್ವಯಿಸುತ್ತದೆ. ಇದಕ್ಕೆ ಅವರಿಗೆ ಸಾಕಷ್ಟು ಶಿಕ್ಷಣ-ಸಂಸ್ಕಾರಗಳಿಲ್ಲದಿರುವುದರಿಂದ ಈ ರೀತಿಯ ವರ್ತನೆಗೆ ಕಾರಣವಿರಬಹುದು.

ಸಾರ್ವಜನಿಕ ಕ್ಷೇತ್ರಗಳಲ್ಲಿ ಮಹಿಳೆಯರು ಸೌಜನ್ಯಮೂರ್ತಿಗಳಾಗಿ ವರ್ತಿಸುವುದನ್ನು ಕಾಣಬಹುದು. ಬಸ್ಸುಗಳಲ್ಲಿ ಗಂಡಸರು ದಬಾದುಬಿಯಾಗಿ ನುಗ್ಗುವ ಹಾಗೆ ಹೆಂಗಸರು ನುಗ್ಗುವುದಿಲ್ಲ. ಮಹಿಳೆಯರಿಗೆ ಮೀಸಲಾದ ಜಾಗಗಳಲ್ಲಿ ಕುಳಿತ ಭಂಡ ಪುರುಷರನ್ನು ತಮ್ಮ ಹಕ್ಕನ್ನು ಚಲಾಯಿಸಿ, ಸೀಟು ಕೇಳಲು ಮಹಿಳೆಯರ ಸೌಜನ್ಯ ಅಡ್ಡಿ ಬರುತ್ತದೆ. ಹಾಗಾಗಿ ಮಕ್ಕಳನ್ನು ಎತ್ತಿಕೊಂಡು ಒದ್ದಾಡುತ್ತಾ ನಿಲ್ಲುತ್ತಾರೆ. ಈ ಸಂದರ್ಭದಲ್ಲಿ ಗಮನಿಸಬೇಕಾದ ಮುಖ್ಯ ಸಂಗತಿ ಎಂದರೆ ಕಠಿನ ಹೃದಯಿಗಳಾದ ಸೌಜನ್ಯಹೀನ ಪುರುಷರು ಜಾಗ ಬಿಡದೆ ಕುಳಿತಿರುವುದು ಅವರ ಸಂಸ್ಕಾರಹೀನತೆ ತೋರಿಸುವುದಾದರೂ, ಮಹಿಳೆಯರಲ್ಲೂ ಗಟ್ಟಿಮುಟ್ಟಾದ ಆರೋಗ್ಯವಂತ ವಿದ್ಯಾವಂತ ಯುವತಿಯರು, ವಯಸ್ಸಾದ

ಹಿರಿಯರಿಗೂ, ಮಕ್ಕಳನ್ನು ಎತ್ತಿಕೊಂಡು ಸಮತೋಲನ ಕಾಪಾಡಿಕೊಳ್ಳಲು ಓಲಾಡುತ್ತಾ ನಿಂತಿರುವ ಮಹಿಳೆಯರಿಗೆ ತಮ್ಮ ಜಾಗ ಬಿಟ್ಟುಕೊಡುವಷ್ಟು ಔದಾರ್ಯ ತೋರದಿರುವುದು ನಿಜಕ್ಕೂ ವಿಷಾದನೀಯ ಸಂಗತಿ. ಇದನ್ನು ಕಂಡಾಗ ಮಾನವ ಸ್ವಭಾವಕ್ಕೆ ಹೆಣ್ಣು–ಗಂಡೆಂಬ ಭೇದವಿಲ್ಲ ಎನಿಸುತ್ತದೆ. ಆದ್ದರಿಂದ ಸೌಜನ್ಯ ರೂಢಿಸಿಕೊಂಡರೆ ಬರುವ ಗುಣವಾಗಿದೆ. ಬಾಲ್ಯದಲ್ಲಿ ತಾಯಿ, ತಂದೆ, ಹಿರಿಯರು, ಚಿಕ್ಕವರಿಗೆ ಕಲಿಸಿಕೊಡಬೇಕಾದ ಮುಖ್ಯ ಗುಣವಾಗಿದೆ.

ಶಾಲಾ ಕಾಲೇಜುಗಳಲ್ಲಿ, ದೊಡ್ಡ ದೊಡ್ಡ ಕಚೇರಿಗಳಲ್ಲಿ, ಐಟಿ–ಬಿಟಿ ಕಂಪನಿಗಳಲ್ಲಿ ಪುರುಷರಷ್ಟೇ ಸ್ತ್ರೀಯರೂ ಸರಿಸಮಾನವಾಗಿ ಕಾರ್ಯನಿರ್ವಹಿಸುತ್ತಾರೆ. ಒಂದು ಕಾಲದಲ್ಲಿ "ಉದ್ಯೋಗಂ ಪುರುಸ ಲಕ್ಷಣಂ" ಎಂಬ ಮಾತಿತ್ತು. ಹೆಣ್ಣು ಎಂದರೆ 'ಗೃಹಿಣಿ ಗೃಹ ಮುಚ್ಯತೇ' ಎಂಬ ಕಾಲವಿತ್ತು. ಸಮಾನ ಶಿಕ್ಷಣದ ಫಲವಾಗಿ ಆ ಕಾಲ ದೂರ ಸರಿದಿದೆ, ಆದರೆ, ಕಚೇರಿಗಳಲ್ಲಿ ಉನ್ನತಾಧಿಕಾರಗಳಲ್ಲಿ ಸಾಕಷ್ಟು ಮಹಿಳೆಯರಿಲ್ಲ ಎನ್ನುವುದು ಸತ್ಯಸಂಗತಿ. ಪುರುಷ ಅಧಿಕಾರಿಗಳ ಅಧೀನರಾಗಿ ಕೆಲಸ ಮಾಡುತ್ತಿರುವ ಮಹಿಳೆಯರೇ ಹೆಚ್ಚು. ಆರ್ಥಿಕ ಶೋಷಣೆ, ಸಾಮಾಜಿಕ ಶೋಷಣೆ, ಪ್ರತಿಭಾ ಶೋಷಣೆ ನಡೆಯುತ್ತಿರುವುದು ಎಲ್ಲರಿಗೂ ತಿಳಿದ ಸಂಗತಿಯಾಗಿದೆ. ಇದಕ್ಕೆ ಮೊನ್ನೆ ಮೊನ್ನೆ ಪತ್ರಿಕೆಯಲ್ಲಿ ವರದಿಯಾದಂತೆ ಐಟಿ ಕ್ಷೇತ್ರದ ಉದ್ಯೋಗಿಯೊಬ್ಬಳು ಮೇಲಧಿಕಾರಿಗಳ ಕಿರುಕುಳ ತಡೆಯಲಾರದೆ ಆತ್ಮಹತ್ಯೆ ಮಾಡಿಕೊಂಡ ಘಟನೆ, ಮತ್ತೊಬ್ಬ ಐಟಿ ಮಹಿಳಾ ಉದ್ಯೋಗಿಯ ಕೊಲೆ ಪ್ರಕರಣಗಳು ಬೆಳಕು ಕಂಡ ಪ್ರಕರಣಗಳಾಗಿವೆ. ಮತ್ತೆಷ್ಟೋ ಪ್ರಕರಣಗಳು ಆಕೆಯ ಸೌಜನ್ಯ, ಸೌಶೀಲ್ಯ, ತಾಳ್ಮೆ, ಸಹನೆಗಳ ಕಾರಣದಿಂದ ಬೆಳಕು ಕಾಣದೆ, ಕೇವಲ ಆಕೆಯ ಮಾನಸಿಕ ನೆಮ್ಮದಿ ಕಳೆದುಕೊಳ್ಳುವುದರಲ್ಲಿ ಮುಕ್ತಾಯವಾಗುತ್ತದೆ ಅಧಿಕಾರಿಯನ್ನು ಧಿಕ್ಕರಿಸಿ ಪ್ರತಿಭಟಿಸುವ ಅಧಿಕಾರ, ಅವಕಾಶವಿದ್ದರೂ ವಿನಯಕ್ಕೆ ಸಂಕೋಚಕ್ಕೆ ಶರಣಾಗಿ ಸೌಜನ್ಯ ಮೆರೆಯುತ್ತಾಳೆ. ಇದು ಕೆಲವೊಮ್ಮೆ ಆಕೆಯ ದೌರ್ಬಲ್ಯವಾಗಿಯೂ ಪರಿಣಮಿಸುತ್ತದೆ. ಸೌಜನ್ಯದ ಹೆಸರಿನಲ್ಲಿ ತನಗೆ ಸಿಗಬೇಕಾದ ಗೌರವ, ಸ್ಥಾನ, ಅರ್ಹತೆಗಳನ್ನು ಬೇರೊಬ್ಬರು ಕಸಿದುಕೊಂಡಾಗ ಇಲ್ಲವೇ ಅಡ್ಡ ಬಂದಾಗ, ಅದರ ವಿರುದ್ಧ ಸಿಡಿದೆದ್ದರೆ ಅದೇನೂ ಸೌಜನ್ಯ ರಹಿತ ಗುಣವಾಗುವುದಿಲ್ಲ. ಆಕೆ ತನ್ನ ಸ್ವಾಭಿಮಾನಕ್ಕೆ ಧಕ್ಕೆ ಬಂದಾಗ ಸೌಜನ್ಯ ಮೃದುತೆಗಳ ಹೆಸರಿನಲ್ಲಿ ಶೋಷಣೆಗೆ ಒಳಗಾಗುವುದು ಅಷ್ಟೇನು ಮೆಚ್ಚತಕ್ಕ ಗುಣವಲ್ಲ. ಅಂತೆಯೇ ಅನ್ಯಾಯದ ವಿರುದ್ಧ ಪ್ರತಿಭಟಿಸಿದಾಗ, ಹಾಗೆ ಪ್ರತಿಭಟಿಸುವ ಮಹಿಳೆಗೆ ಆಕೆಯ ಸಹೋದ್ಯೋಗಿ ಮಹಿಳೆಯರು ಸೌಜನ್ಯದ ಹೆಸರಿನಲ್ಲಿ ಆಕೆಯಿಂದ ದೂರ ಸರಿಯದೆ, ಪಿಸುನುಡಿಯದೆ, ನೈತಿಕವಾಗಿ ಬೆಂಬಲ ನೀಡಬೇಕು, ಆದರೆ, ಒಂದು ಪರಿಸ್ಥಿತಿ ನಿರ್ಮಾಣವಾದಾಗ ಮಹಿಳಾ ಸೌಜನ್ಯ ಅರ್ಥಪೂರ್ಣವಾಗುತ್ತದೆ.

ಉದಾರ ಗುಣ ಸೌಜನ್ಯದ ಮತ್ತೊಂದು ಲಕ್ಷಣಗಳಲ್ಲಿ ಒಂದು. ಕ್ಷಮಿಸುವ ಗುಣ ಉದಾರತೆಯ ಲಕ್ಷಣಗಳಲ್ಲಿ ಒಂದು. ಪುರುಷ ಎಷ್ಟೇ ಅಕ್ಷಮ್ಯ ಅಪರಾಧ ಮಾಡಿದರೂ ಕ್ಷಮಿಸುವ ಗುಣ ಭಾರತೀಯ ನಾರಿಯರ ವೈಶಿಷ್ಟ್ಯ 'ಕ್ಷಮಯಾ ಧರಿತ್ರೀ'. ಭೂತಾಯಿಯ ಸಹನೆ ಅವಳದು. ಕಷ್ಟ ಸುಖಗಳನ್ನು ಹೇಳಿಕೊಳ್ಳುವುದು ಮನುಷ್ಯನ ಪ್ರವೃತ್ತಿಗಳಲ್ಲಿ ಒಂದು. ಆತ್ಮೀಯರಲ್ಲಿ ಸ್ನೇಹಿತರಲ್ಲಿ ಕಷ್ಟ ಸುಖ ಹೇಳಿಕೊಳ್ಳುವುದು ಪ್ರತಿಯೊಬ್ಬರಲ್ಲಿ ಕಂಡುಬರುತ್ತದೆ. ಆದರೆ ಗಂಡನಿಂದ ಎಷ್ಟೇ ಶೋಷಣೆ, ದೂಷಣೆ, ಹಿಂಸೆ, ಅನ್ಯಾಯಕ್ಕೆ ಒಳಗಾದರೂ, ಗಂಡನ ಗೌರವವನ್ನು ಕಾಪಾಡಿಕೊಳ್ಳುವುದರಲ್ಲಿ ಆಕೆ ನಿಸ್ಸೀಮಳು. ತನ್ನ ಗಂಡನ ಬಗ್ಗೆ ಅವಳಹೇಳನಕಾರಿ ಮಾತುಗಳನ್ನು ಸಹಿಸಲಾರಳು. 'ಹಾಗೇನಿಲ್ಲ ಯಾರೋ ನಿಮಗೆ ಸುಳ್ಳು ಹೇಳಿದ್ದಾರೆ' ಎಂದು ಸತ್ಯವನ್ನು ಮರೆಮಾಚುತ್ತಾಳೆ. ಅದು ಆಕೆಯ ಸೌಜನ್ಯ ಸಹನೆಗಳಿಗೆ ಸಾಕ್ಷಿಯಾಗಿದೆ. ಗಂಡಸು ಸಮಯ ಬಂದರೆ ಹೆಣ್ಣಿನ ಮಾನವನ್ನು ಹಂಚಿ ಹರಾಜು ಹಾಕಬಲ್ಲ. ಇಲ್ಲಿಯೂ ಕೆಲವು ಅಪವಾದಗಳು ಇದೆಯಾದರೂ, ಹೆಂಗಸು ಏಕಾಏಕಿ ಎಂದೂ ಅಂಥ ಕೆಲಸ ಮಾಡಲಾರಳು. ಇಂದು ಕೌಟುಂಬಿಕ ನ್ಯಾಯಾಲಯಗಳಲ್ಲಿ ಬಹುಮಟ್ಟಿನ ವಿಚ್ಛೇದನದ ಅರ್ಜಿಗಳು ಮಹಿಳೆಯರ ಕಡೆಯಿಂದಲೇ ಬಂದಿವೆ. ಅದೂ ಉದ್ಯೋಗಸ್ಥ ಮೇಲ್ವರ್ಗದ ಕುಟುಂಬಗಳಿಂದ ಎಂಬ ಆಕ್ಷೇಪಣೆಯೂ ಬಂದಿದೆ. ಆದರೆ ಈ ವರ್ಗದ ಜನರು ಇಡೀ ಸಮಾಜದ ಪ್ರತಿನಿಧಿಗಳಾಗಲಾರರು. ನಮ್ಮ ಸಮಾಜದ ಬಹುಸಂಖ್ಯಾತರಿರುವ ಮಧ್ಯಮ ಹಾಗೂ ಬಡ ಕುಟುಂಬಗಳು ಇಂದೂ ಕುಟುಂಬಗಳಾಗಿ ಉಳಿದಿರುವುದು ಹೆಣ್ಣಿನ ಸಹನೆ, ತಾಳ್ಮೆ, ಹೊಂದಾವಣಿಕೆಯ ಗುಣಗಳಿಂದ ಗುಣಗಳು ಸೌಜನ್ಯದ ವಿವಿಧ ಮುಖಗಳೇ ಆಗಿವೆ.

ತನ್ನ ಗಂಡನಿಗೆ ಕಲೆ, ಸಾಹಿತ್ಯ-ಸಂಸ್ಕೃತಿ, ರಾಜಕೀಯ ಚಟುವಟಿಕೆಗಳಲ್ಲಿ ಆಸಕ್ತಿ ಇದ್ದಾಗ ಆತನ ಕಲಾಸೇವೆಗೆ, ಸಾಹಿತ್ಯ ರಚನೆಗೆ, ಸಮಾಜ ಸೇವೆಗೆ ನೆರವಾಗುವ ಸೌಜನ್ಯವನ್ನು ಮಹಿಳೆಯರಲ್ಲಿ ಕಾಣುತ್ತೇವೆ. ಆದರೆ, ಈ ಗುಣ ಆ ಪ್ರಮಾಣದಲ್ಲಿ ಗಂಡಸರಲ್ಲಿ ಇರುವುದಿಲ್ಲ ಎಂದರೆ ತಪ್ಪಲ್ಲ. ಎಷ್ಟು ಮಂದಿ ತಮ್ಮ ಹೆಂಡತಿಯರ ಕಲೆ, ಸಾಹಿತ್ಯ, ಸಾಮಾಜಿಕ ಚಟುವಟಿಕೆಗಳಿಗೆ ನೆರವೀಯುತ್ತಾರೆ ? ಈ ಪ್ರಶ್ನೆಗೆ ಉತ್ತರ ಆಶಾದಾಯಕವಾಗಿಲ್ಲ. ತಮ್ಮ ಶಾಲಾ-ಕಾಲೇಜಿನ ದಿನಗಳಲ್ಲಿ ಪ್ರತಿಭಾವಂತ ಕಲಾವಿದರಾಗಿ ಮೆರೆದ ಅನೇಕರು ವಿವಾಹದ ನಂತರ ಅತ್ತೆಯ ಮನೆಯಲ್ಲಿ ಅತ್ತೆ-ಗಂಡಂದಿರ ಪ್ರೋತ್ಸಾಹ ಅವಕಾಶವಿಲ್ಲದೆ ಅವರ ಕಲಾಸಕ್ತಿ ಸಾಹಿತ್ಯಭಿರುಚಿ ಮುರುಟಿಹೋದ ಅನೇಕರನ್ನು ಕಾಣಬಹುದು. ಇಬ್ಬರೂ ಕಲಾಭಿಮಾನಿ ಸಾಹಿತ್ಯಾಭಿಮಾನಿಗಳಾಗಿದ್ದು, ಪರಸ್ಪರ ಪ್ರೋತ್ಸಾಹಕ ಸ್ವಭಾವವಿರುವ ಸಾಹಿತಿ, ಕಲಾವಿದ, ರಾಜಕಾರಣಿಗಳ ಜೋಡಿಗಳನ್ನು ಕಾಣಬಹುದಾದರೂ, ಅವು ಬೆರಳೆಣಿಕೆಯಷ್ಟು

ಮಾತ್ರ. ಆದ್ದರಿಂದ 'ಸೌಜನ್ಯ' ಎನ್ನುವುದು ಸಹಜ ಗುಣವೂ ಹೌದು ! ರೂಢಿಸಿಕೊಳ್ಳಬೇಕಾದ ಗುಣವೂ ಹೌದು !

ಭಾರತೀಯ ಮಹಿಳೆಯರಲ್ಲಿ ಕಂಡುಬರುವ ಮಾನವೀಯ ಗುಣ, ಸೌಜನ್ಯ, ದಯಾಪರತೆ ಅನೇಕ ಪಾಶ್ಚಾತ್ಯ ಮಹಿಳೆಯರಲ್ಲಿ ಕಾಣಬರದು. ಇದಕ್ಕೆ ಒಂದು ನಿದರ್ಶನವೆಂದರೆ ನಾನು ಅಮೇರಿಕಾಗೆ ಮಗಳ ಮನೆಗೆ ಹೋಗಿದ್ದಾಗ ಮೊಮ್ಮಗನಿಗೆ ಅನಾರೋಗ್ಯವಾಗಿ ಡಾಕ್ಟರ ಬಳಿ ಹೋದಾಗ ಅಲ್ಲಿ ಪೂರ್ವಾನುಮತಿ ಪಡೆದ ಪ್ರಕಾರ ಕ್ಯೂ ಇತ್ತು. ನಮ್ಮ ಮಗಳ ಹಿಂದಿನ ಸರದಿಯಲ್ಲಿ ಇದ್ದ ಮಹಿಳೆಯೊಬ್ಬಳ ಮಗು ತೀವ್ರ ಜ್ವರದಿಂದ ಬಳಲುತ್ತಿತ್ತು. ಆ ಮಗುವಿನ ನರಳುವಿಕೆ ಮನ ಕಲಕುವಂತಿತ್ತು. ಆದರೆ ಆಸ್ಪತ್ರೆಯವರು ಸರದಿ ಪ್ರಕಾರ ಕರೆಯುತ್ತಿದ್ದರು. ಮುಂದಿನ ಸಾಲಿನಲ್ಲಿದ್ದ ತಾಯಂದಿರು ಯಾರೂ ಆ ಮಗುವಿನ ಆಕ್ರಂದನವನ್ನು ಗಮನಿಸಲೇ ಇಲ್ಲ. ನಮ್ಮ ಮಗಳು ಆ ತಾಯಿಯನ್ನು ಕರೆದು ನೀವು ನನ್ನ ಸರದಿಯಲ್ಲಿ ಒಳಗೆ ಹೋಗಿ, ನಮ್ಮ ಮಗುವಿಗೆ ಅಂಥ ಪರಿಸ್ಥಿತಿ ಏನೂ ಇಲ್ಲ ಎಂದು ಅನುವು ಮಾಡಿಕೊಟ್ಟಳು. ಇಂಥ ಪರಿಸ್ಥಿತಿ ನಮ್ಮಲ್ಲಿಯೂ ಇರಬಹುದು. ಆದರೆ 'ಕ್ಯೂ' ಎನ್ನುವುದು ನಾಗರಿಕ ಪದ್ಧತಿ, ಶ್ರೇಷ್ಠ ಪದ್ಧತಿಯಾದರೂ ಅದರಲ್ಲಿ ಮಾನವೀಯತೆ ಕಂಡು ಬರಬೇಕಾದರೆ ಅಸಹಾಯಕರಿಗೆ, ವೃದ್ಧರಿಗೆ ನೆರವಾಗುವ ಸೌಜನ್ಯಗುಣ ನಾಗರಿಕರಲ್ಲಿ ಇದ್ದಾಗ ಆ ಪದ್ಧತಿ ಲೋಕಮಾನ್ಯವಾಗುತ್ತದೆ.

ಈಗಲೂ ಉದ್ಯೋಗಸ್ಥ ಮಹಿಳೆಯರ ಮಕ್ಕಳನ್ನು ನೋಡಿಕೊಳ್ಳುವ ಶಿಶುಪಾಲನಾ ಕೇಂದ್ರ, ಶಿಶುವಿಹಾರಗಳಲ್ಲಿ ಮಹಿಳೆಯರೇ ಇರುವುದು ಮಹಿಳೆಯಲ್ಲಿರುವ ತಾಳ್ಮೆ, ಸಹನೆ, ಶಾಂತಗುಣಗಳ ಪ್ರತೀಕವಾಗಿದೆ. ಆಸ್ಪತ್ರೆ, ನರ್ಸಿಂಗ್ ಹೋಂಗಳಲ್ಲೂ ಪುರುಷ ದಾದಿಗಳಿಗಿಂತಲೂ ಮಹಿಳಾ ದಾದಿಯರ ಸೇವೆಯೇ ಅವಳಲ್ಲಿರುವ ಸೌಜನ್ಯ ಪೂರ್ಣ ನಡವಳಿಕೆಗೆ ಸಾಕ್ಷಿಯಾಗಿದೆ.

ಒಟ್ಟಿನಲ್ಲಿ ಈ 'ಸೌಜನ್ಯ' ಗುಣವು ಕೌಟುಂಬಿಕ ನೆಲೆಯಿಂದ ಅಂತಾರಾಷ್ಟ್ರೀಯ ನೆಲೆಯವರೆಗೂ ಎಲ್ಲಾ ಘಟ್ಟಗಳಲ್ಲೂ ಅನುಸರಿಸಬೇಕಾದ, ಅಳವಡಿಸಿಕೊಳ್ಳಬೇಕಾದ ಮೌಲ್ಯಾಧಾರಿತ ಗುಣವಾಗಿದೆ. ಈ ದಿಸೆಯಲ್ಲಿ ಮಹಿಳೆಯರ ಪಾತ್ರ ಮಹತ್ವದ್ದಾಗಿದೆ.

○

ನಾ ಕಂಡ ಸೌಜನ್ಯಮೂರ್ತಿಗಳು

–ಕೆ. ರಾಮಮೋಹನ್

ನನ್ನ ಮಿತ್ರರಾದ ಸೌಜನ್ಯ ಗ್ರಂಥದ ಸಂಪಾದಕರು ಈಗ ಒಂದೆರಡು ದಿನಗಳ ಹಿಂದೆ ಸೌಜನ್ಯ ಗ್ರಂಥಕ್ಕೆ ನೀವೊಂದು ಲೇಖನ ಕೊಡಬಹುದಲ್ಲಾ ? ಎಂದು ಕೇಳಿದರು. ಆದರೆ ಲೇಖನ ಬರೆಯಲು ಕಾಲಾವಕಾಶ ಜಾಸ್ತಿ ಇಲ್ಲ ಈಗಾಗಲೇ ಗ್ರಂಥದ ಬಹುಭಾಗ ಅಚ್ಚಿನ ಕೊನೆಯ ಘಟ್ಟದಲ್ಲಿದೆ ಒಂದೆರಡು ದಿನಗಳಷ್ಟೆ ಕಾಲಾವಕಾಶ ಆಗುತ್ತದೆಯೆ ? ಎಂದರು.

ಅವರು ಸೌಜನ್ಯದಿಂದ ಕೇಳಿದ ರೀತಿಯಿಂದ ಇಲ್ಲ ಎನ್ನಲಾಗಲಿಲ್ಲ ಹೂಂ ಎಂದೂ ಹೇಳಲಿಲ್ಲ. ನೋಡೋಣ ಎಂದೆ. ಅವರು ಮಾತನಾಡುವಾಗ ಸೌಜನ್ಯ ಎಂದು ಹೆಸರಿಟ್ಟಿದ್ದೀರಲ್ಲಾ ಏನು ವಿಶೇಷ ಎಂದು ಕೇಳಿದಾಗ, ಅದಕ್ಕೆ ಸಮಾನಾರ್ಥವಾಗಿ ಹತ್ತಾರು ಪದಗಳನ್ನು ಹೇಳಿದರು. ಇಷ್ಟೊಂದು ಗುಣವಿಶೇಷಗಳಿರುವ ಪದವಾದ್ದರಿಂದ ಆ ಗುಣ ಇಂದು ಎಲ್ಲ ರಂಗಗಳಲ್ಲಿ ಅತ್ಯವಶ್ಯವಾಗಿ ಎಲ್ಲರೂ ಅಳವಡಿಸಿಕೊಂಡು ಅನುಷ್ಠಾನಕ್ಕೆ ತರಬೇಕಾಗಿದೆ ಎಂದರು ಆಗ ಅವರು ಹೇಳಿದ ದಿನಗಳಲ್ಲಿ ೧. ಸ್ಫೂರ್ತಿ ಬರುವಂತೆ ಉತ್ಸಾಹ ಉಲ್ಲಾಸಗಳನ್ನು ನವಯುವಕರಲ್ಲಿ ಮೂಡುವಂತೆ ವರ್ತಿಸುವುದು, ೨. ಪ್ರೀತಿ ವಿನಯ ತೋರಿಸುವುದು ಸೌಜನ್ಯ. ಉದ್ಧಟತನದ ಬೇಸರದ ಮಾತನ್ನು ಕೇಳಿದಾಗ ಅದಕ್ಕೆ ಕಟುವಾಗಿ ಉತ್ತರಿಸದೆ ಸಹನೆಯಿಂದ ಪ್ರತಿಕ್ರಿಯೆ ವ್ಯಕ್ತಪಡಿಸುವುದು ಸೌಜನ್ಯ ಉನ್ನತಾಧಿಕಾರಿಯಾಗಿ ಬಿರುಸಿನ ಚಟುವಟಿಕೆಗಳಲ್ಲಿ ತೊಡಗಿದ್ದರು ಒಂದು ಕಾಲಕ್ಕೆ ಪ್ರೀತಿ ಪಾತ್ರರಾದವರು ಬಂದಾಗ ಆ ಬಿರುಸಿನ ಚಟುವಟಿಕೆಗಳನ್ನು ಪಕ್ಕಕ್ಕಿಟ್ಟು ಬಂದವರೊಡನೆ ಮಾತಾಡುವುದೂ ಸೌಜನ್ಯವೇ ! ಹೀಗೆಲ್ಲಾ ವಿವರಿಸುತ್ತಾ ಹೋದ ಹಾಗೆಲ್ಲಾ ಆ ಮಾತುಗಳಿಗೆ ಆದರ್ಶ ನಿದರ್ಶನಗಳಾಗಿ ನನ್ನ ಬದುಕಿನಲ್ಲಿ ಚಿರಸ್ಮರಣೀಯರಾದ ಹಲವು ಮಂದಿ ಸೌಜನ್ಯಮೂರ್ತಿಗಳು ಸುಳಿದು ಹೋದರು. ಅವರೊಡನೆ ನನಗಾದ ಸೌಜನ್ಯಾನುಭವಗಳನ್ನು ಕುರಿತು ಕೆಲವು ಪ್ರಸಂಗಗಳನ್ನು ಇಲ್ಲಿ ಹೇಳುತ್ತಿದ್ದೇನೆ.

ವಿದ್ಯಾರ್ಥಿ ಸ್ಫೂರ್ತಿ – ಷಫಿದಾರಾಷಾ

ಸುಮಾರು ೫೫ ವರ್ಷಗಳ ಹಿಂದೆ ನಾವು ಇಂಟರ್ ಮಿಡಿಯೇಟ್ ಕಾಲೇಜಿನಲ್ಲಿ ಓದುವಾಗ ಬೇಸಿಗೆಯ ರಜೆಯಲ್ಲಿ ಹೊಸ ಜಿಲ್ಲಾಧಿಕಾರಿಗಳು ಊರಿಗೆ ಬಂದರು. ಗಿಡ ಮರಗಳಿಂದ ತುಂಬಿದ ವಿಶಾಲವಾದ ಜಾಗದ ಒಂದು ಮೂಲೆಯಲ್ಲಿ ಅವರ ವಿಸ್ತಾರದ ಬಂಗಲೆ, ಮೆಟ್ಟಲಿನ ಮುಂದೆ ಸಣ್ಣ ಕಾಲು ಹಾದಿ, ತುದಿಯಲ್ಲಿ ಗೇಟ್, (ಎದುರಿನಲ್ಲೇ ಜಿಲ್ಲಾ ಕಛೇರಿ) ಗೇಟಿನ ಒಂದು ಬದಿಗೆ ಕಾಂಪೌಂಡು, ಮತ್ತೊಂದು ಬದಿಗೆ ರಸ್ತೆಯ ಉದ್ದಕ್ಕೂ ತಂತಿಯ ಬೇಲಿ, ರಸ್ತೆಯಾಚೆ ಆಗ ದೊಡ್ಡದೆನಿಸುತ್ತಿದ್ದ ಜಿಲ್ಲಾ ಕ್ರೀಡಾ ಮೈದಾನ. ಅಲ್ಲಿ ಕ್ರಿಕೆಟ್ ಆಡುತ್ತಿದ್ದ ಕೆಲವರನ್ನು ಈ ಸಾಹೇಬರು ಕಂಡವರೇ, ನೇರ ಹತ್ತಿರದ ಮಾರ್ಗ ಎಂದು ಮರಗಳ ಮಧ್ಯದಿಂದ, ವೃದ್ಧಾಪ್ಯ ಬಂದಿದೆ ಎಂದು ಕಾಣುವಂತೆ ಜೋಲು ಬಿದ್ದಿದ್ದ ತಂತಿಯ ಬೇಲಿಯೊಳಗೆ ನುಸಿದು ಸರಸರನೆ ಆಟದ ಮೈದಾನಕ್ಕೆ ನಡೆದು ಬಂದರು. ಅವರೇ ಷಫಿದಾರಾಶಾ, ಉತ್ತಮ ಕ್ರಿಕೆಟ್ ಆಟಗಾರ, ಮೈಸೂರು ರಾಜ್ಯ ತಂಡದ ನಾಯಕನಾಗಿದ್ದವರು.

ಆಗಿನ್ನೂ ಸ್ವಾತಂತ್ರ್ಯ ಬಂದ ತರುಣ, ಅಮಲ್ದಾರರನ್ನು ನೋಡಲು ಬಂದವರಾದರೂ ಕೈಯಲ್ಲಿ ನಿಂಬೆಹಣ್ಣು ಹಿಡಿದು, ಬೆನ್ನು ಬಾಗಿಸಿ, ಬಾಯಿ ಮುಂದೆ ಕೈ ಅಡ್ಡ ಹಿಡಿದು ಮಾತನಾಡುವದು ಪದ್ಧತಿ. ಅಂತಹ ದೊಡ್ಡ ಸಾಹೇಬರು ಬೇಲಿಯೊಳಗೆ ತೂರಿದ್ದೇ ಆಟವಾಡುತ್ತಿದ್ದ ಹುಡುಗರಿಗೆ ಸೋಜಿಗದ ಮಾತಾಯಿತು. ಎರಡೇ ದಿನದಲ್ಲಿ ಅವರು ಚಿರಪರಿಚಿತರಾದರು, ತಮ್ಮವರೇ ಆದರು. ಊರಿನಲ್ಲಿದ್ದಾಗ ಸಾಯಂಕಾಲ ಮೈದಾನಕ್ಕೆ ಬಂದು ಆಟಕ್ಕೆ ನಿಲ್ಲುವರು. ಅಚ್ಚಣ್ಣ ವೇಗವಾಗಿ ಬೋಲ್ ಮಾಡುವನೆಂದು ತಮ್ಮ ಜಗಲಿಯಿಂದಲೇ ಕಂಡು, ಹೊಸ ಬಾಲ್ ಹಿಡಿದು ಬಂದು ಅವನಿಗೆ ಕೊಟ್ಟು, ಬೋಲಿಂಗ್ ನೋಡಲು ನಿಂತರು. ನಾಲ್ಕು ದಿನಗಳ ಮೇಲೆ "ಬಿರುಸಿನಿಂದ ಓಡಿಬರುವ ಅಪ್ಪಣ್ಣನಿಗೆ ಸ್ಟಂಪ್ ಕಾಣುವದು ಅದು ಇರುವ ಜಾಗದಿಂದ ನಾಲ್ಕಾರು ಗಜ ದೂರದಲ್ಲಿ ಎಂದು ತಮಾಷೆ ಮಾಡುವರು. 'ಯಾರು ನೋಡಲಿ, ಕೈ ತಿರುಗಿಸಿ ಜೋರಾಗಿ ಎಸೆಯುವರೇ, ಸ್ಪಿನ್ ಮಾಡುವರಿಲ್ಲವೇ' ಎಂದದ್ದೇ ತಡ, ಹೆಚ್‌ಬಿ ಮುಂದೆ ಬಂದ. ಅನಂತರ ಅವನು ಹಿಂದಿರುಗಿ ನೋಡಲೇ ಇಲ್ಲ. ರಾಜ್ಯದ ಅತ್ಯುತ್ತಮ ಲೆಗ್‌ಸ್ಪಿನ್ನರ್, ಆದರೆ ಊರಿನಂತೆ, ಅವನೂ ಮೂಲೆಗುಂಪಾದವನೇ. ವೇಗದ ಬೌಲರ್ ರಾಮಣ್ಣ, ಸೋಮಸುಂದರ್ ಮೆಚ್ಚುಗೆಯಾದರು. ಭಟ್ಟ ಉತ್ತಮ ಬ್ಯಾಟ್ಸ್‌ಮನ್. ಅವನು ವಿಕೆಟ್ ಕೀಪರ್ (ಅವರು ಟೈಸ್ ಕೀಪರ್ ಎನ್ನುತ್ತಿದ್ದರು, ಅವನು ಬಿಟ್ಟ ಚೆಂಡು ತಡೆಯಲು ಬೌಂಡರಿ ಸಾಲಿನಲ್ಲಿ ಲಾಂಗ್ ಲೆಗ್‌ಗೆ ಒಬ್ಬನನ್ನು ನಿಲ್ಲಿಸುತ್ತಿದ್ದರು. ಲೆಗ್‌ಸೈಡ್‌ನಲ್ಲಿ ಅವನೊಂದು ಕ್ಯಾಚ್ ಹಿಡಿದ ಅವರ ಪ್ರಶಂಸೆಯಿಂದ ಉಬ್ಬಿದ. 'ಭಟ್ಟ ಹಿಂದಕ್ಕೆ ತಿರುಗಿ ಲಾಂಗ್ ಲೆಗ್‌ನಲ್ಲಿ

ನೋಡ್ತಾನೆ, ಅರೆ, ಬಾಲ್ ಕೈಗೇ ಬಂತು' ಅನ್ನುವರು, ಪಂದ್ಯವೊಂದರಲ್ಲಿ ಸ್ಲಿಪ್‌ಗೆ ಬಂದ ಬಾಲನ್ನು ಬೆಣ್ಣೆ ತೂಗುವಂತೆ ಹತ್ತು ಬಾರಿ ಹಾಗೆ ಹೀಗೆ ಹಾರಿಸಿ, ಕೊನೆಗೂ ಹಿಡಿದಾಗ ಸೂರಿ ಸಿಂಧಘಟ್ಟದ ದೇವರಂತೆ ಹಿಂದೆ ಮುಂದೆ ಆಗಿದ್ದ. ಮುಖ ಮುಚ್ಚಿಕೊಂಡು ನಿಂತಿದ್ದ ಸಾಹೇಬರು ಎಲ್ಲರ ಮೆಚ್ಚುಗೆಯ ದನಿ ಕೇಳಿದಾಗ ತಿರುಗಿ 'ವಾಲ್ ಎ ಗುಡ್ ಕ್ಯಾಚ್' ಎಂದು ಹೊಗಳಿದರು. ಹೆಚ್ಚು ಪುರುಸೊತ್ತಿದ್ದಾಗ ಆಟವಾದ ಮೇಲೆ ಕತ್ತಲು ಹೆಚ್ಚಾಗುವವರೆಗೂ ಹರಟೆಗೆ ನಿಲ್ಲುವರು, ವಿಜಯ ಮರ್ಚೆಂಟ್ ಚಿಕ್ಕನ್ ಫೀಲ್ಡ್ ಮಾಡಿ ಪಾಲಿಯಾರನ್ನು ರನ್ ಔಟ್ ಮಾಡಿದ್ದು, ವೀಕ್ಸ್ (ವೆಸ್ಟ್ ಇಂಡೀಸ್ ಆಟಗಾರ) ಮಧ್ಯಮ ವೇಗದ ಘಡ್ಕರ ಬಾಲಿಗೆ ಡ್ರೈವ್ ಮಾಡಲು ಮುಂದೆ ಬಂದು, ಅದು ಅಷ್ಟು ಮುಂದಿಲ್ಲ ಎಂದಾಗ ಕೂಡಲೇ ಮೈ ಹಿಂದೆ ಬಾಗಿಸಿ ಸ್ಕ್ವೇರ್ ಕಟ್ ಮಾಡುವ ಪರಿ, ಹೀಗೆ ಎಷ್ಟೋ ಅವರ ಅನುಭವದ ಕಥೆಗಳು. ಅಧಿಕಾರ, ವಯಸ್ಸು (ಆಗ ನಾವೆಲ್ಲರೂ ಅವರಿಗಿಂತ ೨೦–೨೫ ವರ್ಷದ ಕಿರಿಯರು, ಯಾವ ಅಂತರವನ್ನೂ ಎಣಿಸದೆ, ಸರಳವಾಗಿ ನಮ್ಮೊಡನೆ ಬೆರೆಯುತ್ತಿದ್ದುದ್ದೊಂದು ಅತಿ ವಿಶೇಷದ ಸಹಚರ್ಯ, ಸೌಹಾರ್ದದ ಬಗೆ, ಅದಕ್ಕೆ ಹೆಚ್ಚಿನ ಮೆರುಗು ಗಾಂಭೀರ್ಯದೊಡನೆಯೇ ಮೂಡಿಬರುತ್ತಿದ್ದ ಸರಳತೆ. ಸೌಜನ್ಯ ಎಂದರೆ ಪ್ರೀತಿ, ವಿನಯ ಅದಕ್ಕೆ ಅವರು ಆದರ್ಶ ನಿದರ್ಶನ.

ಆಟದ ಬ್ಯಾಟು ಬಾಲ್‌ಗಳನ್ನು ತಂದುಕೊಟ್ಟಿದ್ದು ಹಾಗಿರಲಿ, ಜಾಗವಿಲ್ಲದೆ ಎಲ್ಲವನ್ನೂ ಹತ್ತಿರದ ಆಟಗಾರನ ಮನೆಗೆ ಒಯ್ಯುತ್ತಿದ್ದೆವೆಂದು, ಅವರ ಬಂಗಲೆಯ ಮುಂದಿನ ಕೋಣೆಯೊಂದು ಇವಕ್ಕೆ ಸ್ಥಳವಾಯಿತು. ಊರಿನಲ್ಲಿ ಒಳ್ಳೆಯ ಆಟಗಾರರಿದ್ದಾರೆ. ಅವಕಾಶವಿಲ್ಲ ಎಂದು ಟೂರ್ನಮೆಂಟ್ ನಡೆಸಿದರು, ಹೊರಗಡೆಯ ತಂಡಗಳು ಬಂದದ್ದು ಅವರ ಪ್ರಭಾವದಿಂದಲೇ. ಆಡುವವರಿಗೆ, ನೋಡುವವರಿಗೆ ಅದೊಂದು ಸಂಭ್ರಮದ ರಸದೂಟ. ಮಂಗಳೂರಿಗೆ ಊರಿನ ತಂಡವೊಂದನ್ನು ಕರೆದುಕೊಂಡು ಹೋಗಿದ್ದು, ಹಾಸನಕ್ಕೆ ಕಳಿಸಿದ್ದು ಹೀಗೆ ಅವಕಾಶ ದೊರಕಿಸಿಕೊಡಲು ಎಲ್ಲವೂ ಒಂದೇ ವರ್ಷದಲ್ಲಿ ಆದದ್ದು.

ಸೌಜನ್ಯಮೂರ್ತಿಗೆ ಸೌಜನ್ಯರಹಿತ ಉತ್ತರ

ನಾಲ್ಕಾರು ವರ್ಷಗಳ ಮೇಲೆ ಡಿವಿಷನಲ್ ಕಮೀಷನರ್ ಆಗಿ ಅಧಿಕೃತ ಭೇಟಿಗೆ ಬಂದರು. ಸಾಯಂಕಾಲವೇ ಜವಾನನೊಡನೆ ಹೇಳಿ ಕಳಿಸಿದರು. 'ನೋಡು, ಆಗ ಕ್ರಿಕೆಟ್ ಆಡುತ್ತಿದ್ದರಲ್ಲಾ ಹುಡುಗರು, ಅವರನ್ನು ನೋಡಬೇಕು, ನಾನು ಬಂದಿರುವದು ತಿಳಿಸಿ ಬಾ', ಅದು ಅವರ ಪ್ರೀತಿ. ಬೆಳಿಗ್ಗೆ ನಮ್ಮನ್ನು ಕಂಡಾಗ ಸಂತೋಷ, ಎಲ್ಲರ ಯೋಗಕ್ಷೇಮವನ್ನೂ ಕೇಳಿದರು, ಆಟದ ಪ್ರಗತಿ ವಿಚಾರಿಸಿದರು. ಅವರ ಕಾಲದಲ್ಲಿ ತಾವೇ ರಚಿಸಿದ್ದ ಆಟದ ಮಂಡಲಿಯ ಹಿರಿಯರೊಬ್ಬರು ಅವರ ಹೇಳಿಕೆಯಂತೆ ಆಗ ಬಂದರು. ಹಿಂದೆ ನಾನು ಇದ್ದಾಗ ಇಲ್ಲಿಯ ಶ್ರೀಮಂತರೊಬ್ಬರು ಕೊಟ್ಟ ದಾನವಿದೆ, ಈಗಲಾದರೂ ಪೆವಿಲಿಯನ್

ಕಟ್ಟಿಸಿ ಚೆನ್ನಾಗಿ ಆಡುವ ಈ ಹುಡುಗರ ಆಟಕ್ಕೆ ಅನುಕೂಲವಾಗಲಿ, ಅದೊಂದು ಉತ್ತೇಜನ" ಎಂದರು. ಆ ಮಹಾಶಯರಿಗೇನೋ ಕೋಪ. 'ಯಾವದಕ್ಕೆ ಇವರು ಅರ್ಹರು ? ಅವರಿಗೇಕೆ– ನಿಲ್ಲಿಸಿ ಗುಂಡು ಹಾಕಬೇಕಷ್ಟೆ' ಎಂದಾಗ ಅವರಿಗೆ ದಿಗ್ಭ್ರಮೆಯಾಗಿರಬೇಕು. ಅವರ ಸಂಸ್ಕಾರ ಎಷ್ಟು ಹಿರಿದು ! ಸಿಟ್ಟು ಬರಲಿಲ್ಲ, ಆದರೆ ಬೇಸರ, ಅದಕ್ಕಿಂತ ಹೆಚ್ಚಾಗಿ ತಾಪ ಸ್ಪಷ್ಟವಾಗಿ ಮುಖದ ಮೇಲಿತ್ತು. ಹಿರಿಯ ಅಧಿಕಾರಿ ಎಂಬ ದರ್ಪವಿಲ್ಲ, ಅದಕ್ಕೆ ಸಹಜವಾದ ತೀಕ್ಷ್ಣ ಪ್ರತಿಕ್ರಿಯೆಯಿಲ್ಲ. ಐವತ್ತು ವರ್ಷಗಳ ಮೇಲೂ ಆ ನಲುಗಿದ ತಾಪ, ನೋವಿನ ಧ್ವನಿ ಮರುಕಳಿಸುತ್ತೆ. ಆ....ಯ್ತು....ಪ್ಪ....ಹಾಗೆಂದರೆ ಏನು ಹೇಳಲಿದೆ ! ನಮ್ಮ ಕಾಲದಲ್ಲಿ ಅವಕಾಶ, ಅನುಕೂಲಗಳನ್ನು ನಾವು ಪಡೆದೆವು, ಅದನ್ನು ಹಿಂದಿರುಗಿಸಲು ಈಗಿನವರಿಗೆ ನಾವು ಸೌಲಭ್ಯಗಳನ್ನು ಒದಗಿಸುವದು ಕರ್ತವ್ಯ. we had our day and forgot them ಎಂದು ಈ ಯುವಕರು ಅನ್ನುವಂತಾಗಬಾರದು, ಇದೊಂದು ಆದರ್ಶ, ಸಜ್ಜನಿಕೆ, ಸಹಾಯದ ಹಸ್ತ ಚಾಚುವ ಗುಣ.

ಸೌಹಾರ್ದ ಸಂಪನ್ನ – ಸಂಪತ್ ಕುಮಾರನ್

ಶ್ರೀ ದಾರಾಪತಿ ಮರೆಯಲಾಗದ ವ್ಯಕ್ತಿ, ಸಂಸ್ಥೆಯೇ ಅದೇ ರೀತಿಯಲ್ಲಿ ಏನಾದರೂ ಸಹಾಯ ಮಾಡೋಣ ಎನ್ನುತ್ತಿದ್ದವರು ಹತ್ತು ವರ್ಷಗಳ ಅನಂತರ ಬಂದ ಶ್ರೀ ಆರ್. ಸಂಪತ್ಕುಮಾರನ್‌ರು. ಯಾವಾಗಲೂ ನಗುಮುಖದ ಮಾತು. ಕ್ರೀಡಾಭಿವೃದ್ಧಿಯ ವಿಷಯ ಹೇಳಿದಿರಿ. ಬರೆದು ತನ್ನಿ ಎಂದರು. ಮನೆಗೇ ಹೋದಾಗ ಜಿಲ್ಲಾ ಕ್ರೀಡಾ ಮಂಡಲಿಯನ್ನು ಸ್ಥಾಪಿಸುವ ಸಲಹೆಯನ್ನು ಒಪ್ಪಿದರು. ಅದಕ್ಕೆ ಅವರದೊಂದು ಸೂಚನೆ, ವಿಸ್ತರವಾದ ಸಭೆ ಎಂದು ಮುಂದಾಳಾಗಿ ಹೋದ ಉತ್ಸಾಹಿ ತರುಣ ಕೂಡಲೇ 'ಇದು ನಡೆಯದೆ ಇರುವ ಮಾತು' ಎನ್ನಬೇಕೆ ಒಂದು ಕ್ಷಣ ಅವರು ಸುಮ್ಮನಾದರು. ಇವನು ನಾಲಗೆ ಕಚ್ಚಿದ. 'ಈಗ ಹೇಳಿದ ಹಾಗೆ ಮಾಡಿ, ನೋಡೋಣ' ಎಂದರು. ಕ್ರೀಡಾ ಮಂಡಲಿಯೂ ಆಯಿತು, ಕೆಲಸ ಕಾರ್ಯವೂ ಅವರ ಅಧ್ಯಕ್ಷತೆಯಲ್ಲಿ ಚೆನ್ನಾಗಿಯೇ ನಡೆಯಿತು, ಆದರೆ ಅವರು ಹೇಳಿದ ವಿಸ್ತಾರದ ಸಭೆ ಕೂಡಿರಲಿಲ್ಲ. ಆದರೆ ಈ ಬಗೆ ಅವರ ಮನಸಿನಲ್ಲಿ ಸ್ವಲ್ಪವೂ ಕಸಿವಿಸಿ ಉಳಿಯಲಿಲ್ಲ. ಎಷ್ಟೇ ದಿನಗಳು, ವಾರಗಳಲ್ಲಿ ಈ ತರುಣನನ್ನು ಕಂಡು ಅವರಿಗೆ ವಿಶ್ವಾಸ, ಒಂದು ಬಗೆಯ ಅಭಿಮಾನವೂ ಆಗಾಗ ಅವರಲ್ಲಿ ಹೋಗುವದು, ಅಥವಾ ಅವರೇ ಅವನನ್ನು ಕರೆದು ಮಾತನಾಡಿಸುವರು. ಒಮ್ಮೆ ತಟಕ್ಕನೆ ಅಂದರು 'ನೀವು ಹೇಳಿದ್ದು ಸರಿ, ಅದು ಕಾರ್ಯಗತವಾಗಲಿಲ್ಲ' ಎಂದರು. ಯಾವದು ಅವರ ಮೊದಲಿನ ಸಲಹೆ ಮಾತು ಬೆಳೆಯದೆ ಇಬ್ಬರಿಗೂ ಅದು ಅರ್ಥವಾಯಿತು. ಮಂತ್ರಿಗಳು ಬರ್ತಾರೆ, ಮನವಿ ಬರೆದು ತನ್ನಿ, ಕರಡನ್ನು ಓದುವಾಗ ಮುಖ ಮಂದಹಾಸದಿಂದ ಅರಳಿತು. ಸರಿ ಟೈಪು ಮಾಡಿಸಿ ತನ್ನಿ, ಅದೂ ಆಯಿತು, ದೂರದಿಂದ ಕೈಲಿದ್ದದ್ದನ್ನು ನೋಡುವಾಗಲೇ

"ವಾ, ನೀಟಾಗಿ ಟೈಪು ಮಾಡಿಸಿ ತಂದಿರಿ ತಾನೆ !" ಉತ್ತಮವಾಗಿದ್ದು, ಚೆನ್ನಾಗಿದ್ದುದನ್ನು ಒಪ್ಪಿಕೊಳ್ಳುವವರು ಎಷ್ಟು ಜನರಿದ್ದಾರು !

ಒಮ್ಮೆ ಈತ ಅವರ ಮನೆಗೆ ಬೆಳಿಗ್ಗೆಯೇ ಹೋದ. 'ಸಾಹೇಬರು ಡಿಕ್ಟೇಸನ್ ಕೊಡ್ತಾ ಅವ್ರೆ, ಕೇಸಿನ ತೀರ್ಪು' ಅಂದು ಕೇಳಿಸಿಕೊಂಡು ಸ್ವಲ್ಪ ಹೊತ್ತು ಕೂತೆ, ತಾಳ್ಮೆ ಕಡಮೆಯಾಯಿತು. ಚೀಟಿ ಕಳಿಸಿಕೊಟ್ಟು ಬಾಗಿಲ ಪಕ್ಕ ನಿಂತ. ಒಳಗಿನಿಂದ 'ಅವರನ್ನು ಬಿಡದೆ , ಚೀಟಿ ಯಾಕೆ ತಂದೆ' ಅಂತ ಗದರಿದ್ದು ಕೇಳಿಸಿತು. 'ಕೇಸು ವಿಷಯ ಎಂದಾಗ ಬರುವದು ಸರಿಯಿಲ್ಲ ಎಂತ ನಾನೇ ಕಳಿಸಿದೆ' ಎಂದರೆ, 'ಅದೆಲ್ಲಾ ಬೇರೆಯವರಿಗೆ, ನೀವು ನೇರ ಬನ್ನಿ, ನನ್ನ ಕೆಲಸ ಮುಗಿದ ಮೇಲೆ ಮಾತಾಡ್ತೇನೆ'. ಅಂದಿನಿಂದ ಆತನಿಗೆ ಕಛೇರಿಯಲ್ಲೂ ಮುಕ್ತದ್ವಾರವೇ ! ಊರಿನಿಂದ ವರ್ಗವಾದಾಗ, ಹಿಂದಿನಿಂದ ಬರುತ್ತಿದ್ದವರು ಇವನನ್ನು ಕಂಡು ಕಾರು ನಿಲ್ಲಿಸಿದರು. ಇನ್ನೊಂದು ಗಂಟೆಗೆ ನಿಮ್ಮ ಮನೆಗೆ ವರ್ಗವಾದಾಗ, ಹಿಂದಿನಿಂದ ಬರುತ್ತಿದ್ದವರು ಇವನನ್ನು ಕಂಡು ಕಾರು ನಿಲ್ಲಿಸಿದರು. "ಇನ್ನೊಂದು ಗಂಟೆಗೆ ನಿಮ್ಮ ಮನೆಗೆ ಬರ್ತೀನ್ರಿ, ನೀವು ಕರೆದಿರಿ ಎಂದು" ಹಾಗಿತ್ತು ಅವರ ಸೌಹಾರ್ದದ ಅಂತರಂಗ.

ವಿದ್ಯಾರ್ಥಿ ಪ್ರೀತಿಯ ನಿರ್ದೇಶಕ ದಾವರ್

ಕಾಲೇಜು ಶಿಕ್ಷಣ ನಿರ್ದೇಶಕರಾಗಿದ್ದ ಪ್ರೊಫೆಸರ್ ದಾವರ್ ಮಹಾಶಯರನ್ನು ಕಂಡರೆ ಅವರ ವಿದ್ಯಾರ್ಥಿಗಳಿಗೆ ಒಂದು ತರಹಾ ಹೆದರಿಕೆ. ಕಾರಣ, ಶುಭ್ರತೆ, ಅಚ್ಚುಕಟ್ಟು, ಸುವ್ಯವಸ್ಥೆಗೆ ಅವರು ಹೆಸರಾದವರು. ಕೋಪವೂ ಅಷ್ಟೆ. ಒಂದು ಆಮ್ಮೀಟರ್ ಸುಟ್ಟದ್ದಲ್ಲದೆ, ಎರಡನೆಯದನ್ನೂ ಅದೇ ರೀತಿ ಪರೀಕ್ಷೆ ಮಾಡಹೋಗಿ ಸುಡುವುದರಲ್ಲಿದ್ದ ವಿದ್ಯಾರ್ಥಿಗೆ ಅದರ ಬೆಲೆ ಕಟ್ಟು ಎಂದರು. ಎರಡು ಮೂರು ದಿನ ಹೋಗಿ ಬೈಸಿಕೊಂಡು ಬಂದ. 'ನಾನು ಬಡವನ್ರಿ ಸಾಹೇಬ್ರೇ' ಅಂದಾಗ ಉತ್ತರವಾಗಿ ಬಿರುನುಡಿ ಆಡಿದರು ಅವನು ತತ್ತರಿಸಿದ ಆದರೆ ಕರುಣೆಯಿಂದ ಕೊನೆಗೆ ಅದನ್ನು ಮನ್ನಾ ಮಾಡಿದರು ಎಂಬುದು ಇಲ್ಲಿ ಮುಖ್ಯ ಮಾತು. ಅವರು ಕಾಲೇಜ್ ಶಿಕ್ಷಣದ ನಿರ್ದೇಶಕರಾದಾಗ, ಸೆಂಟ್ರಲ್ ಕಾಲೇಜ್ ದಾರಿಯಲ್ಲಿ ಹೋಗುತ್ತಿದ್ದ ಹಳೆಯ ವಿದ್ಯಾರ್ಥಿ ಅವರನ್ನು ನೋಡಲು ಹೋದ. ಆಗಲೇ ಆರೆಂಟು ಜನ ಕಾದು ಕುಳಿತಿದ್ದರು. ಉಪನ್ಯಾಸಕರೂ, ಪ್ರಾಧ್ಯಾಪಕರೂ ಇದ್ದಾರು. ಜವಾನ 'ಅವರಿಗೆ ಪುರುಸೊತ್ತಿಲ್ಲ' ಎಂದರೂ, ಇವನು ಚೀಟಿ ಕೊಟ್ಟ ಅವನಿಗೆ ಅಸಮಾಧಾನ, ತಿರಸ್ಕಾರವೂ ಇತ್ತೇ ? ಬಿರುಸಿನಿಂದ ಇದ್ದವರೆಲ್ಲರಿಂದ ಚೀಟಿ ತೆಗೆದುಕೊಂಡು ಒಳಗಿಟ್ಟ. ಎರಡೇ ನಿಮಿಷದಲ್ಲಿ ಕರೆಗಂಟೆ ಕೇಳಿ ಚೀಟಿಯೊಂದನ್ನು ತಂದು ಹೆಸರು ಕೂಗಿದ. ಈ ವಿದ್ಯಾರ್ಥಿ ಮುಂದೆ ಹೊರಟರೆ, 'ನೀವಲ್ಲರೀ, ಯಾರ್ರೀ ಅವರು' ಎನ್ನುತ್ತಾನೆ, ಕೋಪದಲ್ಲಿ. ಈತ ಬಾಗಿಲಿಗೆ ಬಂದು ನಮಸ್ಕಾರ ಹೇಳಿದಾಗ, ಕಛೇರಿಯ ಮುಖ್ಯಸ್ಥರೊಡನೆ ವಿವಾದಾಸ್ಪದ ಕಡತದ ಚರ್ಚೆಯಲ್ಲಿ ನಿರತರಾದ ಸಾಹೇಬರು ಕತ್ತೆತ್ತಿ ನೋಡಿದರು. ಕೂಡಲೇ ಎದ್ದು

ನಿಂತು, ಕೈ ಮುಂದೆ ಚಾಚಿದರು. 'ಬನ್ನಿ ಹೇಗಿದೀರಿ, ಕುಳಿತುಕೊಳ್ಳಿ, ಈ ಕಡತ ಮುಗಿಸಿ ನಿಮ್ಮ ಹತ್ತಿರ ಮಾತನಾಡ್ತೇನೆ' ಎಂದು ತಮ್ಮ ಮುಂದಿನ ಕುರ್ಚಿಯಲ್ಲಿ ಕೂರಿಸಿದರು. ಯಾರೋ ಉಪನ್ಯಾಸಕರ ಮೇಲೆ ದೂರಿನ ಕಡತ. ಹೋಗಬಾರದಿತ್ತೇನೋ ಎಂದು ಮುಜುಗರ ಈತನಿಗೆ. ಹತ್ತು ನಿಮಿಷ ಮೇಲೆ ಯೋಗಕ್ಷೇಮದಿಂದ ಪ್ರಾರಂಭಿಸಿ ಚೆನ್ನಾಗಿಯೇ ಮಾತನಾಡಿದರು. ಮೇಲ್ನೋಟಕ್ಕೆ ಒರಟಾಗಿ, ಸಿಟ್ಟಿನವರೆಂದು ಕಂಡರೂ ಅಂತರಂಗದಲ್ಲಿ ಮೃದುತ್ವವಿದೆ ಎಂದು ವಿದ್ಯಾರ್ಥಿಯಾಗಿ ಕಂಡಿದ್ದು, ಈಗ ದೃಢವಾಗಿತ್ತು.

ಮಾನವೀಯತೆಯ ಸಾಕಾರಮೂರ್ತಿಗಳು

ನಮ್ಮ ಅಮ್ಮನ ಜೀವಿತದ ಕೊನೆಯ ಐದಾರು ದಿನಗಳು. ಅನಾರೋಗ್ಯದಿಂದ ಆಸ್ಪತ್ರೆ ಸೇರಿದ್ದರು. ಡಾಕ್ಟರು ಕೈಚೆಲ್ಲಿದರು. ಅಂದು ರಾತ್ರಿ ಎಚ್ಚರಿದ್ದು ಗಮನಿಸಿ ಎಂದು ಹೋದರು. ಆಗ ಅವರ ಯೋಗಕ್ಷೇಮ ನೋಡುತ್ತಿದ್ದ ತಮ್ಮನ ಜೊತೆಗೆ ಅಣ್ಣನೂ ಬಂದಿದ್ದ. ಅವನು ಲೆಕ್ಕಕ್ಕೆ ಮಾತ್ರ ಹಾಜರಿದ್ದವನು. ಆ ಸಮಯದಲ್ಲಿ ತಮ್ಮನ ಮೂರು ಆಪ್ತ ಸ್ನೇಹಿತರು ಮನೆ ಬಿಟ್ಟು ಬಂದು ರಾತ್ರಿ ಆಸ್ಪತ್ರೆಯಲ್ಲಿ ಉಳಿಯುತ್ತಿದ್ದರು. ಇಬ್ಬಿಬ್ಬರಂತೆ ರಾತ್ರಿ ಎರಡು ಪಾಳಿ, ರಾತ್ರಿ ೧ ರವರೆಗೆ ಅನಂತರ ಬೆಳಗಿನ ಆರವರೆಗೆ ಅನಂತರ ಅವರವರ ಕೆಲಸ. ಒಬ್ಬ ತಮ್ಮನಂತೆಯೇ ವೈದ್ಯ, ಎರಡನೆಯನದು ಯಂತ್ರಜ್ಞ, ಉಳಿದವನು ವ್ಯಾಪಾರಿ. ಆರನೆಯ ದಿನ ಸಂಜೆ ಸ್ಥಿತಿ ವಿಷಮ ಎನ್ನುವಾಗ ಆಗ ಡಾಕ್ಟರನ್ನು ಕರೆದು ಬರುವಾಗ, ಈ ಮೂವರೂ ಹೇಗೋ ಅದೇ ರಸ್ತೆಯಲ್ಲಿ ಬಂದರು ಆಸ್ಪತ್ರೆಗೆ ಇದು ಯಾವ ಕಾಕತಾಳೀಯ! ಎಲ್ಲರ ಸಮ್ಮುಖದಲ್ಲಿ ಅಮ್ಮ ತೃಪ್ತಿಯ ಉಸಿರಿನಿಂದ ಈ ಲೋಕವನ್ನು ದಾಟಿದ್ದರು. ಇದು ಯಾವ ಬಂಧನ. ಎತ್ತಣಿಂದೆತ್ತಣ ಸಂಬಂಧವಯ್ಯಾ ! ಅವರ ಸಹೃದಯತೆ ಮರೆಯುವಂತಿಲ್ಲ. ಆಮೇಲೆ ಆ ಮಿತ್ರನ ತಾಯಿಯ ಸೇವೆಯನ್ನು ಹೆತ್ತ ಮಕ್ಕಳಿಗಿಂತ ಹೆಚ್ಚು ಶ್ರದ್ಧೆಯಿಂದ ಮಾಡಿದ ಆ ವೀರನ ಸೌಜನ್ಯ ಮಾನವೀಯ ಗುಣದ ಪರಾಕಾಷ್ಠೆ ಆಗಿತ್ತು.

ಬಾಳಿಗೆ ಬೆಳಕಾದ ಗುರುಕಾರುಣ್ಯ

'ತುಂಬಾ ಇಷ್ಟವಾದದ್ದು ಕೊನೆಗೆ' ಎಂದು ಕಾಲೇಜಿನಲ್ಲಿ ಪ್ರೊಫೆಸರು ಹೇಳುತ್ತಿದ್ದರು. ಅದರಂತೆ ಇಲ್ಲಿಯೂ ! ತಂದೆಯವರು ತರುಣ ವಕೀಲರಾಗಿ ಪ್ರವರ್ಧಮಾನಕ್ಕೆ ಬರುತ್ತಿದ್ದ ಕಾಲ. ತಮ್ಮ ಕೆಲಸ, ಆಟ, ಕಕ್ಷಿಗಾರರು ಎಂದು ಬಿಡುವಿರಲಿಲ್ಲ, ಶೃಂಗೇರಿಯ ಮಹಾತಪಸ್ವಿ ಶ್ರೀ ಶ್ರೀ ಚಂದ್ರಶೇಖರ ಭಾರತಿ ಸ್ವಾಮಿಗಳು ಬಂದಿದಾರೆ ಮನೆಗೆ. ನೀನು ಬಾ. ಎಂದು ಸ್ನೇಹಿತ ವಕೀಲರು ದಿನವೂ ಹೇಳಿದರೂ ಆ ಕಡೆ ಮನಸ್ಸೂ ಹೋಗಿರಲಿಲ್ಲ. ಕೊನೆಗೊಂದು ದಿನ ಅವರು ಬೇಸರದಿಂದ 'ನೋಡು, ಈವರೆಗೂ ನೀನು ಬರಲಿಲ್ಲ, ನಾಳೆ ಅವರು ಹೊರಡುತ್ತಾರೆ' ಎಂದು ಬೇಸರದಿಂದ ಅವರು ಹೇಳಿದರೆಂದು, ಆ ಸಾಯಂಕಾಲ ಅವರ

ಮನೆಗೆ ಹೋದರು. ಸರದಿಯವರು 'ಈಗ ಸ್ವಾಮಿಗಳು ಸ್ನಾನಕ್ಕೆ ಹೊರಟಿದ್ದಾರೆ. ಇನ್ನೇನಿದ್ದರೂ, ಸಾಯಂಕಾಲದ ಪೂಜೆಯಾದ ಮೇಲೆ, ಅಂದರೆ ೪ ಗಂಟೆಯ ನಂತರ ಎಂದಾಗ ನಿರಾಶರಾದರು. ಆ ವೇಳೆಗಾಗಲೇ ಅವರು ಒಳಗಿನ ಬಾಗಿಲ ಕಡೆ ತಿರುಗುವುದರಲ್ಲಿದ್ದರು. ಈ ಮಾತುಗಳನ್ನು ಕೇಳಿಯೋ ಏನೋ ಅವರು ಹಿಂದೆ ತಿರುಗಿ ಇವರನ್ನು ಕಂಡರು. ಹಾಗೇ ನಿಧಾನವಾಗಿ ತಮ್ಮ ಪೀಠದ ಕಡೆ ಬಂದು ಸರದಿಯವರಿಗೆ ಸನ್ನೆ ಮಾಡಿರು. ಅವರು 'ಸ್ವಾಮಿಗಳು ಕರೀತಾರೆ, ಹೋಗಿ' ಎಂದಾಗ, ಇವರಿಗೆ ಆನಂದದ ಅಲೆಯೇ. ಅಂತಹ ಮಹಾತಪಸ್ವಿಗಳು ಯಾವ ರೀತಿಯ ಆಧ್ಯಾತ್ಮಿಕ ಪ್ರಗತಿಯೂ ಇಲ್ಲದ ಕೇವಲ ಲೌಕಿಕನಿಗೆ ಈ ರೀತಿಯ ಗಮನ ಕೊಟ್ಟರಲ್ಲಾ ಎಂದು ಮನಸ್ಸು ತುಂಬಿತು. ಕುಳಿತುಕೊಳ್ಳ ಹೇಳಿ ಇವರ ಯೋಗಕ್ಷೇಮ ಕೇಳಿದರು. ಏನು ಕೆಲಸ ಮಾಡ್ತಾರೆ, ಹೇಗಿದ್ದಾರೆ ಇತ್ಯಾದಿ. ಗಾಯತ್ರಿ ಜಪ ಇಲ್ಲವೆಂದು ತಲೆ ಅಲ್ಲಾಡಿಸಿದಾಗ, 'ಹೀಗೆ ಬೇಡ, ಇನ್ನು ಮುಂದೆ ಯಥಾಶಕ್ತಿ ಗಾಯತ್ರಿ ಜಪ ಮಾಡಿ, ಒಳ್ಳೆಯದಾಗಲಿ' ಎಂದು ಆಶೀರ್ವಾದ ಮಾಡಿ, ಹಿತವಚನಗಳೊಂದಿಗೆ ಕಳಿಸಿಕೊಟ್ಟರು. ಇವರಿಗೆ ಹೃದಯ ತುಂಬಿ ಬಂತು. ಜೀವನ ರೀತಿಯೇ ಬದಲಾಗಿ ಪರಿವರ್ತನೆಯಾಯಿತು. ಇದಾದದ್ದು ೧೯೩೬ರಲ್ಲಿ. ಅಲ್ಲಿಂದ ಮುಂದೆ ಅವರಿಗೆ ಶ್ರೀಶ್ರೀಗಳವರೇ ಗುರುಗಳು ಎಂದು ಪರಿಗಣಿಸಿದರು. ೧೯೫೪ರಲ್ಲಿ ಗುರುಗಳು ಮುಕ್ತರಾದ ಮೇಲೆ ಅವರಿಗೆ ಶೃಂಗೇರಿಗೆ ಹೋಗುವ ಮನಸ್ಸು ಇರಲಿಲ್ಲ. ೧೯೬೫ರಲ್ಲಿ ತಮ್ಮದು ೬೦ನೇ ವರ್ಷದಲ್ಲಿ, ಅದರ ಆಚರಣೆಯನ್ನು ಕೇವಲ ತಮ್ಮೊಬ್ಬರಿಗೆ ಮಾತ್ರವೇ ಉಳಿಸಿಕೊಂಡು, ಯಾರಿಗೂ ಹೇಳದಂತೆ, ನಡೆಸಿದರು. ಹೀಗೆ ; ಶ್ರೀ ಶ್ರೀ ಚಂದ್ರಶೇಖರ ಭಾರತಿ ಮಹಾಸ್ವಾಮಿಗಳ ಸನ್ನಿಧಿಯಲ್ಲಿ ಶತರುದ್ರಾಭಿಷೇಕ ಮಾಡಿಸಿ, ಅವರಿಗೆ ಪ್ರಾರ್ಥನೆ ಸಲ್ಲಿಸುವುದರ ಮೂಲಕ. ಅಂತಹ ಮಹಾಮಹಿಮರ ಸರಳ ಸಂಪನ್ನತೆ, ಹೃದಯವಂತಿಕೆಗೆ ಸಾಟಿಯುಂಟೆ !

ಸೌಜನ್ಯ ಸಂಪನ್ನರು ಸಾಲಿ–ಮಾಸ್ತಿ

ಸಹೃದಯ ಸಾಹಿತಿಯ ಸೌಜನ್ಯದ ರೀತಿಯನ್ನು ನೆನೆದಾಗಲೆಲ್ಲ ಇಬ್ಬರು ಸಾಹಿತಿಗಳ ನೆನಪಾಗುತ್ತದೆ. ಒಬ್ಬರು ಸಾಲಿ. ಇನ್ನೊಬ್ಬರು ಮಾಸ್ತಿ. ಇಬ್ಬರೂ ಹೃದಯ ಸಂಪನ್ನತೆಯ ಅಮೃತ. ಧಾರವಾಡದಲ್ಲಿ ವಿದ್ಯಾರ್ಥಿಯಾಗಿದ್ದಾಗ, ಕೆಲವಾರು ತಿಂಗಳು ಪ್ರಸಿದ್ಧ ಕವಿ, ಸಾಹಿತಿ ಶ್ರೀ ಸಾಲಿ ರಾಮಚಂದ್ರರಾಯರ ಮನೆಯ ಮುಂದಿನ ಖೋಲಿಯಲ್ಲಿದ್ದೆ. ಒಂದು ರಾತ್ರಿ, ಹರಟೆಯಲ್ಲಿ ನಿರತನಾದೆ, ಮಾತು ಮನೆ ಕೆಡಿಸಿತೋ ಇಲ್ಲವೋ, ಊಟ ತಪ್ಪಿಸಿತು. ಅದನ್ನು ಲೆಕ್ಕಿಸದೆ ಬಂದಾಗ, ರಾಯರೇ ಬಾಗಿಲು ತೆಗೆದರು. ಸಾಂಪ್ರದಾಯಿಕವಾದ ಮಾತೆಂದು 'ಊಟ ಆಯಿತೇ' ಎಂದು ಕೇಳಿದರು. ಹಿರಿಯರಿಗೆ ಸುಳ್ಳು ಹೇಳಲು ಬಾರದು. 'ಹಸಿವಿರಲಿಲ್ಲ, ಹಾಗೇ ಬಂದೆ' ಎಂದೆ. 'ಛೀ ಹಾಗುಂಟೇ, ರಾತ್ರಿ ಬರೀ ಹೊಟ್ಟೆಯಲ್ಲಿರಬಾರದು' ಎಂದು ಎಷ್ಟು ಪ್ರತಿಭಟಿಸಿದರೂ ಕೇಳದೆ ಒಳಗಿನಿಂದ ಒಂದು

ಲೋಟ ಹಾಲು ಬಿಸಿ ಮಾಡಿ ತಂದರು. ಅವರಿಗೆ ಬೆಳಗ್ಗೆಗೆ ಉಪಯೋಗವಾಗುತ್ತಿದ್ದ ಹಾಲನ್ನು ನಾನು ಕಸಿದೆ ಎನಿಸಿತು, ಅದೇ ಕಾಲಕ್ಕೆ ಅವರ ಪ್ರೀತಿ ನನ್ನನ್ನು ತಟ್ಟಿತು. ಹದಿಮೂರು ವರ್ಷಗಳ ನಂತರ ಉದ್ದವಾದ ಪತ್ರದೊಡನೆ ನನ್ನ ಮದುವೆಯ ಪತ್ರಿಕೆ ಕಳಿಸಿದೆ. ಕೆಲವು ಕಾಲದ ನಂತರ ಸ್ನೇಹಿತರು ಪತ್ರದಲ್ಲಿ ತಿಳಿಸಿದರು. 'ನಿನ್ನನ್ನು ಹುಡುಕಿ ವಯೋವೃದ್ಧರು ಎರಡು ಮೈಲು ಆಚೆಯ ವಿಶ್ವವಿದ್ಯಾನಿಲಯಕ್ಕೆ ಬಂದರು, ಪರಿಚಯ ಹೇಳಿ, ಅವರ ನೆನಪಾಗಲೊಲ್ಲದು, ಅವರ ಫೋಟೋ ಇದ್ದರೆ ನೋಡೋಣ' ಎಂದರಂತೆ. ಆಮೇಲೆ ಐದು ವರ್ಷಗಳಲ್ಲಿ ಧಾರವಾಡಕ್ಕೆ ಹೋಗುವ ಅವಕಾಶ ದೊರಕಿತು. ರಾಯರು ಆಗ ಬಹಳ ಹಣ್ಣಾಗಿದ್ದರು. ಸುಮಾರು ಎರಡು ಗಂಟೆಯ ಮಾತು, ಪ್ರೀತಿಯ ಅಮೃತವೇ– ಧ್ವನಿ ಕ್ಷೀಣವಾದಾಗ ಇನ್ನೂ ಆಯಾಸ ಬೇಡವೆಂದು ಎದ್ದೆವು. ಆ ಮಧ್ಯೆ ಮಗಳನ್ನು ಕರೆದು 'ನೋಡು ನನ್ನ ಸ್ನೇಹಿತರು ಎಷ್ಟು ವರ್ಷಗಳ ಮೇಲೆ ಬಂದಿದ್ದಾರೆ. ಇವತ್ತು ನಾನು ಅವರೊಡನೆ ಚಾ ಕುಡಿಯಬೇಕು' ಎಂದು ಚಹಾ ತರಿಸಿದರು. 'ನೋಡಿ, ಇವತ್ತು ಬೆಳಗಿನಿಂದಲೂ ನನಗೆ ಏನೋ ಉಲ್ಲಾಸ, ಕಾರಣ ತಿಳಿದಿರಲಿಲ್ಲ, ನೀವು ಈಗ ಬಂದಿರಿ, ಅದಕ್ಕೇ ಇರಬೇಕು.' ಎಂತಹ ಮಧುರ ಸ್ನೇಹ, ಮೃದು ಮನಸ್ಸು, ಪಕ್ವವಾದ ಹೃದಯ.

ಶ್ರೀ ಸಾಲಿ ಅವರ ಜೀವನವೆಲ್ಲಾ ನಿರಾಶೆಯೇ ಎನಿಸಿದ್ದನ್ನು ಅವರು ಮಾಸ್ತಿಯವರಿಗೆ ಹೇಳಿದರಂತೆ. ಮಾಸ್ತಿಯವರು 'ಹಾಗಲ್ಲ, ಯಾರು ಎಷ್ಟು ಕೆಳಗೆ ಬಿದ್ದೆವೆಂದರೂ ಕೆಳಗೆ ಅವನ ಹಸ್ತವೇ ಇರುತ್ತೆ, ಮೇಲೆತ್ತಲು' ಎಂದರಂತೆ. ಅವತ್ತಿನಿಂದ ಅವರ ನಿರಾಶೆ ಕಡಿಮೆಯಾಯಿತು. ಸ್ವಲ್ಪ ಸಮಾಧಾನವಾಯಿತು ಎಂದು ಅವರು ಒಮ್ಮೆ ಹೇಳಿದರು. ಅದು ಮಾಸ್ತಿಯವರ ಹಿರಿಮೆ, ಅವರಂತೆ ಇದ್ದವರಿಗೆ ನೀಡುವ ಸಾಂತ್ವನ, ಧೈರ್ಯ. ಮಾಸ್ತಿಯವರಲ್ಲಿ ಈ ವಿಷಯ ಹೇಳಿದಾಗ ಅವರು 'ಇದು ನ್ನನ ಮಾತಲ್ಲ, ಬೈಬಲ್‌ನಲ್ಲಿ ಬಂದ ಆಶ್ವಾಸನೆ' ಎಂದರು. ಅಂತರಂಗದ ಪ್ರೀತಿ ಇದ್ದವರು ಆಡುವ ಮಾತು ತೋರುವ ಆತ್ಮೀಯತೆ ಸೌಜನ್ಯ ಎಂಬುದು ಹೃದಯದಲ್ಲಿ ಅಡಗಿದ ಸಂಸ್ಕೃತಿ ಕೇವಲ ಹೊರಗೆ ತೋರ್ಪಡಿಸುವ ಪ್ರದರ್ಶನ ಗುಣವಲ್ಲ ಎಂಬುದನ್ನು ಸಾಲಿ ಮತ್ತು ಮಾಸ್ತಿ ಬದುಕಿನಲ್ಲಿ ಸಾಬೀತುಗೊಳಿಸಿದವರು ಎಂದು ನನಗೆ ಅನ್ನಿಸಿದೆ.

ಹೀಗೆ ನನ್ನ ಬಾಳಿನಲ್ಲಿ ಸೌಜನ್ಯ ಪಂಚಪರಮೇಶ್ವರರಂತೆ. ಇಬ್ಬರು ಜಿಲ್ಲಾಧಿಕಾರಿಗಳು ಒಬ್ಬ ನಿರ್ದೇಶಕರು ತಾಯಿ ತಂದೆಯು ಬದುಕಿನಲ್ಲಿ ನೆನೆದಾಗಲೆಲ್ಲ ಸ್ಫೂರ್ತಿ ಕೊಡುವ ಮಾನವೀಯತೆ ಕಾರುಣ್ಯ, ಪ್ರೀತಿ, ಸ್ನೇಹಪರತೆ ತ್ಯಾಗಗಳನ್ನು ನೆನಪಿಸುವ ಕಾರಂಜಿಗಳಾಗಿದ್ದಾರೆ.

❍

ನನ್ನ ವೃತ್ತಿಯಲ್ಲಿ ಸೌಜನ್ಯದ ಸನ್ನಿವೇಶಗಳು

–ಶ್ರೀನಿವಾಸಮೂರ್ತಿ

ಎಲ್ಲಾರು ಮಾಡುವುದು ಹೊಟ್ಟೆಗಾಗಿ ಗೇಣು ಬಟ್ಟೆಗಾಗಿ ಎಂಬ ಕನಕದಾಸರ ಮಾತು ಎಲ್ಲಾರಿಗೂ ತಿಳಿದ ಸಂಗತಿಯೇ ಆಗಿದೆ. ಗೇಣುಬಟ್ಟೆಗಿಲ್ಲವಾದರೂ ಹೊಟ್ಟೆಪಾಡಿಗೆ ಮನುಷ್ಯರಷ್ಟೇ ಅಲ್ಲ, ಪ್ರಾಣಿಗಳೂ ಶ್ರಮಿಸುತ್ತವೆ. ಮನುಷ್ಯನಿಗೆ ಹೊಟ್ಟೆಯಷ್ಟೇ ಇಲ್ಲ. ಹೊಟ್ಟೆಯ ಜೊತೆಗೆ ತಲೆ (ಬುದ್ಧಿ) ಇದೆ. ಹೃದಯ (ಮಾನವೀಯತೆ, ದಯೆ, ಕಾರುಣ್ಯ) ಇದೆ. ಆದಕಾರಣ ನಾಲ್ಕು ಪ್ರಾಣಿಗಳಿಗಿಂತ ಈ ಎರಡು ಕಾಲು ಪ್ರಾಣಿ ಭಿನ್ನವಾಗಿದ್ದಾನೆ. ಹೊಟ್ಟೆಪಾಡಿಗೆ ಪ್ರಾಣಿಗಳು ಬೇಟೆ ಆಡುತ್ತದೆ. ಆಹಾರ ಅನ್ವೇಷಣೆ ಮಾಡುತ್ತದೆ. ದೂರ ದೂರ ಸಂಚರಿಸುತ್ತದೆ. ಆದರೆ ಸಮಾಜಜೀವಿ ಮಾನವ ಉದ್ಯೋಗ ಮಾಡುತ್ತಾನೆ. ಸಮಾಜದಲ್ಲಿ ಜನರ ನಡುವೆ ಬದುಕಿಗೆ ಬೇಕಾದ ಅವಶ್ಯಕತೆಗಳನ್ನು ಪೂರೈಸುವಲ್ಲಿ ಶಿಕ್ಷಣ ಅನುಭವ ಸಹಾಯದಿಂದ ನೆರವಾಗಿ ಅದಕ್ಕೆ ಪ್ರತಿಫಲವಾಗಿ ಬಂದ ಹಣದಿಂದ ಬದುಕು ಸಾಗಿಸುತ್ತಾನೆ. ಉದ್ಯೋಗಿಗಳಲ್ಲಿ ಖಾಯಂ ಉದ್ಯೋಗಿಗಳು ಹಾಲಿ ಉದ್ಯೋಗಿಗಳು ಎರಡು ಬಗೆ ಇರುತ್ತಾರೆ. ಖಾಯಂ ಉದ್ಯೋಗಿಗಳು ಇಡೀ ಬದುಕಿನಲ್ಲಿ ಒಂದೇ ವೃತ್ತಿ ಮಾಡುತ್ತಾರೆ. ಈ ವೃತ್ತಿಯಲ್ಲಿ ಹತ್ತಾರು ಮಾರ್ಗಗಳ ಅನುಭವದಲ್ಲಿ ಕಂಡುಬರುವ ಅರಿವು ಹಾಲಿ ಉದ್ಯೋಗಿಗಳಲ್ಲಿ ಇರುವುದಿಲ್ಲ. ಆಗಾಗ ವೃತ್ತಿ ಬದಲಿಸುವ ಸಂಚಾರಿ ಹಾಗೂ ಅಲೆಮಾರಿ ಜನರಿಗೂ ದೀರ್ಘಾನುಭವ ಇರುವುದಿಲ್ಲ. ನನ್ನ ವೃತ್ತಿ ಖಾಯಂ ವೃತ್ತಿ ಬ್ಯಾಂಕ್ ಉದ್ಯೋಗಿ ನಾನು. ಸಾರ್ವಜನಿಕರ ಸಂದರ್ಶನ, ದಿನ ಬೆಳಗಾದರೆ ಬರುವ ಉದ್ಯೋಗದಲ್ಲಿರುವ ನಾನು ನನ್ನ ಬ್ಯಾಂಕಿನಲ್ಲಿ ಸೌಜನ್ಯ ಎಂದು ತತ್ವದಲ್ಲಿ ದಿನನಿತ್ಯದ ಅನುಭವವಾಗಿದೆ.

ಸಾಮಾನ್ಯವಾಗಿ ಬ್ಯಾಂಕುಗಳಲ್ಲಿ ಅಧಿಕಾರಿವರ್ಗ ಸಿಬ್ಬಂದಿವರ್ಗ ಎಂದು ಎರಡು ಬಗೆ ಇರುತ್ತದೆ. ಅಧಿಕಾರಿವರ್ಗಕ್ಕೂ ಸಾರ್ವಜನಿಕ ನಂಟು ಇರುತ್ತದೆ. ಸಿಬ್ಬಂದಿವರ್ಗಕ್ಕೂ ಇರುತ್ತದೆ. ಆದರೆ ಸಿಬ್ಬಂದಿವರ್ಗಕ್ಕೆ ಇರುವಷ್ಟು ಸಾರ್ವಜನಿಕ ನಂಟು ಅಧಿಕಾರಿ ವರ್ಗಕ್ಕೆ ಇರುವುದಿಲ್ಲ. ಎಲ್ಲ ಗ್ರಾಹಕರೂ ಅಧಿಕಾರಿಗಳ ಬಳಿಗೆ ಹೋಗುವುದಿಲ್ಲ. ಎಲ್ಲ ಸಂದರ್ಭಗಳಲ್ಲೂ ಹೋಗುವುದಿಲ್ಲ. ಹೀಗಾಗಿ ಸಿಬ್ಬಂದಿವರ್ಗಕ್ಕೆ ಗ್ರಾಹಕರ ನಂಟು ಹೆಚ್ಚು ಮತ್ತು ನಿಕಟ.

ಸಾಮಾನ್ಯವಾಗಿ ಗ್ರಾಹಕರಲ್ಲಿ ೨ ಬಗೆ ಇರುತ್ತಾರೆ. ಹೊಸ ಗ್ರಾಹಕರು ಮತ್ತು ಹಳೆಯ ಗ್ರಾಹಕರು. ಹೊಸ ಗ್ರಾಹಕರು ಎಂದರೆ ಹೊಸದಾಗಿ ಖಾತೆ ತೆರೆಯುವವರು, ಸಾಲಕ್ಕಾಗಿ ಅರ್ಜಿ ಹಾಕಿಕೊಂಡವರು, ಮಾಹಿತಿ ಕೇಳುವವರು, ಹಣ ಇಡಲು ಬರುವವರು ಇತ್ಯಾದಿ.

ಸಾಮಾನ್ಯವಾಗಿ ಸಂಪರ್ಕಾಧಿಕಾರಿ ಇರುವಲ್ಲಿ ಆತ ನಯ ವಿನಯ ಸೌಜನ್ಯಗಳಿಂದ ಹೊಸಬರನ್ನು ವಿಚಾರಿಸಿಕೊಂಡು ಮಾಹಿತಿ ಕೊಡಬೇಕಾಗುತ್ತದೆ. ಸಾಮಾನ್ಯವಾಗಿ ಗ್ರಾಹಕರ ಪರಿಚಯ ಆತನಿಗಿರುವುದಿಲ್ಲ ಆದರೆ ಕೌಂಟರುಗಳಲ್ಲಿ ಇರುವ ಸಿಬ್ಬಂದಿವರ್ಗಕ್ಕೆ ಗ್ರಾಹಕರು ಹಳಬರಾಗಿರುತ್ತಾರೆ. ಅವರ ಸ್ವಭಾವ ಪರಿಚಯ ಸಿಬ್ಬಂದಿಗೆ ತಿಳಿದಿರುತ್ತದೆ. ಈ ಹಿನ್ನೆಲೆಯಲ್ಲಿ ಸೌಜನ್ಯ ಗುಣವನ್ನು ಹೇಗೆ ಜನಗಳಿಗೆ ತೋರಬೇಕು ಎಂಬುದನ್ನು ಗಮನಿಸುವುದು ಅಗತ್ಯ.

ಮೊದಲು ಕೈಬರಹದಲ್ಲಿ ಹೆಚ್ಚು ಕೆಲಸ ನಡೆಯುತ್ತಿತ್ತು. ಈಗ ಕಂಪ್ಯೂಟರುಗಳು ಸಾಕಷ್ಟು ಕೈಕೆಲಸವನ್ನು ಕಡಿಮೆ ಮಾಡಿದೆ. ವೇಗವಾಗಿ ಕಾರ್ಯವಾಗುತ್ತದೆ. ಆದರೆ ಈ ಮಾತು ಪೂರಾ ನಿಜವಲ್ಲ ವಿದ್ಯುತ್ ಕೊರತೆ, ಸರ್ವರ್‌ಡೌನ್, ಯಂತ್ರ ರಿಪೇರಿ ನಿರ್ವಹಣೆಯ ಪೂರ್ಣ ಪರಿಣಿತಿ ಇಲ್ಲದಿರುವುದು, ಇತರ ಅನೇಕ ತಾಂತ್ರಿಕ ಕಾರಣಗಳಿಂದ ಎಷ್ಟೋ ವೇಳೆ ಕೈಬರಹ ವಿಧಾನವೇ ಚೆನ್ನಿತ್ತು ಎಂದು ಗ್ರಾಹಕರಿಗೆ ಅನ್ನಿಸಿದ್ದುಂಟು. ಇಂಥ ಸಂದರ್ಭಗಳಲ್ಲಿ ಸಿಬ್ಬಂದಿ ಅವರು ಅಸಹಾಯಕರಾದರೂ ಗ್ರಾಹಕರಿಗೆ ಪರಿಸ್ಥಿತಿಯನ್ನು ಮನವರಿಕೆ ಮಾಡಿಕೊಡುವ ಮನೋಭಾವ ಸೌಜನ್ಯ ಇರಬೇಕು ಅನೇಕ ಸಂದರ್ಭಗಳಲ್ಲಿ ಕೆಲವರಲ್ಲಿ ಇರುವುದಿಲ್ಲ. ಕಂಪ್ಯೂಟರ್ ಕೆಟ್ಟಿದೆ ನಾವೇನು ಮಾಡೋಣ. ನಾಳೆ ಬನ್ನಿ ಎಂದು ಯಾವಾಗ ಸರಿಹೋಗುತ್ತೋ ನಮಗೇನು ಗೊತ್ತು. ಎಂಬಂಥ ಉತ್ತರಗಳನ್ನು ಕೊಡದೆ ಸಾರ್ ಸ್ವಲ್ಪ ಯಂತ್ರದಲ್ಲಿ ದೋಷ ಉಂಟಾಗಿದೆ. ಸ್ವಲ್ಪ ತಾಳಿ ಕಾಯಿರಿ, ನೋಡೋಣ ಎಂದು ಶಾಂತವಾಗಿ ಹೇಳಿ ನಿಮಗೆ ಬೇರೆ ಕೆಲಸವಿದ್ದರೆ ಮಾಡಿಕೊಂಡು ಬನ್ನಿ, ಎಂತಲೋ ಅರ್ಜೆಂಟ್ ಇಲ್ಲದಿದ್ದರೆ ನಾಳೆ ಬನ್ನಿ ಮಾಡಿಟ್ಟಿರುತ್ತೇನೆ ಇತ್ಯಾದಿ ವಿನಯ ರೀತಿಯಲ್ಲಿ ತಿಳಿಸುವುದು ಅಗತ್ಯ. ಇದು ಸೌಜನ್ಯದ ಲಕ್ಷಣ. ತಾವು ಮನೆಗೆ ಹೋಗುವ ದಾರಿಯಲ್ಲಿ ವೃದ್ಧರ, ಅನಾರೋಗ್ಯ ವ್ಯಕ್ತಿಗಳ ಮನೆ ಇದ್ದರೆ ಅವರಿಗೆ ತಾವೇ ತಲುಪಿಸುವುದು ಸೌಜನ್ಯದ ಮಾನವೀಯತೆಯ ಪರಮಾವಧಿ ಲಕ್ಷಣ.

ಗ್ರಾಹಕರು ಬಂದಾಗ, ಸಾಕಷ್ಟು ಜನ ಹೆಚ್ಚಾಗಿದ್ದಾಗ ಸುಖಾಸನಗಳ ವ್ಯವಸ್ಥೆ ಮಾಡಿರಬೇಕು ಅವರು ಕುಳಿತು ಕಾಯಲು ಸಾಮಾನ್ಯವಾಗಿ ಎಲ್ಲ ಕಡೆ ಗ್ರಾಹಕರಿಗೆ ಆಸನಗಳಿರುತ್ತವೆ. ಆದರೆ ಅವು ಕೆಲವು ಕಡೆ ಸಾಕಷ್ಟು ಸಂಖ್ಯೆಯಲ್ಲಿರುವುದಿಲ್ಲ. ಆಗ ಕಿರಿಯರು ದೃಢಕಾಯರು ವೃದ್ಧರಿಗೆ ಮಹಿಳೆಯರಿಗೆ ಜಾಗ ಕೊಡಬೇಕು. ಸಿಬ್ಬಂದಿ ಅವರು

ಕ್ಯೂ ನಿಯಮವನ್ನು ಕಟ್ಟುನಿಟ್ಟಾಗಿ ಪಾಲಿಸಬೇಕಿಲ್ಲ ಗ್ರಾಹಕರಲ್ಲಿ ಬಿನ್ನವಿಸಿಕೊಂಡು, ನೋಡಿ ಅವರಿಗೆ ಬಹಳ ಹೊತ್ತು ನಿಲ್ಲಲಾಗದು, ಅವರಿಗೆ ಕೊಟ್ಟಿದ್ದೇವೆ ನಿಮಗೆ ಆಮೇಲೆ ಕೊಡ್ತೀವಿ ಆಗಬಹುದೇ ಎಂದು ಕೇಳಬಹುದು. ಅಂದರೆ ಕ್ಯೂನಲ್ಲಿ ಯಾರಿದ್ದಾರೆ ಎಂಬುದನ್ನು ಸಿಬ್ಬಂದಿವರ್ಗ ಗಮನಿಸಬೇಕು. ಅನೇಕ ಕಡೆ ಕ್ಯೂ ಕಡೆ ಗಮನಿಸದೆ ತಮ್ಮ ಕೆಲಸ ತಾವು ಮಾಡುವವರನ್ನು ನೋಡುತ್ತೇವೆ. ಸಾಲಿನಲ್ಲಿರುವ ಗ್ರಾಹಕರಲ್ಲೆಲ್ಲಾ ಸೌಜನ್ಯವಿರಬೇಕು ವಯೋವೃದ್ಧರು, ವಯಸ್ಸಾದ ಮಹಿಳೆಯರು ಬಂದಾಗ ನೀವು ಮುಂದೆ ಹೋಗಿ ಎನ್ನುವ ಸೌಜನ್ಯ ತೋರಿಸಬೇಕು. ಇದು ನಮ್ಮ ಸಂಸ್ಕೃತಿ. ಕ್ಯೂ ಕಟ್ಟುನಿಟ್ಟಾಗಿ ಪಾಲಿಸುವುದು ಪಾಶ್ಚಾತ್ಯ ಸಂಸ್ಕೃತಿ.

ಸೌಜನ್ಯ ಎಂಬುದು ಕಂಡವರ ಸಮಸ್ಯೆಯನ್ನು ಆದಷ್ಟು ಬೇಗ ಪರಿಹರಿಸುವುದೂ ಆಗಿರುತ್ತದೆ. ಅನೇಕ ಕಡೆ ಆಯಾಸ ಮಾಡಿಕೊಳ್ಳದೆ ನಿಧಾನವಾಗಿ ಆರಾಮವಾಗಿ ಕೆಲಸ ಮಾಡುವವರು ಇರುತ್ತಾರೆ. ಇದರಿಂದ ಗ್ರಾಹಕರಿಗೆ ಬೇಸರವಾಗುತ್ತದೆ. ಬಹಳ ಹೊತ್ತು ಕಾಯಬೇಕಾಗುತ್ತದೆ. ಬೇಗಬೇಗನೆ ಆದರೆ ತಪ್ಪಿಲ್ಲದೆ ಕೆಲಸ ಮಾಡುವುದನ್ನು ಸಿಬ್ಬಂದಿ ಅವರು ಕಲಿಯಬೇಕು ಒಂದು ಗಂಟೆಗೆ ಇಷ್ಟೇ ಕೆಲಸ ಮಾಡಬೇಕು. ಇಷ್ಟು ಜನರಿಗೆ ಹಣ ಕೊಡಬೇಕು ಇಷ್ಟು ಪಾಸು ಬುಕ್‌ಗಳನ್ನು ಎಂಟ್ರಿ ಮಾಡಬೇಕು ಎಂಬ ನಿಯಮ ಮಾಡಲು ಸಾಧ್ಯವಿಲ್ಲ ನಿಜ. ಆದರೆ ಸಂಬಂಧಪಟ್ಟ ವ್ಯಕ್ತಿ ಶ್ರದ್ಧೆಯಿಂದ ಕೆಲಸ ಮಾಡಿದರೆ ಹೆಚ್ಚು ಕೆಲಸ ಮಾಡಬಲ್ಲ. ಗ್ರಾಹಕರ ವಿಳಂಬವನ್ನು ಕುಗ್ಗಿಸಬಲ್ಲ.

ನಾನು ಕಂಡಂತೆ ಒಂದು ಶಾಖೆಯಲ್ಲಿ ಜನ ಅಯ್ಯೋ ನಮ್ಮ ಬ್ರಾಂಚಿನಲ್ಲಿ ಆ ಜಡಭರತ ಇದ್ದಾನೆ. ಇಬ್ಬರಿಗೆ ಹಣ ಕೊಡಬೇಕಾದರೆ ೧ ಗಂಟೆ ಮಾಡುತ್ತಾನೆ. ಮೊದಲನೇ ವಾರ ಬ್ಯಾಂಕ್ ಕಡೆ ತಲೆ ಇಡುವ ಹಾಗೇ ಇಲ್ಲ. ಸಂಬಳ ೧ನೇ ತಾರೀಖು ಬಂದರೂ ೧ನೇ ತಾರೀಖು ಸಿಗೊಲ್ಲ ಎಂದರು ಒಬ್ಬ ವೃದ್ಧರು. ಕೆಲವು ಕಾಲಾನಂತರ ಇನ್ನೊಬ್ಬ ಯುವಕ ಅಲ್ಲಿಗೆ ವರ್ಗವಾಗಿ ಬಂದ. ಆತ ಆ ಶಾಖೆಯಲ್ಲಿ ಹೆಚ್ಚು ಪಿಂಚಣಿದಾರರಿದ್ದುದನ್ನು ಕಂಡ. ಚಕಚಕನೆ ಕೆಲಸ ಮಾಡಿ ಕಾಫೀ ವಿರಾಮವೂ ಇಲ್ಲದೆ ಸ್ಪರ್ಧೆಯಲ್ಲಿ ಭಾಗವಹಿಸಿದವನಂತೆ ಘಂಟೆಗೆ ೬ ಜನಕ್ಕೆ ಹಣ ಸಂದಾಯವಾಗುತ್ತಿದ್ದ ಕಡೆ, ೧೨ ಜನಕ್ಕೆ ಸಂದಾಯ ಮಾಡಿದ ಆತನ ಕಾರ್ಯವೈಖರಿ ಕಂಡು ಗ್ರಾಹಕರಿಗೆ ಬಹಳ ಸಂತೋಷವಾಗಿ ಮ್ಯಾನೇಜರ್ ಬಳಿ ಬಹಳ ಒಳ್ಳೆಯ ವ್ಯಕ್ತಿ ವರ್ಗವಾಗಿ ಬಂದಿದ್ದಾನೆ ನಮಗೆಲ್ಲಾ ಸಂತೋಷವಾಗಿದೆ ಎಂದರು. ಆಕಸ್ಮಿಕ ಘಟನೆಯೊಂದರಲ್ಲಿ ಆತ ಗಾಯಗೊಂಡು ಕೆಲವು ದಿನ ಕೆಲಸಕ್ಕೆ ಬರಲಾಗಲಿಲ್ಲ. ಗ್ರಾಹಕರು ಏಕೆಂದು ವಿಚಾರ ತಿಳಿದಾಗ, ಅವರಲ್ಲಿ ಅನೇಕ ಹಿರಿಯರು ಆತನ ಮನೆಗೆ ಹೋಗಿ ಬೇಗ ಗುಣಮುಖರಾಗಿ ಎಂದು ಹಾರೈಸಿದರು. ಸೌಜನ್ಯ ಎಂಬುದು

ಮಾನವೀಯತೆಯ ಸಾಕಾರರೂಪ ಎಂಬುದಕ್ಕೆ ಇದೊಂದು ನಿದರ್ಶನ. ಪ್ರಾಮಾಣಿಕವಾಗಿ ವಿನಯದಿಂದ ಶ್ರದ್ಧೆಯಿಂದ ದುಡಿಯುವುದೇ ಸೌಜನ್ಯ ಎಂದರೆ ತಪ್ಪಾಗದು.

ಸೌಜನ್ಯ ಎಂಬುದು ಇಮ್ಮುಖವಾದುದು ಒಮ್ಮುಖವಲ್ಲ. ಒಂದು ಕೈ ಚಪ್ಪಾಳೆ ಅಲ್ಲ ಎರಡು ಕೈ ಸೇರಿದರೆ ಚಪ್ಪಾಳೆ. ಗ್ರಾಹಕರಲ್ಲೂ ಸೌಜನ್ಯ ಇರಬೇಕು. ನಮ್ಮ ಶಾಖೆಗೆ ಒಬ್ಬ ವೃದ್ಧರು ಬರುತ್ತಿದ್ದರು ಅವರು ನೋಡಿಯಪ್ಪಾ ಬಹಳ ದಿನದಿಂದ ಊರಲ್ಲಿ ಇರಲಿಲ್ಲ ಅಮೆರಿಕಾಕ್ಕೆ ಹೋಗಿದ್ದೆ. ಎಂಟ್ರಿ ತುಂಬ ಇದೆ. ನಾಳೆ ಬರ್‍ತೀನಿ ಮಾಡಿಟ್ಟಿರಿ. ಜನ ತುಂಬ ಇದ್ದಾರೆ ಅವರಿಗೆ ತೊಂದರೆ ಆಗಬಾರದು ಎಂದು ಹೇಳಿ ಹೋದರು. ಇನ್ನೊಬ್ಬ ಗ್ರಾಹಕರು ಮುಂದೆ ನಿಂತವರು ಮಗುವನ್ನು ಎತ್ತಿಕೊಂಡು ನಿಂತಿದ್ದ ತಾಯಿ ಬಳಿ ಹೋಗಿ ನೀವು ಕುಳಿತುಕೊಳ್ಳಿ ನಾನು ಹಣ ತಂದುಕೊಡುತ್ತೇನೆ ಮಗುವನ್ನು ಸುಧಾರಿಸಿ ಎಂದು ಕ್ಯೂನಲ್ಲಿ ನಿಂತು ಹಣವನ್ನು ಆಕೆಗೆ ಕೊಟ್ಟರು. ಇಬ್ಬರೂ ಇರುತ್ತಾರೆ. ಕ್ಯೂ ಕಾಣಿಸಲಿಲ್ಲವೇ ಹಿಂದೆ ಬನ್ನಿ ಅಂತ ವೃದ್ಧರನ್ನು ಗದರಿಸೋ ಯುವಕರೂ ಇದ್ದಾರೆ. ಸಿಬ್ಬಂದಿಯವರು ತಮ್ಮ ಕರ್ತವ್ಯ ನಿರ್ವಹಿಸುತ್ತಾರೆ ನಿಜ. ಆದರೆ ಎಷ್ಟೋ ವೇಳೆ ಅಧಿಕಾರಿಗಳು ಸುಮ್ಮನೆ ಕುಳಿತಿರುತ್ತಾರೆ ಆಗ ಸಿಬ್ಬಂದಿ ಬಳಿ ಅಧಿಕ ಗ್ರಾಹಕರು ಇರುತ್ತಾರೆ. ಅಂಥ ಸಂದರ್ಭದಲ್ಲಿ ತಾನು ಅಧಿಕಾರಿ ತನ್ನ ಕೆಲಸ ಅದಲ್ಲ ಎಂದು ತಿಳಿಯದೆ ಸಿಬ್ಬಂದಿಗೆ ಸಹಕರಿಸಬೇಕು ಕೆಲಸದಲ್ಲಿ ಪಾಲ್ಗೊಳ್ಳಬೇಕು. ಎಲ್ಲರೂ ಹಾಗೆ ಮಾಡುವುದಿಲ್ಲ. ಅಂಚೆಕಛೇರಿ, ಬ್ಯಾಂಕ್‌ನಂಥ ಸಾರ್ವಜನಿಕ ಸಂಸ್ಥೆಗಳಲ್ಲಿ ಸೌಜನ್ಯಗುಣ ಒಬ್ಬರಲ್ಲಿ ಕಾಣಿಸಿಕೊಂಡರೆ ಸಾರ್ಥಕವಾಗುವುದಿಲ್ಲ. ಪರಸ್ಪರ ಎಲ್ಲರಲ್ಲೂ ಕಾಣಬೇಕು. ಕಚೇರಿ ಬಾಗಿಲು ತೆಗೆಯಲು ತಡ ಮಾಡಿದರೆ ಕಸ ಗುಡಿಸುವವನು ತಡ ಮಾಡಿದರೆ ಕೌಂಟರಿಗೆ ವ್ಯಕ್ತಿ ಬರಲು ತಡ ಮಾಡಿದರೆ ಯಾರೊಬ್ಬರೂ ತಡ ಮಾಡಿದರೆ ಕೆಲಸ ವಿಳಂಬವಾಗುತ್ತದೆ. ಗ್ರಾಹಕರು ಕಾಯುವಂತಾಗುತ್ತದೆ ಆದ್ದರಿಂದ ಸಕಾಲಕ್ಕೆ ಎಲ್ಲರೂ ಪಾಲ್ಗೊಳ್ಳಬೇಕು. ಕೆಲವರು ಮಾತ್ರ ಸಕಾಲಕ್ಕೆ ಬಂದರೆ ಕೆಲಸವಾಗುವುದು. ಸಕಾಲಕ್ಕೆ ಕೆಲಸ ಮಾಡುವುದು ಸೌಜನ್ಯದ ಲಕ್ಷಣಗಳಲ್ಲಿ ಒಂದು. ಸದುದ್ದೇಶದ ಪ್ರಯತ್ನ ಎಂಬುದಕ್ಕೆ ಒಂದು ಪ್ರಸಂಗ ನೆನಪಾಗುತ್ತದೆ. ಒಂದು ಮಣ್ಣಿನ ಹಣತೆ ಕತ್ತಲಲ್ಲಿ ಬೆಳಗಿದಾಗ ಹೇಳಿತಂತೆ ನಾನಿಲ್ಲದಿದ್ದರೆ ಕತ್ತಲು ಹೋಗುವುದಿಲ್ಲ ನಾನು ಲೋಕೋಪಕಾರಿ ಎಂದಾಗ ಅಲ್ಲೇ ಇದ್ದ ಇನ್ನೊಂದು ಹಣತೆ ಹೇಳಿತು. ನೀನು ಹತ್ತರಲ್ಲಿ ಒಂದು ಪರಸೆ ಒಳಗೆ ಗೋವಿಂದ ಎಂಬ ಗಾದೆ ಹಾಗೆ ಎಂದಿತು. ಅದು ಹೇಗೆ ನಾನೇ ಅಲ್ಲವೇ ಬೆಳಕಾಗಿರುವುದು ಎಂದಿತು. ಆ ಹಣತೆ, ಅದಕ್ಕೆ ಈ ಹಣತೆ ಹೇಳಿತು. ''ನೋಡು ಬತ್ತಿ ಇಲ್ಲದಿದ್ದರೆ, ಬತ್ತಿಗೆ ಎಣ್ಣೆ ಇಲ್ಲದಿದ್ದರೆ, ಎಣ್ಣೆಯನ್ನು ಗಾಣಿಗ ತೆಗೆಯದಿದ್ದರೆ, ಗಾಣಿಗ ಎತ್ತಿಗೆ ಆಹಾರ ಕೊಡದಿದ್ದರೆ, ಕೆಲಸಗಾರ ಮಣ್ಣು ನೀರು ಬೆರಸಿ ಹಣತೆ ನಿನ್ನನ್ನು ಮಾಡದಿದ್ದರೆ ಒಬ್ಬರು ಬೆಂಕಿಕಡ್ಡಿ ಗೀರಿ

ಹಚ್ಚದಿದ್ದರೆ ನೀನೆಲ್ಲಿರುತ್ತಿದ್ದೆ ಎಂದು ಕೇಳಿದಂತೆ ಹಾಗೆಯೇ ಸಾರ್ವಜನಿಕ ಕ್ಷೇತ್ರಗಳಲ್ಲಿ ಕಾರ್ಯವಿಧಾನ. ಇವೆಲ್ಲದರಲ್ಲಿ ಹತ್ತಾರು ಕಡೆಯಿಂದ ಸೌಜನ್ಯ ಸದಾ ಕಾಲ ಸಹಾಯ ಬೇಕು.

ನಾಲ್ಕು ಕಂಭಗಳು ಸಮಾನ ಭಾರ ಹೊತ್ತರೆ ಛಾವಣಿ ನಿಲ್ಲುತ್ತದೆ. ಸಮಾನ ಭಾರ ಹೊರುವುದೇ ಸೌಜನ್ಯ. ಹತ್ತು ಜನ ಸಮಸಮವಾಗಿ ಸಹಕರಿಸಿ ನಾವೆಲ್ಲ ಒಂದು ಎಂದು ಕೆಲಸ ಮಾಡುವುದೇ ಸೌಜನ್ಯವೆಂಬ ಸದ್ಗುಣದ ಪ್ರದರ್ಶನವಾಗಿದೆ ಸೇವೆಯೆಂಬ ಪಲ್ಲಕ್ಕಿ ಹೊತ್ತಾಗ ನಾಲ್ವರಲ್ಲಿ ಯಾರೇ ಎಡವಿದರೂ ಪಲ್ಲಕ್ಕಿ ಮುಗ್ಗುರಿಸುತ್ತದೆ. ಗ್ರಾಹಕ ಅಧಿಕಾರಿ ಸಿಬ್ಬಂದಿ ಸೇವಕರೇ ಯಾರೇ ಸೌಜನ್ಯರಹಿತರಾದರೆ ಸಾರ್ವಜನಿಕರ ಸೇವೆ ಸಾರ್ಥಕ ಎಂದೂ ಸುಗಮವಾಗದು. ಜೀವನದಲ್ಲಿ ಹಣವೇ ಮುಖ್ಯವಲ್ಲ ಗುಣ ಮುಖ್ಯ ಏಕೆಂದರೆ ಠಾಗೂರ್ ಹೇಳಿದಂತೆ :

ದುಡ್ಡು ಬಟ್ಟೆಯಿಂದ ದೊಡ್ಡವರಾದೋರಿಲ್ಲ
ದೊಡ್ಡ ಗುಣದಿಂದ ದೊಡ್ಡವರಾದೋರೆಲ್ಲ
ಆ ದೊಡ್ಡ ಗುಣವೇ ಸೌಜನ್ಯವಾದರೆ ತಪ್ಪಿಲ್ಲ

○

ಸರ್ವಜ್ಞನ ವಚನಗಳಲ್ಲಿ ಸೌಜನ್ಯ

–ವೆಂಕಟರಮಣಯ್ಯ

ಸರ್ವಜ್ಞ ನಮ್ಮ ನಾಡಿನ ಜನಪದ ಕವಿ ತಮಿಳಿನಲ್ಲಿ ತಿರುವಳ್ಳುವರ್ ತೆಲುಗಿನಲ್ಲಿ ವೇಮನ ಹಿಂದಿಯಲ್ಲಿ ಕಬೀರ್ ಇದ್ದಂತೆ ನಾಡಿನ ಜನತೆಯ ಮೆಚ್ಚಿನ ಕವಿ. ಜನರ ನಾಲಿಗೆ ಮೇಲೆ ಕುಣಿದಾಡುವ ಕವಿ. ಸೌಜನ್ಯ ಎಂಬ ಗುಣಕ್ಕೆ ಆತನೇ ಸ್ವಯಂ ಸಾಕ್ಷಿ ಪುರುಷನಾಗಿದ್ದಾನೆ. ವಿನಯದ ಅವನ ಮಾತು ಸೌಜನ್ಯ ಗುಣಕ್ಕೆ ಹಿಡಿದ ಕನ್ನಡಿ ಆಗಿದೆ ಸರ್ವಜ್ಞ ಎಂದರೆ ಎಲ್ಲವನ್ನು ತಿಳಿದವನು. ಒಂದರ್ಥದಲ್ಲಿ ಭಗವಂತನೇ. ಆದರೆ ನಾನು ಸರ್ವಜ್ಞ ಅಲ್ಲ ನಾನೇನೂ ಕಲಿತವನಲ್ಲ ಎಲ್ಲರೂ ಸೇರಿ ನನ್ನನ್ನು ದೊಡ್ಡವನನ್ನಾಗಿ ಮಾಡಿದ್ದಾರೆ ಎನ್ನುತ್ತಾನೆ.

> ಸರ್ವಜ್ಞನೆಂಬುವನು ಗರ್ವದಿಂದಾದವನೆ
> ಸರ್ವರೊಳೊದೊಂದು ನುಡಿ ಕಲಿತು ವಿದ್ಯದ
> ಪರ್ವತವಾದ ಸರ್ವಜ್ಞ ॥ (೨೫೪)

ಎನ್ನುತ್ತಾನೆ.

ತಾನಾಡುವ ಪ್ರತಿಯೊಂದು ಮಾತನ್ನು ಸೌಜನ್ಯವಂತನು ವಿಚಾರ ಮಾಡಿ, ತೂಕ ಮಾಡಿ, ಚಿಂತನೆ ಮಾಡಿ ಮಾತಾಡುತ್ತಾನೆ. ಮಾತು ಆಡಿದರೆ ಹೋಯಿತು, ಮುತ್ತು ಒಡೆದರೆ ಹೋಯಿತು ಎಂಬ ಎಚ್ಚರ ಅವನಲ್ಲಿ ಇರುತ್ತದೆ ಮಾತು ಮುತ್ತು, ಮಾತೇ ಮೃತ್ಯು ಎಂಬುದನ್ನಾತ ಬಲ್ಲ. ಆದ್ದರಿಂದ ಆಡಬೇಕಾದ ಮಾತನ್ನು ಮೆಲ್ಲಗೆ ಮೃದುವಾಗಿ ಕೋಮಲವಾಗಿ ಆಡುತ್ತಾನೆ. ಹತ್ತು ಮುತ್ತು ಕಟ್ಟುವಡೆ ಒಂದು ಮುತ್ತು ಕಟ್ಟು ಎಂಬಂತೆ ಆಡುತ್ತಾನೆ. ಒಂದು ರೀತಿಯಲ್ಲಿ ತೂಕ ಮಾಡಿ ಮಾತಾಡುತ್ತಾನೆ. ಆದ್ದರಿಂದ ನಿಜವಾದ ಜ್ಞಾನಿ, ಮಾತು ಸೌಜನ್ಯಪೂರ್ಣ ಏಕೆಂದರೆ

> ಆರೈದು ನುಡಿವವನು ಆರೈದು ನಡೆವವನು
> ಆರೈದು ಶಯನವಡೆವವನು ಲೋಕಕ್ಕೆ
> ಆರಾಧ್ಯನಕ್ಕು ಸರ್ವಜ್ಞ ॥ (೭೬೮)

ಆರೈದು ಎಂದರೆ ವಿಚಾರ ಮಾಡಿ ಚಿಂತಿಸಿ ಮಾತಾಡದಿದ್ದರೆ ಅದರಿಂದ ಆಗುವ ಅನಾಹುತ ಅಷ್ಟಿಷ್ಟಲ್ಲ ಅರ್ಥವಿಲ್ಲದೆ ಅನವಶ್ಯಕವಾಗಿ ಮಾತಾಡಿದಾಗ ಕೇಳುವವನಿಗೆ ತಲೆ ಚಿಟ್ಟು ಹಿಡಿಯುತ್ತದೆ. ಬೇಸರದಿಂದ ದೂರ ಸರಿಯುತ್ತಾರೆ. ಅದರ ಬದಲು ರೀತಿ ನೀತಿ ತಿಳಿದು ಆಡಿದರೆ ಸಮಾಯಾ ಸವಾಲು ತಿಳಿದು ಮಾತನಾಡಿದಾಗ, ಯಾರೊಡನೆ ಯಾಕಾಗಿ ಮತಾಡುತ್ತಿದ್ದೇನೆ ಎಂದು ತಿಳಿದು ಮಾತಾಡಿದರೆ ಅದು ಘಮಿಘಮಿಸುವ ಹದವಾದ ಮಾವಿನ ಹಣ್ಣಿದ್ದಂತೆ, ರಸ ಒಸರುವ ಹಣ್ಣಿದ್ದಂತೆ ಎನ್ನುತ್ತಾನೆ ಸರ್ವಜ್ಞ.

ಹೊಲಬನರಿಯದ ಮಾತು ತಲೆಬೇನೆ ಹಿಡಿದಂತೆ
ಹೊಲಬರಿದೊಂದು ನುಡಿದರೆ ಅದು ದಿವ್ಯ
ಫಲಪಕ್ವದಂತೆ ಸರ್ವಜ್ಞ ॥ (೮೫೯)

ಹೀಗೆ ಮಾತನಾಡುವವನು ರಸಿಕನಾಗಿರುತ್ತಾನೆ. ರಸಿಕನೆಂದರೆ ಸಂತೋಷಪಡುವವನು ಕಲೆ ಸಾಹಿತ್ಯ ಸಂಗೀತ ನಾಟಕ ಅರಿತವನು ಆನಂದಿಸುವನು. ಯಾರ ಮನಸ್ಸನ್ನು ನೋಯಿಸದೆ ವಿನೋದವಾಗಿ ಮಾತನಾಡುವನು. ಆದ್ದರಿಂದ ಅವನ ಮಾತನ್ನು ಕೇಳಲು ಎಲ್ಲರು ಕಾತರರಾಗಿರುತ್ತಾರೆ. ಅವನ ಮಾತನ್ನು ಕೇಳಿದವರಿಗೆ ಸಂತೋಷವಾಗುತ್ತದೆ. ರಸಿಕನ ಮಾತಿನಲ್ಲಿ ಇರುವ ಅರ್ಥ ತಿಳಿದಾಗ ಬೆಳದಿಂಗಳು ಕತ್ತಲಲ್ಲಿ ಬಂದ ಹಾಗಾಗುತ್ತದೆ. ಬೆಳದಿಂಗಳು ಬಂದಾಗ ಎಷ್ಟು ತಂಪಾಗಿ ಮನಸ್ಸಿಗೆ ಹಿತವಾಗಿರುತ್ತದೆ ಎಂಬುದು ಎಲ್ಲರಿಗೂ ತಿಳಿದ ವಿಷಯ. ಹಾಗೆ ರಸಿಕನಲ್ಲದವನು ಮಾತಾಡಿದರೆ ಕಿವಿಯೊಳಗೆ ಬೆಣೆ (ಕೂರ್ದಸಿ) ಬಡಿದಂತೆ ಆಗುತ್ತದೆ, ಕಿವಿಗೆ ಗೂಟ ಬಡಿದಂತೆ ಆಗುತ್ತದೆ. ಸರ್ವಜ್ಞ ಇಲ್ಲಿ ರಸಿಕ ಅರಸಿಕ ಇಬ್ಬರ ಮಾತನ್ನು ಕುರಿತು ಹೇಳಿದಾಗ ಸೌಜನ್ಯವಿದ್ದವರು ಇಲ್ಲದವರು ಮಾತಾಡಿದಾಗ ಹೇಗೆ ಎಂಬುದನ್ನು ಸೊಗಸಾದ ಶಶಿಯುದಯ. ಕೂರ್ದಸಿ ಕಿವಿಗೆ ಬಡಿವ ದೃಷ್ಟಾಂತ ನೀಡುತ್ತಾನೆ.

ರಸಿಕನಾಡಿದ ಮಾತು ಶಶಿಯುದಯವಾದಂತೆ
ರಸಿಕರಲ್ಲದವರ ಬಿರುನುಡಿಯು ಕಿವಿಯೊಳ್ ಕೂ
ರ್ದಸಿಯ ಬಲಿದಂತೆ ಸರ್ವಜ್ಞ ॥ (೧೦೨೦)

ಆಡುವ ಮಾತು ಸೌಜನ್ಯ ಪೂರ್ಣವಾಗಿದ್ದರೆ ಸಾಲದು ಆಡುವ ರೀತಿಯಲ್ಲಿ ವಿನಯದಿಂದ ಕೂಡಿರಬೇಕು. ಮಾತಿನಷ್ಟೆ ರೀತಿಯೂ ಮುಖ್ಯ ಎಂಬುದ್ನು ಮರೆಯಬಾರದು. ಮುಖ್ಯವಾಗಿ ಸಭೆಗಳಲ್ಲಿ ಮಾತನಾಡುವಾಗ ಸಭಾ ವಿನಯವನ್ನು ಮರೆಯಬಾರದು. ಕುಮಾರವ್ಯಾಸ ಅಂಥ ಸಭೆ ಹಿರಿಯರ ಸಭೆ ಅಲ್ಲ. ನೆರವಿ–ಸಂತೆ ಎನ್ನುತ್ತಾನೆ. ಯಾವುದೇ

ಸಭೆಯಾದರು ಸೌಜನ್ಯದಿಂದ ಎಲ್ಲರೂ ವರ್ತಿಸಬೇಕು. ಮಾತನಾಡುವಾಗ ನೀವು ಮಾತಾಡಿ ಎನ್ನುವವರೆಗೆ ಎದ್ದು ಮಾತಾಡಬಾರದು. ಇತರರು ಮಾತನಾಡುತ್ತಿರುವಾಗ ನಡುವೆ ಎದ್ದೆದ್ದು ನಿಂತು ಮಾತಾಡಬಾರದು ಅದು ಸೌಜನ್ಯವೂ ಅಲ್ಲ ಸಂಸ್ಕೃತಿಯೂ ಅಲ್ಲ. ಇನ್ನು ಸಭೆಯಲ್ಲಿ ಇದ್ದವರ ದೂಷಣೆ ಮಾಡಬಾರದು. ಇದು ಸಭಾ ಸಂಸ್ಕೃತಿ–ಸಭಾಮರ್ಯಾದೆ ಎನ್ನುತ್ತಾನೆ ಸರ್ವಜ್ಞ. ಆತ ಅಂದು ಹೇಳಿದ ಮಾತುಗಳು ಇಂದಿಗೂ ಮಾನ್ಯವಾಗಿವೆ.

ಎದ್ದು ಮಾತಾಡದಿರು ಎದ್ದೆದ್ದು ನಿಲ್ಲದಿರು
ಇದ್ದ ಮಾನಿಸರ ಜರೆಯದಿರು ಓಲಗದೊ
ಳಿದ್ದನಿಸು ಹೊತ್ತು ಸರ್ವಜ್ಞ ॥ (೫೨೮)

ತಾನು ಸಜ್ಜನನಾಗಿ ಸೌಜನ್ಯದಿಂದ ವರ್ತಿಸುವುದರ ಜತೆಗೆ ಇತರರೂ ಸೌಜನ್ಯದಿಂದ ವರ್ತಿಸುವುದರ ಜತೆಗೆ ಇತರರೂ ಸೌಜನ್ಯದಿಂದ ವರ್ತಿಸುತ್ತಾರೆ ಎಂದು ನಿರೀಕ್ಷಿಸುವುದು ಸಹಜ. ಆದರೆ ಉಳಿದವರು ಸೌಜನ್ಯದಿಂದ ವರ್ತಿಸದೆ ಇದ್ದಾಗ ಏನು ಮಾಡುವುದು ? ಎಂದಾಗ ಸರ್ವಜ್ಞ ಹೇಳುತ್ತಾನೆ. ಅಂಥವರ ಸಹವಾಸವನ್ನೇ ಮಾಡಬೇಡಿ ಏಕೆಂದರೆ ಸಜ್ಜನರ ಸಹವಾಸ ಹೆಜ್ಜೇನು ಸವಿದಂತೆ ; ದುರ್ಜನರ ಸಹವಾಸ ಹೆಜ್ಜೇನು ಕಡಿದಂತೆ. ಸೌಜನ್ಯವಿಲ್ಲದವರ ಬಳಿ ಹೋಗುವುದೂ ಬೇಡ ಅವಮಾನಿತರಾಗುವುದೂ ಬೇಡ. ಸಜ್ಜನರಿಗೆ ಸರ್ವಜ್ಞ ಕೊಡುವ ಆದೇಶ ಇದು. ನೀವು ಸೌಜನ್ಯಮೂರ್ತಿಗಳೇ ಹಾಗಾದರೆ,

ಬರೆ ಕಂಡು ಕರೆಯದನ ಇರು ಕುಳ್ಳಿರೆನ್ನದನ
ಸರಸ ಸಜ್ಜಿನಕೆ ಇರದವನ ಸಖತನವ
ಬೆರಸಲೇಬೇಡ ಸರ್ವಜ್ಞ ॥ (೨೬೧)

ಕೇವಲ ಸಜ್ಜನಿಕೆ ಇದ್ದರೆ ಸಾಲದು, ಸರಸ ನುಡಿಯೂ ಇರಬೇಕು ಒಳ್ಳೆಯವನೇ ಇರಬಹುದು ದಾನಿ; ಉದಾರಿ ಆಗಿರಬಹುದು ಆದರೆ ಮುಖ ಗಂಟಿಕ್ಕಿಕೊಂಡು ನಿಷ್ಠುರವಾಗಿ ಮಾತಾಡಿದರೆ ಏನು ಪ್ರಯೋಜನ ಆದ್ದರಿಂದ ಸರ್ವಜ್ಞ ಸರಸಸಜ್ಜನಿಕೆ ಇರಬೇಕು ಎನ್ನುತ್ತಾನೆ. ಸೌಜನ್ಯ ಎಂಬುದು ಬರಿ ಮಾತಿನಲ್ಲಿದ್ದರೆ ಸಾಲದು ಅದು ಸ್ವಭಾವದಲ್ಲಿ ಬದುಕಿನಲ್ಲಿ ಕಾಣಬೇಕು ಆಚರಣೆಯಲ್ಲಿ ಸೌಜನ್ಯದ ಗುಣ ಕಾಣಬೇಕು. ಇದಕ್ಕೆ ಬಡತನ ಎಂದಿಗೂ ಅಡ್ಡ ಬರುವುದಿಲ್ಲ ಅತಿಥಿ ದೇವೋಭವ ಎಂಬುದು ಸೌಜನ್ಯದ ಮುಖ್ಯ ಲಕ್ಷಣ ಪರೋಪಕಾರವೇ ಇಲ್ಲಿ ಪ್ರಧಾನ ದಾನ ಗುಣ ಇದರ ಲಕ್ಷಣ, ತನ್ನಂತೆ ಇತರರನ್ನು ಪರಿಗಣಿಸುವುದು ಇರಬೇಕಾದ ಗುಣ. ತಾನು ತಿರಪೆ ಎತ್ತಿದರೂ ಕೊಟ್ಟು ಉಣಬೇಕು ಬಿಟ್ಟು ಉಣಬಾರದು. ಕನ್ನಡದ ಪ್ರಸಿದ್ಧ ಸಾಹಿತಿ ಕಾದಂಬರಿಕಾರರಾದ ಗಳಗನಾಥರು

ಸಾಲ ಮಾಡಿದ್ದನ್ನು ತೀರಿಸಲು ಪುಸ್ತಕದ ಗಂಟು ಹೊತ್ತು ಮಾರಲಿಕ್ಕೆ ಊರೂರು ಸುತ್ತುತ್ತಿದ್ದೂ ತಾವು ಊಟ ಮಾಡುವಾಗ ಪ್ರತಿದಿನ ಒಬ್ಬರನ್ನು ಕರೆದು ಊಟವಿಟ್ಟು ತಾವು ಊಟ ಮಾಡುತ್ತಿದ್ದರು. ತೊಟ್ಟಿಯಲ್ಲಿ ಬಿದ್ದ ಎಂಜಲೆಲೆಯಲ್ಲಿ ಇದ್ದುದನ್ನು ತಿನ್ನುತ್ತಿದ್ದ ಬಾಲಕ, ತನ್ನ ಬಳಿಯಿದ್ದ ನಾಯಿಗೆ ಸ್ವಲ್ಪ ಕೊಟ್ಟು ತಿನ್ನುತ್ತಿದ್ದ. ನಮ್ಮ ಬಡಾವಣೆಯ ಮದುವೆ ಮಂಟಪದ ಬಳಿ. ದಾನಗುಣ ಹುಟ್ಟುತ್ತಾ ಬರುವುದಿಲ್ಲ ನಾವು ಬೆಳಸಿಕೊಳ್ಳಬೇಕು ಅದಕ್ಕೆ ಸರ್ವಜ್ಞ ಹೇಳುತ್ತಾನೆ. ಸೌಜನ್ಯ ಎಂದರೆ ದಯೆ ಅನ್ಯರನ್ನು ತನ್ನಂತೆ ಭಾವಿಸುವುದು ತಾನು ಉಣ್ಣುವಾಗ ತನ್ನ ಹಾಗೆ ಹಸಿವಿಂದ ಇರುವವರು ಇದ್ದಾರೆ ಎಂಬುದನ್ನು ಮರೆಯಬಾರದು.

ತಿರಿದು ತಂದಾದೊಡೆ ಕರೆದುಕೊಂಡುಣಬೇಕು
ಕರೆಯದೆ ತಾನೆ ಉಣುತಿರಲು ಆ ಊಟ
ನರಕದ ಊಟ ಸರ್ವಜ್ಞ ॥ (೩೬೦)

ಇನ್ನೊಂದು ಮಾತನ್ನು ಹೇಳುತ್ತಾನೆ ಕೇವಲ ಊಟ ಕೊಟ್ಟರೆ ಸಾಲದು.

ಅಡುವುದವರಕ್ಕಿಯನು ಕೊಡುವುದು ಬಿಡಾರವನು
ಕುಡಿವಡೆ ನೀರನೆರೆವುದು ಈ ವಲಯ
ಬಡವನ ದಾನ ಸರ್ವಜ್ಞ ॥

ಶ್ರೀಮಂತರ ಹಾಗೆ ಒಡವೆ ವಸ್ತ್ರ ಹಣ ದಾನ ಮಾಡಬೇಕಿಲ್ಲ ಮಾನವನ ಬದುಕಿಗೆ ಆಧಾರವಾದ ಅನ್ನ ನೀರು ಬೀಡು ಕೊಟ್ಟರೆ ಸಾಕು. ಬಡವ ಜೀವಾಧಾರ ವಸ್ತುವನ್ನು ಕೊಡುತ್ತಾನೆ. ಅದು ಶ್ರೇಷ್ಠದಾನ. ಅದು ಸೌಜನ್ಯಕ್ಕೆ ಸಾಕ್ಷಿ ಇದ್ದುದರಲ್ಲೇ ಕೊಡುವುದು. ಸಜ್ಜನನಾದವನಿಗೆ ಜೀವನದಲ್ಲಿ ಆದರ್ಶಗಳಿರುತ್ತವೆ ಅವನು ಸೌಜನ್ಯದಿಂದ ಜನರಲ್ಲಿ ನಡೆದುಕೊಳ್ಳುವಾಗ ನಾನೇ ದೊಡ್ಡವನು ಎಂದು ಗರ್ವಿಸುವುದಿಲ್ಲ. ತನಗೆ ಅಕ್ಷರ ಕಲಿಸಿದ ಗುರುವನ್ನಾಗಲಿ ಬದುಕನ್ನು ಕಲಿಸಿದ ಗುರುವನ್ನಾಗಲಿ ಎಂದೂ ಅಲಕ್ಷಿಸುವುದಿಲ್ಲ ದೂಷಿಸುವುದಿಲ್ಲ ಅವರಲ್ಲಿ ಸದಾ ಭಯ ಭಕ್ತಿಯಿಂದ ವಿನಯದಿಂದ ನಡೆದುಕೊಳ್ಳುತ್ತಾನೆ ಮತ್ತು ವಿದ್ಯಾವಂತರೊಡನೆ ವಾದ ಮಾಡಿ ದ್ವೇಷ ಕಟ್ಟಿಕೊಳ್ಳುವುದಿಲ್ಲ. ಹಾಗೂ ಪರಿಚಿತರಲ್ಲಿ ಎಂದೂ ಸಾಲ ಮಾಡುವುದಿಲ್ಲ. ಒಡವೆಗಳನ್ನು ಎರವಲು ತರುವುದಿಲ್ಲ. ಇವೆಲ್ಲ ಸೌಜನ್ಯ ಗುಣವುಳ್ಳ ಸದ್ಗೃಹಸ್ಥನ ಲಕ್ಷಣಗಳು.

ಹಿರಿಯನೆನ್ನಬೇಡ ಗುರುವ ನಿಂದಿಸಬೇಡ
ಬರೆವವನೊಡನೆ ಹಗಬೇಡ ಬಂಗಾರ
ದೆರವು ತರಬೇಡ ಸರ್ವಜ್ಞ ॥ (೭೯೭)

ಸೌಜನ್ಯದ ಇನ್ನೊಂದು ಲಕ್ಷಣವೆಂದರೆ ತಾಳ್ಮೆ ಸಹನೆ, ನಿಧಾನತೆ, ನೀರು ಹನಿ ಹನಿ ಬಿದ್ದರೂ ಸತತವಾಗಿ ದೀರ್ಘಕಾಲ ಬಿದ್ದರೆ ಕಲ್ಲು ಸಹ ಸವೆಯುತ್ತದೆ ಇದರರ್ಥ ತಾಳ್ಮೆಯಿಂದ ನಿರಂತರವಾಗಿ ಪ್ರಯತ್ನಿಸುತ್ತಿರಬೇಕು. ನಮ್ಮ ಮಿತ್ರರೊಬ್ಬರು ಡಿಗ್ರಿ ಪಡೆಯಬೇಕೆಂಬ ಆಸೆಯಿಂದ ಪ್ರಯತ್ನಿಸುತ್ತಿದ್ದರೂ ಪ್ರತಿ ಬಾರಿಯೂ ಏನಾದರೂ ತಾಪತ್ರಯ, ರೋಗರುಜಿನ ಎಂದು ಆಗಲೇ ಇಲ್ಲ. ಆದರೆ ಅವರು ತಾಳ್ಮೆ ಕೆಡಲಿಲ್ಲ. ಕೊನೆಗೆ ಮಗ ಓದಿ ವಿದ್ಯಾವಂತನಾದ ಮೇಲೆ ನಾನು ನಿವೃತ್ತನಾದ ಮೇಲೆ ಸಂಜೆ ಕಾಲೇಜಿನಲ್ಲಿ ಓದಿ ಡಿಗ್ರಿ ಪಡೆದರು. ಹಾಗೆಯೇ ಅರ್ಥಮಾಡಿಕೊಂಡು ಲೋಕದೊಡನೆ ವ್ಯವಹರಿಸಿ ಜೀವನದಲ್ಲಿ ಯಶಸ್ವಿಗಳಾಗಬೇಕು. ಸೌಜನ್ಯದ ವ್ಯಕ್ತಿಗಳಿಗೆ ಆತುರ ಇರುವುದಿಲ್ಲ ನಿರಾಸೆ ಇರುವುದಿಲ್ಲ.

ಮೆಲ್ಲನೆ ಹರಿನೀರು ಕಲ್ಲು ಭೇದಿಸುಲಿಕ್ಕು
ಸೊಲ್ಲರಿತು ನುಡಿವರೊಡನಾಡೆ ಲೋಕವ
ಗೆಲ್ಲಬೇಕಯ್ಯ ಸರ್ವಜ್ಞ ॥ (೧೩೦೩)

ಲೋಕದ ಸ್ವಭಾವವನ್ನು ತಿಳಿದು ವರ್ತಿಸುವುದು ಜಾಣತನದ ಸೌಜನ್ಯದ ಲಕ್ಷಣ. ಜನ ಹೊಗಳಿದರೆ ಮೆಚ್ಚುತ್ತಾರೆ. ತೆಗಳಿದರೆ ಹೀಯಾಳಿಸುತ್ತಾರೆ. ಸತ್ಯವೇ ಆದರೂ ಅವರಿಗೆ ಅಪ್ರಿಯವಾದಾಗ ನಮ್ಮನ್ನು ಕಡೆಗಣಿಸುತ್ತಾರೆ ಇದು ಲೋಕದ ಜನರ ಸ್ವಭಾವ ಇದನ್ನು ಅರ್ಥ ಮಾಡಿಕೊಂಡು ವರ್ತಿಸಬೇಕು ಸತ್ಯವನ್ನು ಹೇಳಬೇಕು. ಅಪ್ರಿಯ ಸತ್ಯವನ್ನು ಹೇಳಬಾರದು ಎಂದರೆ ಸತ್ಯ ಮುಖ್ಯವೋ ಹೇಳುವ ರೀತಿ ಮುಖ್ಯವೋ ? ಎಂದಾಗ ಸತ್ಯವೇ ಮುಖ್ಯ ಆದರೆ ಅದನ್ನು ಅಪ್ರಿಯವಾದ ರೀತಿಯಲ್ಲಿ ಇನ್ನೊಬ್ಬರ ಮನ ನೋಯದಂತೆ ಹೇಳಬಾರದಷ್ಟೆ. ಹಾಗಾದರೆ ಸತ್ಯವನ್ನು ಅಪ್ರಿಯವಾದಾಗ ಹೇಳುವುದು ಸೌಜನ್ಯದಲ್ಲಿ ಎನಿಸಿದಾಗ ಹೇಗೆ ಹೇಳುವುದು ? ಅದಕ್ಕೊಂದು ದೃಷ್ಟಾಂತ ನೆನಪಾಗುತ್ತದೆ. ಒಬ್ಬ ಬೇಡ ಜಿಂಕೆಯೊಂದನ್ನು ಅಟ್ಟಿಸಿಕೊಂಡು ಬಂದಾಗ ಅದು ಆಶ್ರಮವೊಂದನ್ನು ಹೊಕ್ಕಿತು. ಬೇಡನು ಆಶ್ರಮಕ್ಕೆ ಬಂದು ಅಲ್ಲಿದ್ದ ಮುನಿಯನ್ನು ಕೇಳಿದನು. ಇಲ್ಲಿಗೊಂದು ಜಿಂಕೆ ಬಂತು ನೀವು ನೋಡಿದಿರಾ? ಇಲ್ಲವೆಂದರೆ ಅಸತ್ಯ ನುಡಿದಂತೆ ಆಗುತ್ತದೆ. ಸುಳ್ಳು ಹೇಳ್ಳುವುದು ಪಾಪದ ಕೆಲಸ, ನೋಡಿದೆ ಎಂದರೆ ಅವನು ಒಳಕ್ಕೆ ನುಗ್ಗಿ ಜಿಂಕೆಯನ್ನು ಕೊಲ್ಲುತ್ತಾನೆ ಆಗ 'ಕಾಂತಪಾಪ' ಉಂಟಾಗುತ್ತದೆ. ಏನು ಮಾಡುವುದು ? ಮಾತನಾಡುವ ಹಾಗಿಲ್ಲ. ಸುಮ್ಮನಿರುವ ಹಾಗೂ ಇಲ್ಲ. ಆಗ ಸತ್ಯವನ್ನು ಹೇಳಿದ ರೀತಿ ಇದು. ಅಪ್ಪಾ, ಜಿಂಕೆಯನ್ನು ನೋಡಿದ್ದು ಕಣ್ಣು. ಕಣ್ಣು ಮಾತಾಡಲಾರದು, ಇನ್ನು ನೀನು ಬಾಯಿಂದ ಕೇಳುತ್ತಿರುವೆ. ನಾನು ಬಾಯಿಂದ ಹೇಳಲು ನನ್ನ ಬಾಯಿ ನೋಡಿಲ್ಲ ಎಂದನು. ಅವನು ಕಕ್ಕಾವಿಕ್ಕಿಯಾಗಿ ಹೊರಟುಹೋದನಂತೆ. ಹೀಗೆ ಜಾಣತನ ತೋರಬೇಕು. ಏಕೆ ಲೋಕ ಇರುವುದು ಹೀಗೆ:

ಕಂಡುದ ನುಡಿದರೆ ಭೂಮಂಡಲ ಮುನಿವುದು
ಕೊಂಡಾಡುತಿಚ್ಛೆ ನುಡಿದರೆ ಜಗವೆಲ್ಲ
ಮೊಂಡಾಡುತಿಕ್ಕು ಸರ್ವಜ್ಞ ॥ (೫೪೮)

ಸೌಜನ್ಯ ಗುಣದ ಸಜ್ಜನರಿಗೆ ದಡ್ಡರು ಮೂರ್ಖರು ಹಠಮಾರಿಗಳು ಅಜ್ಞಾನಿಗಳು ಮುಂತಾದ ಜನರೊಂದಿಗೆ ವರ್ತಿಸುವುದು ಹೇಗೆ ? ಅವರೊಡನೆ ಮಾತಾಡುವುದು ಹೇಗೆ? ಎಂಬುದು ಅವರಿಗೆ ಸಮಸ್ಯೆ ಆಗಿರುತ್ತದೆ. ತಿಳಿದು ಮಾತಾಡುವ ಸಮಾಧಾನಿಗಳು ಇವರು ತಿಳಿಯದೆ ವಾದ ಮಾಡುವ ಹಠಮಾರಿಗಳು ಅಜ್ಞಾನಿಗಳು ಅವರ ಸಮಸ್ಯೆಯ ಪರಿಹಾರ ಹೇಗೆ ? ಸರ್ವಜ್ಞ ಸೂಚಿಸುವ ಪರಿಹಾರ ಇದು ಮೊದಲನೇ ಸೂತ್ರವಾದರೆ,

ಜ್ಞಾನಿ ಅಜ್ಞಾನಿಗೆ ತಾನೊಂದು ಕುರುಹುಂಟು
ಏನೊಂದನಾರು ನುಡಿದರೆ ಜ್ಞಾನಿ ಮಾ
ತಾಡದಿರುತಿಹನು ಸರ್ವಜ್ಞ ॥ (೧೮೭)

ಮೌನಂ ಸರ್ವತ್ರ ಸಾಧನಂ ಎನ್ನುತ್ತಾರೆ ಮಾತು ಬೆಳ್ಳಿ, ಮೌನ ಚಿನ್ನ ಎಂಬ ಗಾದೆಯೆ ಇದೆ. ನಿಜ, ಮಾತನಾಡಲೇಬೇಕಾದ ಸಂದರ್ಭ ಬಂದಾಗ ಏನು ಮಾಡುವುದು? ಅದಕ್ಕೆ ಪರಿಹಾರ ಇದು :

ಆರು ಬೆಟ್ಟವನೊಬ್ಬ ಹಾರಬಹುದೆಂದರೆ
ಹಾರಬಹುದಯ್ಯ ಎಂದೆನಬೇಕಲ್ಲದೆ
ಕಲಹವೇಕಯ್ಯ ಸರ್ವಜ್ಞ ॥ (೮೭೪)

ಏಕೆಂದರೆ ಮೂರ್ಖರೊಳು ಮಾತಿನ ಹೋರಾಟ ಬೇಡ ಎನ್ನುತ್ತಾನೆ ಸರ್ವಜ್ಞ. ಅವರ ಪಾಲಿಗೆ ಹೌದಪ್ಪನಾಗುವುದು ಒಳ್ಳೆಯದು ಏಕೆಂದರೆ ಆಗ ಯಾವುದೇ ರೀತಿಯಲ್ಲಿ ಮನಸ್ಸನ್ನು ಕೆಡಿಸಿಕೊಳ್ಳಬೇಕಾಗುವುದಿಲ್ಲ. ಅವರು ಅಜ್ಞಾನಿಗಳು ಮೂರ್ಖರು ಎಂದು ತಿಳಿದಾಗ, ಅವರು ಹೇಳಿದ್ದೇ ಸರಿ ಎಂದು ಹೇಳಿ ಸುಮ್ಮನಾಗಿಬಿಡುವುದು ಲೇಸು. ಬೆಟ್ಟವನ್ನೊಬ್ಬ ನೆಗೆಯಬಲ್ಲ ಎಂದರೆ ಹೌದು ಹಾರಬಲ್ಲ ಎಂದರಾಯಿತು. ಅದು ಹೇಗೆ ಶಕ್ಯ ಎಂದು ಕೇಳಬಾರದು ಅವನು ಪ್ರಶ್ನೆ ಕೇಳಿದಾಗಲೇ ಅವನ ಅಜ್ಞಾನ ತಿಳಿಯುತ್ತದೆ. ಹೀಗೆ ಸೌಜನ್ಯದಿಂದ ವರ್ತಿಸುವರು ದೇಶಕ್ಕೆ ಆಸ್ತಿ ಉಳಿದವರಿಗೆ ಆದರ್ಶ ಪ್ರಾಯ.

ದೇಶಕ್ಕೆ ಸಜ್ಜನರು ಹಾಸ್ಯಕ್ಕೆ ಹನುಮಂತ
ಕೇಶವ ಭಕ್ತರೊಳಗೆಲ್ಲಿ ಮೂರು ಕಣ್ಣೀಶನೆ
ದೈವ ಸರ್ವಜ್ಞ ॥ (೧೨೦)

‘ಸಿಂಚನ’ ಕನ್ನಡ ವೇದಿಕೆಯ ಪ್ರಕಟಣೆಗಳು

೧. ಮೊದಲು ಮಾನವನಾಗು

೨. ಸಾಂಸ್ಕೃತಿಕ ಅನುಸಂಧಾನ

೩. ಸಂತೃಪ್ತ ಬಾಳಿನ ಮಾರ್ಗದರ್ಶಿ

೪. ಸಿರಿಗನ್ನಡ ಸರಳ ಭಗವದ್ಗೀತೆ

೫. ೨೫ ಏಕಾಂಕ ನಾಟಕಗಳು

ಲೇಖಕರ ವಿಳಾಸಗಳು

ಡಾ. ಎಂ. ಚಿದಾನಂದಮೂರ್ತಿ
(ಸಂಶೋಧಕ, ಸಾಹಿತಿ), ೪ನೇ ಕ್ರಾಸ್
೧೧ನೇ ಮೈನ್, ಹಂಪಿನಗರ
ಬೆಂಗಳೂರು – ೫೬೦ ೦೪೧.
ದೂರವಾಣಿ : ೨೩೩೦ ೦೬೮೭

ಡಾ. ಪಿ.ವಿ. ನಾರಾಯಣ (ಸಾಹಿತಿ)
ತಂಗಾಳಿ ನಂ. ೩೦, ಆರ್‌ಬಿಐ ಕಾಲೋನಿ
ಜಯನಗರ, ೩ನೇ ಬ್ಲಾಕ್
ಬೆಂಗಳೂರು – ೫೬೦ ೦೧೧.
ದೂರವಾಣಿ : ೯೯೦೦೧ ೯೬೫೧೭

ಡಾ. ಎಚ್.ಎಸ್. ಮುರಳೀಧರ
(ಕನ್ನಡ ಪ್ರಾಧ್ಯಾಪಕರು), ನಂ. ೯೯೯
ಶ್ರೀಪದ, ೧೫ನೇ ಕ್ರಾಸ್
ಕುಮಾರಸ್ವಾಮಿ ಬಡಾವಣೆ
೧ನೇ ಹಂತ, ಬೆಂಗಳೂರು – ೫೬೦ ೦೭೮.
ದೂರವಾಣಿ : ೨೬೬೭ ೭೨೦೦

ಪ್ರೊ. ಜಿ. ಅಶ್ವತ್ಥನಾರಾಯಣ
(ನಿವೃತ್ತ ಕನ್ನಡ ಪ್ರಾಧ್ಯಾಪಕರು), ನಂ. ೯೫, ೩೪
'ಬಿ' ಕ್ರಾಸ್, ೧೬ನೇ ಮೈನ್, ೪ 'ಟಿ' ಬ್ಲಾಕ್
ಜಯನಗರ, ಬೆಂಗಳೂರು – ೫೬೦ ೦೪೧.
ದೂರವಾಣಿ : ೨೬೬೩ ೭೭೮೩

ಸುರೇಶ್ ಮೂನ (ಅಂಕಣಕಾರರು)
೧೬೪೫, ೧೭ನೇ ಮುಖ್ಯರಸ್ತೆ
ಬಿ.ಎಸ್.ಕೆ. ಮೊದಲ ಹಂತ
ಬೆಂಗಳೂರು – ೫೬೦ ೦೫೦.
ಇ–ಮೇಲ್ : sureshmoona@gmail.com

ಪ್ರೊ. ಎಸ್.ವಿ. ಗೋವಿಂದರಾಜನ್
ವಿಶ್ರಾಂತ ಕನ್ನಡ ಪ್ರಾಧ್ಯಾಪಕರು ಹಾಗು
ಪ್ರಾಂಶುಪಾಲರು, ನಂ. ೩೮೮೮, 'ಸುಪರ್ಣ'
೧೩ನೇ ಮುಖ್ಯರಸ್ತೆ, ೨ನೇ ಘಟ್ಟ
ಕುಮಾರಸ್ವಾಮಿ ಬಡಾವಣೆ, ಬೆಂಗಳೂರು – ೭೮.
ದೂರವಾಣಿ : ೩೨೯೧ ೯೧೪೨

ವಿ. ರಘು
ಸಂಪಾದಕರು, ವಿವೇಕಹಂಸ, ೫೬೯
೩ನೇ ಕ್ರಾಸ್, ಶ್ರೀನಿವಾಸನಗರ, ೩ನೇ ಹಂತ
ಬೆಂಗಳೂರು – ೫೦. ದೂರವಾಣಿ : ೨೬೭೯ ೧೮೧೮
ಮೊಬೈಲ್ : ೯೪೪೯೫ ೬೭೪೫೭

ಎಸ್. ಬಿಳಿಗಿರಿವಾಸನ್
(ಕನ್ನಡ ಪ್ರಾಧ್ಯಾಪಕರು), ೭೮, 'ಶ್ರೀ ಶ್ವೇತಾದ್ರಿ'
ನ್ಯಾನಪ್ಪನಹಳ್ಳಿ, ಬೇಗೂರು ಹೋಬಳಿ
ಬೆಂಗಳೂರು–೬೮. ದೂರವಾಣಿ : ೨೬೫೮ ೭೮೬೨
ಮೊಬೈಲ್ : ೯೭೪೧೩ ೩೭೪೨೦

ಡಾ. ನರ್ಮದಾಂಬ ಕೆ.
(ಕನ್ನಡ ಪ್ರಾಧ್ಯಾಪಕರು), ೨೦೩೮, ೧೮ನೇ 'ಬಿ'
ಮುಖ್ಯರಸ್ತೆ, ೯ನೇ ಅಡ್ಡರಸ್ತೆ, ಜೆ.ಪಿ. ನಗರ
೩ನೇ ಹಂತ, ಬೆಂಗಳೂರು – ೫೬೦ ೦೭೮.
ದೂರವಾಣಿ : ೨೬೫೯ ೭೧೭೩
ಮೊಬೈಲ್ : ೯೯೮೬೬ ೯೨೧೯೩

ನಾ. ಗೀತಾಚಾರ್ಯ
ಕನ್ನಡ ಪ್ರಾಧ್ಯಾಪಕರು, ಶೇಷಾದ್ರಿಪುರಂ ಕಾಲೇಜು
ಬೆಂಗಳೂರು – ೫೬೦ ೦೨೦.
ಮೊಬೈಲ್ : ೯೪೪೮೬ ೭೧೦೪೯

ಕೋ. ವೆಂ. ರಾಮಕೃಷ್ಣೇಗೌಡ
ಸಂಪಾದಕರು, ಕನ್ನಡ ನುಡಿ
ಕನ್ನಡ ಸಾಹಿತ್ಯ ಪರಿಷತ್ತು, # ೪೪/೬
ಶ್ರೀನಿವಾಸ ನಿಲಯ, ೬ನೇ ಮೈನ್, ೧೫ನೇ ಕ್ರಾಸ್
ಸುಬ್ಬರಾಜು ಬಡಾವಣೆ, ಲಕ್ಕಸಂದ್ರ
ಬೆಂಗಳೂರು – ೫೬೦ ೦೩೦.
ಮೊಬೈಲ್ : ೯೪೪೮೬ ೭೧೦೪೯

ಡಾ. ಅನಸೂಯಾದೇವಿ
(ಪ್ರಾಧ್ಯಾಪಕಿ, ಲೇಖಕಿ, ಗಾಯಕಿ)
ಜಿ.ಎ. ಕೃಷ್ಣಕೃಪಾ, ಬ್ಲಾಕ್ ೨
ಹರವಿಜಯ ವ್ಯಾಲಿವ್ಯೂ, ರವಿಗುಡ್ಡ, ಇಟ್ಟಮಡು
ಬನಶಂಕರಿ ೩ನೇ ಹಂತ, ಬೆಂಗಳೂರು – ೮೫.
ದೂರವಾಣಿ : ೨೬೭೨ ೦೬೯೫
ಮೊಬೈಲ್ : ೯೩೪೮೧೨ ೫೬೨೬೭

ಬಿ.ಎನ್. ವೇಣುಗೋಪಾಲ
(ಇಂಗ್ಲಿಷ್ ಅಧ್ಯಾಪಕರು), ಬಿಎಚ್‌ಎಸ್ ಪ್ರಥಮ
ದರ್ಜೆ ಕಾಲೇಜು, ಜಯನಗರ,
ಬೆಂಗಳೂರು – ೧೧.
ಮೊಬೈಲ್ : ೯೯೮೬೯೯೧೭೨

ಕೆ. ಚಂದ್ರಮೌಳಿ
(ಸಾಹಿತಿ), ೧೬, ಒ.ವಿ.ಎಚ್. ರಸ್ತೆ
ಬಸವನಗುಡಿ ಬೆಂಗಳೂರು –೪.
ದೂರವಾಣಿ : ೨೬೬೨ ೦೧೨೨

ಶಾಂತರಾಜು
(ಕನ್ನಡ ವಿಭಾಗದ ಮುಖ್ಯಸ್ಥರು, ವಿಜಯ ಸಂಜೆ
ಕಾಲೇಜು), ನಂ. ೨೪, 'ಅನುಗ್ರಹ'
ಮಹಾಗಣಪತಿ ನಗರ, ಬಿ.ಜಿ. ಮುಖ್ಯರಸ್ತೆ
ಗೊಟ್ಟಿಗೆರೆ, ಬೆಂಗಳೂರು – ೮೩.
ದೂರವಾಣಿ : ೦೮೦ –೨೫೬೮೦೩೬೧
ಮೊಬೈಲ್ : ೯೯೮೦೪ ೮೧೪೮೪

ಡಾ॥ ಇಂದ್ರಾಣಿ ಕುಮಾರ್
ಸಂಸ್ಕೃತ ಪ್ರಾಧ್ಯಾಪಕರು
ಎಸ್.ಎಸ್.ಎಂ.ಆರ್.ವಿ. ಕಾಲೇಜು
ಜಯನಗರ, ಬೆಂಗಳೂರು.

ಕೆ. ರಾಮಮೋಹನ್
ಸಾಹಿತಿ ಮತ್ತು ಅನುವಾದಕರು
೧೦/೧ ಎರಡನೇ ಅಡ್ಡರಸ್ತೆ, ಚಿಕ್ಕಣ್ಣ ತೋಟ
ಬೆಂಗಳೂರು – ೧೮,
ದೂರವಾಣಿ : ೨೨೪೨ ೭೮೮೩

ಶ್ರೀನಿವಾಸಮೂರ್ತಿ
ಕೆನರಾ ಬ್ಯಾಂಕ್, ೪ನೇ 'ಟಿ' ಬ್ಲಾಕ್
ಜಯನಗರ
ಬೆಂಗಳೂರು – ೪೧.

ಪ್ರೊ. ಎಂ.ಆರ್. ಲಕ್ಷ್ಮೀದೇವಿ
೯೫, ೩೪ನೇ 'ಬಿ' ಕ್ರಾಸ್, ೧೬ನೇ ಮುಖ್ಯರಸ್ತೆ
೪ನೇ 'ಟಿ' ಬ್ಲಾಕ್, ಜಯನಗರ
ಬೆಂಗಳೂರು – ೫೬೦ ೦೪೧. ದೂ : ೨೬೬೩೭೭೮೩

ಟಿ. ವೆಂಕಟರಮಣಯ್ಯ
ಇಡಬ್ಲ್ಯುಎಸ್ ೨೧೮, ಕೆಎಚ್‌ಬಿ ಕಾಲೋನಿ
೨ನೇ ಹಂತ, ೫ನೇ ಕ್ರಾಸ್, ಬಸವೇಶ್ವರನಗರ
ಬೆಂಗಳೂರು – ೫೬೦ ೦೭೯.
ದೂರವಾಣಿ : ೬೫೭೩೧೫೫೨

ಶ್ರೀ ಡಿ.ಎ. ಪಾಂಡು ಸ್ಮೃತಿ ಗ್ರಂಥಮಾಲೆ – ೬

ಆರ್.ವಿ. ಇನ್ಸಿಟ್ಯೂಟ್ ಆಫ್. ಮ್ಯಾನೇಜ್ಮೆಂಟ್ ತನ್ನ ದಶಮಾನೋತ್ಸವವನ್ನು ಆಚರಿಸಿಕೊಳ್ಳುತ್ತಿರುವ ಈ ಶುಭಸಂದರ್ಭದಲ್ಲಿ ತನ್ನ 'ಸಿಂಚನ' ಕನ್ನಡ ವೇದಿಕೆಯಿಂದ ವರ್ಷಂಪ್ರತಿ ಎರಡು ಕೃತಿಗಳನ್ನು ಕನ್ನಡ ಸಾರಸ್ವತ ಲೋಕಕ್ಕೆ ಅರ್ಪಿಸುತ್ತಿದೆ. ಸಮಾಜದ ಮನಃಸ್ಥಿತಿಯನ್ನು ಅರಿತು ಮೌಲ್ಯಾಧಾರಿತ ಲೇಖನಗಳನ್ನು ಕನ್ನಡ ಸಾಹಿತ್ಯಲೋಕದ ವಿವಿಧ ವಿದ್ವಾಂಸರಿಂದ ಸಂಗ್ರಹಿಸಿ ಜ್ಞಾನಪ್ರಸಾರ ಕಾರ್ಯವನ್ನು ನಿರಂತರವಾಗಿ ನಡೆಸುತ್ತಿದೆ. ಅಂತೆಯೇ ಈ ವರ್ಷವೂ ಸಹಾ 'ಸೌಜನ್ಯ ಮತ್ತು ಸಂಸ್ಕೃತಿ' ಎಂಬ ಪ್ರಬಂಧ ಸಂಕಲನ ಕೃತಿಯನ್ನು ಕನ್ನಡ ಕುಲಕೋಟಿಗೆ ಅರ್ಪಿಸಲು ಸಂತೋಷವಾಗುತ್ತಿದೆ.

"ಸಿರಿಗನ್ನಡಂ ಗೆಲ್ಗೆ"
"ಸಿರಿಗನ್ನಡಂ ಬಾಳ್ಗೆ"

